# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

## ಅಧಿಕೃತ ವರದಿ

## OFFICIAL REPORT

**೧೩೦ ನೇ ಅಧಿವೇಶನ**

**130th SESSION**

**ಸಂಪುಟ–೪೪೫ ಕ್ರಮಾಂಕ (೧)**

**Volume -445 (No. 1)**

**( ೧೩ ನೇ ಜುಲೈ ೨೦೧೬)**

**(13th -July- 2016)**


**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು**

**Karnataka Legislative Council Secretariat, Bangalore**

ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ **13**ನೇ ಜುಲೈ **2016**

ಬುಧವಾರ

ವಿಷಯಾನುಕ್ರಮಣಿಕೆ


**1.** ನೂತನ ಸಚಿವರ ಪರಿಚಯ **2**

**2.** ನಿಯಮ **68**ರ ಮೇರೆಗೆ ಮುಂದುವರೆದ ಚರ್ಚೆ **2-88**

ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಮತ್ತು ಪೊಲೀಸ್ ವ್ಯವಸ್ಥೆ ಕುಸಿದಿದ್ದು, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಾಗೂ ಸ್ವಯಂ ನಿವೃತ್ತಿಯಾಗುತ್ತಿರುವ ಪರಿಸ್ಥಿತಿ ಬಗ್ಗೆ.

ಶ್ರೀ ಟಿ.ಎ.ಶರವಣ

ಶ್ರೀ ರಿಜ್ವಾನ್ ಅರ್ಷದ್

ಶ್ರೀ ಕೆ.ಬಿ.ಶಾಣಪ್ಪ

ಶ್ರೀ ರಾಮಚಂದ್ರಗೌಡ

ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ

ಶ್ರೀ ಲಹರ್ ಸಿಂಗ್ ಸಿರೋಯಾ

ಶ್ರೀ ವಿ.ಎಸ್.ಉಗ್ರಪ್ಪ

ಶ್ರೀ ಡಿ.ಎಸ್.ವೀರಯ್ಯ

ಶ್ರೀ ಬಸವನಗೌಡ ಆರ್.ಪಾಟೀಲ್ (ಯತ್ನಾಳ್)

ಶ್ರೀಮತಿ ವಿಮಲಾಗೌಡ

ಶ್ರೀಮತಿ ವೀಣಾ ಅಚ್ಚಯ್ಯ

ಶ್ರೀ ಭಾನುಪ್ರಕಾಶ್

ಶ್ರೀ ಎಂ.ನಾರಾಯಣಸ್ವಾಮಿ

ಶ್ರೀ ಎಂ.ಕೆ.ಪ್ರಾಣೇಶ್

ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ನಗರಾಭಿವೃದ್ಧಿ ಸಚಿವರು)

**(ವಿರೋಧ ಪಕ್ಷದ ಸದಸ್ಯರಿಂದ ಆಹೋರಾತ್ರಿ ಧರಣಿ)**

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 13ನೇ ಜುಲೈ 2016***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ 11 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು**
**ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~
~~~~~~~

**1. ನೂತನ ಸಚಿವರ ಪರಿಚಯ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ನೂತನ ಸಚಿವರಾಗಿ ನೇಮಕವಾಗಿರತಕ್ಕಂಥ ಮಾನ್ಯ ಎಚ್.ವೈ.ಮೇಟಿಯವರು ಮೊದಲ ಬಾರಿಗೆ ಈ ಸದನಕ್ಕೆ ಆಗಮಿಸಿದ್ದಾರೆ. ಅವರನ್ನು ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ.

**2. ನಿಯಮ 68ರ ಮೇರೆಗೆ ಮುಂದುವರೆದ ಚರ್ಚೆ**

**ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಮತ್ತು ಪೊಲೀಸ್ ವ್ಯವಸ್ಥೆ ಕುಸಿದಿದ್ದು, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ ಇಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಹಾಗೂ ಸ್ವಯಂ ನಿವೃತ್ತಿಯಾಗುತ್ತಿರುವ ಪರಿಸ್ಥಿತಿ ಬಗ್ಗೆ.**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೆ, ಹಿರಿಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿಗಳಾಗಿ ಬಂದಿದ್ದಾರೆ. ಅವರು ವಕೀಲರು ಕೂಡ ಆಗಿದ್ದಾರೆ. ನಾನೇನು ಅವರ ಬಗ್ಗೆ ಬಹಳ ಹೇಳುವುದಿಲ್ಲ. ಈ ಚರ್ಚೆಯನ್ನು continue ಮಾಡುತ್ತೀರಿ. Discussion, continue, ಉತ್ತರ, ಅದು ಬೇರೆ. ನಾನೇನು ವಕೀಲ ಅಲ್ಲ. ಆದರೆ ನಿನ್ನೆ ತಾನೆ ಕೋರ್ಟ್‌ನಿಂದ ಜಡ್ಜ್‌ಮೆಂಟ್ ಬಂದಿರುವುದನ್ನು ತಾವು ಪತ್ರಿಕೆಯಲ್ಲಿ ನೋಡಿದ್ದೀರಿ. ಮರಣ ಪೂರ್ವ ಹೇಳಿಕೆ ಆಧರಿಸಿ ಆರೋಪಿಗೆ 7 ವರ್ಷ ಸಜೆ. ಆತ್ಯಹತ್ಯೆ ಮಾಡಿಕೊಳ್ಳುವುದಕ್ಕಿಂತ ಮುಂಚೆ ಏನು ಹೇಳಿಕೆ ಕೊಟ್ಟಿದ್ದಾರೆ ಅದನ್ನು ಸಾಕ್ಷಿ ಇಟ್ಟುಕೊಂಡು 7 ವರ್ಷ ಅವರಿಗೆ ಕೋರ್ಟ್ ನಿನ್ನೆ ಶಿಕ್ಷೆ ಕೊಟ್ಟಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರೆ, ಅದಕೋಸ್ಕರ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ತಾವು ಹಿರಿಯರಿದ್ದೀರಿ, ವಕೀಲರಾಗಿದ್ದೀರಿ. ಅವರು ಮಂತ್ರಿಯೋ, ಮುಖ್ಯಮಂತ್ರಿಯೋ, ಪ್ರಧಾನ ಮಂತ್ರಿಯೋ ಎಂದು ತಾವು ನೋಡುವುದಿಲ್ಲ. ತಾವು ಮುಖಕ್ಕೆ ನೇರವಾಗಿ ಇರುವ ಸತ್ಯವನ್ನು ಹೇಳುವಂತಹ ಜನ. ನಾವು ಬಹಳ ಜನ ಹೊಸಬರು ಇದ್ದೇವೆ. ಅದೇ ರೀತಿ ವಕೀಲರಲ್ಲದಿರುವವರು ಇದ್ದಾರೆ. ಇಡೀ ಕರ್ನಾಟಕ ರಾಜ್ಯ ನೋಡುತ್ತಿದೆ. ಮತ್ತೆ ಇಲ್ಲಿ ಚರ್ಚೆಯಾಗಬೇಕೆ? ಯಾವ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡಿರುವಂತಹ ಸಂದರ್ಭದಲ್ಲಿ ಜಾರ್ಜ್ ಅವರು ನನ್ನ ಆತ್ಮಹತ್ಯೆಗೆ ಕಾರಣ ಎಂದು ಹೇಳಿದಂತಹ ಅವರ video clippings ಇರುವಂತಹ ಸಂದರ್ಭದಲ್ಲಿ, ಅವರ ಮರಣ ಪೂರ್ವ ಪತ್ರ ಇರುವಂತಹ ಸಂದರ್ಭದಲ್ಲಿ ಕಾಗೋಡು ತಿಮ್ಮಪ್ಪನವರಂಥವರು ನೇರವಾಗಿ ಮುಖ್ಯಮಂತ್ರಿಯವರಿಗೆ ಜಾರ್ಜ್‌ರವರ ರಾಜೀನಾಮೆ ತೆಗೆದುಕೊಳ್ಳಿ, ಏಕೆ ಹೀಗೆ ಮಾಡುತ್ತಿದ್ದೀರಿ ಎಂದು ಹೇಳಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಹಾಗೆ ಹೇಳುವಂತಹ ಚಾತಿ ಕೂಡ ಇದೆ. ಅವರು ಸತ್ಯವಾಗಿ, ಸ್ಪಷ್ಟವಾಗಿ ಹೇಳುವಂತಹ ಜನ.

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರವಾದ ಮೇಲೆ ಈ ಚರ್ಚೆಯನ್ನು ಮುಂದುವರೆಸಿ. ಮಾನ್ಯ ಕಾಗೋಡು ತಿಮ್ಮಪ್ಪನವರ ನೆಪದಲ್ಲಿ ಅವರು ಮಾತೇ ಶುರು ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಹಾಗಾದರೆ ಕಾಗೋಡು ತಿಮ್ಮಪ್ಪನವರಿಗೆ ಹೊಗಳಬಾರದು, ತೆಗಳಬೇಕೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಕೇಳುತ್ತಿದ್ದೇನೆ. ಅವರೆ ಎದ್ದು ನಿಂತುಕೊಂಡರೆ ನಾನೇನು ಮಾಡಲಿ?

**ಸಭಾಪತಿಯವರು:–** ಹಿರಿಯ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ನಿಂತಿದ್ದಾರೆ. ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಕೇಳೋಣ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಅಜೆಂಡಾ ಪ್ರಕಾರ ಕೆಲಸ ಪ್ರಾರಂಭವಾಗಲಿ, ಆಮೇಲೆ ವಿಷಯ ಬಂದಾಗ ಅವನ್ನೆಲ್ಲಾ ಪ್ರಸ್ತಾಪ ಮಾಡಲಿ. ಈಗ ಪ್ರಶ್ನೋತ್ತರ ಮೊದಲು ಪ್ರಾರಂಭವಾಗಲಿ ಎನ್ನುವುದಷ್ಟೆ ನನ್ನ ವಿನಂತಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಈಗ ನೀವು ಮಂತ್ರಿಗಳಾಗಿದ್ದೀರಿ. ತಾವು ಸಭಾಧ್ಯಕ್ಷರಾಗಿದ್ದಾಗ ಅದು ಎಲ್ಲಿ ಹೋಯಿತು?

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಈಶ್ವರಪ್ಪನವರೆ, ಸ್ವಲ್ಪ ಕೇಳಿ. ಸದನಕ್ಕೆ ಒಂದು ಶಿಸ್ತು, ಸಂಯಮ ಎಲ್ಲಾ ಇರಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಅದಕ್ಕೆ ನಾನು ಕೇಳುತ್ತಿದ್ದೇನೆ.

**ಶ್ರೀ ಕಾಗೋಡು ತಿಮ್ಮಪ್ಪ:–** ಈಗ ಕೇಳಬೇಡಿ, ಆಮೇಲೆ ಕೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನೀವು ಸಭಾಧ್ಯಕ್ಷರಾಗಿದ್ದರೆ ಖಂಡಿತ ನೀವೇ ರಾಜೀನಾಮೆ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೀರಿ. ಏಕೆ ಮಂತ್ರಿಯಾದ ತಕ್ಷಣ ಬದಲಾವಣೆಯಾಗಿಬಿಟ್ಟಿದ್ದೀರಿ? ಇದು ಯಾವ ನ್ಯಾಯ?

**ಸಭಾಪತಿಯವರು:–** ಮಾನ್ಯ ಈಶ್ವರಪ್ಪನವರೆ, ಈಗ ಪ್ರಶ್ನೋತ್ತರ ತೆಗೆದುಕೊಳ್ಳಬೇಕೆಂದು ಕೆಲವರ ಮನಸ್ಸಿನಲ್ಲಿ ಇದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರಿಗೆ ಅವಕಾಶ ಕೊಟ್ಟಿದ್ದೀರಿ. ನಾನು ಎರಡು ವಾಕ್ಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು The Times of India ಪತ್ರಿಕೆಯಲ್ಲಿ ನಿನ್ನೆ ಸುಪ್ರಿಮ್ ಕೋರ್ಟ್‌ನಲ್ಲಿ judgement ಆಗಿರುವ ಬಗ್ಗೆ ವರದಿ ಬಂದಿದೆ. ಸಂವಿಧಾನದ ಅನುಚ್ಛೇದ 141ರ ಪ್ರಕಾರ ಸುಪ್ರೀಮ್ ಕೋರ್ಟ್‌ನ ಯಾವುದೇ judgement ಈ ದೇಶದ ಪ್ರತಿಯೊಬ್ಬರ ಮೇಲೂ ಕೂಡ binding ಆಗುತ್ತದೆ. ಸುಪ್ರೀಮ್ ಕೋರ್ಟ್ ಏನು ಹೇಳುತ್ತದೆಂದರೆ "cannot rely on dying declaration blindly." District Court ನವರು ಏನೋ ಹೇಳಿದ್ದಾರೆ ಎಂದು ಕಾಗೋಡು ತಿಮ್ಮಪ್ಪನವರೆ ಉತ್ತರ ಕೊಡಿ ಎಂದು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರಲ್ಲಾ, ಆದರೆ ಈ ದೇಶದ ಸರ್ವೋಚ್ಚ ನ್ಯಾಯಾಲಯದ ಬಗ್ಗೆ ಆಗಲಿ, ಸಂವಿಧಾನದ ಬಗ್ಗೆ ಅವರಿಗೆ ಏನಾದರು ಸ್ವಲ್ಪವಾದರೂ ಗೊತ್ತಿದ್ದರೆ ಈ ರೀತಿ ಮಾತನಾಡುತ್ತಿರಲಿಲ್ಲ. ಇದು ಇವತ್ತು, ನಿನ್ನೆ ಮೊನ್ನೆಯದಲ್ಲ.

**Mr. CHAIRMAN:-** Fine, you have made your statement. ನಾನು ಒಂದು ವಿಷಯ ಸದನದ ಗಮನಕ್ಕೆ ತರಬೇಕು.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೆ, ಉಗ್ರಪ್ಪನವರು ಹೇಳಿದ್ದಕ್ಕೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಇವತ್ತು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಒಂದು judgement ಬಂದಿದೆ. Dying declaration ಕೊಟ್ಟರೆ 7 ವರ್ಷ ಸಜಾ ಕೊಟ್ಟಿರುವುದು ಇವತ್ತು ಪತ್ರಿಕೆಯಲ್ಲಿ ಬಂದಿದೆ.

**ಸಭಾಪತಿಯವರು:–** ಅದನ್ನು ಹೇಳಿದ್ದಾರೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ,....

**ಸಭಾಪತಿಯವರು:–** ಅವರು ಹೇಳಿದ್ದಕ್ಕೆ ನೀವು ಉತ್ತರ ಕೊಡಬೇಕೆ? ನಾನು ಸಭೆ ನಡೆಸುತ್ತೇನೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ಅವಕಾಶ ಕೊಡಿ. ಸುಪ್ರೀಂ ಕೋರ್ಟ್‌ನ ವಕೀಲರು.....

**Mr. CHAIRMAN:-** I cannot give a judgement on that. ಅವರವರ ಅಭಿಪ್ರಾಯ ಅವರು ಹೇಳಿದ್ದಾರೆ. ನಿಮ್ಮ ಅಭಿಪ್ರಾಯ ನೀವು ಹೇಳಿದ್ದೀರಿ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಯಾವುದೇ ಕೋರ್ಟ್‌ಗಳು ತೀರ್ಮಾನ ಕೊಡತಕ್ಕಂಥದ್ದು merit of the case ಮೇಲೆನೇ. ಆದರೆ ಒಂದು ಸತ್ಯ ಏನೆಂದರೆ ಇವತ್ತು ಇತಿಹಾಸದಲ್ಲಿ ಬಂದಿರತಕ್ಕಂಥದ್ದು ಕರ್ನಾಟಕ ಅಲ್ಲ, ಇಡೀ ಭಾರತ ದೇಶದ ಇತಿಹಾಸದಲ್ಲಿ ಬಂದಿರತಕ್ಕಂಥದ್ದು. ಇಡೀ ಭಾರತ ದೇಶದ ಇತಿಹಾಸದಲ್ಲಿ ಬಂದಿರುವಂತದ್ದಾಗಿದೆ. ಯಾರು ತನ್ನ ಅಂತ್ಯವನ್ನು ಕಾಣತಕ್ಕಂತಹ ಸಂದರ್ಭದಲ್ಲಿ ಏನಾಗಿದೆ ಎಂದು ಹೇಳುವಂತಹದ್ದು ಏನಿದೆ, ಅಂದರೆ ಗುರುತರವಾದ, ಜವಾಬ್ದಾರಿಯುತವಾದಂತಹ ಒಂದು ಸಂದೇಶ ಇವತ್ತು ದಿವಂಗತ ಗಣಪತಿಯವರು ಸಾಯುವುದಕ್ಕೆ ಮುಂಚಿತವಾಗಿ ಇಂತಿಂಥವರು ಹೀಗೀಗೆ ಎಂದು ಹೇಳಿದ್ದಾರೆ. ಆದ್ದರಿಂದ, ದಯಮಾಡಿ ಎಲ್ಲೋ ಒಂದು ಕಡೆ ಈ ವಿಚಾರವಾಗಿ ದಾರಿ ತಪ್ಪಿಸುವಂತಹ ಕೆಲಸ ಆಗುವುದು ಬೇಡ.

**ಸಭಾಪತಿಯವರು:–** ಆಯಿತು, ನಿನ್ನೆ ದಿವಸ ನಾವು ಸದವನ್ನು ನಡೆಸುವ ಹಿನ್ನೆಲೆಯಲ್ಲಿ ನನ್ನ ಕೊಠಡಿಯಲ್ಲಿ ಸದನವನ್ನು ಸುಲಲಿತವಾಗಿ ನೆಡೆಸಬೇಕೆನ್ನುವ ಹಿನ್ನೆಲೆಯಲ್ಲಿ ಒಂದು ಸಣ್ಣ ತೀರ್ಮಾನವನ್ನು ನಾವು ಮಾಡಿದೆವು. ನಿಯಮ 59 ರಡಿಯಲ್ಲಿ ಕೊಟ್ಟಿರುವಂತಹದ್ದರ ಬಗ್ಗೆ ಈಗ ಪ್ರಶ್ನೆ ಬರಲಿಲ್ಲ. ನಿನ್ನೆ ಆ ವಿಷಯದಲ್ಲಿ ಗೌರವಾನ್ವಿತ ಸದಸ್ಯರುಗಳು ಧರಣಿ ಮಾಡುತ್ತಿದ್ದರು, ಅದನ್ನು ನಿಯಮ 68ಕ್ಕೆ ಬದಲಾವಣೆ ಮಾಡಲಾಯಿತು. ನಿಯಮ 68 ರ ಚರ್ಚೆ ಮತ್ತು ಉತ್ತರವಾದ ನಂತರ ಪ್ರಶ್ನೋತ್ತರ ಅವಧಿಯನ್ನು ತೆಗೆದುಕೊಳ್ಳಬೇಕೆನ್ನುವ ತೀರ್ಮಾನದ ಹಿನ್ನೆಲೆಯಲ್ಲಿ ನಿನ್ನೆ, ಅದು 7 ಗಂಟೆಯವರೆಗೂ ಆ ಚರ್ಚೆ ಪೂರ್ಣಗೊಳ್ಳಲಿಲ್ಲ. ಜೊತೆಗೆ ಈ ವಿಷಯದಲ್ಲಿ ಸರ್ಕಾರದಿಂದ ಉತ್ತರ ಕೊಡಲಿಕ್ಕೆ ಸಮಯವನ್ನು ಸಹ ಕೇಳಲಾಯಿತು. ಆ ಹಿನ್ನೆಲೆಯಲ್ಲಿ ಸದನವನ್ನು ಮುಂದೂಡಲಾಗಿತ್ತು. ಹಾಗಾಗಿ, ಇವತ್ತು ಸಹ ಪರಿಸ್ಕೃತ ಅಜೆಂಡಾ ಕೊಟ್ಟಿದ್ದೇವೆ. ಅದರ ಪ್ರಕಾರ ಮೊದಲ ವಿಷಯ ನಿಯಮ 68 ರಡಿಯಲ್ಲಿ ಚರ್ಚೆ ಮತ್ತು ಉತ್ತರ. ಉತ್ತರದ ನಂತರ ಪ್ರಶ್ನೋತ್ತರ ಅವಧಿ ಎಂದು ಇದೆ. ಹೀಗಾಗಿ, ಆ ಚರ್ಚೆಯನ್ನು ಮುಂದುವರಿಸೋಣ. ಈ ನಿಟ್ಟಿನಲ್ಲಿ ಚರ್ಚೆ ಮಾಡಲು ತಮ್ಮ ತಮ್ಮ ಪಕ್ಷದ ವತಿಯಿಂದ ಪಟ್ಟಿಯನ್ನು ಕೊಟ್ಟಿದ್ದೀರಿ. ಈಗ ಶ್ರೀಯುತ ಶರವಣ ರವರು ಸರದಿಯಾಗಿದ್ದು, ಅವರು ತಮ್ಮ ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾವು ಜೈಜವಾನ್, ಜೈಕಿಸಾನ್ ಎಂದು ಹೇಳುತ್ತೇವೆ. ಜೈಜವಾನ್ ಎಂದರೆ ಸೈನಿಕರು ಮಾತ್ರವಲ್ಲ. ನಮ್ಮ ಸಾಮಾನ್ಯ ಜನರಿಗೆ ರಕ್ಷಣೆ ಕೊಡುವಂತಹ ಪೊಲೀಸ್ ಇಲಾಖೆ ಕೂಡ ಜೈಜವಾನ್ ಆಗಿರಬೇಕು. ನಮ್ಮ ರಾಜ್ಯದಲ್ಲಿ ಜೈಕಿಸಾನ್ ಆಗುತ್ತಿಲ್ಲ. ರೈತರ ಆತ್ಮಹತ್ಯೆ ಭಾಗ್ಯದಲ್ಲಿ ಜೈಕಿಸಾನ್ ಉಳಿದಿಲ್ಲ. ಆದರೆ, ನಮ್ಮಂತಹ ಸಾಮಾನ್ಯ ಜನರಿಗೆ ರಕ್ಷಣೆ ಕೊಡುವಂತಹ ಈ ಪೊಲೀಸ್ ಇಲಾಖೆಯಲ್ಲಿ, ಏನು ಇವತ್ತಿನ ಗಣಪತಿಯವರ ಆತ್ಮಹತ್ಯೆ ಪ್ರಕರಣದ ಬಗ್ಗೆ ಬಹಳಷ್ಟು ಹಿರಿಯರೆಲ್ಲರೂ ಚರ್ಚೆ ಮಾಡಿದ್ದಾರೆ. ನಿಜವಾಗಿಯೂ ಕೂಡ ನಮ್ಮ ರಾಜ್ಯದಲ್ಲಿ ರಾಜಕಾರಣಕ್ಕೋಸ್ಕರ ರಾಜಕೀಯ ಮಾಡುವುದು ಬೇಡ. ಏಕೆಂದರೆ, ರಾಜಕೀಯದಲ್ಲಿ, ರಾಜಕಾರಣದಲ್ಲಿ ತಾವು ಗೆಲುವನ್ನು ಸಾಧಿಸಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಇವತ್ತು ಜನರ ವಿಶ್ವಾಸವನ್ನು ಗಳಿಸುವಂತಹ ದಾರಿಯಲ್ಲಿ ಸರ್ಕಾರಗಳು ಹೋಗಬೇಕಾಗುತ್ತದೆ. ದಿವಂಗತ ಗಣಪತಿಯವರ ಸಾಯುವ ಮುನ್ನ ಮಾಧ್ಯಮದ ಮುಂದೆ ಬಂದು ಅವರಿಗೆ ಆಗಿರುವಂತಹ ನೋವುಗಳನ್ನು ತೊಡಗಿಸಿಕೊಂಡು, ಹಿಂದಿನ ಗೃಹ ಸಚಿವರಾದ ಸನ್ಮಾನ್ಯ ಜಾರ್ಜ್‌ರವರು, ಮತ್ತೆ ಕೆಲವು ಅಧಿಕಾರಿಗಳ ಹೆಸರುಗಳನ್ನು ಹೇಳಿ, ನನಗೆ ಏನಾದರೂ ತೊಂದರೆಯಾದರೆ, ನನ್ನ ಪ್ರಾಣಕ್ಕೆ, ಜೀವಕ್ಕೆ ಏನಾದರೂ ತೊಂದರೆಯಾದರೆ, ಇವರೇ ಹೊಣೆಯಾಗುತ್ತಾರೆಂದು ಹೇಳಿ, ಅವರ ಒಂದು ಹೇಳಿಕೆಯನ್ನು ಬಿ–ಟಿವಿ, ಖಾಸಗಿ ಚಾನಲ್‌ನಲ್ಲಿ ಎಲ್ಲವನ್ನು ಹೇಳಿಕೊಂಡ ನಂತರ ಕೆಲವೇ ಗಂಟೆಗಳಲ್ಲಿ ಅವರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಾರೆ, ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ. ಆದಾದ ನಂತರ ಮೊಟ್ಟಮೊದಲನೆಯದಾಗಿ, ಯಾರನ್ನು ಕರೆಸಬೇಕಾಗಿತ್ತು, ಯಾರಿಂದ ಹೇಳಿಕೆಯನ್ನು ತೆಗೆದುಕೊಳ್ಳಬೇಕಾಗಿತ್ತು, ಆ ಶವವನ್ನು ಯಾರಿಗೆ ತೋರಿಸಬೇಕಾಗಿತ್ತು? ಇವತ್ತು ಒಬ್ಬ ಪುರುಷ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಾಗ, ಅವರ ಧರ್ಮಪತ್ನಿಯವರು ಇದ್ದಾರೆ, ಅವರಿಂದ ಹೇಳಿಕೆಯನ್ನು ಪಡೆಯಬೇಕಾಗಿತ್ತು. ಆ ಒಂದು ಕೆಲಸಕ್ಕೆ ಇವರು ಕೈ ಹಾಕಿಲ್ಲ. ಅವರ ತಂದೆ ಮತ್ತು ಮಾವನನ್ನು ಕರೆಸುತ್ತಾರೆ, ಅವರ ಅಣ್ಣ ಡಿ.ವೈ.ಎಸ್ಪಿ ಅವರನ್ನು ಕರೆಸುತ್ತಾರೆ, ಅವರಿಂದ ಹೇಳಿಕೆಯನ್ನು

ಪಡೆದುಕೊಳ್ಳುತ್ತಾರೆ, ಅವರು ಮರಣೋತ್ತರ ಪರೀಕ್ಷೆ ಮಾಡುವಂತಹ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಅವರ ತಂದೆಯವರು ಏನು ಹೇಳುತ್ತಾರೆಂದರೆ, "ನೋಡಿ, ನನಗೆ ಏನೂ ಗೊತ್ತಿಲ್ಲ, ಅ ಅಧಿಕಾರಿಗಳು ಏನು ಬರೆದುಕೊಟ್ಟರು, ಅದಕ್ಕೆ ನಾನು ರುಜು ಹಾಕಿದ್ದೇನೆಂದು ಹೇಳುತ್ತಾರೆ. ಅದಕ್ಕೆ ಡಿವೈಎಸ್ಪಿ ಗಣಪತಿಯವರ ಕುಟುಂಬ ಪೊಲೀಸ್ ಠಾಣೆಯ ಎದುರು ಪ್ರತಿಭಟನೆ ಮಾಡುತ್ತಾರೆ, ಎಫ್ಐಆರ್, ದಾಖಲು ಮಾಡಿಕೊಳ್ಳಿ ಎಂದು ಹೇಳಿ ಭಿಕ್ಷೆ ಬೇಡುತ್ತಾರೆ, ಅದಕ್ಕೆ ಸರ್ಕಾರದ ವತಿಯಿಂದ ಯಾವುದೇ ಸ್ಪಂದನೆ ಬರುವುದಿಲ್ಲ. ಅದರೂ ಸಹ ಇವತ್ತು ಇಡೀ ರಾಜ್ಯದಲ್ಲಿ ಅಂದರೆ ಸುಮಾರು 6 ಕೋಟಿ ಜನರ ವಿಶ್ವಾಸವನ್ನು ಗಳಿಸುವಂತಹ ಕೆಲಸ ಆಗಬೇಕಾಗಿದೆ. ಸನ್ಮಾನ್ಯ ಜಾರ್ಜ್ ರವರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ. ಏಕೆಂದರೆ, ಅವರೊಬ್ಬ ಮುಖ್ಯಮಂತ್ರಿಗಳ ಅಪ್ತ ಸಚಿವರು, ಜೊತೆಗೆ ಪ್ರಭಾವಿ ಸಚಿವರಾಗಿದ್ದು, ಅದರ ಬಗ್ಗೆ ನಾವು ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ, ಅವರು ನೈತಿಕ ಹೊಣೆ ಹೊತ್ತು, ರಾಜೀನಾಮೆಯನ್ನು ಕೊಡಬೇಕಾಗಿತ್ತು. 7ನೇ ತಾರೀಖು ನಡೆದಂತಹ ಘಟನೆಯಾಗಿದ್ದು, ಇವತ್ತು 13ನೇ ತಾರೀಖು ಆಗಿದೆ. ಸುಮಾರು 5 ದಿವಸಗಳು ಆಗಿದೆ. ನಿನ್ನೆ ಕೂಡ ಕೊಡಗು ಜಿಲ್ಲೆ ಉಸ್ತುವಾರಿ ಸಚಿವರಾದಂತಹ ಶ್ರೀಮಾನ್ ಸೀತರಾಮರವರು ಕುಶಾಲನಗರಕ್ಕೆ ಭೇಟಿಕೊಡುತ್ತಾರೆ. ಅಲ್ಲಿ ಇರತಕ್ಕಂತಹ ಜನರು ಯಾವ ರೀತಿಯಲ್ಲಿ ಮಂಗಳಾರತಿ ಮಾಡಿರುವುದನ್ನು ಕೂಡ ನಾವು ಮಾಧ್ಯಮದಲ್ಲಿ ನೋಡಿದ್ದೇವೆ. ಅಲ್ಲಿ ಅವರು ಹೋಗಲಿಕ್ಕೆ ಬಿಡಲಿಲ್ಲ.

**ಶ್ರೀ ಯು.ಟಿ.ಖಾದರ್:–** ಆ ಕೆಲಸವನ್ನು ಜನರು ಮಾಡಲಿಲ್ಲ. ಯಾವುದೋ ಪಕ್ಷದ ಕಾರ್ಯಕರ್ತರು ಮಾಡಿದ್ದು.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಇವತ್ತು ರಾಜ್ಯದ ಜನರು ದಂಗೆ ಎದ್ದಿದ್ದಾರೆ. ಅವರು ಬೀದಿಗೆ ಬಂದಿದ್ದಾರೆ. ಹೋರಾಟ ಮಾಡುತ್ತಿದ್ದಾರೆ. ನಿಮಗೆ ಇನ್ನು 12 ತಿಂಗಳು ಕಾಲಾವಕಾಶ ಇದೆ.

**(ಗೊಂದಲ)**

ನೀವು ಜನರ ಆತ್ಮ–ವಿಶ್ವಾಸವನ್ನು ಗೆಲ್ಲಿಸಬೇಕಾಗಿದೆ. ಅದನ್ನು ಬಿಟ್ಟು, ನೀವು ಏತಕ್ಕೆ ಈ ರೀತಿಯ ಭಂಡತನದ ಪರಮಾವಧಿಯನ್ನು ತೋರಿಸುತ್ತಿದ್ದೀರಿ? ಈಗ ಶ್ರೀಯುತ ಸಂತೋಷ್ ಲಾಡ್ ಸಾಹೇಬರವರು ಇಲ್ಲಿಯೇ ಕುಳಿತಿದ್ದಾರೆ. ಅವರ ಬಗ್ಗೆಯೂ ನನಗೆ ಅಪಾರವಾದ ಗೌರವ ಇದೆ. ಅವರ ಬಗ್ಗೆ ಒಂದು ಆರೋಪ ಬಂದಾಗ ಮುಖ್ಯಮಂತ್ರಿಗಳು ರಾಜೀನಾಮೆಯನ್ನು ಪಡೆದುಕೊಂಡರು. ಮತ್ತೆ ಅವರು ನಿರಪರಾಧಿಯಾಗಿ ಬಂದ ನಂತರ ಮತ್ತೆ ಮಂತ್ರಿಯಾಗಿ ಬಂದು ಇಲ್ಲಿ ಕುಳಿತಿದ್ದಾರೆ. ಅವರಿಗೆ ನಾನು ಅನೇಕ ನಮಸ್ಕಾರಗಳನ್ನು ತಿಳಿಸುತ್ತೇನೆ. ಅದೇ ರೀತಿಯಲ್ಲಿ ತಾವು ಏತಕ್ಕೆ ಮಾಡಬಾರದು? ಶ್ರೀಯುತ ಜಾರ್ಜ್‌ರವರ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ವೈರತ್ವ ಇಲ್ಲ. ನಾನು ಈ ಸಂಗತಿಯನ್ನು ಬಹಳ ನೋವಿನಿಂದ ಹೇಳಲಿಕ್ಕೆ ಬಯಸುತ್ತೇನೆ. ತಾವು ಏತಕ್ಕೆ ಈ ರೀತಿಯಲ್ಲಿ ಹಠ ಮಾಡುತ್ತಿದ್ದೀರಿ, ಶ್ರೀಯುತ ಜಾರ್ಜ್‌ರವರ ಕಡೆಯಿಂದ ರಾಜೀನಾಮೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಅವರ ಮೇಲೆ ಇರತಕ್ಕಂತಹ ಆರೋಪವನ್ನು ವಿಚಾರಣೆಗೊಳಪಡಿಸಿ, ಅದು ಸಾಭೀತಾದಲ್ಲಿ, ಅವರನ್ನು ಉಪ ಮುಖ್ಯಮಂತ್ರಿಯನ್ನಾಗಿ ಮಾಡಿಕೊಂಡು ತಮ್ಮ ಪಕ್ಕದಲ್ಲಿಯೇ ಕುಳ್ಳಿರಿಸಿಕೊಳ್ಳಿ. ಅದರ ಬಗ್ಗೆ ನಮಗೆ ತಕರಾರು ಇರುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಸಾಬೀತು ಆದರೆ. . .

**ಶ್ರೀ ಟಿ.ಎ.ಶರವಣ:–**ಅವರ ಮೇಲೆ ಆರೋಪ ಇಲ್ಲವೆಂದು ಸಾಭೀತಾದ ಮೇಲೆ ಎಂದು ಹೇಳುತ್ತಿದ್ದೇನೆ. ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಿ. ನಾನು ನಿಮ್ಮಷ್ಟು ಹಿರಿಯರಲ್ಲ, ನಾವು ಕಿರಿಯರಿದ್ದೇವೆ. ಈಗ ನಾನು ಹೇಳವುದಿಷ್ಟೆ. ಏಕೆಂದರೆ, ಡಿಸೆಂಬರ್ 1ನೇ ತಾರೀಖು, ಅವರು ಗೃಹ ಮಂತ್ರಿಯಾದ ನಂತರ ಮಡಿವಾಳ ಠಾಣೆಗೆ ಭೇಟಿ ಕೊಡುತ್ತಾರೆ, ಅಲ್ಲಿ ಹೋಗಿ ಪರಿಶೀಲನೆ ಮಾಡುತ್ತಾರೆ, ಆ ಸಂದರ್ಭದಲ್ಲಿ ನನಗೆ ಬಹಳ ಖುಷಿಯಾಗುತ್ತದೆ. ಗೃಹ ಮಂತ್ರಿಗಳು ಎಲ್ಲೋ ಒಂದು ಕಡೆ ಸ್ಥೈರ್ಯ,

ಧೈರ್ಯ, ವೀರ್ಯಾ ಎಲ್ಲವನ್ನು ಇಟ್ಟುಕೊಂಡು ಸ್ಫೂರ್ತಿಯನ್ನು ಸಲ್ಲಿಸಿದ್ದಾರೆ. ರಾಜ್ಯದ ಜನತೆಗೆ ಎಲ್ಲೋ ಒಂದು ಕಡೆ ನ್ಯಾಯ ಸಿಕ್ಕುತ್ತದೆ ಎಂದು ಹೇಳಿ . . .

**ಶ್ರೀ ಹೆಚ್.ಎಂ.ರೇವಣ್ಣ**:–ವೀರ್ಯ ಎಲ್ಲಿಂದ ಬರುತ್ತದೆ?

**ಸಭಾಪತಿಯವರು**:– ಶ್ರೀಯುತ ರೇವಣ್ಣನವರೆ, ತಾವು ಸ್ವಲ್ಪ ಸಹಿಸಿಕೊಳ್ಳಬೇಕು.

**ಶ್ರೀ ವಿ.ಎಸ್.ಉಗ್ರಪ್ಪ**:– ಎಲ್ಲಿಂದಪ್ಪಾ ವೀರ್ಯ?

**(ಗೊಂದಲ)**

**ಸಭಾಪತಿಯವರು**:– ಇಷ್ಟೊಂದು ಚೆನ್ನಾಗಿ ಕನ್ನಡವನ್ನು ಅವರು ಮಾತನಾಡುತ್ತಾರಲ್ಲಾ, ಸಂತೋಷಪಡಿ.

**ಶ್ರೀ ಟಿ.ಎ.ಶರವಣ**:– ದಯಮಾಡಿ, ಈ ವಿಚಾರದಲ್ಲಿ ಆತ್ಮವಂಚನೆ ಮಾಡಿಕೊಳ್ಳುವುದು ಬೇಡ. ಯಾವುದೇ ರೀತಿಯ ಪ್ರತಿಷ್ಠೆಗೆ ಒಳಗಾಗಬೇಡಿ. ಬೇರೆ ಯಾವುದೇ ರೀತಿಯಲ್ಲಿ ಈ ವಿಚಾರವನ್ನು ತೆಗೆದುಕೊಳ್ಳುವುದು ಬೇಡ. ನಮ್ಮ ಜನರ ವಿಶ್ವಾಸವನ್ನು ಗೆಲ್ಲಿಸುವಂತಹ, ಜನರ ಭಾವನೆಗಳಿಗೆ ದಕ್ಕೆ ಬಾರದಂತೆ, ಜನರ ಭಾವನೆಗಳಿಗೆ ಜನರ ಅಭಿಪ್ರಾಯಗಳಿಗೆ ಬೆಲೆ ಕೊಡುವಂತಹ ಕೆಲಸವನ್ನು ತಾವು ಮಾಡಬೇಕಾಗಿದೆ. ಮಾನ್ಯ ಸಭಾಪತಿಯರೆ, ತಮಗೆ ಇಲ್ಲಿ ಒಂದು ಸಂಗತಿಯನ್ನು ತಿಳಿಸಲಿಕ್ಕೆ ಬಯಸುತ್ತೇನೆ. 2013 ರಲ್ಲಿ ಯಶವಂತಪುರದಲ್ಲಿ ಇನ್ಸ್‌ಪೆಕ್ಟರ್ ಆಗಿ, ಮಡಿವಾಳ ಪೊಲೀಸ್ ಠಾಣೆಗೆ ವರ್ಗಾವಣೆ ಬರುತ್ತಾರೆ. ಮಡಿವಾಳ ಪೊಲೀಸ್ ಠಾಣೆಯಲ್ಲಿ ಅವರು ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಶಾಂತರಾಜು ಎಂದು ಹೇಳಿ, ಒಬ್ಬ ಎಸಿಪಿ ಅವರನ್ನು ಕಳುಹಿಸಿ, ಅವರಿಗೆ ಕಿರುಕುಳ ಕೊಡಬೇಕು, ಮಾನಸಿಕ ಒತ್ತಡಗಳನ್ನು ಕೊಡಬೇಕೆಂದು ಹೇಳಿ, ಮಡಿವಾಳ ಪೊಲೀಸ್ ಠಾಣೆಯಲ್ಲಿ ಏನೇನು ಕಳ್ಳತನದ ಪ್ರಾಪರ್ಟಿ ಇದೆ, ಅದರ ನೆಪ ಹೊರಿಸಿ, ಅವರ ಮೇಲೆ ಒಂದು ವಿಚಾರಣೆಯನ್ನು ಪ್ರಾರಂಭ ಮಾಡುತ್ತಾರೆ. 2014 ರಿಂದ ಅವರು ಸಾಯುವುದಕ್ಕೆ ಮುಂಚಿತವಾಗಿ, ಏನೇನು ಘಟನೆಗಳು ನಡೆದಿವೆ,

**ಶ್ರೀ ಬಿ.ರಮಾನಾಥ್‌ರೈ**:– ಮಾನ್ಯ ಸಭಾಪತಿಯವರೆ,

**(ಗೊಂದಲ)**

ದಯಮಾಡಿ ಮಧ್ಯೆ ಬಾಯಿ ಹಾಕಬೇಡಿ. 5 ನಿಮಿಷ ಕುಳಿತುಕೊಳ್ಳಿ. ತಾವು ಕುಳಿತುಕೊಳ್ಳಿ, ಈ ಬಗ್ಗೆ ನಾನು ದಾಖಲೆ ಕೊಡುತ್ತೇನೆ. ತಾವು ಶಾಂತ ರೀತಿಯಲ್ಲಿ ಕೇಳಬೇಕು.

**(ಗೊಂದಲ)**

**ಶ್ರೀ ಬಿ.ರಮಾನಾಥ ರೈ**:– ಮಾನ್ಯ ಸಭಾಪತಿಯವರೆ,

**ಶ್ರೀ ಟಿ.ಎ.ಶರವಣ**:– ನಾವು ಏನು ಹೇಳುತ್ತೇವೆಂದು ಕೇಳಿ, ನಂತರ ಉತ್ತರ ಕೊಡಿ. ನಾನು ಏನು ಹೇಳುತ್ತೇನೆಂದು ಕೇಳಿ. ಕೇಳುವಂತಹ ಸೌಜನ್ಯತೆ ನಿಮಗೆ ಇಲ್ಲವೇ? ನಾನು ಮಾತನಾಡುವುದಿಲ್ಲ, ನೀವೇ ಮಾತನಾಡಿ. ತಾವು ಹಿರಿಯರಿದ್ದೀರಿ, ಈ ರೀತಿ ಮಾಡಿದರೆ ಹೇಗೆ? 5 ನಿಮಿಷ ನಾನು ಏನು ಹೇಳುತ್ತೇನೆಂದು ಕೇಳಿ. ಈ ಬಗ್ಗೆ ನಾನು ದಾಖಲೆಯನ್ನು ಕೊಡುತ್ತೇನೆ.

**ಶ್ರೀ ಬಿ. ರಮಾನಾಥ ರೈ**:– ತಾವು ಏನು ದಾಖಲೆ ಕೊಡುತ್ತೀರಿ?

**ಶ್ರೀ ಟಿ.ಎ.ಶರವಣ**:– (ಮುಂದು) ದಿನಾಂಕ 14.10.2014 ರಂದು ಎ.ಸಿ.ಪಿ., ಯವರಿಂದ ಡಿ.ಸಿ.ಪಿ., ಗೆ ಬರೆದ ಪತ್ರದಲ್ಲಿ ಮಡಿವಾಳ ಪೊಲೀಸ್ ಠಾಣೆಯಲ್ಲಿ ಕಳುವಾಗಿರುವ ಪ್ರಾಪರ್ಟಿಗಳ ಬಗ್ಗೆ ತನಿಖೆ ನಡೆಸಬೇಕೆಂದು ತಿಳಿಸಿರುತ್ತಾರೆ.

**(ಗೊಂದಲ)**

ಒಂದು ನಿಮಿಷ ಇರಿ... ಈ ಪತ್ರವನ್ನು ಶ್ರೀ ಎಂ.ಕೆ.ಗಣಪತಿಯವರಿಗೆ ನೀಡಿ ಎ.ಸಿ.ಪಿ. ಯಿಂದ ಡಿ.ಸಿ.ಪಿ., ಡಿ.ಸಿ.ಪಿ. ಯಿಂದ ಸಿ.ಪಿ., ಸಿ.ಪಿ.ಯಿಂದ ಸರ್ಕಾರಕ್ಕೆ ಕೊಟ್ಟು, ಅವರಿಗೆ ಯಾವ್ಯಾವ ರೀತಿಯಲ್ಲಿ ಕಿರುಕುಳಗಳನ್ನು ಕೊಡುವುದಕ್ಕೆ ಸಾಧ್ಯವೋ ಅಂತಹ ಕಿರುಕುಳಗಳನ್ನು ಕೊಟ್ಟು, ಅವರಿಗೆ ಮಾನಸಿಕವಾಗಿ ಯಾವ ರೀತಿ ಒತ್ತಡಗಳು ಕೊಡಬೇಕೋ ಅಷ್ಟನ್ನೂ ನೀಡಲಾಗಿದೆ. ಅವರು ಹಿರಿಯ ಅಧಿಕಾರಿಗಳ ಬಳಿ 'ಸ್ವಾಮಿ, ನಾನು ಯಾವ ತಪ್ಪನ್ನು ಮಾಡಿರುವುದಿಲ್ಲ, ಆದುದರಿಂದ ನನಗೆ ಯಾವ ಶಿಕ್ಷೆಯೂ ನೀಡಬೇಡಿ' ಎಂದು ಕಾಲು ಮುಗಿದು ಕೇಳಿಕೊಳ್ಳುತ್ತಾರೆ. ಈ ಬಗ್ಗೆ ಅವರೇ ಒಂದು ಪತ್ರವನ್ನು ಬರೆದಿದ್ದಾರೆ. ಈ ಪತ್ರವನ್ನು ನಾನು ತಮಗೆ ನೀಡುತ್ತೇನೆ. ಈ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ನಗರ ಪೊಲೀಸ್ ಆಯುಕ್ತರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಸದರಿ ಪತ್ರವನ್ನು ಪುನಃ ಸರ್ಕಾರಕ್ಕೆ ಕಳುಹಿಸಿ ಈ ಪ್ರಕರಣದ ಬಗ್ಗೆ ಮತ್ತೊಮ್ಮೆ ತನಿಖೆ ಮಾಡಿ, ಈ ಪ್ರಕರಣವನ್ನು reopen ಮಾಡಿ ಎಂದು ಹೇಳುತ್ತಾರೆ. ಆದಾದ ನಂತರ ಶ್ರೀ ಎಂ.ಕೆ.ಗಣಪತಿಯವರು ಮತ್ತೆ ಈ ಪ್ರಕರಣದ ಬಗ್ಗೆ ಅಪೀಲು ಮಾಡಿಕೊಳ್ಳುತ್ತಾರೆ. ಈ ರೀತಿ ಅಪೀಲು ಮಾಡಿಕೊಂಡ ತಕ್ಷಣ ಸರ್ಕಾರದಲ್ಲಿ ಒಬ್ಬರು ಸೂಪರ್ ಹೋಮ್ ಮಿನಿಸ್ಟರ್ ಇದ್ದಾರೆ ಎಂದೇನೋ ಹೇಳುತ್ತಾರಲ್ಲಾ ಅವರ ಒಂದು ಒತ್ತಡದಿಂದ ಇನ್ನೂ ಸಾಕಷ್ಟು ನೋವುಗಳನ್ನು ಕೊಟ್ಟು ಇವತ್ತಿನ ಇಂತಹ ಸ್ಥಿತಿಗೆ ಈ ಸರ್ಕಾರವೇ ಕಾರಣವೆಂದು ನಾನು ಗಂಭೀರವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಹೆಚ್ಚಿಗೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀ ಡಿ.ಕೆ.ರವಿಯವರಿಂದ ಹಿಡಿದು ಇವತ್ತು ನಮ್ಮ ಅನುಪಮಾ ಶೆಣೈರವರಿರಬಹುದು, ಎಂ.ಕೆ.ಗಣಪತಿಯವರಿರಬಹುದು... ಇಷ್ಟೆಲ್ಲಾ ಆದರೂ ಸಹ ಡಿ.ಕೆ ರವಿಯವರು ಸತ್ತು ಹೋಗಿ ಒಂದು ವರ್ಷವಾಗಿದೆ. ಡಿ.ಕೆ.ರವಿಯವರ ತಾಯಿ ಗೌರಮ್ಮನವರು ಒಂದು ಟಿ.ವಿ. ಸಂದರ್ಶನದಲ್ಲಿ ಮಾತನಾಡಿ ನನ್ನ ಮಗನ ತಿಥಿ ಕಾರ್ಯ ಮಾಡುವುದಕ್ಕೆ ಹಣವಿಲ್ಲದೇ ನನ್ನ ಮಾಂಗಲ್ಯವನ್ನು ಅಡವಿಟ್ಟು ಈ ತಿಥಿ ಕಾರ್ಯ ಮಾಡುತ್ತಿದ್ದೇನೆ ಎಂದು ಹೇಳಿದರು. ನಿಜವಾಗಲೂ ಇದರಿಂದಾಗಿ ಅವರ ಮನಸ್ಸು ಯಾವ ರೀತಿಯಾಗಿರಬೇಕು, ಅವರಿಗೆ ಎಷ್ಟು ನೋವಾಗಿರಬೇಕು...

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಕುಮಾರಸ್ವಾಮಿಯವರು ಹೋಗಿ ಕರೆದುಕೊಂಡು ಬಂದಿದ್ದರಲ್ಲಾ ಅವರನ್ನಾ ತಾವು ಹೇಳುತ್ತಿರುವುದೇ?

**(ಗೊಂದಲ)**

**ಸಭಾಪತಿಯವರು:–** ಆಯಿತು, ತಮಗೂ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

ಆಯಿತು ಮೊದಲು ಅವರು ಮಾತನಾಡಲಿ ಬಿಡಿ. ನಂತರ ತಮಗೆ ಅವಕಾಶ ಕೊಡುತ್ತೇನೆ ಆಗ ತಾವೇ ಮಾತನಾಡಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಡಿ.ಕೆ.ರವಿಯವರ ತಾಯಿ ಟಿ.ವಿ. ಸಂದರ್ಶನದಲ್ಲಿ ಕೊಟ್ಟಂತಹ ಹೇಳಿಕೆಯನ್ನು ನೋಡಿದ ಇಡೀ ರಾಜ್ಯದ ಜನತೆ ಅವರ ಪರವಾಗಿ, ನಿಮ್ಮ ಸಹಕಾರಕ್ಕೆ ನಾವು ಬರುತ್ತೇವೆ, ನಿಮ್ಮ ಜೊತೆ ನಾವಿದ್ದೇವೆ ಎಂದು ಸಾರ್ವಜನಿಕವಾಗಿ ಎಲ್ಲರೂ ಬಂದು ಅವರಿಗೆ ಸಹಾಯವನ್ನು ಮಾಡಿದರು. ಅದರಲ್ಲಿ ನಾನು ಕೂಡ ಒಬ್ಬ. ನಾನು ಅವರಿಗೆ ಒಂದು ಲಕ್ಷ ರೂಪಾಯಿ ಹಣವನ್ನು ಕೊಟ್ಟು ಒತ್ತೆ ಇಟ್ಟಿದ್ದ ಮಾಂಗಲ್ಯ ಸರವನ್ನು ಮೊದಲು ಬಿಡಿಸಿಕೊಟ್ಟು, ದಯಮಾಡಿ ಮತ್ತೆ ಈ ಮಾಂಗಲ್ಯ ಸರವನ್ನು ಒತ್ತೆಯಿಡಬೇಡಿ, ನಾವು ಸನಾತನ ಧರ್ಮದಲ್ಲಿರುವಂತಹವರು ನಮಗೆ ಒಂದು ಸಂಸ್ಕೃತಿಯಿದ್ದು, ಈ ಮಾಂಗಲ್ಯಕ್ಕೆ ಪವಿತ್ರವಾದ ಒಂದು ಸ್ಥಾನಮಾನವಿದೆಯೆಂದು ಹೇಳಿ ಯಾವುದೇ ಕಾರಣಕ್ಕೂ ಇದನ್ನು ಒತ್ತೆಯಿಡಬೇಡಿ ಎಂದು ತಿಳಿಸಿದ್ದೆ. ಒಂದು ಲಕ್ಷ ರೂಪಾಯಿ ಹಣವನ್ನು ನೀಡುವುದು ಒಂದು ದೊಡ್ಡ ವಿಷಯವಲ್ಲ. ಆದರೆ ನಾನು ಹೇಳುವುದು ಇಷ್ಟೆ, ಇಂತಹ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಾಗ ಸರ್ಕಾರ ಅವರಿಗೆ ಪರಿಹಾರ ಕೊಡಬೇಕು. ಪರಿಹಾರ ಕೊಡುವುದರಿಂದ ಹೋಗಿರುವ ಜೀವ ಹಿಂತಿರುಗಿ ಬರುವುದಿಲ್ಲ. ಆದರೆ ಇಂತಹ ಸಂದರ್ಭದಲ್ಲಿ ಸರ್ಕಾರವು ಮೃತರ ಕುಟುಂಬಗಳು ಯಾವ ಪರಿಸ್ಥಿತಿಯಲ್ಲಿ ಇವೆ ಅವರ

ಹಿನ್ನೆಲೆ ಏನು ಎಂದು ಪರಿಗಣಿಸಿ ಅದಕ್ಕೆ ಕೂಡಲೇ ಸ್ಪಂದಿಸಿ ಅಂತಹ ಕುಟುಂಬಗಳಿಗೆ ಆರ್ಥಿಕ ನೆರವು ನೀಡಬೇಕಾಗುತ್ತದೆ. ನಿನ್ನೆ ದಿವಸ ಟಿ.ವಿ. ಮಾಧ್ಯಮಗಳಲ್ಲಿ ವರದಿ ಬಂದ ತಕ್ಷಣ ಸಚಿವರ ಮೇಲೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ಸರ್ಕಾರದ ಪರವಾಗಿ ಸಚಿವರು ಹೇಳಿರುವುದು ಎಷ್ಟು ಸರಿ? ಒಂದು ರೈಲು ಅಪಘಾತದಲ್ಲಿ ಸಾವು ನೋವುಗಳಾದರೆ ಅದಕ್ಕೆ ಒಬ್ಬ ಮಂತ್ರಿ ಸದರಿ ಅಪಘಾತದ ಹೊಣೆ ಹೊತ್ತು ತನ್ನ ರಾಜೀನಾಮೆಯನ್ನು ನೀಡುತ್ತಾನೆ. ಆದರೆ ಐದಾರು ದಿವಸಗಳಿಂದ ಇಷ್ಟು ದೊಡ್ಡ ಚರ್ಚೆಯಾಗುತ್ತಿದೆ, ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ನಡೆಯುತ್ತಿದೆ, ಸಾರ್ವಜನಿಕರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ ಮತ್ತು ಮುಷ್ಕರಕ್ಕೆ ಕರೆ ನೀಡಿದ್ದಾರೆ ಇಷ್ಟೆಲ್ಲಾ ಆದರೂ ಕೂಡ ತಾವುಗಳು ಸಾಂತ್ವನದಿಂದ ನಮಗೆ ಅಧಿಕಾರವೇ ಮುಖ್ಯವೆಂದು ಇದಕ್ಕೆ ಹೊರತು ಯಾವುದು ಇಲ್ಲಾ ಎಂದು ಹೇಳುತ್ತಿದ್ದಾರಲ್ಲ, ಐದು ವರ್ಷದ ನಂತರ ತಮ್ಮ ಅಧಿಕಾರವನ್ನು ನವೀಕರಿಸಲೇಬೇಕು ಆಗ ತಾವು ಜನರ ಬಳಿಗೆ ಹೋಗಲೇಬೇಕು ಆಗ ಜನ ತೀರ್ಮಾನ ಮಾಡುತ್ತಾರೆ ಅದರ ಬಗ್ಗೆ ನಾನು ಈಗ ಚರ್ಚೆ ಮಾಡುವುದಿಲ್ಲ. ಆದರೆ ಇವತ್ತು ಈ ಆತ್ಮಹತ್ಯೆಯ ಬಗ್ಗೆ ಇಡೀ ರಾಜ್ಯದಲ್ಲಿ ವ್ಯಾಪಕ ಚರ್ಚೆಯಾಗುತ್ತಿದೆ. ನಾವೆಲ್ಲಾ ರಾಜಕಾರಣಿಗಳು, ಕಾಂಗ್ರೆಸ್ ಪಕ್ಷ, ಬಿಜೆಪಿ ಪಕ್ಷ ಹಾಗೂ ಜೆಡಿಎಸ್ ಪಕ್ಷ ಯಾವುದೇ ಪಕ್ಷವಾಗಿರಲಿ ನಾನು ಪಕ್ಷದ ಬಗ್ಗೆ ಮಾತನಾಡುತ್ತಿಲ್ಲ ಏಕೆಂದರೆ ಇಂತಹ ಅನೇಕ ಘಟನೆಗಳು ನಡೆದಿವೆ. ಅಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ರಾಜೀನಾಮೆ ಕೊಟ್ಟಂತಹ ಉದಾಹರಣೆಗಳಿವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಸದನದಲ್ಲಿ ಕುಳಿತಿದ್ದಾರೆ ತಾವು ಹಿರಿಯರಿದ್ದು ಈ ಬಗ್ಗೆ ಸರ್ಕಾರಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ಕಿವಿಮಾತನ್ನು ಹೇಳಿ ರಾಜೀನಾಮೆ ಕೊಡಿಸಿ ತನಿಖೆಯನ್ನು ಎದುರಿಸಿ ತದನಂತರ ನಾವು ಈ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆಂದು ಬುದ್ಧಿವಾದ ಹೇಳಿ ತಕ್ಷಣವೇ ಶ್ರೀ ಕೆ.ಜೆ.ಜಾರ್ಜ್‌ರವರ ರಾಜೀನಾಮೆ ಕೊಡಿಸಿ ಆ ನೊಂದ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಈಗ ಶ್ರೀ ರಿಜ್ವಾನ ಹರ್ಷದ್‌ರವರು ಮಾತನಾಡುತ್ತಾರೆ. ಅವರು ಮೊದಲಬಾರಿಗೆ ಮಾತನಾಡುತ್ತಾರೆ. This is his maiden speech. ನಾವೆಲ್ಲರೂ ಸ್ವಲ್ಪ ಗಮನವಿಟ್ಟು ಕೇಳುವುದರ ಜೊತೆಗೆ ಅವರಿಗೆ ಸಹಕಾರವನ್ನು ಮತ್ತು ಪ್ರೋತ್ಸಾಹವನ್ನು ಕೋಡೋಣವೆಂದು ನಾನು ಸದನದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ರಿಜ್ವಾನ್ ಅರ್ಷದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಹಾಗೆ ನಾನು ಮೊದಲನೇ ಬಾರಿಗೆ ಈ ಸದನದ ಸದಸ್ಯನಾಗಿ ಮಾತನಾಡುತ್ತಿದ್ದೇನೆ. ನಾನು ಮೊದಲನೇ ಬಾರಿಗೆ ಕಳೆದ ವಾರದಿಂದ ಈ ಸದನದಲ್ಲಿ ಭಾಗವಹಿಸುತ್ತಿದ್ದೇನೆ. ಇಲ್ಲಿ ಎಲ್ಲಾ ಹಿರಿಯ ಸದಸ್ಯರು ಮಾತನಾಡುವುದನ್ನು ನಾನು ನೋಡುತ್ತಿದ್ದೇನೆ. ಈ ಮೊದಲು ಟಿ.ವಿ.ಮಾಧ್ಯಮಗಳಲ್ಲಿ ನೋಡುತ್ತಿದ್ದೆ ಹಾಗೂ ಪತ್ರಿಕೆಗಳಲ್ಲಿ ಈ ಬಗ್ಗೆ ಓದುತ್ತಿದ್ದೆ. ಆದರೆ ಈ ದಿನ ನನ್ನ ಎದುರಿಗೆ ರಾಜ್ಯದ ಅತ್ಯಂತ ಹಿರಿಯ ನಾಯಕರು ಮಾತನಾಡುತ್ತಿದ್ದಾರೆ. ಇದನ್ನು ಕಲಿಯುವುದಕ್ಕೂ ಸಹ ನಾನು ಪ್ರಯತ್ನ ಪಡುತ್ತಿದ್ದೇನೆ. ನನ್ನ ಪಕ್ಷದಿಂದ ನನಗೆ ಒಂದು young age ನಲ್ಲಿ ಈ ಪ್ರತಿಷ್ಠಿತವಾದ ಈ ಸದನದ ಸದಸ್ಯನಾಗುವ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ನನ್ನ ನಾಯಕರಾದಂಥ ಶ್ರೀಮತಿ ಸೋನಿಯಾ ಗಾಂಧಿ, ಶ್ರೀ ರಾಹುಲ್‌ಗಾಂಧಿಯವರು, ಶ್ರೀ ಸಿದ್ದರಾಮಯ್ಯನವರು, ಡಾ||ಜಿ.ಪರಮೇಶ್ವರ್‌ರವರು ನನಗೆ ಆಶೀರ್ವಾದ ಮಾಡಿ ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತಗಳನ್ನು ಪ್ರಾರಂಭಿಸುತ್ತೇನೆ. ಇವತ್ತು ಸಾಮಾನ್ಯವಾಗಿ ಮೊದಲಬಾರಿಗೆ ಮಾತನಾಡಿದಾಗ ಬಹಳ ಹುಮ್ಮಸ್ಸು, ಹುರುಪು ಮತ್ತು ಖುಷಿಯಾಗಿ ಇರುತ್ತದೆ. ಆದರೆ ಇವತ್ತು ಇಂತಹ ಒಂದು ವಿಷಯದಲ್ಲಿ ಮೊದಲನೇ ಬಾರಿಗೆ ಚರ್ಚೆಯಲ್ಲಿ ಭಾಗಿಯಾಗುತ್ತೇನೆಂದು ನಾನು ಕನಸ್ಸಿನಲ್ಲಿಯೂ ಭಾವಿಸಿರಲಿಲ್ಲ. ಇದೊಂದು ಬಹಳ ದುರಾದೃಷ್ಟಕರ ಸಂಗತಿ. ರಾಜ್ಯದ ಒಬ್ಬ ಪೋಲೀಸ್ ಅಧಿಕಾರಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇವತ್ತು ನಾವು ಎಲ್ಲರೂ ಚರ್ಚೆ ಮಾಡುತ್ತಿದ್ದೇವೆ. ಬಹುಶಃ ವಿರೋಧಪಕ್ಷದವರಿಗೆ ಒಂದು view point ಇರಬಹುದು. ನಮ್ಮದೇ ಆದಂತಹ ಸರ್ಕಾರದ ಒಂದು ನಿಲುವು ಇರಬಹುದು. ಏನೇ ಆದರೂ ಸಹ ನಾವು ಒಬ್ಬ ಅಧಿಕಾರಿಯನ್ನು ಕಳೆದುಕೊಂಡಿದ್ದೇವೆ. ಈ

ಹಿಂದೆಯೂ ಬಹಳಷ್ಟು ಅಧಿಕಾರಿಗಳು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಆದರೆ ಇವತ್ತು ನಾವು ಏನು ಚರ್ಚೆ ಮಾಡುತ್ತಿದ್ದೇವೆ, ಇದರಿಂದ ಏನಾದರೂ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತರುವುದಕ್ಕಾದರೆ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಆಗಬಾರದೆಂಬ ನಿಟ್ಟಿನಲ್ಲಿ ನಾವು ಕೆಲಸ ಮಾಡಬೇಕು ಎನ್ನುವಂಥದ್ದು ನನ್ನ ಅಭಿಪ್ರಾಯ. ನಾನು ಮಾತನಾಡುವುದಕ್ಕೆ ಮೊದಲೇ ಹೇಳಿದ್ದೇನೆ ನಾನು ಮೊದಲ ಬಾರಿಗೆ ಮಾತನಾಡುತ್ತಿರುವುದರಿಂದ ನಾನು ಈ ಸದನದ  ಪದ್ದತಿ, ಸಂಸ್ಕೃತಿಗಳನ್ನು ಇನ್ನು ಬಹಳಷ್ಟು ಕಲಿತುಕೊಳ್ಳಬೇಕಾಗಿದೆ. ನಾನು ಬೀದಿಯಲ್ಲಿ ನಿಂತು ಭಾಷಣ ಮಾಡುವವನು ನಾನು. ಆದುದರಿಂದ ತಾವುಗಳು ಅದರಲ್ಲೂ ವಿಶೇಷವಾಗಿ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಕೈಮುಗಿದು ಪ್ರಾರ್ಥಿಸುತ್ತೇನೆ. ಸಾಮಾನ್ಯವಾಗಿ ಒಬ್ಬ ಅಧಿಕಾರಿಗೆ ಏನಾದರೂ ಕಿರುಕುಳ ಕೊಡಬೇಕಾದರೆ ಯಾವ ರೀತಿಯಲ್ಲಿ ಈ ವ್ಯವಸ್ಥೆಯಲ್ಲಿ ಕೊಡಬಹುದು. ಅದೆಂದರೆ ವರ್ಗಾವಣೆ ಮಾಡುವಂತಹದ್ದು. ಉದಾಹರಣೆಗೆ ಅಧಿಕಾರಿ ಕೂರ್ಗ್‌ನವನಾಗಿದ್ದರೆ ಆತನನ್ನು ಉತ್ತರ ಕರ್ನಾಟಕದ ಯಾವುದೋ ಒಂದು ಗಡಿ ಭಾಗಕ್ಕೆ ವರ್ಗಾಯಿಸುವುದು ಅಥವಾ ಅಧಿಕಾರಿ ಉತ್ತರ ಕರ್ನಾಟಕದವನಾಗಿದ್ದರೆ ಆತನನ್ನು ಚಾಮರಾಜನಗರದ ಯಾವುದೋ ಒಂದು ಗಡಿ ಭಾಗಕ್ಕೆ ಹಾಕುವುದು. ಅಲ್ಲಿಗೆ ಆ ಅಧಿಕಾರಿ ಹೋಗಬಾರದೆಂದು ಏನು ಇಲ್ಲಾ. ಆದರೆ ಆ ಅಧಿಕಾರಿಯ ಕುಟುಂಬ ವರ್ಗ ಒಂದು ಕಡೆ ಇದ್ದರೆ, ಬೇರೊಂದು ಕಡೆಗೆ ಅವರನ್ನು ವರ್ಗಾವಣೆ ಮಾಡುವಂಥದ್ದು ಅವರಿಗೆ ಕಿರುಕುಳ ಕೊಡುವಂತಹ ಕೆಲಸ ಆಗಬಹುದು ಇದರಲ್ಲಿ ಒಂದು. ಎರಡನೇಯದು ಅನಾವಶ್ಯಕವಾಗಿ ಆ ಅಧಿಕಾರಿ ಮೇಲೆ ವಿಚಾರಣೆ ಮಾಡಿಸುವಂಥದ್ದು ಆಗಬಹುದು. ಇದರಲ್ಲಿ ಯಾವುದೇ ಅಧಿಕಾರಿಯಾಗಿರಬಹುದು. ಕೇವಲ ಶ್ರೀ ಎಂ.ಕೆ. ಗಣಪತಿಯವರಿಗೆ ಸಂಬಂಧಪಟ್ಟ ಹಾಗೆ ನಾನು ಮಾತನಾಡುತ್ತಿಲ್ಲ. ಮೂರನೇಯದು ಅವರನ್ನು ಅಮಾನತ್ತಿಲ್ಲಿಡತಕ್ಕದ್ದು, Suspension ಮಾಡತಕ್ಕಂತಹ ಕೆಲಸ ಆದರೆ ಯಾವುದೇ ಅಧಿಕಾರಿಯಾಗಲೀ ಆತ ಎಷ್ಟೇ ಪ್ರಾಮಾಣಿಕ ಅಥವಾ ಭ್ರಷ್ಟ ಅಧಿಕಾರಿಯಾಗಲೀ ಅವರಿಗೆ ಕಿರುಕುಳ ಕೊಡುವಂಥದ್ದು. ಇದನ್ನು ಕೆಲವರು ಕಿರುಕುಳ ಎಂದು ತಿಳಿದುಕೊಳ್ಳಬಹುದು ಇನ್ನು ಕೆಲವರು ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಇದೆಲ್ಲಾ ಮಾಡುತ್ತಿರಬಹುದೆಂದು ತಿಳಿದುಕೊಳ್ಳಬಹುದು. ಆದರೆ ಇಂದು ಶ್ರೀ ಎಂ.ಕೆ.ಗಣಪತಿಯವರ ವಿಷಯದಲ್ಲಿ ಚರ್ಚೆ ಮಾಡುವಾಗ ನಾವು ಅವರ ಹಿನ್ನೆಲೆಯನ್ನು ಸಹ ನೋಡಬೇಕಾಗುತ್ತದೆ. ಆದರೆ ನನಗೆ ಅವರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ. ಆದರೂ ಶ್ರೀಎಂ.ಕೆ.ಗಣಪತಿಯವರು ಈ ಪ್ರಪಂಚವನ್ನೇ ಬಿಟ್ಟು ಹೋಗುವಂತಹ ಒಂದು ದೊಡ್ಡ ತೀರ್ಮಾನಕ್ಕೆ ಬಂದರೆ ಅದರ ಹಿನ್ನೆಲೆ ಏನು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಅವರ ಸೇವಾವಹಿ ಪುಸ್ತಕದ ಮೇಲೂ ಸಹ ನಾವು ಗಮನ ಕೊಡಬೇಕಾಗುತ್ತದೆ. ನಿನ್ನೆ ಈ ಬಗ್ಗೆ ಶ್ರೀ ಹೆಚ್.ಎಂ.ರೇವಣ್ಣನವರು ಮಾತನಾಡುತ್ತಾ ಶ್ರೀ ಎಂ.ಕೆ.ಗಣಪತಿಯವರು ತಮ್ಮ ಸೇವಾವಧಿಯಲ್ಲಿ ಅತಿ ಹೆಚ್ಚಿನ ಕಾಲ ಎಕ್ಸಿಕ್ಯೂಟಿವ್‌ನಲ್ಲಿ ಇದ್ದರೆಂದು ಹೇಳಿದರು. ಇವರು ಬೆಂಗಳೂರಿನ ಪೊಲೀಸ್ ಠಾಣೆಗಳು, ಮೈಸೂರಿನ ಪೊಲೀಸ್ ಠಾಣೆಗಳು ಮತ್ತು ಮಂಗಳೂರಿನ ಪೊಲೀಸ್ ಠಾಣೆಗಳಲ್ಲಿ ಕೆಲಸ ಮಾಡಿದ್ದಾರೆ. ಎಲ್ಲೂ ಬಹುಶಃ ಬಹಳ ದೂರದಲ್ಲಿ ಅಂದರೆ ಗಡಿಭಾಗಗಳಲ್ಲಿ ಕುಟುಂಬ ವರ್ಗದವರಿಂದ ದೂರದಲ್ಲಿ ಕೆಲಸಮಾಡಲು ಕಳುಹಿಸುವ ಪ್ರಯತ್ನವನ್ನು ಯಾವ ಸರ್ಕಾರವು ಸಹ ಮಾಡಿಲ್ಲ. ಇದರಲ್ಲಿ ಬರೀ ಕಾಂಗ್ರೆಸ್ ಸರ್ಕಾರ ಎಂದು ಇಲ್ಲ, ಬಿಜೆಪಿ ಯವರು ಇದ್ದಾಗಲೂ ಅಥವಾ ಯಾವುದೇ ಸರ್ಕಾರಗಳು ಇಂತಹ ಪ್ರಯತ್ನ ಮಾಡಿಲ್ಲ. ಇನ್ನು ವರ್ಗಾವಣೆ ವಿಷಯದಲ್ಲಿ ಕಿರುಕುಳ ನೀಡಿದಂತಹ ಉದಾಹರಣೆಗಳು ನನಗೆ ಕಂಡುಬಂದಿಲ್ಲ. ಬಹುಶಃ ಇನ್ನೂ ಬೇಕಾದರೆ ಅದರ ಬಗ್ಗೆ ತನಿಖೆಯಾಗಲಿ. ತನಿಖೆಗೆ ಸಂಬಂಧಪಟ್ಟ ಹಾಗೆ ಅವರ ಮೇಲೆ ಇವತ್ತಿನವರವಿಗೂ ಎಷ್ಟು ತನಿಖೆ ಆಗಿವೆ ಎನ್ನತಕ್ಕಂತಹ ಪ್ರಶ್ನೆ ನಮ್ಮಲ್ಲಿ ಉದ್ಭವವಾಗುತದೆ. ಬಹುಶಃ ಅವರ ಮೇಲೆ ಮಾತನಾಡುತ್ತಾ ಶ್ರೀ ಶರವಣರವರು ಹೇಳಿದರು ಅವರಿಗೆ ಯಾವುದೋ ಒಂದು ಪ್ರಕರಣದಲ್ಲಿ 2013 ರಲ್ಲಿ ತನಿಖೆ ಶುರುವಾಗಿತ್ತು. ಅದರ ಹಿಂದೆ ಆರು ವರ್ಷಗಳ ಹಿಂದೆ ಕೂಡ ಇನ್ನು ಒಂದು ತನಿಖೆ ಕೂಡ ಆಗಿತ್ತು ಅವರ ಮೇಲೆ. ಚರ್ಚಿನ ಧಾಳಿಗೆ ಸಂಬಂಧಪಟ್ಟ ಹಾಗೆ ಮಂಗಳೂರಿನಲ್ಲಿ ಅವರು ಇನ್ಸ್‌ಪೆಕ್ಟರ್ ಇದ್ದಾಗ ಅಲ್ಲೂ ಒಂದು ತನಿಖೆ ಕೂಡ ಆಗಿತ್ತು. ಆಗ ಜಸ್ಟೀಸ್ ಸೋಮಶೇಖರ್ ಆಯೋಗ interim report ನಲ್ಲಿ ಆ ಚರ್ಚಿನ ಧಾಳಿಗೆ ಸಂಬಂಧಪಟ್ಟ ಹಾಗೆ ಭಜರಂಗದಳದ ಮತ್ತು ವಿಶ್ವ ಹಿಂದೂಪರಿಷತ್ತಿನ ಕಾರ್ಯಕರ್ತರು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಶ್ರೀ ಸೋಮಶೇಖರ್ ಆಯೋಗ ಹೇಳಿದೆ. Final ಆಗಿ ಅದೆಲ್ಲರ ಹೊಣೆ ಮತ್ತು

blame ನ್ನು ಪೊಲೀಸ್ ಇಲಾಖೆಯ ಮೇಲೆ ವರ್ಗಾವಣೆ ಮಾಡಲಾಯಿತು. ಅದರಲ್ಲಿ ಗಣಪತಿ ಒಬ್ಬರು ಪೊಲೀಸ್ ಅಧಿಕಾರಿಯಾಗಿದ್ದರು. ಆ ವಿಷಯಕ್ಕೇನಾದರೂ ಮಾನಸಿಕ ಒತ್ತಡ ಆಗಿತ್ತಾ? ಕಿರುಕುಳವಾಗಿತ್ತಾ? ಮನಸ್ಸಿಗೆ ನೋವಾಗಿತ್ತಾ? ಏಕೆಂದರೆ ಗಣಪತಿಯವರು ವೈಯಕ್ತಿಕವಾಗಿ ನನಗೆ ಅವರ ಪರಿಚಯವಿಲ್ಲ. ಆದರೂ ಎಲ್ಲ ಗೌರವಾನ್ವಿತ ಸನ್ಮಾನ್ಯ ಸದಸ್ಯರು ಏನು ಅವರ ಬಗ್ಗೆ ಮಾತನಾಡಿದ್ದಾರೆ, ಅದರಿಂದ ನನಗೆ ಅರ್ಥವಾಗುವುದು, ಅವರು ಬಹಳ ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿ ಎನ್ನತಕ್ಕಂತಹದು. ಎಲ್ಲರೂ ಬಹಳ ವಿಶೇಷವಾಗಿ ವಿರೋಧಪಕ್ಷದ ಎಲ್ಲಾ ನಾಯಕರು ನಮ್ಮ ಮುಂದೆ ಪ್ರಸ್ತಾಪ ಮಾಡಿದ್ದಾರೆ. ಹಾಗಾದರೆ, ಅವರು ಬಹುಶಃ ಅದರಲ್ಲಿ ಭಾಗಿಯಾಗಲಿಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಅವರ ಮೇಲೆ ಚರ್ಚಿನ ದಾಳಿಗೆ ಸಂಬಂಧಪಟ್ಟ ಹಾಗೆ ಭಾರತೀಯ ಜನತಾ ಪಕ್ಷದ ಸರ್ಕಾರ ಇದ್ದಾಗ ಅವರ ಮೇಲೆ ತನಿಖೆ ಆಗಿದೆ. ಅದೂ ಕೂಡ ನಾವು ಸ್ವಲ್ಪ ಎಷ್ಟು ಅವರಿಗೆ ಮಾನಸಿಕ ಹಿಂಸೆಯಾಗಿದೆ ಎಂಬುದನ್ನು ನಾವು ನೋಡಬೇಕಾಗಿರುತ್ತದೆ. ಅದು ಬಿಟ್ಟರೆ ನಮ್ಮ ಸರ್ಕಾರ ಬಂದ ಮೇಲೆ ಅವರನ್ನು ರಾಜಗೋಪಾಲ ನಗರಕ್ಕೆ ವರ್ಗಾವಣೆ ಮಾಡಿದ್ದಾರೆ. ರಾಜಗೋಪಾಲನಗರ ಒಂದು ಒಳ್ಳೆಯ police jurisdiction. ಅಲ್ಲಿ ಕೂಡ ಅವರಿಗೆ ಒಂದು ತಿಂಗಳು ಕಾಲ suspend ಮಾಡಲಾಗಿತ್ತು. ಏಕೆ ಮಾಡಲಾಗಿತ್ತು ಎಂದು ಸನ್ಮಾನ್ಯ ಗೃಹ ಸಚಿವರು, ನಮ್ಮ ಸಭಾನಾಯಕರು ಕೂಡ ಇದ್ದಾರೆ, ಅವರು ಹೇಳಬೇಕು, ಯಾವ ಕಾರಣದಿಂದ ಅವರನ್ನು suspend ಮಾಡಿದರು, ಯಾವ ವಿಷಯಕ್ಕೆ suspend ಮಾಡಿದರು. ಅದರಲ್ಲೂ ಕೂಡ ಅವರಿಗೆ ಮಾನಸಿಕ ಹಿಂಸೆ ಆಗಿದೆಯಾ ಎನ್ನತಕ್ಕಂತಹದನ್ನು ಗೃಹ ಸಚಿವರನ್ನು ಆಗ್ರಹ ಪಡಿಸುತ್ತೇವೆ ಮತ್ತು clarification ನ್ನು ಅವರಿಂದ ಪಡೆದುಕೊಳ್ಳಬೇಕು. ಯಾವ ಕಾರಣಕ್ಕೆ ಅವರನ್ನು suspend ಮಾಡಿದರು? ಒಂದೇ ತಿಂಗಳಿಗೆ suspension ನ್ನು revoke ಮಾಡಿದ್ದಾರೆ ಮತ್ತು ಏಕೆ ಮಾಡಿದ್ದಾರೆ ಎನ್ನುವುದು ತಿಳಿಯಬೇಕು. ಆಮೇಲೆ ನಮ್ಮ ಸರ್ಕಾರ ಬಂದ ಮೇಲೆ ಅವರಿಗೆ promotion ಕೊಟ್ಟಿದ್ದಾರೆ. ಎ.ಸಿ.ಪಿ. ಯಾಗಿ promotion ಕೊಟ್ಟು ಅವರ ಫ್ಯಾಮಿಲಿ ಮಂಗಳೂರಿನಲ್ಲಿ ಇರತಕ್ಕಂತಹುದು, ಅವರು ಬೆಂಗಳೂರಿನಲ್ಲಿ ಇರಲಿಲ್ಲ. ಅದಕ್ಕೆ ಅವರನ್ನು ಮಂಗಳೂರಿಗೆ ವರ್ಗಾವಣೆ ಮಾಡಲಾಯಿತು. ಸಾಮಾನ್ಯವಾಗಿ ಪ್ರಮೋಷನ್ ಆದಾಗ ಒಂದೇ ಸ್ಥಳದಲ್ಲಿ ಇರವುದಕ್ಕೆ ಸಾಧ್ಯವಿಲ್ಲ. ಆಗ ಬೇರೆ ಸ್ಥಳಕ್ಕೆ ವರ್ಗಾವಣೆಯಾಗಿ ಹೋಗಬೇಕಾಗಿ ಬರುತ್ತದೆ. ಅದಕ್ಕೆ ಅವರನ್ನು ಮಂಗಳೂರಿಗೆ ವರ್ಗಾವಣೆ ಮಾಡಲಾಗಿದೆ. ನಮ್ಮ ಉದ್ದೇಶ ಅವರು ಅವರ ಕುಟುಂಬದ ಜೊತೆಯಲ್ಲಿ ಇರಲಿ ಎಂದು.

ಮಾನ್ಯ ಅಧ್ಯಕ್ಷರೆ, ಬಹುಶಃ ನಿನ್ನೆಯಿಂದ ಬರೀ ಗಣಪತಿಯವರ ವಿಷಯವಾಗಿ ನಾನು ಈ ಚರ್ಚೆಯಲ್ಲಿ ಭಾಗಿಯಾಗಿಲ್ಲ ಮತ್ತು ಕೇಳಿಲ್ಲ. ಡಿ.ಕೆ. ರವಿ ಯವರಿಗೂ ಸಂಬಂಧಪಟ್ಟ ಹಾಗೆ ಬಹಳಷ್ಟು ನಾವು ಮಾತನಾಡುತ್ತೇವೆ. ಡಿ.ಕೆ. ರವಿ ಯವರ ಮಾವ ಹನುಮಂತರಾಯಪ್ಪರವರು ನನಗೆ ವೈಯಕ್ತಿಕವಾಗಿ ಪರಿಚಯವಿರುವಂತಹವರು. ಡಿ.ಕೆ. ರವಿಯವರು ಬಗ್ಗೆ ಮಾತನಾಡಿದಾಗ ನಾವು ಏನು ಹೇಳುತ್ತೇವೆ. ವಿರೋಧಪಕ್ಷದ ನಾಯಕರು ಮಾತನಾಡಿದಾಗ. ಸರ್ಕಾರದ ಮೇಲೆ ಪ್ರಹಾರ ಮಾಡಿದ ಹಾಗೇನೇ ಡಿ.ಕೆ. ರವಿ ಯವರ ಹೆಸರು ತೆಗೆದುಕೊಳ್ಳುತ್ತಾರೆ. ನಾನು ಹೇಳುವುದು ಇಷ್ಟೇ, ಡಿ.ಕೆ. ರವಿ ಯವರ ಪ್ರಕರಣದಲ್ಲಿ ನಮ್ಮ ಸರ್ಕಾರ ಮತ್ತು ಪೊಲೀಸ್‌ನವರು ತನಿಖೆ ಮಾಡುತ್ತಿದ್ದರು. ವಿರೋಧಪಕ್ಷದ ಒತ್ತಡದಿಂದ ಪ್ರಕರಣವನ್ನು ಸಿ.ಬಿ.ಐ. ವರ್ಗಾವಣೆ ಮಾಡಿದ್ದೇವೆ. ಸಿ.ಬಿ.ಐ. ನಿಂದ ಇನ್ನೂ ಕೂಡ ಒಂದೂವರೆ ವರ್ಷ ಆದರೂ ಕೂಡ ಇನ್ನೂ ವರದಿ ಬಂದಿಲ್ಲ. ತಮ್ಮಿಂದ ನನ್ನ ಆಗ್ರಹ ಏನು ಅಂದರೆ, ಒಂದು ಸರ್ವಪಕ್ಷದ ನಿಯೋಗ ಮಾಡಿ, ನಾವು ದೆಹಲಿಗೆ ಹೋಗಿ ಕೇಂದ್ರ ದಗೃಹ ಮಂತ್ರಿಗಳಿಗೆ ಒಂದು petition ಕೊಡೋಣ. ಒಂದೂವರೆ ವರ್ಷ ಆಗಿದೆ ಡಿ.ಕೆ. ರವಿ ಯವರ ಬಗ್ಗೆ ಸಿ.ಬಿ.ಐ. ಇನ್ನೂ conclusion report ಇನ್ನೂ ಕೊಟ್ಟಿಲ್ಲ. ಏನು ಸತ್ಯಾಸತ್ಯತೆ ಇದೆಯೆಂದು ಹೊರಗೆ ತರುವುದಕ್ಕೆ ಸಾಧ್ಯವಾಗಿಲ್ಲವೆಂದು ಒಂದು ನಿಯೋಗ ಹೋಗಿ, ಶ್ರೀ ಈಶ್ವರಪ್ಪನವರು ಆ ನಿಯೋಗದ ಮುಖಸ್ಥರಾಗಲಿ. ನಾವು ಅವರ ಜೊತೆಗೆ ಹೋಗುತ್ತೇವೆ ಎನ್ನತಕ್ಕಂತಹದು ನನ್ನ ಅಭಿಪ್ರಾಯ. ಒಂದು ಕಡೆ ನಾವು ನಮ್ಮ ರಾಜ್ಯದ police force ನ್ನು ಎತ್ತಿ ಹಿಡಿಯುವಂತಹ ಕೆಲಸ ಮಾಡುತ್ತೇವೆ. ಈಗ ಹೇಳಿದರು ಪೊಲೀಸರು ದಕ್ಷ, ಪ್ರಾಮಾಣಿಕ ಎಂದು, 'ಜೈ ಜವಾನ್' ಎಂದರೆ including police ಎಂದು ನಮ್ಮ ಸ್ನೇಹಿತರಾದ ಶ್ರೀ ಶರವಣ ರವರು ಹೇಳಿದರು. ಆದರೆ ಇಲ್ಲೊಂದು

ಕಡೆ ಯಾವುದಾದರೂ ಪ್ರಕರಣ ಬರಲಿ ನಾವೇ ರಾಜ್ಯದ ಪೊಲೀಸರಿಂದ ಈ ತನಿಖೆಯಾಗುವ ಸಾಧ್ಯತೆ ಇಲ್ಲ. ಇದು fair and square - fair probe ಆಗಲಿಕ್ಕೆ ಸಾಧ್ಯನೇ ಇಲ್ಲ. ಈ ಪೊಲೀಸರಿಂದ ಪಕ್ಷಪಾತವಾದಂತಹ ವಿಚಾರಣೆ ಆಗುತ್ತದೆ, ಅದಕ್ಕೆ ಸಿ.ಬಿ.ಐ.ಗೆ ಕೊಡ ಅಂತ ಹೇಳಿದರೆ, ನಾವೇ ಒಂದು ಕಡೆ ಅವರನ್ನು ಹೊಗಳುವುದು, ನಾವೇ ಇನ್ನೊಂದು ಕಡೆ demoralize ಮಾಡಿದರೆ, ಪದೇ ಪದೇ ಈ ರೀತಿ ಆಗುತ್ತಿದ್ದರೆ. ಅದು ಎಲ್ಲೋ ಒಂದು ಕಡೆ ಮುಂದಿನ ದಿನಗಳಲ್ಲಿ ಈ ವ್ಯವಸ್ಥೆ ಸರಿಯಿಲ್ಲ ಎನ್ನತಕ್ಕಂತಹ ಮಾತನ್ನು ಈ ಸದನದ ಮುಂದೆ ಇಡಲು ಬಯಸುತೇನೆ. ಈ ತರಹದ ಪ್ರಕರಣಗಳು ಬಹಳಷ್ಟು ಆಗಿವೆ. ಕೇವಲ ಜಾರ್ಜ್‌ರವರು ಅಥವಾ ನಮ್ಮ ಸರ್ಕಾರದ ಮುಂದೆ ಮಾತ್ರ ಆಗಿಲ್ಲ. ಇವತ್ತು ಮಾನ್ಯ ಪ್ರಧಾನ ಮಂತ್ರಿಗಳು ಶ್ರೀಮಾನ್ ನರೇಂದ್ರ ಮೋದಿಯವರು, ಅವರ ಬಗ್ಗೆ ಎಲ್ಲರಿಗೂ ಗೌರವವಿದೆ, ಅವರು ನಮ್ಮ ಪ್ರಧಾನ ಮಂತ್ರಿಗಳು. ಅವರ ವಿರುದ್ಧ 37 ಪ್ರಕರಣಗಳು ಕೋರ್ಟ್‌ನಲ್ಲಿ ನಡೆಯುತ್ತಿತ್ತು. ಇವತ್ತು ಕೂಡ ಕೆಲವು ಪ್ರಕರಣಗಳು ನಡೆಯುತ್ತಾ ಇವೆ. ಕೆಲವರು ಅವರು family members ಹೇಳಿದ್ದಾರೆ. ನಮ್ಮ family members ಸತ್ತು ಹೋಗಿರುವುದಕ್ಕೆ ಅವರೇ ಕಾರಣ ಎಂದು, ಅದನ್ನು ಕೋರ್ಟ್ decide ಮಾಡುತ್ತದೆ. ನಾವು ಅದರ ಬಗ್ಗೆ ನಾನು ಹೇಳುತ್ತಿಲ್ಲ. ನಾನು ಕೇವಲ ಒಂದು reference ಕೊಡುತ್ತಿದ್ದೇನೆ ಅವರ ಮುಂದೇನು cases ಇವೆ. I am not giving judgment on Mr. Modi.

**(ಗೊಂದಲ)**

**Mr.CHAIRMAN**:- Nothing will go on record. ಆಯಿತು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವಿ.ಸೋಮಣ್ಣ:** ಮಾನ್ಯ ಸಭಾಪತಿಯವರೇ, ಶಾಣಪ್ಪ ಸಾಹೇಬರೆ, ನೀವು ಹಿರಿಯರಿದ್ದೀರಿ ಅವರು ಪ್ರಥಮ ಬಾರಿಗೆ ಮಾತನಾಡುತ್ತಿದ್ದಾರೆ, ಮಾತನಾಡಲಿ ಬಿಡಿ.

**ಶ್ರೀ ಕೆ.ಬಿ.ಶಾಣಪ್ಪ:–** ಈ ಸದನದಲ್ಲಿ ಇಲ್ಲದೇ ಇರುವವರ ಬಗ್ಗೆ ಮಾತನಾಡುವುದು ಬೇಡ.

(ಗೊಂದಲ)

**Sri PRIYANK KHARGE:-** He is citing examples of two politicians. You have to understand it.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ಅವರು ಮೊದಲನೆಯದಾಗಿ ಮಾತನಾಡುತ್ತಿದ್ದಾರೆ, ಏನಾದರೂ ಇದ್ದರೆ ಪ್ರೋತ್ಸಾಹ ಮಾಡಿ ಎಂದು ಹೇಳಿದರು. ನಾನು ನಮ್ಮ ಸ್ನೇಹಿತರಲ್ಲಿ ಕೇಳಿಕೊಳ್ಳುವುದು ಇಷ್ಟೇ, ಅಪ್ಪಿ–ತಪ್ಪಿ ಏನಾದರೂ ಇದ್ದರೆ ದಯವಿಟ್ಟು ಹೇಳಿ. ಪ್ರಥಮವಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಮಾತನಾಡಲಿಕ್ಕೆ ಅವರಿಗೆ ಸಹಾಯ ಮಾಡಿ.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಅವರು ಹೇಳಿದಂತಹ ವಿಚಾರಗಳು ಹೊಸ ವಿಚಾರಗಳು ಅಲ್ಲ. ಆ ಬಗ್ಗೆ ಅನೇಕ ಬಾರಿ, ಅನೇಕ ಸದಸ್ಯರು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹೊಸ ವಿಚಾರಗಳನ್ನು ಅವರು ಏನೂ ಹೇಳಿಲ್ಲ.

**ಸಭಾಪತಿಯವರು:** ನೀವು ಮಾತನಾಡಿ, ಅವರು ಪ್ರಥಮ ಬಾರಿಗೆ ಎಂದು ಹೇಳಿದರು, ಅದಕ್ಕೆ ನಾನೇ ನಾಲ್ಕು ಮಾತುಗಳನ್ನು ಆಡಲಿ ಎಂದು ಹೇಳಿದ್ದೇನೆ.

**ಶ್ರೀ ರಾಮಚಂದ್ರಗೌಡ:** ಮಾನ್ಯ ಸಭಾಪತಿಯವರೇ, ಈ ಯುವಕ ಬಹಳ ಚೆನ್ನಾಗಿ ಮಾಡನಾಡುತ್ತಿದ್ದಾರೆ. My compliments to him. ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ ಅದರ ಬಗ್ಗೆ ಎರಡು ಮಾತಿಲ್ಲ. ನಮ್ಮ ಕಾನೂನು ಇದೆ, ನಮ್ಮ ಸಭೆಯಲ್ಲಿ ಇರತಕ್ಕಂತಹವರ ಹೆಸರನ್ನು ಹೇಳಬಹುದೇ ವಿನಃ ಚುನಾಯಿತ ಪ್ರತಿನಿಧಿಗಳ ಪೈಕಿ, ಈ ಸಭೆಯಲ್ಲಿ ಇಲ್ಲದೇ ಇರತಕ್ಕಂಹವರ ಹೆಸರನ್ನು ಯಾವುದೇ ಸಂದರ್ಭದಲ್ಲೂ ಹೇಳಬಾರದು. ಹಾಗಾಗಿ ಚುನಾಯಿತ ಪ್ರತಿನಿಧಿಗಳ ಹೆಸರನ್ನು ಹೇಳುವಾಗ, ಈ ಸಭೆಯಲ್ಲಿ ಇರತಕ್ಕಂಹವರ ಹೆಸರನ್ನು ಹೇಳಬಹುದೇ ವಿನಃ ಬೇರೆಯವರದನ್ನು ಹೇಳಬಾರದು. ಅವರು

ಹೆಸರನ್ನು ಹೇಳಿಲ್ಲ. ಪ್ರಧಾನ ಮಂತ್ರಿಗಳು ಎಂದು ಹೇಳಿದ್ದನ್ನು ನಾನೂ ಸಹ ಕೇಳಿಸಿಕೊಂಡೆ. ಅವರು ಹೆಸರು ಹೇಳಿದ್ದರೆ ಅದನ್ನು ತೆಗೆಯಬೇಕಾಗುತ್ತದೆ. This is my Point of Order.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಅಪಾದನೆ ಅಲ್ಲ, ಸತ್ಯಾಸತ್ಯೆಯನ್ನು ಹೇಳುವುದಕ್ಕೆ ಪ್ರತಿಯೊಬ್ಬ ಸದಸ್ಯನಿಗೆ ಹಕ್ಕಿರುತ್ತದೆ.

**ಸಭಾಪತಿಯವರು:** ಅವರು ಮಾತನಾಡಲಿ ಬಿಡಿ, ಮುಂದುವರೆಸಿ.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ನಾನು ಎಂದೂ ಪ್ರಧಾನ ಮಂತ್ರಿಗಳ ಬಗ್ಗೆ, ಅವರ ಮರ್ಯಾದೆಯನ್ನು ಬಿಟ್ಟು ಮಾತನಾಡುತ್ತಿಲ್ಲ, ಅವರ ಗೌರವವನ್ನು ಉಳಿಸಿಕೊಂಡೇ ನಾನು ಮಾತನಾಡುತ್ತಿದ್ದೇನೆ. ನಾನು ಒಂದು reference ಕೊಡುತ್ತಿದ್ದೇನೆ.

**ಸಭಾಪತಿಯವರು:** ಅದೇ ವಿಷಯದ ಬಗ್ಗೆ ಮಾಡನಾಡಬೇಡಿ. ಮುಂದಕ್ಕೆ ಹೋಗಿ, come to the subject. Go ahead.

**Sri RIZWAN ARSHAD:-** Sir, this is a part of the subject. Today we are asking resignation of one person, blaming one party. ಆ ರಾಜಕೀಯ ಪಕ್ಷದಲ್ಲಿಯೂ ಸಹ ಎಷ್ಟೋ ಜನ ಇಂತಹ ಘಟನೆಗಳು, ಪ್ರಕರಣಗಳು ಆದಾಗ ರಾಜಿನಾಮೆ ಕೊಟ್ಟಿಲ್ಲ ಅದರ ಬದಲಾಗಿ ಮುಂಬಡ್ತಿ ಹೊಂದಿದ್ದಾರೆ. ನಾನು ಅದರ ಬಗ್ಗೆ ಒಂದು reference ಕೊಡುತ್ತಿದ್ದೇನೆ. ಇವತ್ತು ರಾಷ್ಟ್ರಾಧ್ಯಕ್ಷರಾದ ಅಮಿತ್ ಶಾ ರವರ ಬಗ್ಗೆಯೂ ಸಹ...

**ಸಭಾಪತಿಯವರು:–** ಹೆಸರು ತರಬೇಡಿ

**ಶ್ರೀ ರಿಜ್ವಾನ್ ಅರ್ಷದ್:–** ಆಯಿತು ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

**ಶ್ರೀ ಅಮರ್‌ನಾಥ್ ಪಾಟೀಲ್:–** ನಿಮ್ಮ ನಾಯಕರ ಬಗ್ಗೆಯೂ ಸಹ ಸಾಕಷ್ಟು ಆಪಾದನೆಗಳಿವೆ. ಅದರ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ. ನಿಮ್ಮ ಪಕ್ಷದ ಪರಮೋಚ್ಚ ನಾಯಕರ ಮೇಲೆಯೂ ಸಹ ಆಪಾದನೆಗಳು ಇದ್ದಾವೆ. ಆದರೂ ನಾವು ಇಲ್ಲಿ ಅದರ ಬಗ್ಗೆ ಮೆನ್‌ಶನ್ ಮಾಡಿಲ್ಲ. ನಾವಿಲ್ಲಿ ಕೇವಲ ರಾಜ್ಯದ ಬಗ್ಗೆ ಮಾತನಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ರಮಾನಾಥ ರೈ:–** ಇದೇ ಸದನದಲ್ಲಿ ಸೋನಿಯಾ ಗಾಂಧೀಯವರ ಹೆಸರು, ಆಂಟನಿಯವರ ಹೆಸರು ಹೇಳುತ್ತೀರಿ, ಹೇಳಬಹುದೇ? ಆಗ ಅಡ್ಡಿ ಮಾಡುವುದಿಲ್ಲ, ಅದನ್ನು ಮಾತನಾಡುವವರಿಗೇನೂ ಪ್ರತಿಬಂಧ ಇಲ್ಲವೇ? ಹೊಸ ಸದಸ್ಯರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಮಾತ್ರ ಅಡ್ಡಿ ಮಾಡಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ, ಸಚಿವರುಗಳು, ಶ್ರೀ ಬೋಸರಾಜು ರವರು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರಮಾನಾಥ್ ರೈ ರವರೆ, ವಿರೋಧ ಪಕ್ಷದ ನಾಯಕರು ದಯಮಾಡಿ ಕುಳಿತುಕೊಳ್ಳಿ. ಸಚಿವರಿಗಳೂ ಸಹ ಎದ್ದು ನಿಂತು ಮಾತನಾಡಿದರೆ ಹೇಗೆ? ನಾನು ತಮಗೂ ತಿಳಿಸಿ ಹೇಳಬೇಕೇ? ನೀವೂ ಎರಡು–ಮೂರು ಜನ ಎದ್ದು ನಿಂತುಕೊಂಡು ಸಭೆ ನಡೆಸಿ ಎಂದು ನನಗೆ ಹೇಳಿ ಗಲಾಟೆ ಮಾಡಿದರೆ ಸಭೆ ನಡೆಸುವುಕ್ಕಾಗುವುದಿಲ್ಲ. You also have to behave properly. ನೀವು ಈ ಸದನ ಘನತೆ, ಗಾಂಭೀರ್ಯವನ್ನು ಕಾಪಾಡಬೇಕಾಗುತ್ತದೆ. ಕೆಲವು ಸದಸ್ಯರು ತಮ್ಮ ಭಾವನೆಗಳಿಗೆ ಅನುಗುಣವಾಗಿ ಕೆಲವೊಮ್ಮೆ ಎದ್ದು ನಿಂತು ಮಾತನಾಡುತ್ತಿದ್ದಾರೆ ನಾನೂ ಸಹ ಕೆಲ ಹೊತ್ತು ಸುಮ್ಮನಿರುತ್ತೇನೆ ಆಮೇಲೆ ಅವರನ್ನು ಸಮಾಧಾನ ಮಾಡುತ್ತೇನೆ. ಸಚಿವರುಗಳು ಸಹ ಎರಡು–ಮೂರು ಜನ ಎದ್ದು ನಿಂತು ಮಾತನಾಡುವುದಕ್ಕೆ ಶುರು ಮಾಡಿದರೆ, how can I control this House? Can I name a

Minister? I cannot, I shall not, I should not. ಆದರೆ ಈ ಸಂದರ್ಭಗಳನ್ನು ಸಚಿವರುಗಳು ದುರುಪಯೋಗ ಮಾಡಿಕೊಳ್ಳಬಾರದು. ಸಚಿವರು ಸಮಾಧಾನವಾಗಿ ವರ್ತಿಸಬೇಕು. ಸದಸ್ಯರುಗಳು ಮಾತನಾಡುವುದನ್ನು ಕೇಳುವುದನ್ನು ಕಲಿಯಬೇಕು. ಅಭ್ಯಾಸ ಮಾಡಬೇಕಾಗುತ್ತದೆ. ಅವರುಗಳು ಮಾತನಾಡುತ್ತಿರುವಾಗ ಅವಕಾಶ ಮಾಡಿಕೊಡುವ ಜವಾಬ್ದಾರಿ ನನ್ನದು. ನಾನು ಅವರಿಗೆ ಅವಕಾಶ ಮಾಡಿಕೊಡುತ್ತಿದ್ದೇನೆ.

**ಶ್ರೀ ಬಿ.ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):–** ಮಾನ್ಯ ಸಭಾಪತಿಯವರೆ, ನೀವು ಒಂದು ರೂಲಿಂಗ್‌ನ್ನು ಕೊಡಿ.

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ನನ್ನ ಅನುಮತಿ ಇಲ್ಲದೆ ಮಾತನಾಡಬಾರದು.

**ಶ್ರೀ ಬಿ.ರಮಾನಾಥ್ ರೈ:–** ಒಂದು ರೂಲಿಂಗ್ ಮಾಡಿ.

**ಸಭಾಪತಿಯವರು:–** ಹೌದು, ನನ್ನ ನಿರ್ಣಯಕ್ಕೆ ವಿರುದ್ಧವಾಗಿ ತಾವು ಮಾತನಾಡಬಾರದು.

**ಶ್ರೀ ಬಿ.ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):–** ನಾನು ಮಾತನಾಡುವುದಿಲ್ಲ.

**ಸಭಾಪತಿಯವರು:–** ತಾವು ಮಾತನಾಡಬಾರದು. ನನ್ನ ಒಪ್ಪಿಗೆ ಇಲ್ಲದೆ ನಿಲ್ಲಬೇಡಿ.

**ಶ್ರೀ ಬಿ.ರಮಾನಾಥ್ ರೈ:–** ಹೊಸ ಸದಸ್ಯರು ಮಾತನಾಡುವಾಗ ಹಿರಿಯ ಸದಸ್ಯರು ಏಕೆ ಆಕ್ಷೇಪಣೆ ಮಾಡಬೇಕು.

**Mr.CHAIRMAN:-** Should I name you? Can I name a Minister? ಲೆಹರ್ ಸಿಂಗ್ ಸಿರೋಯಾ ರವರೇ ದಯಮಾಡಿ ಕುಳಿತುಕೊಳ್ಳಿ. ಸಾಕು, Can I name a Minister? The minister also should take the permission of the Chair and then speak. Don't interfere like this. It's not correct, it's not good. ನೋಡಿ, ಶ್ರೀ ಅರ್ಷದ್ ರವರೇ ಮಾತನಾಡಿ, ಚೆನ್ನಾಗಿ ಮಾತನಾಡುತ್ತಿದ್ದೀರಿ. ತಮಗೆ ಇನ್ನಷ್ಟು ಸಮಯ ಕೊಡುತ್ತೇನೆ, ತಾವು ಮಾತನಾಡಿ. ಆದರೆ, ಸದನದ ಹೊರಗಡೆ ಇರುವವರ ಯಾರ ಹೆಸರನ್ನು ತೆಗೆದುಕೊಳ್ಳಬೇಡಿ. ಬದಲಾಗಿ ಅವರ ಪದನಾಮ ತೆಗೆದುಕೊಳ್ಳಿ. ನಿಮಗೆ ಯಾರ ಬಗ್ಗೆ ಹೇಳಬೇಕಾದರೆ ಹೆಸರನ್ನು ತೆಗೆದುಕೊಳ್ಳಬೇಡಿ. ಇದು ಈ ಸದನದ ಪದ್ಧತಿ. ಅದನ್ನು ತಾವು ಪಾಲಿಸಬೇಕು. ನಾನು ರಿಜ್ವಾನ್ ಅರ್ಷದ್ ರವರಿಗೆ ಹೇಳುತ್ತಿದ್ದೇನೆ, ಮಧ್ಯದಲ್ಲಿ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಸದನದಲ್ಲಿರುವ ಎಲ್ಲಾ ಸದಸ್ಯರಿಗೆ ಹೇಳತಕ್ಕಂಥ ಹಕ್ಕು ತಮಗಿದೆ. ನೀವು ಸದಸ್ಯರ ರಕ್ಷಣೆಯನ್ನು ಮಾಡಬೇಕು.

**ಸಭಾಪತಿಯವರು:–** ಮಾಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ನೀವು ರಕ್ಷಣೆಯನ್ನು ಮಾಡದೇ ಇದ್ದಾಗ ಬೇರೆಯವರಿಗೆ ಅದನ್ನು ಕೇಳತಕ್ಕಂಥ ಹಕ್ಕಿದೆ.

**ಸಭಾಪತಿಯವರು:–** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೆ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರಿಜ್ವಾನ್ ಅರ್ಷದ್‌ರವರು ಹೊಸ ಸದಸ್ಯರು. ತಮಗೆ ಈ ಸದನದ ಕೆಲವು ರೀತಿ–ರಿವಾಜುಗಳು ಗೊತ್ತಿಲ್ಲವೆಂದು ತಾವು ತಮ್ಮ ಮಾತಿನ ಪ್ರಾರಂಭದಲ್ಲಿ ಹೇಳಿದ್ದೀರಿ. ತಮ್ಮ ಗಮನಕ್ಕೆ ನಾನು ಒಂದು ಅಂಶವನ್ನು ತರುತ್ತಿದ್ದೇನೆ. Unparliamentary ಪದಗಳನ್ನು ಬಿಟ್ಟು ಈ ವಿಷಯಕ್ಕೆ ಸಂಬಂಧಪಟ್ಟಂತೆ ನೀವು ಯಾವ ವಿಷಯ ಬೇಕಾದರೂ ಪ್ರಸ್ತಾಪ ಮಾಡಬಹುದು. ವ್ಯಕ್ತಿಗಳ ಪದನಾಮಗಳನ್ನು ಬಳಸಿ ಹೊರತು ಅವರ ಹೆಸರುಗಳನ್ನು ಹೇಳಬೇಡಿ. ಇದು ಈ ಸದನದ ಅಭ್ಯಾಸದದನ್ವಯ, ಸದಸ್ಯರುಗಳು ಹೆಸರುಗಳನ್ನು ಬಳಸುವಂತಿಲ್ಲ. ಆದ್ದರಿಂದ

ತಾವು ಹೆಸರುಗಳನ್ನು ತೆಗೆದುಕೊಳ್ಳದೇ ಮಾತನಾಡಿ. ಹೆಸರುಗಳು ಬಂದಾಗ ನಾನು ಅವರಿಗೆ ಸಮಾಧಾನ ಮಾಡಿ ತಮಗೆ ಅವಕಾಶ ಕೊಡಿಸಿಕೊಡುತ್ತೇನೆ. ಶ್ರೀ ಅರ್ಷದ್ ರವರೇ ತಾವು ಮಾತು ಮುಂದುವರೆಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಶ್ರೀ ನರೇಂದ್ರ ಮೋದಿ, ಶ್ರೀ ಅಮಿತ್ ಷಾ ರವರುಗಳ ಹೆಸರುಗಳನ್ನು ಪ್ರಸ್ತಾಪ ಮಾಡಿದ್ದು, ದಯವಿಟ್ಟು ಅವುಗಳನ್ನು ಕಡತದಿಂದ ತೆಗೆದುಹಾಕಿ.

**ಸಭಾಪತಿಯವರು:–** ಆಯಿತು, ನೋಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಸೋನಿಯಾ ಗಾಂಧಿರವರ ಹೆಸರನ್ನು ತಂದಿದ್ದಾರೆ.

**ಸಭಾಪತಿಯವರು:–** ಆಯಿತು ಅದನ್ನು ಕಡತದಿಂದ ತೆಗೆಸೋಣ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಅವರೂ ತಂದಿದ್ದಾರೆ. ಅವರಿಗೂ ಒಂದು ನ್ಯಾಯ. ಇವರಿಗೂ ಒಂದು ನ್ಯಾಯವೇ?

**ಸಭಾಪತಿಯವರು:–** ಎಲ್ಲರಿಗೂ ಒಂದೇ ನ್ಯಾಯ.

**(ಗೊಂದಲ)**

**ಸಭಾಪತಿಯವರು:–** ಆಯಿತು, ನೋಡುತ್ತೇನೆಂದು ನಾನು ಹೇಳಿದ್ದೇನೆ. ಮೊದಲನೆ ಬಾರಿ ಮಾತನಾಡುತ್ತಿರುವ ಶ್ರೀ ರಿಜ್ವಾನ್ ಅರ್ಷದ್ ರವರಿಗೆ ಮಾತನಾಡುವುಕ್ಕೆ ಬಿಡಿ. ಶ್ರೀ ರಿಜ್ವಾನ್ ಅರ್ಷದ್‌ರವರೆ ಮುಂದುವರೆಸಿ.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೆ, ಒಟ್ಟಾರೆ ನಮ್ಮೆಲ್ಲರ ಪ್ರಯತ್ನ ಏನೆಂದರೆ ಈ ವ್ಯವಸ್ಥೆಯನ್ನು ಸರಿಪಡಿಸಬೇಕು ಎನ್ನತಕ್ಕಂಥಾದ್ದು. ಈ ಹಿಂದೆ ನನಗೆ ಜ್ಞಾಪಕ ಇರುವಂತೆ ದಿವಂಗತ ಡಿ.ಕೆ.ರವಿರವರ ಪ್ರಕರಣ ಬಂದಂಥ ಸಂದರ್ಭದಲ್ಲಿ ವಿರೋಧ ಪಕ್ಷದೆಲ್ಲಾ ಸದಸ್ಯರೆಲ್ಲರೂ ಸಿ.ಬಿ.ಐ.ಗೆ ಪ್ರಕರಣವನ್ನು ತನಿಖೆಗಾಗಿ ವರ್ಗಾವಣೆ ಮಾಡುವಂತೆ ಒತ್ತಾಯಿಸಿದಾಗ, ನಮ್ಮ ಮುಖ್ಯಮಂತ್ರಿಗಳು ಸಿ.ಬಿ.ಐ.ಗೆ ಮೂರು ತಿಂಗಳೊಳಗಾಗಿ ತನಿಖೆ ಪೂರ್ಣಗೊಳಿಸಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವಂತೆ ಕಾಲಮಿತಿ ನಿಗದಿಪಡಿಸಿದಾಗ, ವಿರೋಧ ಪಕ್ಷದವರು ಆ ಸಂದರ್ಭದಲ್ಲಿಯೂ ಸಹ ಟೀಕೆ ಮಾಡಿದ್ದರು. Who are you to put condition? ಎಂದು ಕೆಲವು ನಾಯಕರು ಮಾತನಾಡಿದ್ದನ್ನು ನಾನು ಟಿ.ವಿ.ಯಲ್ಲಿ ನೋಡಿದ್ದೇನೆ. ಆದರೆ, ಇವತ್ತು ಯಾವುದೇ ನಿರ್ಬಂಧ ಇರಿಲ್ಲಿಲ್ಲ. ವಿರೋಧ ಪಕ್ಷದ ಒತ್ತಾಯದಿಂದ, ಆ ಪ್ರಕರಣದಲ್ಲಿ ನಮ್ಮ ಸರ್ಕಾರವು ಮೂರು ತಿಂಗಳುಗಳ ಗಡುವಿನ ನಿರ್ಬಂಧವನ್ನು ಹಿಂಪಡೆಯಿತು. ಆದರೆ ಇಂದು ಏನಾಯಿತು. ಈಗ ಒಂದೂವರೆ ವರ್ಷಗಳು ಕಳೆದರೂ ಡಿ.ಕೆ.ರವಿ ರವರ ಪ್ರಕರಣದಲ್ಲಿ ವರದಿ ಬಂದಿರುವುದಿಲ್ಲ. ಇನ್ನು ಎಷ್ಟು ವರ್ಷವಾಗುತ್ತದೆ ಗೊತ್ತಿಲ್ಲ. ಆದರೆ, ಡಿ.ಕೆ.ರವಿ ರವರ ಹೆಸರಿನಲ್ಲಿ ನಮ್ಮ ಪಕ್ಷಕ್ಕೆ ಮತ್ತು ನಮ್ಮ ಸರ್ಕಾರಕ್ಕೆ damage ಮಾಡತಕ್ಕಂತಹ ಕೆಲಸ ಇಂದಿಗೂ ಕೂಡ ನಡೆಯುತ್ತಿದೆ. ಬರೀ ರಾಜಕಾರಣಕ್ಕೆ ನಾವು ಇಂತಹ ಆತ್ಮಹತ್ಯೆ ಪ್ರಕರಣಗಳನ್ನು ಬಳಸಿಕೊಳ್ಳಬೇಕಾ? ಎಂಬ ಪ್ರಶ್ನೆಯನ್ನು ನಾನು ಈ ಸದನದ ಮುಂದೆ ಇಡುತ್ತಿದ್ದೇನೆ. ಏಕೆಂದರೆ, ಇಲ್ಲಿ ನಾವು ಮನುಷ್ಯನ ಪ್ರಾಣವನ್ನು ಕಳೆದುಕೊಂಡಿರುತ್ತೇವೆ. ನಮ್ಮ ರಾಜ್ಯಕ್ಕೆ ಸೇವೆ ಮಾಡುತ್ತಿದ್ದ ದಕ್ಷ ಅಧಿಕಾರಿಗಳನ್ನು ನಾವು ಕಳೆದುಕೊಂಡಿದ್ದೇವೆ. ಯಾವ ಕಾರಣಕ್ಕಾಗಿ ಕಳೆದುಕೊಂಡಿದ್ದೇವೆ ಎನ್ನುವುದು subject to enquiry ಇದೆ. ಬಹುಶ: ಸಿ.ಐ.ಡಿ. ಮೇಲೆ ಯಾರಿಗೂ ನಂಬಿಕೆಯಿಲ್ಲ. ಸಿ.ಬಿ.ಐ. ಮೇಲೆ ನಂಬಿಕೆ ಇರಬಹುದು. ಆದರೆ ಸಿ.ಬಿ.ಐ.ಗೂ ಸಹ ಕಾಲಮಿತಿ ತರಬೇಕು. ಎಲ್ಲರೂ ಡಿ.ಕೆ.ರವಿ ರವರನ್ನು ಮರೆತು ಹೋದಮೇಲೆ, ಅವರ ಆತ್ಮಹತ್ಯೆಯ ಸತ್ಯಾಂಶ ಏನು ಎನ್ನುವುದು ಹೊರಬಂದರೆ ಅದು ಯಾರಿಗೂ ಪ್ರಯೋಜನವಾಗುವುದಿಲ್ಲ ಮತ್ತೆ ಮುಂದಿನ ದಿನಗಳಲ್ಲಿಯೂ ಕೂಡ

ಡಿ.ಕೆ.ರವಿಯಂತಹ ಪ್ರಕರಣಗಳು ಬೇರೆ ಅಧಿಕಾರಿಗಳ ಮೇಲೆ ಪರಿಣಾಮ ಬೀರಬಾರದು ಎಂದು ನೋಡಿಕೊಳ್ಳುವುದಕ್ಕೂ ಸಹ ಸರ್ಕಾರಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಕೆಲವು inferences ಇದೆ. ನನ್ನ ಸ್ನೇಹಿತರಾದ ಸಚಿವರಾದ ಶ್ರೀ ಪ್ರಿಯಾಂಕ ಖರ್ಗೆರವರು ನನಗೆ Indian Express ಪತ್ರಿಕೆಯ ಒಂದು ಪ್ರತಿಯನ್ನು ನೀಡಿದ್ದು, ಅದರಲ್ಲಿ ವಿವರಿಸಿರುವಂತೆ ಕಳೆದ ಹತ್ತು ವರ್ಷದಲ್ಲಿ 122 ಪೊಲೀಸ್ ಅಧಿಕಾರಿಗಳು ಆತ್ಮಹತ್ಯೆ ಕೊಂಡಿರುತ್ತಾರೆ. ಇದು ಸಾಮಾನ್ಯವಾದ ವರದಿಯಾಗಿರುವುದಿಲ್ಲ. ಈ ವಿಚಾರವು ಯಾವುದೇ ಪಕ್ಷಕ್ಕೆ ಅಥವಾ ರಾಜಕಾರಣಕ್ಕೆ ಸಂಬಂಧಪಟ್ಟಿರುವುದಿಲ್ಲ ಅಥವಾ ಯಾವುದೇ ಸರ್ಕಾರಕ್ಕೆ ಸಿಮಿತವಾಗಿರುವುದಿಲ್ಲ. ನಾನು ವಿರೋಧ ಪಕ್ಷದ ಮೇಲೆ ಟೀಕಾ ಪ್ರಹಾರ ಮಾಡಬೇಕೆಂದರೆ, ಬಿ.ಜೆ.ಪಿ. ಸರ್ಕಾರ ಅಧಿಕಾರದಲ್ಲಿದ್ದಾಗ ಎಲ್ಲಕ್ಕಿಂತ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ನಡೆದಿರುತ್ತವೆ. ಆದರೂ ನಾವು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಹಾಗೂ ನಮ್ಮ ರಾಜ್ಯದ ಸುರಕ್ಷತೆಗಾಗಿ ಒಂದು ಪ್ರತಿಷ್ಠೆಯ ಪೊಲೀಸ್ ಪಡೆ ನಿಂತಿರುವಾಗ, ಅವರಿಗೆ ಈ ಗತಿ ಬಂದರೆ, ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡಿರುವಾಗ, ಏನಾಗುತ್ತಿದೆ ಎಂಬ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳು ಸೇರಿ ಈ ಬಗ್ಗೆ ಚಿಂತನೆ ಮಾಡಬೇಕೆಂಬ ಅವಶ್ಯಕತೆ ಇದೆ ಎಂಬುದನ್ನು ನಾನು ಈ ಸದನದ ಮುಂದೆ ತರತ್ತಿದ್ದೇನೆ. ಇನ್ನೊಂದು ವಿಚಾರ ಎಂದರೆ ವಿರೋಧ ಪಕ್ಷದ ನಾಯಕರು ಹೇಳಿದಂತೆ, dying declaration ಆಧಾರದ ಮೇಲೆ Lower Court ನಲ್ಲಿ ಯಾರಿಗೋ convict ಮಾಡಿದ್ದಾರೆ, ಅದೇ ಆಧಾರದ ಮೇಲೆ ಶ್ರೀ ಜಾರ್ಜ್ ರವರಿಗೂ ಕೂಡ convict ಮಾಡಬೇಕೆಂದು ಹೇಳಿದರು. ಈ ಬಗ್ಗೆ ತಿರ್ಮಾನ ನಾವು ಮಾಡಿದರೆ, ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ತೀರ್ಪಿನಂತೆ

> *"The Supreme Court on Tuesday cautioned Lower Courts against blindly accepting dying declaration while convicting an accused. And said, Courts must examine its veracity with a microscopic eye before relying on it."*

ನಮ್ಮ ದೇಶದಲ್ಲಿ ಒಂದು ವ್ಯವಸ್ಥೆಯಿದೆ. ಸಿ.ಐ.ಡಿ. ಇರಬಹುದು, ಸಿ.ಬಿ.ಐ. ಇರಬಹುದು, ರಾಜ್ಯದ ಪೊಲೀಸ್ ಇರಬಹುದು ಅಥವಾ (NIA) National Investigation Agency ಇರಬಹುದು ಒಂದು ತನಿಖಾ ವ್ಯವಸ್ಥೆಯಿದೆ. ಮತ್ತೆ ನಮ್ಮಲ್ಲಿ ಅಧೀನ ನ್ಯಾಯಾಲಯವಿದೆ, ಉಚ್ಚ ನ್ಯಾಯಾಲಯವಿದೆ ಹಾಗೂ ಸರ್ವೋಚ್ಚ ನ್ಯಾಯಾಲಯವಿದೆ. ದುರದೃಷ್ಟವಶಾತ್ ಇವತ್ತು ಎನಾಗಿದೆ ಎಂದರೆ, ಒಬ್ಬ ನಮ್ಮ ಸಚಿವರಿಗೆ ಅವರು guilty ಎಂದು ನಾವು declare ಮಾಡಿಬಿಟ್ಟಿದ್ದೇವೆ. ಅವರು guilty ಹೌದೋ ಅಲ್ಲವೋ ಎನ್ನುವುದನ್ನು ನ್ಯಾಯಾಲಯವು ತೀರ್ಮಾನ ಮಾಡುವ ಮೊದಲೇ ನಾವು ತೀರ್ಮಾನ ಮಾಡಿದ್ದೇವೆ. ಬಹುಶ: ಇಂತಹ ಪ್ರಕರಣಗಳು ಎಲ್ಲರ ರಾಜಕೀಯ ಜೀವನದಲ್ಲಿ ಬರಬಹುದು. ಆದರೆ, ಯಾವುದಾದರೂ ರಾಜಕಾರಣಿ ಮುಂದೆ ಇದೇ ರೀತಿಯ ಕ್ರಮ ತೆಗೆದುಕೊಂಡರೆ, ಇದು ಯಾಕೆ ಬೇಕು ಎಂದು ಪ್ರಾಣ ಬಿಡುವ ಮನಃಸ್ಥಿತಿಗೆ ಬಂದುಬಿಟ್ಟರೆ ಆವಾಗ ನಾವು ಬೇರೆ ರೀತಿಯ ಚರ್ಚೆ ಮಾಡುತ್ತೇವೆ. ಇದು ಆಗಬಾರದು. Fair and free probe ಆಗಬೇಕು. ಯಾಕೆಂದರೆ, ಈ ಪ್ರಕರಣ ಆದ ನಂತರ, ನಾನು ಒಬ್ಬ ಸಾಮಾನ್ಯ ಪ್ರಜೆಯಾಗಿ ನಾನು ಟಿ.ವಿ.ನೋಡುತ್ತಿದ್ದಾಗ, ಪ್ರಕರಣ ಆಗಿ ಒಂದೆರೆಡು ಮೂರು ಗಂಟೆಗಳಲ್ಲಿ ಮೃತರ ಕುಟುಂಬ ಸದಸ್ಯರು ಬೇರೆ ಬೇರೆ ಹೇಳಿಕೆಗಳನ್ನು ನೀಡುತ್ತಾರೆ. ದಿವಂಗತ ಗಣಪತಿಯವರ ತಮ್ಮ ಮೃತರು depression ನಲ್ಲಿದ್ದರು ಹಾಗೂ ಈ ಸಂಬಂಧ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಎಂದು ಹೇಳಿದ್ದು, ಈ ಹೇಳಿಕೆಯು ನಾವು ಹೇಳಿರುವುದಲ್ಲ. ದಿವಂತರ ತಮ್ಮ ರವರು ನೀಡಿರುವ ಹೇಳಿಕೆಯನ್ವಯ, ಮೃತರಿಗೆ imaginary ಕಾಣುತ್ತಿತ್ತು. ಹೀಗಾಗಿ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಕ್ರಮ ತೆಗೆದುಕೊಂಡರು ಎಂಬ ಹೇಳಿಕೆ ನೀಡಿರುತ್ತಾರೆ. ಅವರ ತಂದೆ ಹೇಳಿದ್ದು, 'ಇಲ್ಲ, ನಾನು ಅದನ್ನು ಹೇಳಬಾರದು, ಹೇಳುವುದಕ್ಕೂ ಇಚ್ಛೆ ಇಲ್ಲ. ಫ್ಯಾಮಿಲಿ ಪ್ರಾಬ್ಲಮ್‌ನಿಂದ, ನನ್ನ ಸೊಸೆಯ ಕಾಟದಿಂದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ

ಎನ್ನುವಂತಹ ವಿಚಾರವನ್ನು ತಿಳಿಸಿದ್ದಾರೆ. ಅವರು ಆ ರೀತಿ ಹೇಳಿದ್ದರಿಂದ ಎಲ್ಲರಿಗೂ ಕನ್‌ಫ್ಯೂಷನ್ ಆಗಿದೆ. ನಾನು ಕಾಂಗ್ರೆಸ್ ಪಕ್ಷದ ಶಾಸಕನಾಗಿ, ಸದಸ್ಯನಾಗಿ ಮಾತನಾಡುತ್ತಿಲ್ಲ, ನಾನು ಟಿ.ವಿ. ನೋಡಿದಂತಹ ಒಬ್ಬ ಸಾಮಾನ್ಯ ಪ್ರಜೆಯಾಗಿ ಮಾತನಾಡುತ್ತಿದ್ದೇನೆ. ಇವತ್ತು ನಾವು ಯಾರು ಅಜೆಂಡಾ ಸೆಟ್ ಮಾಡುತ್ತಿದ್ದಾರೆ ಈ ರಾಜ್ಯದಲ್ಲಿ, ಯಾವ ಅಧಿವೇಶನದಲ್ಲಿ ಯಾವ ಸದನದಲ್ಲಿ ಏನು ಸಬ್ಜೆಕ್ಟ್ ಆಗಬೇಕು ಎನ್ನುವಂಥದ್ದು ನಾವು ತೀರ್ಮಾನ ಮಾಡುತ್ತಿಲ್ಲ. ಹೊರಗಡೆ ಯಾರೋ ಕುಳಿತುಕೊಂಡು ಸೆಟ್ ಮಾಡುವಂತಹ ಅಜೆಂಡಾಗೆ ನಾವು ಇವತ್ತು ರಿಪ್ಲೈ ಮಾಡತಕ್ಕಂತಹ ಪರಿಸ್ಥಿತಿಗೆ ಬಂದಿದ್ದೇವೆ.

ಮಾನ್ಯ ಸಭಾಪತಿಯವರೇ, ಅವರ ಸರ್ಕಾರ ಇದ್ದಾಗ ಯಾವ ಪರಿಸ್ಥಿತಿ ಇತ್ತು? ಬಳ್ಳಾರಿಯಲ್ಲಿ ಒಬ್ಬ ಸಚಿವರಿಗೆ ಎಸ್ಪಿ ಅವರು ಶೂ ಲೇಸ್ ಕಟ್ಟತಕ್ಕಂತಹ ಫೋಟೋ ಪತ್ರಿಕೆಯೊಂದರಲ್ಲಿ ಬಂದಿತ್ತು. ಆ ರೀತಿಯ ಪರಿಸ್ಥಿತಿಯನ್ನು ಸಹ ನಾವು ನೋಡಿದ್ದೇವೆ. ಒಂದು ವಿಚಾರವಾಗಿ ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ನೆನ್ನೆ ದಿವಸ ಇದೇ ವಿಚಾರದಲ್ಲಿ ಚರ್ಚೆಯಾದಂತಹ ಸಂದರ್ಭದಲ್ಲಿ ಕೆಳಮನೆಯ ಸದಸ್ಯರಾದ ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ)ಯವರು ಪ್ರಸ್ತಾಪ ಮಾಡಿ, 'ಶ್ರೀ ಕಲ್ಲಪ್ಪ ಹಂಡಿಬಾಗ್ ಅವರ ಆತ್ಮಹತ್ಯೆಯಲ್ಲಿ ಒಬ್ಬ ಮಾಜಿ ಮಂತ್ರಿಗಳ ಕೈವಾಡ ಇದೆ' ಎಂದು ಹೇಳಿದ್ದಾರೆ. ಮಾಜಿ ಮಂತ್ರಿ ಎಂದರೆ, ನಮ್ಮ ಪಕ್ಷದವರೂ ಆಗಬಹುದು. ಇಬ್ಬರು–ಮೂವರು ಮಾಜಿ ಮಂತ್ರಿಗಳು ಅಲ್ಲಿದ್ದಾರೆ. ಬಿ.ಜೆ.ಪಿ. ಪಕ್ಷದ ಮಾಜಿ ಮಂತ್ರಿಗಳು ಕೂಡ ಅಲ್ಲಿದ್ದಾರೆ. ಅವರ ಸಾವಿನ ಹಿಂದೆ ಯಾರ ಕೈವಾಡ ಇದೆ? ಏಕೆ ಅವರು ಸತ್ತರು? ಮಾಜಿ ಮಂತ್ರಿಗಳಿಗೂ ಅದಕ್ಕೂ ಸಂಬಂಧವೇನು? ಈ ಎಲ್ಲ ಅಂಶಗಳ ಬಗ್ಗೆ ಕೂಡ ತನಿಖೆಯಾಗಬೇಕು ಎನ್ನುವಂತಹ ಮಾತನ್ನು ನಾನು ಹೇಳಬಯಸುತ್ತಿದ್ದೇನೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನನಗೆ ಅಷ್ಟು ಸಾಮರ್ಥ್ಯ ಕೂಡ ಇಲ್ಲ. ನಾನು ತಮ್ಮಿಂದ ಇನ್ನೂ ಕಲಿಯುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನೂ ಒಳ್ಳೆಯ ರೀತಿಯಲ್ಲಿ ಮಾತನಾಡತಕ್ಕಂತಹ ಪ್ರಯತ್ನ ಮಾಡುತ್ತೇನೆ. ಏನು ಹೇಳಬೇಕು, ಯಾವುದನ್ನು ಬಿಟ್ಟು ಏನು ಹೇಳಬೇಕು ಎಂಬುದನ್ನು ಕೂಡ ನಾನು ಕಲಿಯುತ್ತೇನೆ. ಆದರೆ ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ಇದರಲ್ಲಿ ಯಾವುದೇ ಹೊಸ ವಿಚಾರ ಇಲ್ಲ. ಈ ಹಿಂದೆ ಆಗಿರುವಂಥದ್ದನ್ನು ಯಾರು ಪ್ರಸ್ತಾಪ ಮಾಡುತ್ತಿದ್ದೇವೆ, ನಮ್ಮ ಪಕ್ಷದಲ್ಲಿ ನಮ್ಮ ಪಕ್ಷದ ನಾಯಕರು ಅಧಿಕಾರದಲ್ಲಿದ್ದಾಗ ಇಂತಹ ಸಂದರ್ಭಗಳಲ್ಲಿ ಏನು ಮಾಡಿದರು ಎಂಬುದನ್ನು ಸಹ ಗಮನದಲ್ಲಿಟ್ಟುಕೊಂಡು ನಾವು ಮಾತನಾಡಬೇಕು. ಇಂತಹ ಪ್ರಕರಣಗಳು ನಮ್ಮ ರಾಜ್ಯದಲ್ಲಿ ಮತ್ತೆ ಮರುಕಳಿಸಬಾರದು. ಆ ನಿಟ್ಟಿನಲ್ಲಿ ನಾವೆಲ್ಲಾ ಕೆಲಸ ಮಾಡಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ನಮ್ಮ ರಿಜ್ವಾನ್ ಹರ್ಷದ್ ಅವರು ಬಹಳ ಚೆನ್ನಾಗಿ ಮಾತನಾಡಿದರಾದರೂ ಸರ್ಕಾರವನ್ನು ಸಪೋರ್ಟ್ ಮಾಡುತ್ತಲೇ ಮಾತನಾಡಿದರು. ಅವರು ಡಿವೈಎಸ್ಪಿ ಎಂ.ಕೆ.ಗಣಪತಿ ಅವರ ತಮ್ಮ ಮತ್ತು ತಂದೆಯವರ ಹೇಳಿಕೆಯನ್ನು ಮಾತ್ರ ಉಲ್ಲೇಖಿಸಿ ಮಾತನಾಡಿದರು. ಆದರೆ ಹೆಂಡತಿ ಮತ್ತು ಮಗ ಇವರ ಹೇಳಿಕೆಯ ಬಗ್ಗೆ ಸಹ ಅವರು ಪ್ರಸ್ತಾಪ ಮಾಡಬೇಕಾಗಿತ್ತು. ಬಹುಶಃ ಅವರು ಅದನ್ನು ಮರೆತುಬಿಟ್ಟರು ಎಂದು ಕಾಣುತ್ತದೆ. ಅದನ್ನೂ ಅವರು ಪ್ರಸ್ತಾಪ ಮಾಡಿದ್ದರೆ ಅವರ ಭಾಷಣಕ್ಕೆ ಒಂದು ಬೆಲೆ ಸಿಗುತ್ತಿತ್ತು.

**Mr. CHAIRMAN:** He has appreciated your talk. ಏನು ಲ್ಯಾಪ್ಸ್ ಆಯಿತು ಎನ್ನುವುದನ್ನು ಹೇಳಿದರು.

**ಶ್ರೀ ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ನನ್ನ ಸ್ನೇಹಿತರಾದ ರಿಜ್ವಾನ್ ಅರ್ಷದ್‌ರವರು ಮಾತನಾಡಿದ್ದಾರೆ. ಅವರಂತೆಯೇ ನಾನು ಸಹ ಈ ಸದನಕ್ಕೆ ಹೊಸಬನಾಗಿದ್ದೇನೆ. ಈ ವಿಷಯ ನಮ್ಮ ಕೊಡಗು ಜಿಲ್ಲೆಗೆ ಸಂಬಂಧಪಟ್ಟಿದ್ದಾಗಿರುವುದರಿಂದ ನಾನು ಮಾತನಾಡಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಡಿವೈಎಸ್ಪಿ

ಗಣಪತಿ ಅವರ ಆತ್ಮಹತ್ಯೆ ಆಗಿರುವಂತಹ ಸಂದರ್ಭ ಮತ್ತು ಅದರ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಅವರು ಸುಮಾರು 10 ಗಂಟೆಯ ವೇಳೆಗೆ ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಬಂದು, ಬಸ್ ನಿಲ್ದಾಣದಲ್ಲಿ ಇಳಿದ ತಕ್ಷಣ ವಿನಾಯಕ ಲಾಡ್ಜ್‌ಗೆ ಹೋಗಿ ಒಂದು ಕೊಠಡಿಯನ್ನು ಪಡೆಯುತ್ತಾರೆ. ಆ ಸಂದರ್ಭದಲ್ಲಿ ಕೊಠಡಿಯಲ್ಲಿ ಫ್ಯಾನ್ ಇದೆಯೇ ಎಂದು ಲಾಡ್ಜ್ ಮ್ಯಾನೇಜರ್ ಅವರನ್ನು ಕೇಳುತ್ತಾರೆ. ಅದಕ್ಕೆ ಅವರು 'ಹೌದು' ಎಂದು ಹೇಳಿದ ಮೇಲೆ, ರೂ. 500/– ಡೆಪಾಸಿಟ್ ಕೊಟ್ಟು 3ನೇ ಫ್ಲೋರ್‌ನಲ್ಲಿ ಕೊಠಡಿಯನ್ನು ಪಡೆಯುತ್ತಾರೆ. ಸುಮಾರು ಹತ್ತೂವರೆ ಗಂಟೆಗೆ ಆಟೋ ಒಂದನ್ನು ಹಿಡಿಯುತ್ತಾರೆ, ಆ ಆಟೋ ಡ್ರೈವರ್ ಹೆಸರು ದಿನೇಶ್ ಎಂದು. ಯಾವುದಾದರೊಂದು ಕೇಬಲ್ ಚಾನಲ್‌ಗೆ ಕರೆದುಕೊಂಡು ಹೋಗು, ನಾನು ಸ್ವಲ್ಪ ವಿಚಾರ ಮಾತನಾಡಬೇಕು ಎಂದು ಹೇಳುತ್ತಾರೆ. ಡಿವೈಎಸ್ಪಿ ಗಣಪತಿಯವರು ಮಡಿಕೇರಿಗೆ ಬರುವಾಗ ಸಿವಿಲ್ ಡ್ರೆಸ್‌ನಲ್ಲಿ ಬಂದಿರುತ್ತಾರೆ, ಕೇಬಲ್ ಚಾನಲ್‌ಗೆ ಹೋಗುವಾಗ ಸಮವಸ್ತ್ರವನ್ನು ಧರಿಸಿ ಹೋಗುತ್ತಾರೆ. ಮಡಿಕೇರಿಯಲ್ಲಿರುವ ಕೇಬಲ್ ಚಾನಲ್ ಟಿ.ವಿ.–1 ಗೆ ಹೋಗುತ್ತಾರೆ. ಹೋದ ತಕ್ಷಣ ಅವರು ನಾನು ಸ್ವಲ್ಪ ಪ್ರೆಸ್ ಕಾನ್ಫರೆನ್ಸ್ ಮಾಡಬೇಕು ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡುತ್ತಾರೆ. ಅವರು ಏನು ವಿಚಾರ ಎಂದು ಕೇಳುವಾಗ ಅದು ಸರ್ಕಾರದ ವಿರುದ್ಧ ಆಗಿರುತ್ತದೆ; ಮಂತ್ರಿ ವಿರುದ್ಧ ಆಗಿರುತ್ತದೆ; ಹಿರಿಯ ಐ.ಪಿ.ಎಸ್. ಅಧಿಕಾರಿಗಳ ವಿರುದ್ಧ ಆಗಿರುತ್ತದೆ. ಹಾಗಾಗಿ ಅವರು ಸ್ವಲ್ಪ ಗಡಿಬಿಡಿಯಾಗುತ್ತಾರೆ. ಗಡಿಬಿಡಿಯಾಗಿ ನಾನೊಬ್ಬನೇ ಸಿಕ್ಕಿಹಾಕಿಕೊಳ್ಳುವುದು ಬೇಡ, ಏಕೆಂದರೆ ಸರ್ಕಾರದ ಮುಂದೆ ಗಲಾಟೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ, ಏಕೆಂದರೆ entire government machinery ಅವರ ಜೊತೆಗಿರುತ್ತದೆ. ಹಾಗಾಗಿ ಅವರು ಎಲ್ಲ ಚಾನಲ್‌ನವರನ್ನೂ ಕರೆಸುತ್ತಾರೆ. ಅಲ್ಲಿಗೆ ಬಿ–ಟಿ.ವಿ.ಯವರು ಸಹ ಬರುತ್ತಾರೆ. ಬಂದಂತಹ ಸಂದರ್ಭದಲ್ಲಿ ಅವರು ಸುಮಾರು 43 ನಿಮಿಷಗಳ ಕಾಲ ತಮ್ಮ ಕಷ್ಟವನ್ನು ಹೇಳಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಅವರು ಉಲ್ಲೇಖ ಮಾಡುವಂಥದ್ದು, ಕೆ.ಜೆ.ಜಾರ್ಜ್ ಅವರ ಹೆಸರನ್ನು. ಕೆ.ಜೆ.ಜಾರ್ಜ್ ಅವರ ಬಗ್ಗೆ ನಮಗೆ ಗೌರವ ಇದೆ, ಅವರೂ ಕೊಡಗಿನವರು; ಗಣಪತಿಯವರು ಸಹ ಕೊಡಗಿನವರು. ಕೆ.ಜೆ.ಜಾರ್ಜ್‌ರವರು ರಾಜಕೀಯದಲ್ಲಿ ಮುಂದೆ ಬಂದಿದ್ದರೆ ಗಣಪತಿಯವರು ಪೊಲೀಸ್ ಅಧಿಕಾರಿಯಾಗಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದರು. ಅವರು 43 ನಿಮಿಷಗಳ ಕಾಲ ಮಾತನಾಡಿದ್ದೆಲ್ಲಾ ನನ್ನ ಬಳಿ ಇರುವ ಈ ಸಿ.ಡಿ.ಯಲ್ಲಿದೆ. ತಾವು ಇದನ್ನು ಕೇಳಿದರೆ ತಮಗೂ ಸಬ್ಮಿಟ್ ಮಾಡುವವನಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸುನಿಲ್ ಸುಬ್ರಮಣಿಯವರು ತಮ್ಮ ಬಳಿಯಿದ್ದ ಸಿ.ಡಿ.ಯನ್ನು ಮಾನ್ಯ ಸಭಾಪತಿಯವರಿಗೆ ಕಳುಹಿಸಿಕೊಟ್ಟರು)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಕಳುಹಿಸಿಕೊಟ್ಟಿರುವ ಸಿ.ಡಿ.ಯನ್ನು ದಯಮಾಡಿ ತಾವು ಇಡೀ ಸದನದ ಸದಸ್ಯರಿಗೆಲ್ಲಾ ತೋರಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಿಸಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ನೋಡೋಣ, ಪ್ರಯತ್ನ ಮಾಡುತ್ತೇನೆ.

**ಶ್ರೀ ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೇ, ಅವರು 43 ನಿಮಿಷ ಮಾತ್ರ ಮಾತನಾಡುತ್ತಾರೆ. ನಂತರ ಅವರು ಚಹಾ/ಕಾಫಿ, ಬಿಸ್ಕೇಟ್ ಸ್ವೀಕರಿಸುತ್ತಾ ಸುಮಾರು ಒಂದೂಕಾಲು ಗಂಟೆಯವರೆಗೆ ಅಲ್ಲಿಯೇ ಸಮಯವನ್ನು ಕಳೆಯುತ್ತಾರೆ. ಅಷ್ಟೂ ಸಮಯ ಅವರು ಹೇಳುವುದು, ಗೃಹ ಮಂತ್ರಿ ಡಾ:ಜಿ.ಪರಮೇಶ್ವರ್ ಅವರ ಮೇಲೆ ದೂರು ಹೇಳುವುದಿಲ್ಲ, ಉಗ್ರಪ್ಪನವರ ಮೇಲೆ ಹೇಳುವುದಿಲ್ಲ, ಕಾಗೋಡು ತಿಮ್ಮಪ್ಪನವರ ಮೇಲೆ ಹೇಳುವುದಿಲ್ಲ, ಬರೀ ಕೆ.ಜೆ.ಜಾರ್ಜ್ ಅವರ ಹೆಸರೊಂದನ್ನು ಹೇಳುತ್ತಾರೆ. ಹಾಗೆಯೇ ಇಬ್ಬರು ಐ.ಪಿ.ಎಸ್. ಅಧಿಕಾರಿಗಳ ಹೆಸರನ್ನು ಹೇಳುತ್ತಾರೆ, ಆ ಸಂದರ್ಭದಲ್ಲಿ ಬಹಳ ದುಃಖವನ್ನು ತೋಡಿಕೊಳ್ಳುತ್ತಾರೆ. ಅವರು ಹೇಳುತ್ತಾರೆ, 2008ರಲ್ಲಿ ನಾನು ಸಬ್–ಇನ್ಸ್‌ಪೆಕ್ಟರ್ ಆಗಿ ಮಂಗಳೂರಿನಲ್ಲಿದ್ದಂತಹ ಸಂದರ್ಭದಲ್ಲಿ ಒಂದು ಚರ್ಚ್ ಗಲಾಟೆ ನಡೆದಂತಹ ಸಂದರ್ಭದಲ್ಲಿ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಯುತ್ತದೆ. ಅಲ್ಲಿದ್ದಂತಹ ಎಸ್ಪಿ ಸತೀಶ್ ಎಂಬುವವರು ಲಾಠಿ ಚಾರ್ಜ್‌ಗೆ ಆದೇಶ ಮಾಡುತ್ತಾರೆ. ಆ

ಒಂದು ಸಮುದಾಯಕ್ಕೆ ಸಿಕ್ಕಾಪಟ್ಟೆ ಲಾಠಿ ಚಾರ್ಜ್ ಮಾಡುತ್ತಾರೆ. ಏಕೆಂದರೆ ಗಣಪತಿ ಎನ್ನುವಂತಹ ಪೊಲೀಸ್ ಅಧಿಕಾರಿ ಒಂದು ರೀತಿ ಬೆಂಕಿ ಇದ್ದಂತೆ, ಆತನನ್ನು ನಾನು ಸಹ ಭೇಟಿ ಮಾಡಿದ್ದೇನೆ. ಬಂಟ್ವಾಳದಲ್ಲಿ ಅವರು ಸಬ್–ಇನ್ಸ್‌ಪೆಕ್ಟರ್ ಆಗಿದ್ದರು. ಆ ಸಂದರ್ಭದಲ್ಲಿ ಅಲ್ಲಿಯ ನಮ್ಮ ಹಿರಿಯ ಕಾರ್ಯಕರ್ತರು ಫೋನ್ ಮಾಡಿದ್ದರು. ಕೊಡಗಿನವನೊಬ್ಬ ಬಂದಿದ್ದಾನೆ; ವಿಪರೀತ ಲಾಠಿ ಚಾರ್ಜ್ ಮಾಡುತ್ತಾನೆ; ಹೊಡೆಯುತ್ತಾನೆ. ಏನು ಮಾರಾಯ! ಇವನ ಸಹವಾಸ ತಡೆಯುವುದಕ್ಕಾಗುವುದಿಲ್ಲ' ಎಂದು ಹೇಳಿದರು. ಆ ಸಂದರ್ಭದಲ್ಲಿಯೇ ಒಮ್ಮೆ ನಾನು ಅವರನ್ನು ಭೇಟಿ ಮಾಡಿದಾಗ ಅವರು ಹೇಳಿದರು, 'ನಾನು ಖಾಕಿ, ಕಾನೂನು ಬಿಟ್ಟು ಏನೂ ಮಾಡುವುದಿಲ್ಲ, ಯಾವನಾದರೂ ಬಿಡುವುದಿಲ್ಲ, ಸುಳ್ಳು ಪ್ರಕರಣವನ್ನಂತೂ ಯಾರಿಗೂ ಹಾಕುವುದಿಲ್ಲ, ನನ್ನ ತಾಯಿ ಆಣೆಗೂ ಹಾಕುವುದಿಲ್ಲ' ಎಂದು ಹೇಳಿದರು. ನಮ್ಮ ಕುಲದೇವರು ತಲಕಾವೇರಿ, ಇಗ್ಗುತಪ್ಪ. ಆ ಹೆಸರನ್ನು ಹೇಳಿ ಹೇಳುತ್ತಾರೆ, 'ನಾನು ಯಾವತ್ತೂ ಅನ್ಯಾಯಕ್ಕೆ ಹೋಗುವುದಿಲ್ಲ, ಆದರೆ ನನ್ನ ಏರಿಯಾದಲ್ಲಿ, ನನ್ನ ಲಿಮಿಟ್‌ನಲ್ಲಿ ಯಾರೇ ಗಲಾಟೆ ಮಾಡಿದರೂ ಅವರನ್ನು ಬಿಡುವುದಿಲ್ಲ. ಅವರು ಹಿಂದೂ ಇರಬಹುದು, ಕ್ರಿಶ್ಚಿಯನ್ ಇರಬಹುದು, ಮುಸಲ್ಮಾನ್ ಇರಬಹುದು' ಎನ್ನುವಂತಹ ಮಾತನ್ನು ಹೇಳಿದರು. ಜೊತೆಗೆ ಅವರು ಒಳ್ಳೆಯ ವಾಲಿಬಾಲ್ ಪ್ಲೇಯರ್ ಆಗಿದ್ದು, ನ್ಯಾಷನಲ್ ಲೆವೆಲ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ. ಆ ಸರ್ಟಿಫಿಕೇಟ್‌ಗಳನ್ನೆಲ್ಲಾ ನಾನು ಪ್ರೆಸ್‌ನವರಿಗೆ ಸಬ್ಮಿಟ್ ಮಾಡುತ್ತೇನೆ. ಶ್ರೀ ಮೊಯಿದ್ದೀನ್ ಬಾವಾರವರು 2014ರಲ್ಲಿ ಶ್ರೀ ಗಣಪತಿ ಅವರು ದಕ್ಷ ಅಧಿಕಾರಿಯಾಗಿರುವುದರಿಂದ ಅವರನ್ನು ನನ್ನ ಏರಿಯಾಕ್ಕೆ ಹಾಕಿಕೊಡಬೇಕೆಂದು ಪತ್ರ ಬರೆದಿದ್ದಾರೆ. ಅವರು ಕಾಂಗ್ರೆಸ್ ಪಾರ್ಟಿಯವರು. ಏಕೆಂದರೆ ಅವರು 'minute' ಬೇಕಾದರೆ ಅವರ ಕಡೆಯವರಿಂದ ಹಾಕಿಸಬೇಕಾಗುತ್ತದೆ. ಯು.ಟಿ.ಖಾದರ್ ಅವರು ಸಹ ಅವರಿಗೆ 'minute' ಕೊಡುತ್ತಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):–** ಆ ವಿಚಾರಗಳೆಲ್ಲಾ ಬೇಡ, ಏಕೆಂದರೆ ಗಣಪತಿ ಕೆಟ್ಟವರು ಎಂದು ನಾವು ಯಾರೂ ಹೇಳಿಲ್ಲ.

**ಸಭಾಪತಿಯವರು:–** ಅವರು ಏನೂ ಹೇಳುವುದೇ ಬೇಡವೆ? Allow him to speak. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾ ಅವರು ಸರ್ಕಾರದ ಮುಖ್ಯ ಸಚೇತಕರಾದರೂ ಸಹ ಇಷ್ಟಕ್ಕೆಲ್ಲಾ ಮಧ್ಯಪ್ರವೇಶ ಮಾಡಿ ಮಾತನಾಡುವುದು ಒಳ್ಳೆಯದಲ್ಲ.

**ಸಭಾಪತಿಯವರು:–** ಹೇಳಲಿ ಬಿಡಿ. You allow him to speak. ಅವರು ಹೇಳುವುದೇ ಬೇಡವೇ? ಅವರು ಮಾತನಾಡುವುದೇ ಬೇಡವೇ? ಮಾತನಾಡಲಿ ಬಿಡಿ. ನೀವು ಮುಂದುವರೆಸಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇಷ್ಟರವರೆವಿಗೂ ನಾವು ಸಹಕಾರ ಕೊಟ್ಟಿದ್ದೇವೆ ಅಲ್ಲವೆ? ಈಗ ನಾನು ನೋವಿನ ಸಂಗತಿಯನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಜಾರ್ಜ್ ಅವರೂ ಸಹ ನಮ್ಮ ಊರಿನವರೇ ಆಗಿದ್ದಾರೆ.

**ಸಭಾಪತಿಯವರು:–** ಆಯಿತು. ನೀವು ಮಾತನಾಡಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಡಿ.ಕೆ.ಸುರೇಶ್‌ರವರು 2014ರಲ್ಲಿ ಗಣಪತಿಯವರನ್ನು ಮಡಿವಾಳ ಪೋಲೀಸ್ ಠಾಣೆಗೆ ನಿಯುಕ್ತಿಗೊಳಿಸಬೇಕೆಂದು ಟಿಪ್ಪಣಿಯನ್ನು ನೀಡಿರುತ್ತಾರೆ. ಅಂತೆಯೇ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಮುನಿರತ್ನ ಅವರೂ ಟಿಪ್ಪಣಿಯನ್ನು ಕೊಡುತ್ತಾರೆ. ಹಾಗಾಗಿ ಕಾಂಗ್ರೆಸ್‌ನ ಮಂತ್ರಿಗಳು ಮತ್ತು ಶಾಸಕರು ಅವರಿಗೆ ಟಿಪ್ಪಣಿಯನ್ನು ಕೊಟ್ಟಿರುತ್ತಾರೆ.

**ಸಭಾಪತಿಯವರು:–** ಅವರಿಗೆ ಮಾತನಾಡಲಿಕ್ಕೆ ಬಿಡಿ. ತಾವು ಸಚಿವರು, ಸಚಿವರಿಗೆ ಸ್ವಲ್ಪ ಸಹನೆ ಬೇಕು. ಅವರು ನಿಮಗೆ ಬೇಜಾರಾಗುವಂತಹದ್ದನ್ನು ಏನು ಹೇಳುತ್ತಿದ್ದಾರೆ. ಅಷ್ಟಕ್ಕೆ ನೀವು ಸಿಟ್ಟು, ಬೇಜಾರು ಮಾಡಿಕೊಂಡರೆ ಅದು ಸರಿ ಎನ್ನಿಸುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ. ಕೇಳುವ ಸಹನೆ ಇರಬೇಕು. ದಯವಿಟ್ಟು ನೀವು ಮುಂದುವರೆಸಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಗಣಪತಿ ಅವರು ಕೆಲಸ ಮಾಡಿದಂತಹ ಕಡೆಗಳಲ್ಲಿ ಒಳ್ಳೆಯ ಹೆಸರನ್ನು ಪಡೆದುಕೊಂಡಿದ್ದಾರೆ. ಯಾವುದೇ ಸಂದರ್ಭದಲ್ಲಿ ಅವರು ಹೆಸರನ್ನು ಕೆಡಿಸಿಕೊಳ್ಳಲಿಲ್ಲ. ಇತ್ತೀಚೆಗಷ್ಟೆ ಮಂಗಳೂರಿನಿಂದ ನಾನು ವೋಲ್ವೊ ಬಸ್ ಮೂಲಕ ಪ್ರಯಾಣಿಸುವಾಗ ಗಣಪತಿಯವರ ತಂದೆ ಶ್ರೀ ಕುಶಾಲಪ್ಪ ಮತ್ತು ಅವರ ಪತ್ನಿಯವರನ್ನು ಗಣಪತಿಯವರ ಪತ್ನಿಯಾದ ಶ್ರೀಮತಿ ಪಾವನಿ ಅವರು ಕಾರ್ ಡ್ರೈವ್ ಮಾಡಿಕೊಂಡು ಬಂದು ಬಸ್‌ಗೆ ಹತ್ತಿಸಿದುದನ್ನು ನೋಡಿರುತ್ತೇನೆ. ನನಗೆ ಪಾವನಿ ಅವರ ಗುರುತಿಲ್ಲ. ಪರಿಚಯವೂ ಇಲ್ಲ. ಆದರೆ ಶ್ರೀ ಕುಶಾಲಪ್ಪನವರು ನನಗೆ ಗುರುತಿದ್ದಾರೆ. ಪರಿಚಯದವರೂ ಆಗಿರುತ್ತಾರೆ. ಏಕೆಂದರೆ ಅವರು ನನ್ನ ಊರಿನವರು. ಶ್ರೀಮತಿ ಪಾವನಿಯವರು ಶ್ರೀ ಕುಶಾಲಪ್ಪನವರು ಮತ್ತು ಅವರ ಪತ್ನಿಯವರನ್ನು ಬಸ್ಸಿಗೆ ಹತ್ತಿಸಿ ಟಿಕೆಟ್ ಕೊಡಿಸಿ ಕೂರಿಸಿ ಹೋಗಿರುತ್ತಾರೆ. ಅಂತಹ ಶ್ರೀಮತಿ ಪಾವನಿ ಅವರಿಗೆ ಕುಟುಂಬದೊಂದಿಗೆ ಸಂಬಂಧಗಳು ಸರಿಯಿಲ್ಲವೆಂಬ ಆರೋಪಗಳು ಇಂದು ಬರುತ್ತಿವೆ.

**ಸಭಾಪತಿಯವರು:–** ದಯವಿಟ್ಟು ಅವರನ್ನು ಮಾತನಾಡಲಿಕ್ಕೆ ಬಿಡಿ. Why do you interfere? ಅವರೇನು ತಪ್ಪು ಮಾತನಾಡಿದ್ದಾರೆ? ಅಸಂಸದೀಯ ಪದಗಳನ್ನೇನಾದರೂ ಬಳಕೆ ಮಾಡಿದ್ದಾರೆಯೇ? ಸ್ವಲ್ಪ ಸಹನೆಯಿಂದ ಅವರ ಮಾತುಗಳನ್ನು ಕೇಳಬೇಕಾಗುತ್ತದೆ. ನೀವು ಮಾತನಾಡುವಾಗ ನಾನು ನಿಮ್ಮ ರಕ್ಷಣೆಯನ್ನು ಮಾಡಿರುತ್ತೇನೆ. ಹಾಗೆಯೇ ಅವರನ್ನೂ ಮಾತನಾಡುವುದಕ್ಕೆ ಬಿಡಬೇಕು.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಗಣಪತಿಯವರು 01.30 ಗಂಟೆಗೆ ಲಾಡ್ಜ್‌ಗೆ ಬರುತ್ತಾರೆ. 02.00 ಗಂಟೆಗೆ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದು ನಮ್ಮ ಮಡಿಕೇರಿಯ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಹೇಳಲಾಗುತ್ತಿದೆ. ಅವರ ಪತ್ನಿಯವರು ಎರಡು ಮಕ್ಕಳನ್ನು ಓದಿಸಿಕೊಂಡು ಮಂಗಳೂರಿನಲ್ಲಿ ವಾಸವಾಗಿದ್ದಾರೆ. ಅದು ನಮ್ಮ ಕೊಡಗಿನ ಸಾಮಾನ್ಯ ಪದ್ಧತಿ. ನಾವು ನಮ್ಮ ಮಕ್ಕಳನ್ನು ಓದಿಸಬೇಕಾದರೆ ಮಂಗಳೂರಿನಲ್ಲಿ ವಾಸ್ತವ್ಯಕ್ಕಾಗಿ ಫ್ಲಾಟ್ ಮಾಡಿ ಬಿಟ್ಟು ಬರುವುದು ಪದ್ಧತಿ. ಹಲವರು ಬೆಂಗಳೂರಿನಲ್ಲಿ ಬಿಡುತ್ತಾರೆ. ಅವರವರ ಜಾಗಕ್ಕೆ ಅನುಸಾರವಾಗಿ ಈ ರೀತಿ ಮಾಡುತ್ತಾರೆ. ಶ್ರೀ ಕುಶಾಲಪ್ಪನವರಿಗೆ ಮೂರು ಮಕ್ಕಳು. ಒಬ್ಬರು ಗಣಪತಿ. ಎರಡನೆಯವರು ತಮ್ಮಯ್ಯ. ಮತ್ತೊಬ್ಬರು ಮಾಚಯ್ಯ. ಶ್ರೀ ತಮ್ಮಯ್ಯ ಅವರು ರಾಮನಗರದಲ್ಲಿ ಡಿವೈಎಸ್ಪಿ ಆಗಿದ್ದಾರೆ. ಘಟನೆ ಸಂಭವಿಸಿದ ಸಂದರ್ಭದಲ್ಲಿ ಪೊಲೀಸ್ ಇಲಾಖೆಯವರು ಮಾಹಿತಿಯನ್ನು ಅವರ ಪತ್ನಿಗೆ ತಿಳಿಸಬೇಕಾಗಿತ್ತು. ಆದರೆ ರಾಮನಗರ ಡಿವೈಎಸ್ಪಿ ಅವರನ್ನು ಬೇಗ ಕರೆಸಿಕೊಳ್ಳುತ್ತಾರೆ. ಏಕೆಂದರೆ ಅವರ ಕುಟುಂಬದಲ್ಲಿ ಆಗಲೀ ಅವರ ತಮ್ಮಂದಿರೊಡನೆಯಾಗಲೀ ಗಣಪತಿಯವರಿಗೆ ಯಾವುದೇ ಕಲಹಗಳು ಇರದ ಕಾರಣ ತಮ್ಮಯ್ಯನವರ ಮೇಲೆ ಪೊಲೀಸರು ಒತ್ತಾಯವನ್ನು ಹೇರುತ್ತಾರೆ. ತಮ್ಮಯ್ಯ ಅವರ ಪಕ್ಕದಲ್ಲಿ ಐ.ಜಿ.ಯವರು ನಿಂತುಕೊಂಡು ತಮ್ಮಯ್ಯ ಅವರಿಂದ ಗಣಪತಿಯವರು ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎಂದು ಹೇಳಿಕೆಯನ್ನು ಕೊಡಿಸುತ್ತಾರೆ. ಇದು ಸರಿಯೇ? ಐ.ಜಿ.ಯವರು ಇರುವುದು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ. ಆರ್.ಟಿ.ಓ ಇರುವುದು ಚಾಲನಾ ಪರವಾನಗಿಯನ್ನು ನೀಡುವುದಕ್ಕಾಗಿ. ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುವುದಕ್ಕಾಗಿ ವೈದ್ಯರು ಬೇಕು. ಈ ಐ.ಜಿ.ಪಿ.ಯವರು ಏನಾದರೂ ಎಂ.ಬಿ.ಬಿ.ಎಸ್. ಅನ್ನು ಓದಿದ್ದಾರೆಯೇ? ಅವರು ಖಿನ್ನತೆಗೆ ಒಳಗಾಗಿದ್ದರೆಂದು ಯಾವ ಆಧಾರದ ಮೇಲೆ ಇವರು ಹೇಳಿದರು? ಏಕೆಂದರೆ ಒಬ್ಬ ಅಧಿಕಾರಿ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವಾಗ ಬಹಳ ಕಷ್ಟವಿರುತ್ತದೆ. ಅವರಿಗೆ ಪೋಸ್ಟಿಂಗ್ ಬೇಕಾದರೆ ಮತ್ತು ಇಲಾಖೆಯಲ್ಲಿ ಕೆಲಸ ಮಾಡ ಬೇಕಾದರೆ ಅವರ ಜೀವದ ಹಂಗನ್ನು ತೊರೆದು ಕೆಲಸ ಮಾಡಬೇಕಾಗುತ್ತದೆ. ಹಾಗಾಗಿ ಅವರು ಕೆಲವು ಸಂದರ್ಭಗಳಲ್ಲಿ yield ಆಗುತ್ತಾರೆ. ಗಣಪತಿಯವರ ಪತ್ನಿ ಇರುವುದು ಮಡಿಕೇರಿಯಿಂದ ಸುಮಾರು 120 ಕಿಲೋ ಮೀಟರ್ ದೂರದಲ್ಲಿ. ಮಡಿಕೇರಿಯಿಂದ ರಾಮನಗರ ಸುಮಾರು 200 ಕಿ.ಮೀ. ದೂರದಲ್ಲಿದೆ. 120 ಕಿ.ಮೀ. ದೂರದ ಮಂಗಳೂರಿನಲ್ಲಿರುವ

ಗಣಪತಿಯವರ ಪತ್ನಿಗೆ ಮಾಹಿತಿ ಹೋಗುವುದಿಲ್ಲ. ಅವರಿಗೆ ರಾತ್ರಿ 09.30ಕ್ಕೆ ಯಾರ ಮುಖಾಂತರವೋ ತಿಳಿಯುತ್ತದೆ. ಅವರ ಮಗ ಬಿ.ಇ. ಓದುತ್ತಿದ್ದು ಮೆಜಾರಿಟಿಗೆ ಬಂದಿರುತ್ತಾನೆ. ಇನ್ನೊಬ್ಬ ಮಗ ಎಸ್.ಎಸ್.ಎಲ್.ಸಿ. ಓದುತ್ತಿದ್ದಾನೆ. ಮಹಜರ್ ಮಾಡುವಾಗ ತಹಶೀಲ್ದಾರ್ ಅವರ ಸಮ್ಮುಖದಲ್ಲಿ ಮಾಡಲಾಗುವುದು. ಆದರೆ ಇಲ್ಲಿ ತಹಶೀಲ್ದಾರ್ ಅವರು ಇರಲಿಲ್ಲ. ಗಣಪತಿಯವರ ತಂದೆಯವರು ವಯೋವೃದ್ಧರಾಗಿದ್ದು ಅರಳೋ ಮರಳೋ ಎನ್ನುವಂತಹ ಪರಿಸ್ಥಿತಿಯಲ್ಲಿದ್ದಾರೆ. ಅವರು ಬಹಳ ಸಭ್ಯ ಜನರಾಗಿದ್ದಾರೆ. ಮೊನ್ನೆ ನಮ್ಮ ಸಚಿವರು ಅವರನ್ನು ನೋಡಿ ಬಂದಿರುತ್ತಾರೆ. ಮಹಜರ್ ಮಾಡಿದ ನಂತರ ಅವರ ಕೈಯಲ್ಲಿ ಪೊಲೀಸರು ಒಂದು ಸಹಿಯನ್ನು ತೆಗೆದುಕೊಂಡಿರುತ್ತಾರೆ. ಸಹಿ ತೆಗೆದುಕೊಂಡ ನಂತರ ಪೊಲೀಸರು ಅವರ ಕುಟುಂಬದಲ್ಲಿ ಹುಳಿ ಹಿಂಡುವಂತಹ ಕಾರ್ಯವನ್ನು ಮಾಡುತ್ತಾರೆ. ಇದು ಯಾವ ನ್ಯಾಯ? ಪಾವನಿಯವರು ಗಂಡನನ್ನು ಕಳೆದುಕೊಂಡ ದುಃಖದಲ್ಲಿದ್ದಾಗ, ಕುಶಾಲಪ್ಪನವರು ಮಗನನ್ನು ಕಳೆದುಕೊಂಡ ದುಃಖದಲ್ಲಿದ್ದಾಗ ಪೊಲೀಸರು ಅವರಿಂದ ಸಹಿಯನ್ನು ತೆಗೆದುಕೊಳ್ಳುತ್ತಾರೆ. ಮರುದಿನ ಪತ್ರಿಕೆಗಳಲ್ಲಿ ಮಾನ್ಯ ಗೃಹಸಚಿವರ ಹೇಳಿಕೆಯನ್ನು ಕಂಡು "ನನಗೆ ಈ ಪರಿಸ್ಥಿತಿ ಬರಬಾರದಿತ್ತು" ಎಂದು ನೊಂದವರು ಹೇಳುತ್ತಾರೆ. ರಾಜಕೀಯ ಎನ್ನುವುದು ಹರಿಯುವ ನೀರಿನಂತೆ. ನಾವೂ ಸಹ ಯಾವಾಗ ಸಾಯುತ್ತೇವೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಡಿವೈಎಸ್ಪಿ ಆಗಿದ್ದಂತಹ ಗಣಪತಿಯವರ ಸಾವಿನ ಪ್ರಕರಣದ ನಂತರ ಮಂತ್ರಿಗಳಿರಬಹುದು, ವಿಧಾನ ಸಭೆ ಸದಸ್ಯರಿರಬಹುದು, ವಿಧಾನ ಪರಿಷತ್ ಸದಸ್ಯರಿರಬಹುದು ಹೇಗೆ ಸಾಯುತ್ತಾರೆಂದು ಹೇಳಲಿಕ್ಕೆ ಬರುವುದಿಲ್ಲ ಎಂದು ನನಗನ್ನಿಸುತ್ತದೆ. ಘಟನಾ ಸ್ಥಳಕ್ಕೆ ಅವರ ಪತ್ನಿಯನ್ನು ಏತಕ್ಕೆ ಕರೆಸಿಕೊಳ್ಳಲಿಲ್ಲ ಎಂಬುದು ಸಂಶಯಕ್ಕೆ ಕಾರಣವಾಗಿದೆ. ಜಾರ್ಜ್ ಅವರು ತಪ್ಪಿತಸ್ಥರು ಎಂದು ನಾವು ಯಾರೂ ಹೇಳುವುದಿಲ್ಲ. ಗಣಪತಿಯವರು ನೀಡಿರುವ ಸಂದರ್ಶನದ ವೀಡಿಯೋದಲ್ಲಿ ಆ ರೀತಿ ಇದೆ. ಗಣಪತಿಯವರು ಮಾಡಿರುವ ಆರೋಪಕ್ಕೆ ನಾವು ಆ ರೀತಿ ಹೇಳುತ್ತಿದ್ದೇವೆ. ಜಾರ್ಜ್ ಅವರು ಮಂತ್ರಿಯಾಗಿರತಕ್ಕಂತಹವರು. ಗಣಪತಿಯವರು ಅವರನ್ನೊಮ್ಮೆ ಭೇಟಿ ಮಾಡಿದ್ದರು. ದಿವಂಗತ ಶ್ರೀ ಗುಂಡೂರಾಯರು ಅತ್ಯಂತ ಕೆಳಹಂತದಿಂದ ಮುಖ್ಯಮಂತ್ರಿಯಾದಂಥವರು. ಅವರಿಗೆ ಯಾರು ಹೆಚ್ಚಿನ ಕಾಟ ಕೊಡುತ್ತಿದ್ದರೋ ಅವರನ್ನು ಕರೆದು ಸಹಾಯ ಮಾಡಿಕೊಡುತ್ತಿದ್ದರು. ಎ.ಕೆ.ಸುಬ್ಬಯ್ಯನವರಿದ್ದರು, ಎಂ.ಸಿ.ನಾಣಯ್ಯನವರಿದ್ದರು. ಸತ್ಯ ಹೇಳಬೇಕೆಂದರೆ ಅವರು ಒಂದು ಗಂಟೆ ಕಾಲ ಬಯ್ಯುತ್ತಾರೆ. ನಂತರ ಕರೆದು ಅವರ ಕೆಲಸವನ್ನು ಮಾಡಿಕೊಡುತ್ತಾರೆ. ಅಂತಹ ಸಂದರ್ಭಗಳು ಗಣಪತಿಯವರಿಗೆ ಎದುರಾದಾಗ ಅವರ ಮನ ನೊಂದಿರಬಹುದು. ಅದಕ್ಕಾಗಿ ಅವರು ಪ್ರತಿಯೊಂದು ಸಂದರ್ಭದಲ್ಲಿಯೂ ಜಾರ್ಜ್ ಅವರ ಹೆಸರನ್ನೇ ಪ್ರಸ್ತಾಪ ಮಾಡಿದ್ದಾರೆ. ಹಾಗಾಗಿ ಎಲ್ಲರಿಗೂ ಜಾರ್ಜ್ ಅವರ ಬಗ್ಗೆ ಸಂಶಯ ಮೂಡುತ್ತದೆ. ನಾವು ಇಲ್ಲಿ ಜಾರ್ಜ್ ಅವರನ್ನು ಕಟುಕ ಎಂದಾಗಲೀ ಕೊಲೆಗಾರರೆಂದಾಗಲೀ ಹೇಳಲಿಕ್ಕೆ ಬಂದಿರುವುದಿಲ್ಲ. ಈಗ ತನಿಖೆ ಮಾಡುತ್ತಿರುವುದು ಸಿ.ಓ.ಡಿ. ಸಿ.ಓ.ಡಿ. ಮುಖ್ಯಮಂತ್ರಿಯವರ ಅಧೀನಕ್ಕೆ ಬರುತ್ತದೆ. ಜಾರ್ಜ್ ಅವರು ಮುಖ್ಯಮಂತ್ರಿಯವರ ಆಪ್ತರು. ಜಾರ್ಜ್ ಹಾಗೂ ಮುಖ್ಯಮಂತ್ರಿಯವರ ಸಂಬಂಧ ನಿಮಗೆಲ್ಲರಿಗೂ ತಿಳಿದೇ ಇದೆ. ಅಂದರೆ ಕೆಟ್ಟ ಸಂಬಂಧವಲ್ಲ. ಬಹಳ ಪ್ರೀತಿ ವಿಶ್ವಾಸಗಳ ಸಂಬಂಧ. ಸಂತೋಷ್ ಲಾಡ್ ಅವರು ಹೇಗೆ ರಾಜೀನಾಮೆಯನ್ನು ಕೊಟ್ಟು ತಮ್ಮ ಉದಾರತೆಯನ್ನು ತೋರಿದರೋ ಹಾಗೆಯೇ ಜಾರ್ಜ್ ಅವರು ತಮ್ಮ ರಾಜೀನಾಮೆಯನ್ನು ನೀಡಲಿ. ನಾನು ಕೊಡಗಿನ ಮಗ. ಕೊಡಗಿನ ಮಗನೊಬ್ಬನಿಗೆ ಅನ್ಯಾಯವಾಗಿರುವುದರಿಂದ ರಾಜೀನಾಮೆಯನ್ನು ಕೊಡುತ್ತಿದ್ದೇನೆ ಎಂದಾಗ ಅವರು ದೊಡ್ಡವರೆನ್ನಿಸಿಕೊಳ್ಳುತ್ತಾರೆ. ಎಲ್.ಕೆ.ಆಡ್ವಾಣಿಯವರು ತಮ್ಮ ಮೇಲೆ ಆರೋಪ ಬಂದಾಗ ಅವರ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರು. ನಿರಪರಾಧಿಯೆಂದು ಸಾಬೀತಾದ ಮೇಲೆ ಅವರು ಆ ಸ್ಥಾನಕ್ಕೆ ಪುನಃ ಬರುತ್ತಾರೆ. ಅಂತೆಯೇ ಲಾಲ್ ಬಹದ್ದೂರ್ ಶಾಸ್ತ್ರಿಯವರು ರೈಲು ಅಪಘಾತವಾದಾಗ ರಾಜೀನಾಮೆಯನ್ನು ಕೊಡುತ್ತಾರೆ. ಅವರು ನಮಗೆ ಆದರ್ಶವಾಗಬೇಕು. ಇಲ್ಲಿ ಇರುವವರು ಇಬ್ಬರು ಐ.ಪಿ.ಎಸ್. ಆಫೀಸರ್‌ಗಳು. ಅವರ ಮುಂದೆ ಒಬ್ಬ ಸಬ್–ಇನ್ಸ್ಪೆಕ್ಟರ್ ಅಥವಾ ಸರ್ಕಲ್ ಇನ್ಸ್ಪೆಕ್ಟರ್ ಹೋಗಿ ಸಿ.ಓ.ಡಿ ತನಿಖೆಯನ್ನು ಮಾಡಲಿಕ್ಕೆ ಆಗುತ್ತದೆಯೇ? ಪ್ರೊಟೋಕಾಲ್‌ನಂತೆ ಒಬ್ಬ ಸಬ್–ಇನ್ಸ್ಪೆಕ್ಟರ್ ಆಗಲಿ, ಒಬ್ಬ ಎಸ್.ಪಿ. ಆಗಲಿ ಜಾರ್ಜ್ ಅವರ ತನಿಖೆಯನ್ನು ಮಾಡಲಿಕ್ಕೆ ಆಗುತ್ತದೆಯೇ? ಜಾರ್ಜ್ ಅವರ ಹೇಳಿಕೆಯು ಇಲ್ಲಿಂದ ದೆಹಲಿಯವರೆಗೆ ಅತ್ಯಂತ ಪ್ರಭಾವಶಾಲಿ. ಜಾರ್ಜ್ ಅವರು ಗೃಹ ಮಂತ್ರಿಯಾಗಿದ್ದವರು, ಹಣದಲ್ಲಿ ಹಾಗೂ

ಎಲ್ಲದರಲ್ಲಿಯೂ ಪ್ರಭಾವಿ ವ್ಯಕ್ತಿಯಾಗಿದ್ದಾರೆ. ಜಾರ್ಜ್ ಅವರೇ ನಾನು ರಾಜೀನಾಮೆಯನ್ನು ಕೊಡುತ್ತೇನೆ ಎಂದು ಹೇಳಿ ದೊಡ್ಡತನವನ್ನು ಮೆರೆಯಬೇಕಾಗಿದೆ. ಯಾವುದೇ ರೀತಿಯ ತನಿಖೆಯಾದರೂ ಸತ್ಯವಂತರು ನೀತಿವಂತರು ಯಾವುದಕ್ಕೂ ಹೆದರಬೇಕಾಗಿರುವುದಿಲ್ಲ. ಸ್ವಲ್ಪ ಕಷ್ಟವಾಗಬಹುದು. ಸ್ವಲ್ಪ ಇರುಸು ಮುರುಸಾಗಬಹುದು. ರಾಜಕೀಯ ಜೀವನದಲ್ಲಿ ಅದು ಸಹಜವಾದುದು. ಶ್ರೀ ಕಾಗೋಡು ತಿಮ್ಮಪ್ಪನವರಿಗೆ ನಾನು ಗುರುತು ಇರುವುದಿಲ್ಲ. ನನಗೆ ಅವರ ಪರಿಚಯವಿದೆ. ಗುಂಡೂರಾವ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಮಂತ್ರಿಗಳಾಗಿದ್ದರು. ನಾನು ಅವರ ಭಾಷಣವನ್ನು ಕೇಳಿದ್ದೇನೆ. ನಾನು ಚಿಕ್ಕವನಿದ್ದ ಸಂದರ್ಭದಲ್ಲಿ ಅವರು ಸೋಮವಾರಪೇಟೆಗೆ ಬರುತ್ತಿದ್ದಾಗ ದೂರದಿಂದ ನೋಡುತ್ತಿದ್ದೆನು. ಅವರು ನಡೆದುಕೊಳ್ಳುವಂತಹ ರೀತಿ ಹೇಗಿದೆಯೋ ಅದೇ ರೀತಿಯಲ್ಲಿ ಜಾರ್ಜ್ ಅವರು ನಡೆದುಕೊಳ್ಳಲಿ ಎಂಬುದು ನಮ್ಮ ಪ್ರಾರ್ಥನೆ. ಗಣಪತಿಯವರ ಇಡೀ ಸಂಸಾರವನ್ನು ಹಾಳು ಮಾಡುವುದು ಬೇಡ. ಗಣಪತಿಯವರ ತಮ್ಮ ಡಿವೈಎಸ್ಪಿ ಇದ್ದಾರೆ. ಅವರಿಗೆ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ತೊಂದರೆ ಉಂಟಾಗುತ್ತದೆ. ಉನ್ನತಾಧಿಕಾರಿಗಳು ಅವರನ್ನು ಅಧೋಗತಿಗೆ ತಳ್ಳಿ ಬಿಡುತ್ತಾರೆ. ಏಕೆಂದರೆ ಐ.ಎ.ಎಸ್./ಐ.ಪಿ.ಎಸ್. ಅಧಿಕಾರಿಗಳ ತಾಕತ್ತೇ ಬೇರೆ ಇರುತ್ತದೆ. ರಾಜಕಾರಣಿಗಳಿಗಿರುವುದು ಐದು ವರ್ಷ ಜೀವಮಾನ. ಆದರೆ ಐ.ಪಿ.ಎಸ್. ಅಧಿಕಾರಿಗೆ 60 ವರ್ಷ. 60 ವರ್ಷಗಳಲ್ಲಿ ಈ ಡಿವೈಎಸ್ಪಿ ಏನಾಗಬಹುದು? ಅವರ ಪರಿಸ್ಥಿತಿ ಏನಾಗಬಹುದು? ಅವರ ಹೆಂಡತಿ ಮಕ್ಕಳು ಏನಾಗಬಹುದು? ಇದನ್ನು ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಇಂದಿನ ಪರಿಸ್ಥಿತಿಯಲ್ಲಿ ಎಲ್ಲವನ್ನೂ ನೋಡಿದ್ದೇವೆ. ಮುಖ್ಯಮಂತ್ರಿಗಳು ತಮ್ಮ ಉದಾರ ಗುಣವನ್ನು ತೋರಿಸಬೇಕಾಗಿತ್ತು. ಅವನ ಮೇಲೆ ಯಾವುದೋ ಒಂದು ಕೇಸು ದಾಖಲೆ ಮಾಡಿದ್ದೇವೆ. ಅವನನ್ನು ನೋಡಿಕೊಳ್ಳಿ ಎಂದು ಹೇಳಬಾರದಿತ್ತು. ಅವನಿಗೆ ಕರೆದು ಪೋಸ್ಟಿಂಗ್ ಕೊಟ್ಟು ಸಹಾಯ ಮಾಡಬೇಕಾಗಿತ್ತು. ಹಾಗೆಯೇ ಮೈಸೂರು ಜಿಲ್ಲಾಧಿಕಾರಿಗಳಾಗಿರುವ ಶ್ರೀಮತಿ ಶಿಖಾ ಅವರಿಗೆ ತಮ್ಮ ಕಾರ್ಯಕರ್ತ ಬೈದಾಗ ಮುಖ್ಯಮಂತ್ರಿಯವರೇ ಅವರಿಗೆ "ನೋಡಪ್ಪ ಮರಿಗೌಡ, ಹೀಗೆ ಮಾಡಬೇಡ. ಚುನಾವಣೆಯಲ್ಲಿ ನೀನು ನನಗೆ ಸಹಾಯ ಮಾಡಿರುತ್ತೀಯ. ನಿನ್ನ ಋಣ ಇದೆ. ಆದರೆ ನೀನು ಇವರಿಗೆ ತೊಂದರೆ ಮಾಡಬೇಡ" ಎನ್ನುವ ಮಾತನ್ನು ಹೇಳಬೇಕಾಗಿತ್ತು. ಅದೇ ರೀತಿ ಮುಖ್ಯಮಂತ್ರಿಗಳು ನಮಗೆ ಒಂದು ಭಾಷಣವನ್ನು ಮಾಡಿದ್ದರು. ಮೊದಲ ಬಾರಿಗೆ ಅದರಲ್ಲಿ ರಿಜ್ವಾನ್ ಅವರು, ವೀಣಾ ಅವರೂ ಸೇರಿ ನಾವು ಏಳು ಜನ ಭಾಗವಹಿಸಿದ್ದೆವು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಅದು 'ಬದ್ಧತೆ ಮತ್ತು ಸಿದ್ಧತೆ'. ಬಹಳ ಒಳ್ಳೆಯ ಮಾತನ್ನು ಹೇಳಿದ್ದರು. ಹಾಗಾದರೆ ಇಂದು ಅವರ ಬದ್ಧತೆ ಮತ್ತು ಸಿದ್ಧತೆ ಜಾರ್ಜ್ ಅವರನ್ನು ಉಳಿಸಿಕೊಳ್ಳುವುದಾಗಿದೆಯೇ? ಅಥವಾ ಕರ್ನಾಟಕದ ಆರು ಕೋಟಿ ಜನರ ಬಗ್ಗೆ ಇದೆಯೇ? ಶ್ರೀ ಜನಾರ್ದನ ಪೂಜಾರಿಯವರು ಕೊಡಗು–ಮಂಗಳೂರು ಕ್ಷೇತ್ರದ ಲೋಕಸಭಾ ಸದಸ್ಯರಾಗಿದ್ದವರು, ಹಣಕಾಸು ಸಚಿವರೂ ಆಗಿದ್ದರು.

**ಶ್ರೀ ಐವನ್ ಡಿ'ಸೋಜ(ನಾಮ ನಿರ್ದೇಶನ):–** ಮಾನ್ಯ ಸಭಾಪತಿಯವರೆ, ಸದಸ್ಯರ ಹೆಸರು ತೆಗೆದುಕೊಳ್ಳಬಾರದೆಂದು ಹೇಳಿದ್ದೀರಿ. ಮತ್ತೆ ಇವರು ಸದಸ್ಯರ ಹೆಸರನ್ನು ಏಕೆ ತೆಗೆದುಕೊಂಡರು?

**ಸಭಾಪತಿಯವರು:–** ಹೆಸರನ್ನು ಬಿಟ್ಟು ಬಿಡಿ. ಹೇಳಿದ್ದನ್ನೇ ಹೇಳದೆ ವಿಷಯವನ್ನು ಮುಂದುವರೆಸಿ.

**ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ.:–** ಅವರು ಕೇಂದ್ರ ಸಚಿವರಾಗಿದ್ದರು. ನಾಲ್ಕು ಬಾರಿ ನಮ್ಮ ಭಾಗದ M.P. (Member of Parliament) ಆಗಿದ್ದರು. ಅನುಕಂಪದ ಆಧಾರದ ಮೇಲೆ ಅವರು ಜಾರ್ಜ್ ಅವರಿಂದ ರಾಜೀನಾಮೆಯನ್ನು ಪಡೆಯಿರಿ ಇಲ್ಲವೆ ಅವರನ್ನು ವಜಾ ಮಾಡಿ ಎಂದು ಹೇಳುತ್ತಾರೆ. ಒಬ್ಬ ಮಾಜಿ ಮುಖ್ಯಮಂತ್ರಿಗಳು ಬಹಳ ನಾಜೂಕಾದಂತಹ ಪರಿಸ್ಥಿತಿ ಎಂದು ಹೇಳುತ್ತಾರೆ. ತಾವೆಲ್ಲರೂ ಸ್ವಲ್ಪ ತಾಳ್ಮೆಯಿಂದ ಇರಬೇಕೆಂದು ಕೋರುತ್ತೇನೆ. You have to bow your head with shame. ನಾನು ಹೇಳುತ್ತೇನೆ...

**Sri M.R.SEETHARAM:-** Don't talk like that. This is wrong.

**Sri LEHAR SINGH SIROYA:-** Please…

**ಶ್ರೀ ಎಂ.ಆರ್.ಸೀತಾರಾಂ:–** ತಾವುಸಮಾಧಾನದಿಂದ ಮಾತನಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ :–ಇದು 2013ನೇ ಇಸವಿಯ ಪತ್ರಿಕೆ.** ನಿಮ್ಮ ಸರ್ಕಾರ ಬಂದು 15 ದಿವಸದ ನಂತರ ಬಂದಂತಹ ಸುದ್ಧಿ ಇದು.ಪತ್ರಿಕೆಯಲ್ಲಿದೊಡ್ಡ ಹೆಡ್‌ಲೈನ್ಸ್‌ನಲ್ಲಿ 'RICH PEOPLE'S POLICE'ಎಂದು ಬಂತು.'*ಅಮೀರ್‌ಗರೀಬ್‌ಡಿವೈಡ್*'ಅಂದರೆಪೊಲೀಸ್‌ಯಾವರೀತಿ ನಡೆದುಕೊಳ್ಳುತ್ತಾರೆಂದು ಮೂರು ವರ್ಷದ ಹಿಂದೆಯೇ ಪತ್ರಿಕೆಯಲ್ಲಿ ವರದಿಯಾಗಿದೆ.ನನ್ನ ಬಳಿ ಇದಕ್ಕೆ ಸಂಬಂಧಪಟ್ಟಂತೆ ಹಲವಾರು ವಿಷಯಗಳಿವೆ.ಆದರೆ ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.ನಿಮ್ಮ ಸರ್ಕಾರ ಬಂದ ಮೇಲೆ ಏನೆಲ್ಲಾ ಅನಾಹುತಗಳಾಗಿವೆ ಎಂದರೆ, Law and Order ನ ಹಾಳು ಮಾಡುವುದಕ್ಕೆಏನೆಲ್ಲಾ ಮಾಡಬೇಕೋಅದೆಲ್ಲವನ್ನೂ ಮಾಡಿದ್ದೀರಿ.ಟಿಪ್ಪುಜಯಂತಿ ಬಗ್ಗೆ ಏನೆಲ್ಲಾ ಮಾಡಬೇಕು ಮಾಡಿದಿರಿ. ಹೇಗೆ ಗೊಂದಲ ಸೃಷ್ಠಿ ಮಾಡಬೇಕುಅದನ್ನು ಮಾಡಿದ್ದೀರಿ. ಇನ್ನುPolice Departmentಯಾವರೀತಿdemoralizeಆಗಿದೆಎಂದರೆ ಬೇಕಾದಷ್ಟುದಾಖಲೆ ನಮ್ಮಕೈಯಲ್ಲಿದೆ.ಅದರ ಬಗ್ಗೆ ನಾನು ವಿವರವಾಗಿ ಹೋಗುವುದಿಲ್ಲ.ಈಗ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಈಗ ಪೊಲೀಸ್ ನಮ್ಮ ರಕ್ಷಣೆಗೆ ಇದ್ದಾರೆಂದು ನಾವು ನೆಮ್ಮದಿಯಾಗಿ ಕುಳಿತುಕೊಂಡಿದ್ದೇವೆ. 15–20 ವರ್ಷಗಳಿಂದ ಯಾವುದೇ ಸರ್ಕಾರದಲ್ಲಾಗಲೀ ಪೋಲೀಸ್ ಇಲಾಖೆ, on the cast, communal and religion basis, ಬೇರೆ ಬೇರೆ ಕಾರಣಕ್ಕೆ ಪ್ರತೀ ದಿವಸ demoralize ಆಗುತ್ತಿದೆ. ಇದಕ್ಕೆ ಬೇಕಾದಷ್ಟು ನಿದರ್ಶನಗಳು ನಮ್ಮ ಬಳಿ ಇದೆ. ನಮಗೆ ಇರುವಂತಹ ಆತಂಕ ಏನೆಂದರೆ, a person who came from neighboring State as a worker in Mercara and working in a timber factory has made money by way of legal or illegal, I don't want to say about that. He made thousand crores of rupee by enjoying all the power and all the liberty in Karnataka. Now he says; "Because, I am George, that's why BJP is attacking me." When we came to power, first we made APJ Abdul Kalam as President of India and recently we made NaseemJaidi as Election Commissioner. But he is alleging that because of religion we are attacking him. In Paper headlines it has mentioned and in that he shouts; "Being targeted because I', George". ಏನು ಸ್ವಾಮಿಇದು ಸಮಾಚಾರ?This higher level person if he alleges that he was targeted because he belongs to a minority, we seen that. ಯಾರಾದರು ಕಳ್ಳತನ ಮಾಡಿದ್ದರೆ, ಗುಂಪು ಸೇರಿದ್ದರೆ ಅಂಥವರು ಪೊಲೀಸ್ ಸ್ಟೇಷನ್‌ಗೆ ಹೋಗುತ್ತಾರೆ, ಆನಂತರ ಅವರು ನಮ್ಮವರೆಂದು ಅಥವಾ ಜಾತಿಯ ಆಧಾರದ ಮೇಲೆ ಸಂಪ್ರದಾಯದ ಆಧಾರದ ಮೇಲೆ ಅವರನ್ನು ಬಿಡುಗಡೆ ಮಾಡುತ್ತಾರೆ, ಆದರೆ higher level ನಲ್ಲಿ ಆ ರೀತಿ ನಡೆದುಕೊಂಡರೆ…now not only we are opposing, JDS party also with us and opposing on the same issue in this episode.ಇದು ಯಾವ ಮಟ್ಟಕ್ಕೆ ಅವರು ನಡೆದುಕೊಂಡಿದ್ದಾರೆಂದರೆ, ಒಂದು ನಿಮಿಷ ಸಹ ಅವರು ಆ ಸ್ಥಾನದಲ್ಲಿ ಇರಕೂಡದು. ಏಕೆಂದರೆ ಆ ಭಾವನೆ ಬಂದಮೇಲೆ ಅದು ಎಲ್ಲಿಗೆ ಹೋಗಿ ಮುಟ್ಟುತ್ತದೆ. I want to tell you one example, one Cricketer who was caught in the match fixing scam, he said because of minority I am being attacked. Two-three days after he has apologized and that report is here. People attacked him as he was caught in match fixing scam, because they all loved him as a Cricketer for last twenty years. All the criminals will take shelter and hide behing the caste, religion and community. ಈ ಮಟ್ಟಕ್ಕೆ ಅವರು ಮಾಡಿಬಿಟ್ಟರೆ, ಈ ವ್ಯಕ್ತಿ ಗೃಹ ಸಚಿವರಾಗಿದ್ದವರು, ಆಗ ಯಾವ ರೀತಿ ನಡೆದುಕೊಂಡಿದ್ದಾರೆಂದು ನಾವೇನು ಹೇಳುವಂತಿಲ್ಲ. ಡಿ.ಕೆ.ರವಿ ಕೇಸಿನ ಬಗಗೆ ಎಲ್ಲರೂ ಪ್ರಸ್ತಾಪ ಮಾಡಿದ್ದಾರೆ.He should have resigned then and there in that case. CBI has not enquired him in that episode. How many notices have been issued by

Ravi and to whose companies it has been issued prior to that episode? This person is a party with those companies.ಇಲ್ಲಿಯವರೆಗೂ ಅದು ತನಿಖೆ ಆಗಲೇ ಇಲ್ಲ. ಇದಕ್ಕೆ ಸಿ.ಬಿ.ಐ.ಯಿಂದ ತನಿಖೆ ನಡೆಸಬೇಕು. ಯಾವ ಯಾವ ಕಂಪನಿಯಲ್ಲಿ ಹೇಗೆ ದುಡ್ಡು ಮಾಡಿದ್ದಾರೆ, ಹೇಗೆ land encroach ಮಾಡಿದ್ದಾರೆ, ಹೇಗೆ ಹೇಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ ಎಂಬುದರ ಬಗ್ಗೆ ತನಿಖೆ ಆಗಬೇಕು. ತನಿಖೆ ಆಗಬೇಕು ಎಂದರೆ he should resign immediately. ನಮ್ಮ ಸ್ನೇಹಿತರು ಹೇಳಿದರು; that dying declaration is not a finality. I also agree with that. When a dying declaration is there, then prima-facie it is a fit case that he should resign and face the CBI or any other impartial enquiry which people have faith in that. ಅದು ಆಗಬೇಕು. ಆದರೆಅದುಆಗುತ್ತಿಲ್ಲ.ಆನಂತರ ನಾವು ಯಾವ ಮಟ್ಟಕ್ಕೆ ಹೋಗುತ್ತಿದ್ದೇವೆಂದರೆ, ಎನ್‌ಕೌಂಟರ್ ಬಗ್ಗೆ ಮಾತನಾಡುತ್ತೇವೆ, ಅವರ ಬಗ್ಗೆ ಮಾತನಾಡುತ್ತೇವೆ, ಅವರನ್ನು ಸಸ್ಪೆಂಡ್ ಮಾಡುತ್ತೇವೆ, ನಮ್ಮರಾಷ್ಟ್ರಾಧ್ಯಕ್ಷರ ಹೆಸರನ್ನು ನಮ್ಮ ಸ್ನೇಹಿತರುತೆಗೆದುಕೊಂಡರು.ಅದುಯಾವ ಕೇಸು ಇತ್ತು, a criminal was shot in encounter by a Police. That Police is from Karnataka and was jailed for eight years in that case for nothing. Finally, he got acquitted from that case. ಪ್ರಕರಣದಲ್ಲಿ ಏನಾಯಿತೆಂಬುದು ಎಲ್ಲರಿಗೂ ಗೊತ್ತಿದೆ. But now you don't want to leave him from that chair for one day. ಆ ರೀತಿ ಬೆಂಬಲ ಕೊಡುತ್ತಿದ್ದಾರಲ್ಲ. ಇಲ್ಲಿಯವರೆಗೆ, we never uttered a word. This level goes such a down. They want to hide behind the religion and caste. So, it is a fit case that he should resign. ಈ ಹಂತದಲ್ಲಿ ಇನ್ನೊಂದು ವಿಚಾರ ಹೇಳುವುದೇನೆಂದರೆ, our Hon'ble Chief Minister is already protecting one person and whose bail has been rejected yesterday. I want to know how many people he will keep on protecting. Whether he wants to eliminate Congress totally from Karnataka State? That's why my humble request to Treasury Bench is don't make it an egoic problem in this issue. It is a fit case to enquired. I am not going into details of DySP who died. Whole House should condemn yesterday's statement of George which he uttered in News Paper; "Because, I am George, that's why BJP is attacking me'. We never thought and thinking of those lines. I am living in Muktainagar Bamboo Bazaar area which is a dense Muslim area and surrounded by the Masjids, but I am living with perfect communal harmony. ಆ ರೀತಿ ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟರೆ ನಮ್ಮ ಗತಿ ಏನು? ನಾಳೆ ದಿವಸ ನಮ್ಮ generation ಗೆ ಏನು ಹೇಳಬೇಕು: ಆಡಳಿತ ಪಕ್ಷಕ್ಕೆ ನಾಚಿಕೆ ಇದ್ದರೆ ಇದರ ಗ್ರೌಂಡ್ ಮೇಲೆ ಅವರಿಂದ ರಾಜಿನಾಮೆಯನ್ನು ತೆಗೆದುಕೊಳ್ಳಿ. He should resign immediately to save our morality. ಗೌರವ ಉಳಿಸಿಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಮನವಿ ಮಾಡುತ್ತೇನೆ. As fast as possible he should resign immediately. Because, we have to discuss here with respect to Law and Order, infrastructure and so many things. ಹಿಂದೆಯಾವುದೋ ಒಂದು ಆಪಾದನೆ ಮಾಡಿದಾಗಲೂ he has been elevated from Home Ministry and given in-charge of entire Bengaluru. ರಾಮಲಿಂಗಾರೆಡ್ಡಿಯವರನ್ನು ತಪ್ಪಿಸಿ ಅವರಿಗೆ ಚಾರ್ಜ್ ಕೊಟ್ಟಿದ್ದಾರೆ. We never said that, he is a Christian and very close to their party high command. We always take persons on their party high command. We always take persons on their face value. But now he says; "Being targeted because I'm George, that's why BJP is attacking me." We never mentioned that. I was having respect for him. I hope that he will…

**ಶ್ರೀ ಕೆ.ಅಬ್ದುಲ್‌ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಕ್ಯಾಪ್ಟನ್‌ಗಣೇಶ್ ಬಗ್ಗೆ ಮಾತನಾಡಲಿ, ಅವರು ನಮ್ಮ ಪಕ್ಷದ ಬಗ್ಗೆ ಚಿಂತನೆ ಮಾಡುವಅವಶ್ಯಕತೆಇಲ್ಲ. ಅವರ ಪಕ್ಷದ ಬಗ್ಗೆ ಚಿಂತೆ ಮಾಡಿಕೊಳ್ಳಲಿ.

**(ಗೊಂದಲ)**

**ಶ್ರೀ ಕೆ.ಅಬ್ದುಲ್‌ಜಬ್ಬಾರ್:–**ಅವರು ಏಕೆ ರಾಮಲಿಂಗಾರೆಡ್ಡಿಯವರ ಬಗ್ಗೆ ಮಾತನಾಡುತ್ತಿದ್ದಾರೆ, ನಿಮ್ಮ ಪಕ್ಷದ ಬಗ್ಗೆ ಬೇಕಾದರೆ ಮಾತನಾಡಿಕೊಳ್ಳಿ. ಮಾನ್ಯಈಶ್ವರಪ್ಪನವರದು, ಮಾನ್ಯಯಡಿಯೂರಪ್ಪನವರದು ನೋಡಿಕೊಳ್ಳಲಿ.ನಮ್ಮ ಪಕ್ಷದ ಬಗ್ಗೆ ಏಕೆ ಮಾತನಾಡುತ್ತಾರೆ?ನೀವು ನಮ್ಮಚಿಂತೆ ಮಾಡಬೇಡಿ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಉಪ ಸಭಾಪತಿಯವರು:–**ಕುಳಿತುಕೊಳ್ಳಿ.

**ಶ್ರೀ ಲಹರ್ ಸಿಂಗ್ ಸಿರೋಯಾ :–** ನಾವು ಆಡಳಿತ ಪಕ್ಷದ ಬಗ್ಗೆಯೂ ಸಹ ಚಿಂತೆ ಮಾಡಬೇಕು. ಏಕೆಂದರೆ 6 ಕೋಟಿಜನರ ಭವಿಷ್ಯ ನಿಮ್ಮಕೈಯಲ್ಲಿದೆ.ಆದುದರಿಂದ ನೀವು ಸರಿಯಾಗಿ ನಡೆದುಕೊಳ್ಳಬೇಕು.

**ಶ್ರೀ ಎಂ.ಆರ್.ಸೀತಾರಾಂ:–** ಮಾನ್ಯ ಸಭಾಪತಿಯವರೇ, ಈ ಒಂದು ಪ್ರಕರಣಕ್ಕೆ ಸೀಮಿತವಾಗುವುದು ಒಳ್ಳೆಯದು ಎಂದುಕಾಣಿಸುತ್ತದೆ.

**ಶ್ರೀ ಲಹರ್ ಸಿಂಗ್ ಸಿರೋಯಾ :–** ಬೇರೆ ಸಮಯದಲ್ಲಿ ಅವಕಾಶ ಸಿಗುವುದಿಲ್ಲ. I am talking only the related and relevant things. 6ಕೋಟಿ ಜನರ ಭವಿಷ್ಯ ಅವರ ಕೈಯಲ್ಲಿ ಇದೆ. ಅವರು ಇನ್ನು ಎರಡು ವರ್ಷ ಇರುತ್ತಾರೆ. ಇನ್ನು ಎರಡು ವರ್ಷ ಅವರು ಇರುವವರೆಗೆ ಜನರನ್ನು ಸರಿಯಾಗಿ ನೋಡಿಕೊಳ್ಳಬೇಕು ಎನ್ನುವುದು ನನ್ನ ಭಾವನೆ. ಅದಕ್ಕಾಗಿ ನಾನು ಮಾತನಾಡಬೇಕಾಗುತ್ತದೆ. ಆ ರೀತಿ ಆಪಾದನೆ ಮಾಡದೆ, even today we respect the minorities. The Hon'ble Minister should not hide behind this religious sentiments and he should not use such criminal methods. ನಾನು ಮತ್ತೆ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಅವರನ್ನು ಆದಷ್ಟು ಬೇಗ ಮಂತ್ರಿ ಸ್ಥಾನದಿಂದ ಕೈಬಿಡಿ. ನಾವು ಬೇರೆ ವಿಷಯಗಳ ಬಗ್ಗೆ ಮಾತನಾಡುವುದು ಬೇಕಾದಷ್ಟು ಇದೆ. Yesterday our Hon'ble Energy Minister was here and with the pain he said that our State is not coming forward with the projects. ಬೇಕಾದಷ್ಟು ಸಂಗತಿಗಳ ಬಗ್ಗೆ ಚರ್ಚೆ ಮಾಡುವುದು ಇದೆ. ಶಿಕ್ಷಣದ ಬಗ್ಗೆ, ಸರ್ಕಾರಿ ಶಾಲೆಗಳ ಪರಿಸ್ಥಿತಿ ಏನು ಇದೆ ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಅವರಿಂದ ರಾಜೀನಾಮೆ ಕೊಡಿಸಿದರೆ ನಾವು ಮುಂದಕ್ಕೆ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲು ಅವಕಾಶವಾಗುತ್ತದೆ. ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ, 6ಕೋಟಿ ಜನರ ಭಾವನೆಗಳನ್ನು ಅರ್ಥಮಾಡಿಕೊಳ್ಳಿ. Without any further delay ask your Minister to resign. Minority issue ತೆಗೆದುಕೊಂಡು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ಅವರೆ ರಾಜೀನಾಮೆ ಕೊಡಬೇಕಾಗುತ್ತದೆ. ಕಾಂಗ್ರೆಸ್‌ನವರು ಮಾನ್ಯ ಮುಖ್ಯಮಂತ್ರಿಗಳನ್ನೆ ಕಡೆಗಣಿಸುತ್ತಾರೆ ಎನ್ನುವ ಭಯ ಇದೆ. ಇದರಲ್ಲಿ ಏನೊ ಷಡ್ಯಂತರ ಇದೆ ಎಂದು ನಮಗೆ ಕಾಣುತ್ತಿದೆ. He should have resigned voluntarily. ನಿನ್ನೆ ಹೇಳಿದ್ದಾರೆ, if Chief Minister says I will resign. He should save the Congress Party by giving his resignation. ಕಾಂಗ್ರೆಸ್ ಪಕ್ಷದವರ ಒಳ್ಳೆಯದಕ್ಕಾಗಿಯೇ ನಾವು ಹೇಳುತ್ತಿದ್ದೆವೆ.

**ಉಪಸಭಾಪತಿಯವರು:–** ಲಹರ್ ಸಿಂಗ್ ರವರೆ, ತಾವು conclude ಮಾಡಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಜಾರ್ಜ್‌ರವರು ರಾಜೀನಾಮೆ ಕೊಟ್ಟರೆ ನಾವು conclude ಮಾಡಿದ ಹಾಗೆಯೇ. ಮಾನ್ಯ ಮಾಜಿ ಸ್ಪೀಕರ್‌ರವರು ಇಲ್ಲಿ ಇದ್ದಾರೆ. ಸರ್ಕಾರ ಏನೇನು ಮಾಡುತ್ತಿದೆ ಅವರಿಗೆ ಗೊತ್ತಿದೆ.

**ಶ್ರೀ ಐವಾನ್ ಡಿ'ಸೋಜಾ:–** ನಿನ್ನೆ ಮಾನ್ಯ ಕೇಂದ್ರ ಸಚಿವರಾದ ಸಿದ್ದೇಶ್ವರವರು ಬರ್ತಡೆ ಆಚರಣೆ ಮಾಡಿಕೊಳ್ಳಲು ಒಂದು ವಾರದ ಮಟ್ಟಿಗೆ ರಾಜೀನಾಮೆ ಕೊಟ್ಟ ಹಾಗೆ ಅಲ್ಲ ರಾಜೀನಾಮೆ ಕೊಡುವುದು.

**ಶ್ರೀ ಲಹರ್ ಸಿಂಗ್ ಸಿರೋಯಾ:–ಮಾನ್ಯ ಸಭಾಪತಿಗಳೆ,** ಮಾನ್ಯ ಕಾಗೋಡ ತಿಮ್ಮಪ್ಪನವರಿಗೆ ಸರ್ಕಾರದ ಪೂರ್ತಿ ನಡವಳಿಕೆ ಗೊತ್ತಿದೆ. ಅವರು ಸಾಕಷ್ಟು ಸಾರಿ ಸರ್ಕಾರಕ್ಕೆ worn ಮಾಡಿದ್ದಾರೆ. ಆದರೂ ಸರ್ಕಾರ ಸುಧಾರಣೆ ಆಗುವ ಯಾವ ಲಕ್ಷಣಗಳು ಕಾಣುತ್ತಿಲ್ಲ. ಸಚಿವ ಸಂಪುಟ ಪುನರ್ ರಚನೆಯಾಗಿರುವುದರಿಂದ ಇದು ಒಳ್ಳೆಯ ಸಚಿವ ಸಂಪುಟ ಎಂದು ನಮಗೆ ಅನ್ನಿಸಿತು, ಇನ್ನು ಮುಂದೆ ಒಳ್ಳೆಯದಾಗುತ್ತದೆ ಎಂದು ಜನರಿಗೂ ಅನ್ನಿಸಿತು. ಆದರೆ ಇವತ್ತು ಈ ಪರಿಸ್ಥಿತಿ ಸರ್ಕಾರಕ್ಕೆ ಬಂದಿದೆ. ಮಾನ್ಯ ಕಾಗೋಡ ತಿಮ್ಮಪ್ಪನವರು ಸರ್ಕಾರಕ್ಕೆ guide ಮಾಡಬೇಕು. ಈ ಪ್ರಸಂಗದಲ್ಲಿ ego ಬಿಟ್ಟು ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಕೆ.ಬಿ.ಶಾಣಪ್ಪ:–** ಶ್ರೀ ಕಾಗೋಡ ತಿಮ್ಮಪ್ಪನವರು ಮುಖ್ಯಮಂತ್ರಿಗಳಾಗಲಿ ಎಂದು ಹೇಳಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಅವರು ಮುಖ್ಯಮಂತ್ರಿಗಳಾದರೆ ನಮಗೂ ಸಂತೋಷ. ಆದರೆ ಯಾರು ಏನು ಆಗುತ್ತಾರೆ ಅದು ಅವರಿಗೆ ಬಿಟ್ಟ ವಿಚಾರ. ನಿನ್ನೆ ಮಾನು ರಮಾನಾಥ್ ರೈರವರ ಜಗಳ ನೋಡಿದೆ, ಇವತ್ತು ನಮ್ಮಲ್ಲಿಯು ಆ ರೀತಿ ಜಗಳ ಮಾಡುತ್ತಾರೆನೋ ಅಂದುಕೊಂಡಿದೆ. ನಮ್ಮಲ್ಲಿ ಬೇಕಾದಷ್ಟು ಸಮಸ್ಯೆಗಳು ಇವೆ, ಅಭಿವೃದ್ಧಿ ಬಗ್ಗೆ ಚರ್ಚೆ ಮಾಡೋಣ, ಕೈಗಾರಿಕೆ ಇಲಾಖೆಯಲ್ಲಿ ಏನು ಕೆಲಸವಾಗುತ್ತಿಲ್ಲ.

**ಉಪಸಭಾಪತಿಯವರು:–** ಈಗ ಇರುವ ವಿಚಾರದ ಬಗ್ಗೆ ಮಾತನಾಡಿ ಲಹರ್‌ಸಿಂಗ್‌ರವರೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಗಳೆ, ಅವರು ರಾಜೀನಾಮೆ ಕೊಟ್ಟಮೇಲೆಯೇ ನಾವು ಬೇರೆ ವಿಚಾರವನ್ನು ಮಾತನಾಡುವುದು. ಮಾನ್ಯ ಕಾಗೋಡ ತಿಮ್ಮಪ್ಪನವರೆ ನಿಮ್ಮವರಿಗೆ ಸ್ವಲ್ಪ ಬುದ್ಧಿವಾದ ಹೇಳಿ ಎಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ. ಮಾನ್ಯ ಎಸ್.ಎಂ.ಕೃಷ್ಣರವರ ಮಾತು ಕೇಳಿ, ಮಾನ್ಯ ಜನಾರ್ಧನ ಪೂಜಾರಿಯವರ ಮಾತಿಗೆ ಗೌರವ ಕೊಟ್ಟು ಮಾನ್ಯ ಜಾರ್ಜ್‌ರವರಿಂದ ಬೇಗ ರಾಜೀನಾಮೆಯನ್ನು ತೆಗೆದುಕೊಂಡರೆ ನಾವು ಬೇರೆ ವಿಷಯಗಳ ಬಗ್ಗೆ ಮಾತನಾಡಲು ಅವಕಾಶವಾಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ, ಧನ್ಯವಾದಗಳು.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಗಳೆ, ಈಗಾಗಲೇ ಬಹಳ ಜನ ನನ್ನ ಸ್ನೇಹಿತರು ಈ ವಿಚಾರದ ಮೇಲೆ ಮಾತನಾಡಿದ್ದಾರೆ. ನೋಟಿಸಿನಲ್ಲಿ ನಾಲ್ಕಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದೇ ವಿಚಾರದ ಬಗ್ಗೆ ಸಿಮೀತರಾಗಿದ್ದಾರೆ ಎಂದು ಇವರ ಮಾತಿನ ದಾಟಿ ನೋಡಿದ್ದರೆ ಗೊತ್ತಾಗುತ್ತದೆ. ನೋಟಿಸಿನಲ್ಲಿ ಪ್ರಸ್ತಾಪ ಮಾಡಿರುವಂತಹ ಡಿವೈಎಸ್‌ಪಿ ಕಲ್ಲಪ್ಪ ಹಂಡಿಬಾಗ್‌ರವರ ಬಗ್ಗೆ ಹೆಚ್ಚು ಒತ್ತನ್ನು ಕೊಟ್ಟ ಹಾಗೆ ಕಾಣುತ್ತಿಲ್ಲ. ಮತ್ತು ಡಿಸಿ ಶಿಖಾರವರ ಬಗ್ಗೆ ನೋಟಿಸ್‌ನಲ್ಲಿ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯವಸ್ಥೆಯು ಉತ್ತಮ ರೀತಿಯಲ್ಲಿ ಸಾಗಬೇಕು ಎನ್ನುವುದಾದ್ದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ನಾಲ್ಕು ಅಂಗಗಳಾದ, four pillars of democracy Legislature, Executive, Judiciary and Media ನಿಷ್ಪಕ್ಷಪಾತವಾಗಿ, ನಿರ್ಭೀತಿಯಿಂದ ಕೆಲಸ ಮಾಡುವಂತಹ ಸಂದರ್ಭ ಇದ್ದಾಗ ಮಾತ್ರ ಅರ್ಥಪೂರ್ಣವಾದ ವ್ಯವಸ್ಥೆಯನ್ನು ಕಾಣಲು ಸಾಧ್ಯ. ಆದರೆ ಇದರ ಅರ್ಥ ನಮಗೆ ಯಾವುದೆ restrictions ಇಲ್ಲ ಎಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪು. ಉದಾಹರಣೆಗೆ ಸಂವಿಧಾನದ Article 19 ಕೆಳಗೆ ಅಭಿವ್ಯಕ್ತಿ ಸ್ವಾತಂತ್ರ ಇದೆ ಎಂದು ನಾವು ಏನು ಬೇಕಾದರೂ ಮಾತನಾಡುವ ಸಾಧ್ಯತೆ ಇಲ್ಲಾ. ಅದೇ ರೀತಿ ಅಧಿಕಾರಿಗಳಿಗೆ ಅವಕಾಶವಿದೆ ಎಂದು, ರಾಜಕಾರಣಿಗಳಿಗೆ ಅಧಿಕಾರವಿದೆ ಎಂದು, ಮಾಧ್ಯಮದವರಿಗೆ ನಮಗೆ ಹಕ್ಕು ಇದೆ ಎಂದು ಕಾನೂನುಬಾಹಿರವಾಗಿ ನಾವು ಯಾರು ನಡೆದುಕೊಳ್ಳಲು ಸಾಧ್ಯತೆ ಇಲ್ಲ. ಈಗ ನನಗೆ ಅನ್ನಿಸುತ್ತಿರುವುದು entire discussion on Ganapati. ಗಣಪತಿಯವರ ವಿಚಾರದಲ್ಲಿ ಅವರ ಚರಿತ್ರೆ ಬಗ್ಗೆಯಾಗಲಿ, ಅವರ ಕಾರ್ಯವೈಖರಿ ಬಗ್ಗೆ ನಮಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಅವರು ಉತ್ತಮವಾದ ಅಧಿಕಾರಿ. ಅವರು ಸುಮಾರು 20–22 ವರ್ಷಗಳಿಂದ ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಆದರೆ ಬಹಳ ನೋವಿನಿಂದ ಹೇಳುತ್ತೇವೆ ಅವರ

ಜೀವನ ಈ ರೀತಿ un natural end ಆಗಬಾರದಾಗಿತ್ತು. ಅವರ ಎಲ್ಲ ವಿಚಾರಗಳನ್ನು ನಾನು ಹೇಳಲು ಹೋಗುವುದಿಲ್ಲ. ಅವರ ಜನ್ಮ ದಿನಾಂಕ: 29/3/1965 ಅವರು ಕೆಲಸಕ್ಕೆ ನೇಮಕ ಹೊಂದಿರುವುದು 26–8–1994ರಲ್ಲಿ ಅಲ್ಲಿಂದ ಇಲ್ಲಿಯವರೆಗೆ ಅವರು suspend ಆಗಿರುವುದು ಕೇವಲ 28 ದಿನಗಳು. 10–3–2014ರಿಂದ 8–4–2014ರವರೆಗೆ ಅವರು suspend ಆಗಿದ್ದಾರೆ. ಅವರು suspend ಆಗಲು ಕಾರಣ ಮಡಿವಾಳ ಪೊಲೀಸ್ ಸ್ಟೇಶನ್‌ನಲ್ಲಿ ಒಂದು ಕೋಟಿ ಐವತ್ತಾರು ಲಕ್ಷ ರೂ.ಗಳು ಸೀಸ್ ಆದ ಸಂದರ್ಭದಲ್ಲಿ ಅದರಲ್ಲಿ 70 ಲಕ್ಷ ರೂ.ಗಳನ್ನು ಸಂಬಂಧಪಟ್ಟವರಿಗೆ ಕೊಟ್ಟಿದ್ದಾರೆ, ಯಾರದೊ ಮನೆಯಲ್ಲಿ ಹಣ ಇತ್ತು, ಆ ಹಿನ್ನಲೆಯಲ್ಲಿ ವಿವರಣೆ ಕೊಡಲಿಲ್ಲ ಎನ್ನುವ ಕಾರಣಕ್ಕೆ suspend ಆಗಿದ್ದರು. ಯಾರೋ ಮನೆಯಲ್ಲಿ ಅದು ಇತ್ತು ಮತ್ತು ಆ ಹಿನ್ನೆಲೆಯಲ್ಲಿ ವಿವರಣೆ ಕೊಟ್ಟಿಲ್ಲ ಎಂದು ಅಮಾನತ್ತು ಮಾಡಿರುವ ವಿಚಾರ ಬೇರೆ. ಇದರ ಜೊತೆಗೆ ಅವರ ಮೇಲೆ ಒಬ್ಬರಿಗೆ ಏಕೆ ವೈರತ್ವ ಇತ್ತು ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ. ಚರ್ಚ್ ದಾಳಿ ನಡೆದ ಸಂದರ್ಭದಲ್ಲಿ ಅವರು ಮಂಗಳೂರಿನಲ್ಲಿ ಅಧಿಕಾರಿಯಾಗಿದ್ದರು. ನಾನೂ 2008ರಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದು, ಚರ್ಚ್ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಮಂಗಳೂರಿಗೆ ಭೇಟಿ ನೀಡಿದ್ದೆನು. ಅದು ಏನೇ ಇದ್ದರೂ, ನಾನು ಜಸ್ಟೀಸ್ ಸೋಮಶೇಖರ್‌ರವರ findings ಬಗ್ಗೆ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವಾಕ್ಯವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ,

> ***"The Commission is totally not convinced about a procedure of treating such cases as Miscellaneous Petitions by Police and feels that it is a flagrant violation of established law."***

ಎಂಬುದನ್ನು ಹೇಳಬಯಸುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಜಸ್ಟೀಸ್ ಸೋಮಶೇಖರ್ ವರದಿಯನ್ನು ಸರ್ಕಾರವು ಒಪ್ಪಿಕೊಂಡಿದ್ದರೆ ಮಾನ್ಯ ಸದಸ್ಯರು ಕೋಟ್ ಮಾಡಬಹುದು.

**ಶ್ರೀ ಶರಣಪ್ಪ ಎನ್ ಮಟ್ಟೂರ್**:– ಅಬ್‌ಸರ್‌ವೇಷನ್ ಹೇಳುತ್ತಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ**:– ಮಾನ್ಯ ರಾಮಚಂದ್ರಗೌಡರು ಒಂದು ಸಮಂಜಸವಾದ ಪ್ರಶ್ನೆಯನ್ನು ಕೇಳಿದ್ದಾರೆ. ಆ ಕಮೀಷನ್ ಅನ್ನು ಯಾವ ಸಮಯದಲ್ಲಿ ನೇಮಕ ಮಾಡಿದರು ಮತ್ತು ಯಾವ ಸಮಯದಲ್ಲಿ ವರದಿ ಬಂದಿದೆ ಎಂದು ಹೇಳಬೇಕಾದರೆ ಆ ಸಮಯದಲ್ಲಿ ಮಾನ್ಯ ರಾಮಚಂದ್ರಗೌಡರು ಮಂತ್ರಿಗಳಾಗಿದ್ದರು. ಬಹುಶ: ನನಗಿಂತ ಹೆಚ್ಚು ಅವರು ಬೆಳಕು ಚೆಲ್ಲಬಹುದು ಎಂದು ನಾನು ಭಾವಿಸುತ್ತೇನೆ.

**ಶ್ರೀ ರಾಮಚಂದ್ರಗೌಡ**:– ನನಗೆ ನೆನಪಿಲ್ಲ, ಅದಕ್ಕಾಗಿ ಕೇಳಿದೆ.

**ಶ್ರೀ ವಿ.ಎಸ್. ಉಗ್ರಪ್ಪ**:– ಎರಡನೆಯದಾಗಿ, rightly or wrongly we have already discussed on this Justice B.K. Somasekhara Commission report. ಆ ಕಡೆ ಮತ್ತು ಈ ಕಡೆ ಮಾತನಾಡಿದ ಅನೇಕ ಸದಸ್ಯರು ಜಸ್ಟೀಸ್ ಸೋಮಶೇಖರ್ ರವರ ವರದಿ ಬಗ್ಗೆ ಚರ್ಚೆ ಮಾಡಿರುವುದರಿಂದ ಅದರ ಬಗ್ಗೆ ಹೆಚ್ಚು ಎಳೆಯುವುದಕ್ಕೆ ಹೋಗುವುದಿಲ್ಲ. ಈ ಎರಡೂ ವಿಚಾರಗಳನ್ನು ಬಿಟ್ಟರೆ ಗಣಪತಿಯವರ entire career was very very clean, clear and he was a very good officer ಎನ್ನುವ ಮಾಹಿತಿ ಇದೆ. ಆದರೆ ನನಗೆ ಅರ್ಥವಾಗದೇ ಇರುವುದು ಏನೆಂದರೆ, ಕೊಡಗಿನವರು ಎಂದಾಗ ಅವರು ಅತ್ಯಂತ ಧೈರ್ಯಶಾಲಿಗಳು ಮತ್ತು ಸಮಚಿತ್ತತೆಯನ್ನು ಕಾಪಾಡಿಕೊಳ್ಳುವವರಾಗಿದ್ದಾರೆ. ಜನರಲ್ ತಿಮ್ಮಯ್ಯನವರಿಂದ ಹಿಡಿದು ಕಾರಿಯಪ್ಪನವರಂತಹ ಉತ್ತಮ ನಾಯಕತ್ವ ಗುಣ ಹೊಂದಿರುವ ನಾಡು ಅಥವಾ ಸಂತತಿಯಿಂದ ಗಣಪತಿಯವರು ಬಂದವರಾಗಿದ್ದಾರೆ. ಅವರು ನ್ಯಾಷನಲ್ ವಾಲಿಬಾಲ್ ಆಟಗಾರರಾಗಿ, ಪೊಲೀಸ್ ಶಿಸ್ತಿಗೆ ಒಳಪಟ್ಟವರು ಈ ರೀತಿ ಅಕಾಲಿಕ ಮರಣಕ್ಕೆ ತುತ್ತಾಗುತ್ತಾರೆ ಎಂದು ನನಗೆ ಈಗಲೂ ನಂಬಲೂ ಸಾಧ್ಯವಿಲ್ಲ. ಅವರು ಯಾವ ಕಾರಣಕ್ಕೆ ಆ ರೀತಿ ಆದರು ಎಂದು ಊಹಿಸಲು ಆಗುತ್ತಿಲ್ಲ. ಕೆಲವರ ಪ್ರಚೋದನೆಯಿಂದ ಆ ರೀತಿ ಮಾಡಿಕೊಂಡರು ಎಂದು

ಒಬ್ಬರು ಹೇಳುತ್ತಾರೆ. ಇನ್ನೂ ಕೆಲವರು ಅವರಿಗೆ ಮಾನಸಿಕ ಸ್ಥಿಮಿತತೆ ಇರಲಿಲ್ಲ, rather he was under depression ಎನ್ನುವಂತಹ ರೀತಿಯಲ್ಲಿಯೂ ಹೇಳುತ್ತಾರೆ. ಬಹುಶ: ನಾರ್ಮಲ್ಲಾಗಿದ್ದು, ಅವರು ಆತ್ಮಹತ್ಯೆ ಮಾಡಿಕೊಂಡಿದ್ದರೆ Section 306 attract ಆಗುತ್ತದೆ of Indian Penal Code. ಸೆಕ್ಷನ್ 306ರಲ್ಲಿ ಯಾರಾದರೂ ಪ್ರಚೋಚನೆ ಮಾಡಿದ್ದರೆ ಅಂತಹವರಿಗೆ ಶಿಕ್ಷೆ ಏನೆಂದರೆ, it is a cognizable offence, non-bailable offence, non compoundable offence, triable by Court of Session. ಗರಿಷ್ಟ 10 ವರ್ಷಗಳು ಶಿಕ್ಷೆ ಆಗುತ್ತದೆ. ಮಾನಸಿಕವಾಗಿ ನೊಂದಿರುವವರು ಅಂದರೆ insane person ಎಂದು ಏನು ಹೇಳುತ್ತೇವೆ ಅಥವಾ 18 ವರ್ಷದ ಕೆಳಗೆ ಇರುವ ಮೈನರ್ ಇರುವವರು ಅಥವಾ intoxicated stage ನಲ್ಲಿ ಇರುವಂತಹವರಿಗೆ ಯಾರಾದರೂ ಪ್ರಚೋದನೆ ಮಾಡಿ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ನಾವೆಲ್ಲಾ ಅರ್ಥಮಾಡಿಕೊಳ್ಳಬೇಕಾಗುತ್ತದೆ that is the more severe punishment than Section 306. So, that offence will attract the provisions of Section 305 of IPC which is also a cognizable offence, non-bailable offence, non compoundable offence, triable by Court of Session. EzÀPÉÌ punishment death, life imprisonment or more than 10 years or fine or both ಎಂದು ಇದೆ. ಬಹುಶ: ಇಲ್ಲಿಗೆ ಇದನ್ನು ಬಿಡಲು ಬಯಸುತ್ತೇನೆ.

**ಶ್ರೀ ರಾಮಚಂದ್ರಗೌಡ**:– ಪ್ರಚೋದನೆ ಬೇರೆ ಮತ್ತು ಕಿರುಕುಳವೇ ಬೇರೆ. ಆದರೆ ಇಲ್ಲಿ ಕಿರುಕುಳ ಆಗಿದೆ. ಪ್ರಚೋಚನೆ ಎಂದರೆ ' ನೋಡಯ್ಯ, ಇದನ್ನು ಮಾಡು, ನಿನಗೆ ಇದು ಸಿಗುತ್ತದೆ, ಅದು ಸಿಕ್ಕಿಬಿಡುತ್ತದೆ' ಎಂದು ಪ್ರಚೋದನೆ ಮಾಡುವುದು.

**ಶ್ರೀ ಬಿ.ರಮಾನಾಥ್ ರೈ**:– ಕಿರುಕುಳ ಎಂದರೆ ಯಾರು ಕೊಟ್ಟಿದ್ದಾರೆ?

**ಶ್ರೀ ರಾಮಚಂದ್ರಗೌಡ**:– ಇದರ ಬಗ್ಗೆ ಚರ್ಚೆ ಮಾಡಿ. ನಾನು ಪ್ರಚೋದನೆ ಬೇರೆ ಮತ್ತು ಕಿರುಕುಳ ಬೇರೆ ಎಂದು ಹೇಳುತ್ತಿದ್ದೇನೆ. ಕಿರುಕುಳ ಆಗಿದೆ ಎಂದು ಅವರುಗಳ ಹೆಸರುಗಳನ್ನು ಹೇಳಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ**:– ನಾನು ಸುಪ್ರೀಂಕೋರ್ಟ್ ತೀರ್ಪುಗಳನ್ನು ಒಳಗೊಂಡಂತೆ ಎಲ್ಲದ್ದಕ್ಕೂ ತಯಾರಾಗಿ ಬಂದಿದ್ದೇನೆ.

**ಶ್ರೀ ರಾಮಚಂದ್ರಗೌಡ**:– ಅವರು ತಯಾರಾಗಿ ಬಂದಿದ್ದಾರೆ ಎಂದು ನಾವು ಸುಮ್ಮನೆ ಕುಳಿತಿದ್ದೇವೆ.

**ಶ್ರೀ ವಿ.ಎಸ್. ಉಗ್ರಪ್ಪ**:– ಮಾನ್ಯ ಸಭಾಪತಿಯವರೇ, ಪ್ರಶ್ನೆ ಏನೆಂದರೆ, ಅವರ ಮಾನಸಿಕ ಸ್ಥಿಮಿತ ಇತ್ತೋ ಇಲ್ಲವೋ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಅಧಿಕಾರಿಯಾಗಿ ಇಲಾಖೆಯಲ್ಲಿ ಮುಂದುವರೆದಿದ್ದರು ಎಂದಾಗ ಮಾನಸಿಕ ಸ್ಥಿಮಿತತೆ ಇತ್ತು ಎಂಬುದು ಸ್ಪಷ್ಟ ಎಂದು ಭಾವಿಸಿಕೊಳ್ಳುತ್ತೇನೆ. ಯಾರು ಏನೇ ಹೇಳಿದರೂ, periodically ಅವರ ಇಲಾಖೆಯಲ್ಲಿ ಟೆಸ್ಟ್ ಮಾಡುತ್ತಾರೆ. ಬಹುಶ: ಆ ರೀತಿ ಇರುವ ಹಿನ್ನೆಲೆಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯ ವಿಶ್ಲೇಷಣೆ ಕೊಡುವುದಕ್ಕೆ ಪ್ರಯತ್ನ ಮಾಡಿದರೂ ultimately law of the land ಏನು ಹೇಳುತ್ತದೆ ಎಂಬುದನ್ನು ನೋಡಬೇಕಾಗುತ್ತದೆ. ಇಲ್ಲಿ ಕೆಲವರು ವಾದ ಮಾಡಿದರು. ಒಂದು ಕಡೆ ಕಾನೂನು ಅಥವಾ ಸದನದಲ್ಲಿ ಏನು ನಡೆಯುತ್ತದೆ ಎನ್ನುವುದು ಬೇರೆ ವಿಚಾರ. ಜನಾಭಿಪ್ರಾಯವೂ ಇನ್ನೊಂದು ರೀತಿ ಇದೆ ಎಂದು ಹೇಳಿದರು. ಆದರೆ ನಾನು ಹೇಳುವುದೇನೆಂದರೆ ಯಾವುದೇ ಒಬ್ಬ ಮನುಷ್ಯನ ಬದುಕಿನ ಅಥವಾ ಪ್ರಾಣದ ವಿಚಾರದ ಬಗ್ಗೆ ಮಾತನಾಡುವಾಗ ನಮಗೆ ನಾಳೆ ಅಧಿಕಾರ ಇರುತ್ತದೋ ಅಥವಾ ಹೋಗುತ್ತದೋ ಎಂಬುದು ಮುಖ್ಯ ಅಲ್ಲ. ನಾವು ಸಂವಿಧಾನವನ್ನು ಎತ್ತಿ ಹಿಡಿಯುತ್ತೇವೆ ಎಂದು ವಾಗ್ದಾನವನ್ನು ಮಾಡಿದ್ದೇವೆ. ಸಂವಿಧಾನದ ಆರ್ಟಿಕಲ್ 21ರ ಪ್ರಕಾರ;

*"21. Protection of life and personal liberty No person shall be deprived of his life or personal liberty except according to procedure established by law."*

ನಾವು ಈ ಸಂವಿಧಾನವನ್ನು ಎತ್ತಿ ಹಿಡಿಯುತ್ತೇವೆ ಅಂತ ಹೇಳಿ ವಾಗ್ದಾನವನ್ನು ಮಾಡಿದ್ದೇವೆ ಮಾನ್ಯ ಅಧ್ಯಕ್ಷರೆ, ಸಂವಿಧಾನದ ಆರ್ಟಿಕಲ್ 21 ಪ್ರಕಾರ ಪ್ರೊಟೆಕ್ಷನ್ ಆಫ್ ಅಂಡ್ ಲೈಫ್ ಪರ್ಸನಲ್ ಲಿಬರ್ಟಿ. ನೋ ಪರ್ಸನಲ್ -------- ಹಾಗಾಗಿ ---------- ಸ್ಟೇಜ್ ಇದರಲ್ಲಿ ಲಾಭ ನಷ್ಟದ ಬಗ್ಗೆ ಚಿಂತನೆ ಮಾಡುವುದು ಅಷ್ಟೋಂದು ಸಮಂಜಸ ಅಲ್ಲ. ======== ಹಾಗಾಗಿ ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ನಾವು ಇವತ್ತು ಚಿಂತನೆ ಮಾಡಬೇಕಾಗಿರತಕ್ಕಂತದ್ದು ನಮ್ಮ ರಾಜ್ಯದ ಪ್ರತಿಯೊಬ್ಬ ಪ್ರಜೆಯ ಲಿಬರ್ಟಿ ಮತ್ತು ಲೈಫ್‌ನ್ನು ಯಾವ ರೀತಿ ಪ್ರೊಟೆಕ್ಷನ್ ಮಾಡುತ್ತಿದ್ದೇವೆ. ಸಂವಿಧಾನದ ರೀತಿಯ ನಮ್ಮ ನಡವಳಿಕೆಗಳಿಗಳು ಇದೆಯ ಇಲ್ಲವ ಎನ್ನುವ ಬಗ್ಗೆ ಚರ್ಚೆ ಆಗಬೇಕು. ಅದರ ಅರ್ಥ ನಮ್ಮ **ಮೀಮ್‌ಸನ್ ಪಾನ್ಸ್** ರೀತಿಯಲ್ಲಿ ಯಾರೋ ಒಬ್ಬರ ಮೇಲೆ ನೋಡಿರಿ ಅವರು ಈ ರೀತಿ ಮಾಡಿದ್ದಾರೆ ಅದಕೋಸ್ಕರ ಇವರು ರಾಜೀನಾಮೆ ಕೂಡಬೇಕೆಂದು ಹೇಳುವುದು ಅಷ್ಟೂಂದು ಸಮಂಜಸವಲ್ಲ. ನಮ್ಮ ಮುಂದೆ ಈ ರೀತಿ ========== ಬಂದಾಗ ಎರಡು ತರಹದ ರೀತಿಯ ==========ಜನರಿದ್ದಾರೆ. ಒಂದು ಕಡೆ ಲಾಲ್ ಬಹದ್ದೂರ್ ಶಾಸ್ತ್ರಿಯವರ ರೈಲ್ವೆ ======== ಬಂದಂತಹ ಸಮಯದಲ್ಲಿ ರಾಜೀನಾಮೆ ಕೂಟ್ಟರು.

ಸನ್ಮಾನ್ಯ ಸಭಾಪತಿಯವರೇ, ಅದೇ ರೀತಿಯಲ್ಲಿ ಆಂಧ್ರಪ್ರದೇಶದ ಹೈದ್ರಾಬಾದ್ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲನ ಆತ್ಮಹತ್ಯೆ ಪ್ರಕರಣ ಮತ್ತು ಉಡುಪಿಯ ಪದ್ಮಪ್ರಿಯಾರವರ ಆತ್ಮಹತ್ಯೆ ಪ್ರಕರಣಗಳಲ್ಲಿ proceedings were initiated under Section 174, Cr.P.C., rather it is a mandatory.

**ಶ್ರೀ ರಾಮಚಂದ್ರಗೌಡಃ–** ಸನ್ಮಾನ್ಯ ಸಭಾಪತಿಯವರೇ, ಯಾರಾದರು ಮಾನ್ಯ ಜಾರ್ಜ್‌ರವರ ಮೇಲೆ ಪೊಲೀಸ್‌ಠಾಣೆಯಲ್ಲಿ ದೂರನ್ನು ನೀಡಿ, 'ಇವರು ಅಪಾದಿತರು, ಇವರನ್ನು ಅರೆಸ್ಟ್ ಮಾಡಿ ಇವರಿಗೆ ಶಿಕ್ಷೆ ಕೊಡಬೇಕು' ಎಂದು ಕೋರ್ಟಿಗೆ ಹೋದಾಗ ಅವರು ಹೇಳುತ್ತಿರುವ ಎಲ್ಲ ಕಾನೂನುಗಳು ಅನ್ವಯಿಸುತ್ತವೆ. ಆದರೆ, ನಮ್ಮ ಸದನದ ಮಿತಿಯಲ್ಲಿ ಹೇಳುವುದಾದರೆ, ಇವರು ಇಷ್ಟು ಜನರು ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆ ತೆಗೆದುಕೊಂಡು ಮಾನ್ಯ ಜಾರ್ಜ್ ಅವರನ್ನೇ ಮುಖ್ಯಮಂತ್ರಿಗಳನ್ನಾಗಿ ಮಾಡಲಿ ಆಗ ಸರಿ ಹೋಗುತ್ತದೆ. That will be alright.

**ಶ್ರೀ ಬಿ.ರಮಾನಾಥ ರೈಃ–** ಸನ್ಮಾನ್ಯ ಸಭಾಪತಿಯವರೇ, ಆಗ ಮಾನ್ಯ ರಾಮಚಂದ್ರೇಗೌಡರನ್ನು ಅವರ ಸಲಹೆಗಾರರನ್ನಾಗಿ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಡಿವೈಎಸ್‌ಪಿ ಗಣಪತಿಯವರು 2008 ರಿಂದ 2016ರವರೆಗೆ ಎಲ್ಲಿಯೂ ಸಹ ನನಗೆ ಇಂತಹವರು ಕಿರುಕುಳ ಕೊಡುತ್ತಿದ್ದಾರೆಂದು ದೂರನ್ನು ನೀಡಿಲ್ಲ. ಮಾಧ್ಯಮದ ಎದುರು ಬಂದು ಮಾತನಾಡುವ ಸಂದರ್ಭದಲ್ಲಿ ....

**ಶ್ರೀ ರಾಮಚಂದ್ರಗೌಡಃ–** ಸನ್ಮಾನ್ಯ ಸಭಾಪತಿಯವರೇ, circumstantial evidence is more important.

**ಶ್ರೀ ವಿ.ಎಸ್.ಉಗ್ರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಅವರು ಸಾಯುವುದಕ್ಕೂ ಮುನ್ನ ಇವೆಲ್ಲದರ ಬಗ್ಗೆ there was no whispering at all. ಈಗ Dying Declaration ಬಗ್ಗೆ ಹೇಳಬೇಕಾದರೆ, ವಿದ್ಯುನ್ಮಾನ ಮಾಧ್ಯಮಗಳ ಬಗ್ಗೆ ಮತ್ತು ಪತ್ರಿಕಾ ಮಾಧ್ಯಮಗಳ ಬಗ್ಗೆ Section 65(B) of the Indian Evidence Act ಬಗ್ಗೆ ಸಹ ಹೇಳಿದ್ದೇನೆ. ನಾನು ಈ ಮೊದಲೇ ಹೇಳಿದಂತೆ ನಿನ್ನೆ ಸುಪ್ರೀಂ ಕೋರ್ಟಿನಲ್ಲಿ ಆಗಿರುವಂತಹ ಜಡ್ಜ್‌ಮೆಂಟ್ ಬಗ್ಗೆ ಈ ದಿನದ 'Times Of India' ದಲ್ಲಿ ವರದಿಯಾಗಿದೆ. Any judgment rendered by the Hon'ble Supreme Court of India is binding on each and

every citizen of this country. ಅವರು 'cannot rely on the Dying Declaration blindly.' ಎಂದು ಹೇಳುತ್ತಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ತಪ್ಪಾಗಿ ಉಲ್ಲೇಖ ಮಾಡುತ್ತಿದ್ದಾರೆ. ಅವರು ಬೆಳಿಗ್ಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಇದನ್ನೇ ಉಲ್ಲೇಖ ಮಾಡಿ, 'ಕೋರ್ಟ್ ಜಡ್ಜ್‌ಮೆಂಟ್ ಕೊಡುವುದಕ್ಕೂ ಮೊದಲು ಅದನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಹೇಳಿದ್ದರು.

ಸನ್ಮಾನ್ಯ ಸಭಾಪತಿಯವರೇ, Dying Declaration ಜಡ್ಜ್‌ಮೆಂಟ್ ಕೊಡುವುದಕ್ಕೂ ಮೊದಲು ಕೋರ್ಟ್ ಅತ್ಯಂತ ಗಂಭೀರವಾಗಿ ಪರಿಗಣಿಸಬೇಕೆಂದು ಹೇಳಲಾಗಿದೆ. ಅದನ್ನು ತಪ್ಪಾಗಿ ಉಲ್ಲೇಖ ಮಾಡುತ್ತಿದ್ದಾರೆ. ಅರ್ಧ ವಾಕ್ಯವನ್ನು ಮಾತ್ರ ಓದುತ್ತಿದ್ದಾರೆ. ಅದನ್ನು ಪೂರ್ತಿ ಓದಬೇಕಾಗಿ ವಿನಂತಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಿದ್ದ ಸಂದರ್ಭದಲ್ಲಿ ನಾನು ಸುಮ್ಮನೆ ಕುಳಿತು ಆಲಿಸುತ್ತಿದ್ದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಸುಮ್ಮನೆ ಕುಳಿತುಕೊಂಡಿದ್ದರೆ ಅದು ಅವರ ದೊಡ್ಡತನವನ್ನು ತೋರಿಸುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, 2011ರಲ್ಲಿ GANGULA MOHAN REDDY VS. STATE OF ANDHRA PRADESH ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚನ್ಯಾಯಲಯವು ಈ ರೀತಿ ಹೇಳಿದೆ:–

"20. Abetment involves a mental process of instigating a person or intentionally aiding a person in doing of a thing. Without a positive act on the part of the accused to instigate or aid in committing suicide, conviction cannot be sustained."

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೇ, ಆ ಪ್ರಕರಣಗಳು ಮತ್ತು ಸನ್ನಿವೇಶಗಳೇ ಬೇರೆಯಾಗಿವೆ. ಹಿಂದಿನ ಕೇಸ್‌ಗಳನ್ನು ಏಕೆ ಉಲ್ಲೇಖ ಮಾಡುತ್ತಿದ್ದೀರಿ? ಪ್ರಸ್ತುತ ವಿಷಯದ ಬಗ್ಗೆ ಮಾತನಾಡಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, 2002ರಲ್ಲಿ SANJU @ SANJAY SINGH SENGAR Vs. STATE OF MADHYA PRADESH ಪ್ರಕರಣದಲ್ಲಿ ನೀಡಲಾದ ಸುಪ್ರೀಂ ಕೋರ್ಟಿನ ಒಂದು ಜಡ್ಜ್‌ಮೆಂಟ್ ಇದೆ. The accused was telling the deceased to go and die. ಈ ಪ್ರಕರಣದಲ್ಲಿ ನೌಕರನಿಗೆ 'ಹೋಗಿ ಸಾಯಿ' ಎಂದು ಹೇಳುತ್ತಾನೆ. In that case, the Supreme Court opined thus:

> " ... Even if we accept the prosecution story that the appellant did tell the deceased 'to go and die', that itself does not constitute the ingredient of 'instigation'. The word 'instigate' denotes incitement or urging to do some drastic or unadvisable action or to stimulate or incite. Presence of mens rea, therefore, is the necessary concomitant of instigation. ..."

Where is the mens rea? Where is the material to show that Sri George and other officials have instigated this man to commit suicide? See the long gap. 2008 ರಿಂದ 2016ರವರೆಗೂ ಯಾವುದೇ ಆರೋಪಗಳನ್ನು ಮಾಡಿಲ್ಲವೆಂದರೆ ಇದಕ್ಕೆ ಏನು ಹೇಳುವುದು? 'ನೂರು ಜನ

ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡರೂ ಪರ್ವಾಗಿಲ್ಲ, ಒಬ್ಬ ನಿರಪರಾಧಿ ಯಾವುದೇ ಕಾರಣದಿಂದ ಶಿಕ್ಷೆಗೆ ಒಳಪಡಬಾರದು' ಎಂದು Criminal Jurisprudence ನಲ್ಲಿ ಹೇಳಲಾಗಿದೆ. In all probabilities, in the given circumstances, ಹೀಗೆ 8 ವರ್ಷಗಳ ಹಿಂದೆ ಆಗಿರುವ ಘಟನೆಯ ಹಿನ್ನೆಲೆಯಲ್ಲಿ ಯಾವುದಾದರೊಂದು ಸಾಕ್ಷಿ ಇದೆಯೇ, 'ಇಂತಹ ಕಾರಣಗಳಿಗಾಗಿ ನನಗೆ instigate ಮಾಡಿದರು, ಇಂತಹ ಕಾರಣಗಳಿಗಾಗಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎನ್ನುವುದಕ್ಕೆ ಏನಾದರೂ ಸಾಕ್ಷಿಗಳು ಇವೆಯೇ? ಸಚಿವರ ರಾಜಿನಾಮೆ ಮತ್ತು ಸದರಿ ಪ್ರಕರಣವನ್ನು ಸಿ.ಬಿ.ಐ.ನವರಿಗೆ ವಹಿಸಿ ಎಂದು ಮಾನ್ಯ ವಿರೋಧ ಪಕ್ಷದವರು ಕೇಳುತ್ತಿದ್ದಾರೆ. ಪಾಪ ಕಷ್ಟಪಟ್ಟು 20–30 ವರ್ಷಗಳ ಕಾಲ ತಮ್ಮ ಕೆರಿಯರ್ ಬೆಳೆಸಿಕೊಂಡಿರುತ್ತಾರೆ. ನಾನು ಮೊದಲೇ ಹೇಳಿದಂತೆ, ಮಾನ್ಯ ಜಾಲಪ್ಪನವರು ಅಥವಾ ಶ್ರೀ ಎಂ.ವಿ. ರಾಮರಾಯರು ರಾಜೀನಾಮೆ ಕೊಡದೇ ಹೋಗಿದ್ದರೆ, ಈ ರಾಜ್ಯದ ಮುಖ್ಯಮಂತ್ರಿಗಳಾಗುವ ಅವಕಾಶಗಳು ಅವರಿಗಿತ್ತು. ಆದ್ದರಿಂದ ಸೆಕ್ಷನ್ 174ರಡಿಯಲ್ಲಿ ಏನು ಕಾರ್ಯನಡೆಯುತ್ತಿದೆ ಆ ಕಾರ್ಯ ಪೂರ್ತಿಗೊಳ್ಳುವವರೆಗೆ ನಮ್ಮ ಸ್ನೇಹಿತರು ತಾಳ್ಮೆಯಿಂದ ಇರುವುದು ಸೂಕ್ತ. ಸಂವಿಧಾನದ ಅನುಚ್ಛೇದ 21ರಲ್ಲಿ ಉಲ್ಲೇಖ ಮಾಡಿರುವಂತೆ 'Life and liberty' ಯನ್ನು ರಕ್ಷಣೆ ಮಾಡುವುದಕ್ಕೆ ಸನ್ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಬದ್ಧವಾಗಿದೆ. ಯಾವುದೇ ಅಧಿಕಾರಿಗಳಾಗಿರಬಹುದು 'ನಮಗೆ ಆ ಪೋಸ್ಟ್ ಸಿಗಲಿಲ್ಲ, ನಗರದಲ್ಲಿ ಪೋಸ್ಟಿಂಗ್ ಸಿಗಲಿಲ್ಲ, ಅಥವಾ ಎಕ್ಸಿಕ್ಯುಟೀವ್ ಪೋಸ್ಟಿಂಗ್ ಸಿಗಲಿಲ್ಲ ಎನ್ನುವ ಕಾರಣದಿಂದಾಗಿ ಯಾರೂ ಸಹ ಒತ್ತಡಕ್ಕೆ ಸಿಲುಕಬಾರದು. ಸರ್ಕಾರ ಎಲ್ಲಿ ಹೇಳಿದರೆ ಅಲ್ಲಿ ಕೆಲಸ ಮಾಡಬೇಕಾಗುತ್ತದೆ. Transfer is not a punishment. Supension is not a punishment. ಹಾಗಾಗಿ 'ನನ್ನನ್ನು ಸಸ್ಪೆಂಡ್ ಮಾಡಿದ್ದಾರೆ ಆದ್ದರಿಂದ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎನ್ನುವುದು ಸರಿಯಲ್ಲ. ಅಧಿಕಾರದಲ್ಲಿ ಇರುವಂತಹ ಮಂತ್ರಿಗಳು ಸಹ ಒತ್ತಡಕ್ಕೆ ಮಣಿಯಬಾರದು.

ಸನ್ಮಾನ್ಯ ಸಭಾಪತಿಯವರೇ, ಡಿವೈಎಸ್‌ಪಿ ಗಣಪತಿಯವರನ್ನು ಮುಖ್ಯ ಮಂತ್ರಿಗಳು ಅಥವಾ ಗೃಹ ಮಂತ್ರಿಗಳು ಸಸ್ಪೆಂಡ್ ಮಾಡಿಲ್ಲ. ಡಿ.ಜಿ.ಪಿ. ಯವರ ಅಧ್ಯಕ್ಷತೆಯಲ್ಲಿ ಅದಕ್ಕಾಗಿ ಒಂದು ಬೋರ್ಡ್ ರಚನೆಯಾಗಿದೆ. ಆ ಬೋರ್ಡ್ ನಿರ್ಧಾರ ತೆಗೆದುಕೊಂಡು ಅವರನ್ನು ಸಸ್ಪೆಂಡ್ ಮಾಡಿದೆ. ಇದರಲ್ಲಿ ಮಾನ್ಯ ಜಾರ್ಜ್‌ರವರ ಹಸ್ತಕ್ಷೇಪ ಏನಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ವೀರಪ್ಪನ್ ಅಂಥವರನ್ನು ನಮ್ಮ ರಾಜ್ಯದ ಪೊಲೀಸರು ಹಿಡಿದರು. ಬಹಳಷ್ಟು ಜನ ಕೇಳಿದಂತೆ ಡಿ.ಕೆ.ರವಿಯವರ ಕೇಸನ್ನು ಸಿಬಿಐಗೆ ಕೊಟ್ಟೆವು. ಅಂತಿಮವಾಗಿ ಅದು ಏನಾಯಿತು? ಒಂದೂವರೆ ವರ್ಷವಾದರೂ ಇನ್ನೂ ಏಕೆ ಫಲಿತಾಂಶ ಬಂದಿಲ್ಲ? ಸುಮಾರು ಆರು ಕೇಸ್‌ಗಳನ್ನು ಕೊಟ್ಟಿದ್ದೇವೆ. ಮಾನ್ಯ ಕೊಂಡಯ್ಯನವರು ಮತ್ತು ನಾನು ವಿರೋಧ ಪಕ್ಷದ ನಾಯಕನಾಗಿ ಮಾನ್ಯ ಈಶ್ವರಪ್ಪನವರ ಸ್ಥಾನದಲ್ಲಿ 2 ವರ್ಷ ಇದ್ದಾಗ, ಬಳ್ಳಾರಿಯಲ್ಲಿ 1 ಲಕ್ಷ ಕೋಟಿಗೂ ಹೆಚ್ಚು ಹಣ ಲೂಟಿಯಾಗಿದೆ, ಇದನ್ನು ಸಿಬಿಐಗೆ ವಹಿಸಿ ಎಂದು ಕೇಳಿದೆವು. ಆಗ ಒಪ್ಪಿಕೊಂಡಿರಾ? ಕೆಲವರಿಗೆ ತಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿದ್ದು ತಮಗೆ ಪೂರಕವಾಗುತ್ತದೆ ಎನ್ನುವ ಹಾಗಿದ್ದರೆ ಸಿಬಿಐಗೆ ವಹಿಸಿ ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಗಳೆ, ನಮ್ಮ ರಾಜ್ಯದ ಪೊಲೀಸರು ಸಮರ್ಥರಿದ್ದಾರೆ. ಅನೇಕರು ಪ್ರಾಮಾಣಿಕರಿದ್ದಾರೆ, ದಕ್ಷರಿದ್ದಾರೆ. ಅವರು ತನಿಖೆ ಮಾಡಿ ಸತ್ಯವನ್ನು ಹೊರಗೆ ತರುತ್ತಾರೆ. ಗಣಪತಿಯವರ ಕುಟುಂಬಕ್ಕೆ ನ್ಯಾಯ ಸಿಗುವ ದಿಸೆಯಲ್ಲಿ ನಾವೆಲ್ಲರೂ ಸಹಕಾರ ಕೊಡುವುದಕ್ಕೆ ಸಿದ್ಧರಿದ್ದೇವೆ. ಕೊನೆಯದಾಗಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಅನೇಕರು ಈ ರಾಜ್ಯದಲ್ಲಿ ಸಾವಿನ ಮೇಲೆ ರಾಜಕಾರಣ ಮಾಡುತ್ತಿದ್ದಾರೆ, ಈ ರಾಜ್ಯದಲ್ಲಿ ಅನೇಕ ರಾಜಕೀಯ ಪಕ್ಷಗಳು ಸಾವಿನ ಮೇಲೆ ರಾಜಕಾರಣ ಮಾಡುತ್ತಿವೆ. ನಾನು ಅನೇಕ ಘಟನೆಗಳನ್ನು ಹೇಳಬಲ್ಲೆ. ನಾಗಮಂಗಲದ ಘಟನೆ, ಕುಣಿಗಲ್‌ನ ಘಟನೆ, . . . (ಗೊಂದಲ) ರಾಮನಗರದ ವಿಟ್ಲೇನ ಹಳ್ಳಿ ಘಟನೆ, ಡಿ.ಕೆ.ರವಿಯವರ ಪ್ರಕರಣ, ಈಗ ಗಣಪತಿಯವರ ಪ್ರಕರಣವನ್ನು ಇಟ್ಟುಕೊಂಡು ರಾಜಕಾರಣ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ಕ್ಷಣಿಕ ಒಂದು ವಾರ ಅಥವಾ ಹದಿನೈದು ದಿವಸಗಳ ಕಾಲ ಜನರ ಭಾವನೆಯನ್ನು ಕೆರಳಿಸಬಹುದು ಅಷ್ಟೇ. ಈ ರಾಜ್ಯದ ಆರೂವರೆ ಕೋಟಿ ಜನ ಪ್ರಬುದ್ಧರಾಗಿದ್ದಾರೆ. ಈ ರಾಜ್ಯದಲ್ಲಿ ಏನೆಲ್ಲಾ ನಡೆಯುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳುತ್ತಾರೆ. ಈ ರೀತಿ ದಾರಿ ತಪ್ಪಿಸುವಂತಹ ಕೆಲಸ ನಾವಾಗಲಿ ನೀವಾಗಲಿ ಮಾಡಬಾರದು. ನಮ್ಮ

ಮಾಧ್ಯಮದ ಮಿತ್ರರಲ್ಲಿ ಅತ್ಯಂತ ವಿನಯವಾಗಿ ವಿನಂತಿಸಬಯಸುತ್ತೇನೆ. ನಾವು ಯಾರೂ ಸಹ ಕಾನೂನಿಗಿಂತ ದೊಡ್ಡವರಲ್ಲ. ಕಾನೂನಿನರೀತ್ಯ ಎಲ್ಲರೂ ನಡೆಯಬೇಕು. ಕಾನೂನಿನ ಚೌಕಟ್ಟಿನಲ್ಲಿ ರಾಜ್ಯ ಸರ್ಕಾರ ಅಥವಾ ಪೋಲೀಸ್ ಇಲಾಖೆ ಕೆಲಸಗಳನ್ನು, ಪ್ರಕ್ರಿಯೆಗಳನ್ನು, ಪ್ರೊಸಿಜರ್‌ಗಳನ್ನು ಅಡ್ಯಾಪ್ಟ್ ಮಾಡಿಕೊಂಡಿದೆಯೇ ಹೊರತು ಯಾರನ್ನೋ ರಕ್ಷಣೆ ಮಾಡುವಂತಹ ಯಾವುದೇ ಪ್ರಯತ್ನ ಮಾಡಿಲ್ಲ. ಆ ರೀತಿಯ ಪ್ರಯತ್ನ ನಡೆದಿದ್ದರೆ ಬಹುಶಃ ರೆಬೆಲ್ ಆಗತಕ್ಕಂಥವರಲ್ಲಿ ನಾನೇ ಮೊದಲಿಗನಾಗುತ್ತೇನೆ. ಕಾನೂನಿನ ಚೌಕಟ್ಟಿನಲ್ಲಿ ಏನು ಪ್ರೊಸಿಡಿಂಗ್ಸ್ ಇದೆಯೋ ಅದರ ಮೇಲೆ ವಿಶ್ವಾಸ ಇಡೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಸದನವನ್ನು ಭೋಜನಕ್ಕೆಂದು 1.43 ಗಂಟೆಯಿಂದ 3.15 ಗಂಟೆಯವರೆಗೆ ಮುಂದೂಡಲಾಯಿತು)

**(ಸದನವು ಮಧ್ಯಾಹ್ನ 3 ಗಂಟೆ 32 ನಿಮಿಷಕ್ಕೆ ಪುನ: ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಸಭಾಪೀಠದಲ್ಲಿದ್ದರು)**

**ಸಭಾಪತಿಯವರು:–** ನಮ್ಮೆಲ್ಲರಿಗೂ ಹೆಮ್ಮೆಯ ಒಂದು ಸಂಗತಿ. ನಮ್ಮ ಈ ವಿಧಾನಸೌಧ ಕೇವಲ ಕರ್ನಾಟಕಕ್ಕೆ ಮಾತ್ರವಲ್ಲದೆ, ಇಡೀ ದೇಶದಲ್ಲಿ, ಪ್ರಪಂಚದಲ್ಲಿಯೇ ಒಂದು ಅದ್ಭುತವಾಗಿರುವಂತಹ ವಿಧಾನಸೌಧ ಮತ್ತು ಹೆಮ್ಮೆ ಪಡುವಂತಹ ವಿಧಾನಸೌಧ ಇದಾಗಿದೆ. ಈ ಜುಲೈ 13, ಈ ವಿಧಾನಸೌಧಕ್ಕೆ ಒಂದು ಚಾರಿತ್ರಿಕ ದಿನವಾಗಿದೆ. 1951ನೇ ಇಸವಿ ಜುಲೈ 13 ರಂದು ವಿಧಾನಸೌಧ ನಿರ್ಮಾಣಕ್ಕೆ ಶಂಕುಸ್ಥಾಪನೆ ಆಗಿದೆ. ಆ ವಿಚಾರವಾಗಿ ತಾವು ಈಗಲೂ ನೋಡಿದರೆ ಗೊತ್ತಾಗುತ್ತದೆ. ಈ ಒಂದು ಕಾರ್ಯಕ್ರಮಕ್ಕೆ ಅಂದಿನ ಪ್ರಧಾನಮಂತ್ರಿಗಳಾಗಿದ್ದಂತಹ ಶ್ರೀಯುತ ಜವಾಹಾರ್ ಲಾಲ್ ನೆಹರು ಅವರು ಬಂದು ಇದಕ್ಕೆ ಅಡಿಗಲ್ಲು ಹಾಕಿದ್ದಾರೆ. ಅದಕ್ಕೋಸ್ಕರ ಇದನ್ನು ಇವತ್ತು ನೆನಪು ಮಾಡಿಕೊಳ್ಳೋಣವೆಂದು ಈ ವಿಚಾರವನ್ನು ಪ್ರಸ್ತಾಪ ಮಾಡಿದೆ. ಕೆ.ಸಿ.ರೆಡ್ಡಿಯವರು ಆಗ ಮುಖ್ಯಮಂತ್ರಿಗಳಾಗಿದ್ದರು.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಳೆದ ಎರಡು ದಿವಸಗಳಿಂದ ಗಣಪತಿಯವರ ಸಾವಿನ ಬಗ್ಗೆ, ಅವರ ಆತ್ಮಹತ್ಯೆ ಬಗ್ಗೆ ವಿಸ್ತೃತವಾದಂತಹ ಚರ್ಚೆ ಈ ಸದನದಲ್ಲಿ ನಡೆಯುತ್ತಿದೆ. ಮೊದಲು ಚರ್ಚೆಗೆ ಅವಕಾಶವನ್ನು ಕೊಟ್ಟಿರಲಿಲ್ಲ. ಆಗ ಸಮಸ್ಯೆಯ ಗಾಂಭೀರ್ಯತೆಯನ್ನು ಅರಿತು, ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ನಾನು ಇಲ್ಲಿ ಎರಡೇ ವಿಷಯಗಳ ಬಗ್ಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ. ಶ್ರೀಯುತ ಉಗ್ರಪ್ಪನವರು ಕಾನೂನಿನ ವಿಷಯವಾಗಿ ಮಾತನಾಡಿದರು. ಜೊತೆಗೆ ಶ್ರೀಯುತ ಮಟ್ಟೂರು ರವರು ಸುಮಾರು 15 ಸೆಕ್ಷನ್‌ಗಳನ್ನು ಹೇಳಿದರು. ಸುಪ್ರೀಂ ಕೋರ್ಟ್‌ನ, ಹೈಕೋರ್ಟ್‌ನ ಕೆಲವು ರೆಫರೆನ್ಸ್‌ಗಳನ್ನು ಹೇಳಿದರು. ನಮ್ಮ ಸಂವಿಧಾನದ ವ್ಯವಸ್ಥೆಯಲ್ಲಿ ನೀವೇ ಹೇಳಿದ ಹಾಗೆ ರಾಜ್ಯಾಂಗ, ನ್ಯಾಯಾಂಗ, ಕಾರ್ಯಾಂಗ ಮತ್ತು ಪತ್ರಿಕಾರಂಗ. ಆ ಪತ್ರಿಕಾ ರಂಗಕ್ಕೆ ಸಂವಿಧಾನದಲ್ಲಿ ಸ್ವಾತಂತ್ರ್ಯ ಇಲ್ಲವೇ ಎನ್ನುವ ಪ್ರಶ್ನೆಯನ್ನು ನಾನು ಈ ಕಾನೂನನ್ನು ಮಾತನಾಡಿದವರಿಗೆ ಕೇಳಲಿಕ್ಕೆ ಬಯಸುತ್ತೇನೆ. ಆಗ ಮಾಧ್ಯಮ ಇರಲಿಲ್ಲ. ಅಂತಹ ಕಾಲದಲ್ಲಿ ಕೆಲವು ಘಟನೆಗಳು ನಡೆಯುತ್ತಿದ್ದವು. ಆಗ ಯಾರಿಗೂ ಶಿಕ್ಷೆಯನ್ನು ಕೊಡಲಿಲ್ಲವೇ? ಮಂತ್ರಿಗಳಾಗಿದ್ದವರು ರಾಜೀನಾಮೆಯನ್ನು ಕೊಡಲಿಲ್ಲವೇ? ಕೋರ್ಟ್‌ನಲ್ಲಿ ಕೇಸ್ ಹಾಕಲಿಲ್ಲವೆ? ತೀರ್ಪು ವಿರುದ್ಧ, ಪರ ಬರುವುದು ಬೇರೆ. ನಾನು ಇಲ್ಲಿ ಏನು ಹೇಳುತ್ತಿದ್ದೇನೆಂದರೆ, ಮಾಧ್ಯಮಗಳಲ್ಲಿ ಬಂದ ವಿಷಯಗಳ ಮೇಲೆ ಯಾವುದೇ ಕ್ರಮ ಆಗಲಿಲ್ಲವೇ? ಹಾಗಾದರೆ, ಮಾಧ್ಯಮಗಳಲ್ಲಿ ಬಂದಿದ್ದೆಲ್ಲಾ ಸತ್ಯ ಅಲ್ಲ, ಅಸತ್ಯ ಎಂದು ಹೇಳುವುದಕ್ಕೆ ನಾವು ಯಾರು? ಮತ್ತೆ, ನಾವು ಇಲ್ಲಿ ಮಾತನಾಡುತ್ತಿರುವುದು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯವಾಗಿದೆ. ಸಾರ್ವಜನಿಕರಿಗೆ ಒಂದು ನಿರೀಕ್ಷೆ ಇದೆ. ಆತ್ಮಹತ್ಯೆ ಆತ ಮಾಡಿಕೊಂಡನೋ, ಹತ್ಯೆ ಮಾಡಿದರೋ. ಹತ್ಯೆಯೇ ಆತ್ಮಹತ್ಯೆ. ಹತ್ಯೆ ಮಾಡಿದರೆ ಬೇರೆಯವರು ಮಾಡಿದಂತೆ. ಆತ್ಮಹತ್ಯೆ ಎಂದರೆ ಸ್ವ–ಇಚ್ಛೆಯಿಂದ ಮಾಡಿಕೊಂಡಿದ್ದಾನೆಂದರ್ಥ. ಹಾಗಾದರೆ, ನಮ್ಮನ್ನು ಆಯ್ಕೆ ಮಾಡಿ ಕಳುಹಿಸಿದಂತೆ ಸಾರ್ವಜನಿಕರಿಗೆ ನಾವು ಇಲ್ಲಿ ಪ್ರತಿನಿಧಿಸುತ್ತಿರುವಂತಹ ಆರೂವರೆ ಕೋಟಿ ಜನಕ್ಕೆ ನಾವು ಏನಾದರೂ ಸ್ಪಷ್ಟ ಉತ್ತರವನ್ನು ಕೊಡಬೇಕಲ್ಲವೇ? ಈ ಒಂದು ಸಮಸ್ಯೆಗೆ ಪರಿಹಾರವನ್ನು ಕೊಡಬೇಕಲ್ಲವೇ? ಅವರು ಇದನ್ನು

ನಿರೀಕ್ಷೆ ಮಾಡುತ್ತಾರೆ. ನಿಮ್ಮ ಸಂವಿಧಾನದ ಸೆಕ್ಷನ್‌ಗಳನ್ನು, ಅನುಚೇದಗಳನ್ನು ಈ ಆರೂವರೆ ಕೋಟಿ ಜನರೆಲ್ಲರೂ ಓದಿಲ್ಲ. ನೀವು ಇಲ್ಲಿ ಸೆಕ್ಷನ್ಸ್ ಹೇಳಿದಿರಿ. ನನಗೇ ಅರ್ಥವಾಗಲಿಲ್ಲಪ್ಪ. ನಮ್ಮ ಅಪ್ಪನಿಗೆ ಹೇಗೆ ಅರ್ಥವಾಗಬೇಕು? ಆದ್ದರಿಂದ, ಅವುಗಳು ಬೇಕು ನಿಜ. ಆದರೆ, ಅದೇ ವಸ್ತುವಿನ ವಿಚಾರ ಆಗಬಾರದು. ಮತ್ತೆ, ನೀವು ಹೇಳಿರುವುದೆಲ್ಲಾ ಸತ್ಯವೆಂದು ನಾವು ನಂಬಲಿಕ್ಕೆ ಆಗುವುದಿಲ್ಲ. ಸತ್ಯಾಸತ್ಯೆಗಳು ತರ್ಕ ಮಾಡಿದಂತಹ ಸಂದರ್ಭದಲ್ಲಿ ಗೊತ್ತಾಗುತ್ತದೆ. ಇದು ಮೈದಾನವಾಗಬಾರದು ಎಂದು ಹೇಳಲಿಕ್ಕೆ ಬಯಸುತ್ತೇನೆ. ಅವರು ಈ ಬಗ್ಗೆ ವಾದ ಮಾಡಿದರು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ನಾನು ಮೊದಲು ಮಾತನಾಡುತ್ತೇನೆ.

**ಸಭಾಪತಿಯವರು:–** ಅವರು yield ಆದಂತಹ ಸಂದರ್ಭದಲ್ಲಿ ತಾವು ಮಾತನಾಡಿ, ಇಲ್ಲದಿದ್ದರೆ ಬೇಡ

**ಶ್ರೀ ವಿ.ಎಸ್.ಉಗ್ರಪ್ಪ:–** ನನ್ನ ಹೆಸರನ್ನು ಹೆಸರಿಸಿ, ಇದರ ಬಗ್ಗೆ ಕ್ಲಾರಿಫೈ ಮಾಡುತ್ತೀರಾ ಎಂದು ತಾವು ಹೇಳಿದಿರಿ.

**ಶ್ರೀ ಡಿ.ಎಸ್.ವೀರಯ್ಯ:–** ನೀವು ಉತ್ತರ ಕೊಡುವಂತಹ ಸಮಯದಲ್ಲಿ ಮಾತನಾಡಿ.

**ಸಭಾಪತಿಯವರು:–** ಶ್ರೀಯುತ ಡಿ.ಎಸ್.ವೀರಯ್ಯನವರು ತಮ್ಮ ಭಾಷಣವನ್ನು ಮುಗಿಸಲಿ. ನಂತರ ತಾವು ಮಾತನಾಡಿ. ಅವರ ಪ್ರಶ್ನೆ ಏನೆಂದು ಅವರು ಇನ್ನೂ ಹೇಳಿಲ್ಲ. ಹೀಗಾಗಿ ಅವರು ಪೂರ್ತಿಯಾಗಿ ಹೇಳಲಿ.

**(ಗೊಂದಲ)**

ಶ್ರೀಯುತ ಉಗ್ರಪ್ಪನವರು ಈಗ ಮಾತನಾಡುತ್ತಿರುವುದು ಯಾವುದೂ ಸಹ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀಯುತ ಉಗ್ರಪ್ಪನವರು ಮಧ್ಯೆ ಪ್ರವೇಶ ಮಾಡಿ ಮಾತನಾಡಲಿಕ್ಕೆ ಪ್ರಾರಂಭಿಸಿದಾಗ ಅವರು ಮಾತನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲವೆಂದು ಮಾನ್ಯ ಸಭಾಪತಿಯವರು ಸೂಚಿಸಿದರು)**

He is speaking without permission. ಉಗ್ರಪ್ಪನವರು ಹೇಳಿರುವುದು ರೆಕಾರ್ಡ್‌ಗೆ ಹೋಗುವುದಿಲ್ಲ. Without permission, he cannot speak. Please sit down. ದಯವಿಟ್ಟು ಕುಳಿತುಕೊಳ್ಳಿ. ಶ್ರೀಯುತ ವೀರಯ್ಯನವರು ಮಾತನಾಡಿ. ನೀವು yield ಆದರೆ, ಬೇರೆಯವರಿಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಡಿ.ಎಸ್.ವೀರಯ್ಯ:–** ನಾನು ಇನ್ನು 5 ಬಾರಿ ಅವರ ಹೆಸರನ್ನು ಹೇಳುತ್ತೇನೆ. ಆದರೆ, ಅವರು ಒಟ್ಟಿಗೆ ಉತ್ತರವನ್ನು ಕೊಡಲಿ.

**ಸಭಾಪತಿಯವರು**:– ನೀವು yield ಆದರೆ ಬೇರೆಯವರಿಗೆ ಅವಕಾಶವನ್ನು ಕೊಡುತ್ತೇನೆ. ಇಲ್ಲದಿದ್ದರೆ ಇಲ್ಲ.

**ಶ್ರೀ ಡಿ.ಎಸ್.ವೀರಯ್ಯ:–** ನೀವು ಈ ರೀತಿ ಪದೇ ಪದೇ ಅಡ್ಡಿ ಬಂದರೆ ನನಗೆ ಮಾತನಾಡಲಿಕ್ಕೆ ತೊಂದರೆಯಾಗುತ್ತದೆ.

**ಸಭಾಪತಿಯವರು:–** ಬೇರೆಯವರು ಅವರಿಗೆ ಮಾತನಾಡಲಿಕ್ಕೆ ಹೇಳುವುದಲ್ಲ. ನಾನು ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕು. ನೀವು ಮಾತನಾಡಿ ಎಂದು ನಾನು ಹೇಳಬೇಕು. ದಯಮಾಡಿ ಕುಳಿತುಕೊಳ್ಳಿ. ಶ್ರೀಯುತ ವೀರಯ್ಯನವರೆ ತಾವು ಮಾತನಾಡಿ.

**ಶ್ರೀ ಡಿ.ಎಸ್.ವೀರಯ್ಯ:–** ತಾವು ಏನು ಮಾತನಾಡಿದ್ದೀರಿ, ಅದನ್ನು ನಾನು ಉಲ್ಲೇಖಿಸಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಅವರು ನನ್ನ ಹೆಸರನ್ನು ಹೇಳಿದ್ದರಿಂದ. . .

**ಸಭಾಪತಿಯವರು:–** ಅವರು ಹೇಳುವುದನ್ನು ಪೂರ್ಣವಾಗಿ ಕೇಳಿಕೊಳ್ಳಿ. ಅವರು ತಮ್ಮ ಹೆಸರನ್ನು ಹೇಳಿದ ತಕ್ಷಣ ನಿಂತುಕೊಳ್ಳಬೇಡಿ. ಅವರು ಏನು ಕೇಳುತ್ತಾರೋ ಯಾರಿಗೆ ಗೊತ್ತು.

**ಶ್ರೀ ಡಿ.ಎಸ್.ವೀರಯ್ಯ:–** ಅವರು ಮಾತನಾಡಿದ್ದನ್ನು ನಾನು ಹೇಳಿದ್ದೇನೆ. ಮೊದಲಿಗೆ ಪತ್ರಿಕಾ ರಂಗದವರು ಏನು ವಿಷಯಗಳನ್ನು ಸಮಾಜಕ್ಕೆ ತಿಳಿಸಲಿಕ್ಕೆ ಹೊರಟಿದ್ದಾರೋ, ಅವರು ಒಂದು ಸಮಾಜದ ಮುಖವಾಣಿ. ವಿಷಯ ಗೊತ್ತಾಗುವುದು ಹೇಗೆ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನಗೆ ಒಂದು ನಿಮಿಷ ಅವಕಾಶವನ್ನು ಕೊಡಿ.

**ಸಭಾಪತಿಯವರು:–** ಶ್ರೀಯುತ ವೀರಯ್ಯನವರು ನಿಮಗೆ ಅವಕಾಶ ಕೊಡಿ ಎಂದರೆ ಕೊಡುತ್ತೇನೆ. ಇಲ್ಲದಿದ್ದರೆ ಇಲ್ಲ.

**ಶ್ರೀ ಡಿ.ಎಸ್.ವೀರಯ್ಯ:–** ಅವರಿಗೆ ಅವಕಾಶವನ್ನು ಕೊಡಬಹುದು. ಅವರು ಭಾಷಣ ಹೊಡೆದರೆ ಹೇಗೆ? ಒಂದೇ ಮಾತು ಹೇಳಿದರೆ ನನಗೆ ಅವರ ಗೌರವ ಇದ್ದು, ನಾನು ಕುಳಿತುಕೊಳ್ಳುತ್ತೇನೆ.

**Mr. CHAIRMAN:** He has yielded. You can talk now. Definitely you can talk now.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ, ನಾವು ಸಂವಿಧಾನದ ರೀತಿಯ ನಡೆದುಕೊಳ್ಳುತ್ತೇವೆಂದು ವಾಗ್ದಾನ ಮಾಡಿದ್ದೇವೆ. ಆರ್ಟಿಕಲ್ 19 ಕೆಳಗಡೆ . . . ನಾನು ಇಲ್ಲದೇ ಇರುವುದನ್ನು . . . ಅಭಿವ್ಯಕ್ತಿ ಸ್ವಾತಂತ್ರ ಇರುವುದು ಅಲ್ಲಿಯೇ.

**ಸಭಾಪತಿಯವರು:–** ನೀವು ಮಾತನಾಡುವಾಗ ಎಲ್ಲಾ ಬಿಟ್ಟು ಅವರ ಹೆಸರನ್ನೇ ಹೇಳುತ್ತೀರಿ. ಬೇರೆ ಯಾರ ಹೆಸರನ್ನಾದರೂ ಹೇಳಿದ್ದರೆ, ಸುಮ್ಮನೆ ಕುಳಿತಿರುತ್ತಿದ್ದರು. ನೀವು ಶ್ರೀಯುತ ಕೊಂಡಯ್ಯನವರ ಹೆಸರನ್ನು ಹೇಳಿದ್ದರೆ ಅವರು ಸುಮ್ಮನೆ ಇರುತ್ತಿದ್ದರು. ನೀವು ಉಗ್ರಪ್ಪನವರ ಹೆಸರನ್ನು ಹೇಳಿ, ಬೇಡವೆಂದರೆ ಅವರು ಬಿಡುತ್ತಾರೆಯೇ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಆರ್ಟಿಕಲ್ 19 ಕೆಳಗಡೆ restrictions ಇವೆ. ಇವತ್ತು Deccan Chronicle ನಲ್ಲಿ "Ugrappa demanded for resignation of Mr. George" ಎಂದು ಬರೆದಿದ್ದಾರೆ.

**ಸಭಾಪತಿಯವರು:–** ನೀವು ಯಾವಾಗ demand ಮಾಡಿದಿರಿ?

**ಶ್ರೀ ವಿ.ಎಸ್.ಉಗ್ರಪ್ಪ:–** ನಿನ್ನೆ ಇಲ್ಲಿ ಮಾತನಾಡುವ ಸಂದರ್ಭದಲ್ಲಿ ನಾನು ಏನು ಹೇಳಿದೆ, ಶ್ರೀಯುತ ಜಾಲಪ್ಪನವರ ರಾಜೀನಾಮೆ, ಶ್ರೀಯುತ ರಾಜಶೇಖರ್‌ರವರ ರಾಜೀನಾಮೆ ಕೊಟ್ಟಂತಹ ಪರಿಣಾಮಗಳೇನು, ಆ ಪ್ರಕರಣಗಳು establish ಆಗದೆ 30–40 ವರ್ಷಗಳ ಅವರ ಪರಿಶ್ರಮ ಏನಾಗುತ್ತದೆ ಎಂದು ಹೇಳಿದರೆ ಅದನ್ನು ಅರ್ಥೈಸಿಕೊಳ್ಳದೆ, ಬೇರೆ ಯಾವ ಪೇಪರ್‌ಗಳು . . .

**ಶ್ರೀ ಎಂ.ಕೆ.ಪ್ರಾಣೇಶ್:–** ಅವರು ನಿಮ್ಮ ಮನಸ್ಸಿನಲ್ಲಿರುವ ಭಾವನೆಗಳನ್ನು ಬರೆದಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಸ್ವಲ್ಪ ನಿಲ್ಲಿಸಿ brother. ಏತಕ್ಕೆ ಇಷ್ಟೊಂದು ಆತುರ? ಹೀಗಾಗಿ, Deccan Chronicle ನವರು headlines ನಲ್ಲಿ ಈ ರೀತಿ ಬರೆದಿದ್ದಾರೆ. ಆದರೆ, ಅದರ ಒಳಗಡೆ ಇರುವಂತಹದ್ದು, ನಾನು ಏನು ಹೇಳಿದ್ದೆ, ಅದನ್ನು ಸರಿಯಾಗಿ ಬರೆದಿದ್ದಾರೆ. ಏಕೆಂದರೆ, ನಾನು ನೋಡಿರಲಿಲ್ಲ. ಶ್ರೀಯುತ ಜಾರ್ಜ್‌ರವರೇ ಬಂದು ಹೇಳಿದರು. ಒಳಗಡೆ ಈ ರೀತಿಯಲ್ಲಿ ಇದೆ. Headlines ನೋಡಿದರೆ "Ugrappa demanded for resignation of Mr. George" ಎಂದು ಇದೆ. ಹಾಗಾಗಿ, ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ಮಾಧ್ಯಮದವರಿಗೂ ಸಹ they are not above the

Constitution, they are not above Legislature and they are not above the Judiciary. They are also subject to the provisions of the Constitution. They must know that. ಹೀಗಾಗಿ, ಈ ಸಂವಿಧಾನದ Preamble ನಲ್ಲಿ, ನಾವೆಲ್ಲರೂ ಅಂದರೆ, legislature, executive, judiciary ಮತ್ತು fourth estate ಆಗಿರತಕ್ಕಂತಹ media, ಇದನ್ನು ನಾನು ಹೇಳಿದ್ದೇನೆಯೇ ಹೊರತು, ಇದನ್ನು ಬಿಟ್ಟು ನಾನು ಏನೂ ಹೇಳಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ನಮಗಂತೂ ಗೊತ್ತಾಗಿದ್ದು ಪತ್ರಿಕೆಯಿಂದ. ಪತ್ರಿಕಾ ಮಾಧ್ಯಮದಲ್ಲಿ ಬಂದುಬಿಟ್ಟಿದೆ. ಉಗ್ರಪ್ಪನವರ ವಿಚಾರವನ್ನು ಅವರು ಆ ರೀತಿ ಅರ್ಥ ಮಾಡಿಕೊಂಡು ಏನೋ ಬರೆದಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಪತ್ರಿಕಾ ಮಾಧ್ಯಮದ ಬಹಳಷ್ಟು ಪತ್ರಿಕೆಯವರು ಅಲ್ಲಿದ್ದರು, ಆದರೆ Deccan Chronicle ಅವರೊಬ್ಬರಿಗೆ ಮಾತ್ರ ಏಕೆ ಹಾಗೆನಿಸಿತು? ಬೇರೆಯವರೆಲ್ಲಾ ಇರಲಿಲ್ಲವೆ? ಇವರೊಬ್ಬರಿಗೆ ಮಾತ್ರ ಏಕೆ ಹಾಗೆನಿಸಿದೆ? See, with due respect to them, ಸುದ್ದಿಯನ್ನು ಮಾಡಬೇಕಾದರೆ ಸತ್ಯಕ್ಕೆ ಹತ್ತಿರವಾಗಿರುವಂತಹ ರೀತಿಯಲ್ಲಿ ಮಾಡಬೇಕು.

**ಶ್ರೀ ಡಿ.ಎಸ್.ವೀರಯ್ಯ:–** ನೀವು ಹೇಳಿದ ಹಾಗೋ, ನಾನು ಹೇಳಿದ ಹಾಗೋ ಬರೆಯುವುದಕ್ಕಲ್ಲ ಪತ್ರಿಕೆಗಳಿರುವುದು. ಅವರು ಕಂಡದ್ದು, ಅವರು ನೋಡಿದ್ದು, ಜನರ ಭಾವನೆಗಳಿಗೆ ಪ್ರತಿಬಿಂಬವಾಗಿ ಅವರ ಮುಖವಾಣಿಯಾಗಿ ವರದಿಯನ್ನು ಮಾಡಬೇಕೇ ಹೊರತು ಉಗ್ರಪ್ಪನವರು ಹೇಳಿದ್ದು, ನಾನು ಹೇಳಿದ್ದನ್ನು ಬರೆದುಕೊಂಡು ಕುಳಿತರೆ ಜನ ನಂಬದೆ ಹೋಗುತ್ತಾರೆ ಮತ್ತು ಸಂವಿಧಾನದ ಹಕ್ಕುಗಳನ್ನು ಸಹ ಅವರು ಉಲ್ಲಂಘಿಸಿದಂತಾಗುತ್ತದೆ.

**ಸಭಾಪತಿಯವರು:–** ಮಾನ್ಯ ವೀರಯ್ಯನವರೇ, ಬೇರೆ ವಿಷಯಗಳನ್ನು ಬಿಡಿ, ನಿಯಮ 68ರ ಅಡಿಯಲ್ಲಿನ ವಿಚಾರದ ಬಗ್ಗೆ ತಾವು ಚರ್ಚೆಯನ್ನು ಮುಂದುವರೆಸಿ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ನಾನಿಲ್ಲಿ ಕೇಳುತ್ತಿರುವುದು ಹಿಂದೆ ಪತ್ರಿಕೆಯಲ್ಲಿ ಬಂದಿರುವುದಕ್ಕೆ ಎಷ್ಟು ಜನ ಸಚಿವರು ರಾಜಿನಾಮೆಯನ್ನು ಕೊಟ್ಟಿಲ್ಲ; ಎಷ್ಟು ಬಾರಿ ಸದನದಲ್ಲಿ ಚರ್ಚೆಯಾಗಿಲ್ಲ? ಪಾರ್ಲಿಮೆಂಟ್‌ನಲ್ಲಿ ಆಗಿಲ್ಲವೆ? ಅಸೆಂಬ್ಲಿಯಲ್ಲಿ ಆಗಿಲ್ಲವೆ; ಇದೇ ಸದನದಲ್ಲಿ ಆಗಿಲ್ಲವೆ? ಪತ್ರಿಕಾ ಹೇಳಿಕೆ ಅಥವಾ ದೂರದರ್ಶನದಲ್ಲಿ ನೀಡಿದ ಹೇಳಿಕೆಯ ಮಾತ್ರದಿಂದಲೇ ಸದನಗಳಲ್ಲಿ ಚರ್ಚೆಯಾಗಿಲ್ಲವೆ? ಆದ್ದರಿಂದ ಸಾರಾಸಗಟಾಗಿ ಪತ್ರಿಕೆಯಲ್ಲಿ ಬಂದಿರುವ ಆಧಾರದ ಮೇಲೆ ನೀವು ಮಾತನಾಡುತ್ತಿದ್ದೀರಿ, ಅದು ಸಾಕ್ಷಿ ಅಲ್ಲ ಎಂದರೆ ಹೇಗೆ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಡಿ.ಎಸ್.ವೀರಯ್ಯನವರು ದಯಮಾಡಿ 'Kaul & Shakdher' ರವರ 'Practice and Procedure of Parliament' ಪುಸ್ತಕವನ್ನು ಅವಲೋಕಿಸಬೇಕಾಗುತ್ತದೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಎಲ್ಲರಿಗೂ ಒಂದೊಂದು ಪ್ರತಿಯನ್ನು ಕೊಟ್ಟುಬಿಟ್ಟರೆ ಒಳ್ಳೆಯದು. ಏಕೆಂದರೆ ಸದನದಲ್ಲಿ ಒಂದೋ, ಎರಡೋ ಪ್ರತಿಗಳಿವೆ, ದಯಮಾಡಿ ಅವರು ಎಲ್ಲರಿಗೂ ಒಂದೊಂದು ಪ್ರತಿಯನ್ನು ಕೊಟ್ಟರೆ ಒಳ್ಳೆಯದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಬೇಕು ಎನ್ನುವುದಾದರೆ ಮಾನ್ಯ ವೀರಯ್ಯನವರಿಗೆ 'Kaul & Shakdher' ರವರ ಪುಸ್ತಕದ complimentary copy ಯನ್ನು ಕೊಡುತ್ತೇನೆ.

**Mr. CHAIRMAN:** Fine.

**ಶ್ರೀ ಡಿ.ಎಸ್.ವೀರಯ್ಯ:–** ಪತ್ರಿಕಾ ರಂಗವನ್ನು ರಕ್ಷಣೆ ಎಂದಲ್ಲ, ಸಂವಿಧಾನಿಕವಾಗಿ ಮಾಧ್ಯಮದವರಿಗೆ, fourth estate ಗೆ ಏನು ಅಧಿಕಾರ ಇದೆಯೋ, ಅದನ್ನು ಅವರು ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿ

ಬಂದುದ್ದೆಲ್ಲಾ ನಮ್ಮ ವಿಚಾರದ ವಸ್ತುಗಳಾಗಬಾರದು, ಅದರ ಬಗ್ಗೆ ಚರ್ಚೆಯಾಗಬಾರದು, ಅದು ಬಂದಿದೆ ಎಂದು ನೀವು ರಾಜಿನಾಮೆ ಕೇಳಬಾರದು, ಅದು ಬಂದಿದೆ ಎಂದು ನೀವು ಚಾರ್ಜ್‌ಶೀಟ್ ಹಾಕಬೇಡಿ, ಎಫ್.ಐ.ಆರ್. ಹಾಕಬೇಡಿ ಎನ್ನುವಂತಹ ರೀತಿಯ ಭಾವನೆ ಸರಿಯಲ್ಲ ಎನ್ನುವುದನ್ನು ನಾನು ಮೊದಲು ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಡಿವೈಎಸ್ಪಿ ಗಣಪತಿಯವರ ಸಾವಿನ ಬಗ್ಗೆ ಮೂರು–ನಾಲ್ಕು ಭಾಗವಾಗಿ ನಾವು ಯೋಚನೆ ಮಾಡಬೇಕಾಗುತ್ತದೆ. ಮೊದಲನೆಯದಾಗಿ ಸಾವಿಗೆ ಮುಂಚೆ ನಡೆದಂಥದ್ದೇನು? ನಾವು ನೀವೆಲ್ಲರೂ ನೋಡಿದ್ದು, ಇಡೀ ಸಮಾಜ ನೋಡಿದ್ದು, ರಾಜ್ಯದ ಆರೂವರೆ ಕೋಟಿ ಜನ ನೋಡಿದ್ದಾರೆ. ಯಾರೂ ಸಹ ಸುಮ್ಮಸುಮ್ಮನೆ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಅಥವಾ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿ ಹೇಳಿಕೆ ಕೊಟ್ಟಿದ್ದಾನೆ ಎಂದರೆ, you should read between the lines. ಕೇವಲ letter and spirit ಓದಿಬಿಟ್ಟರೆ ಸಾಲದು; ಕೇವಲ line ಓದಿದರೆ ಸಾಲದು; ಆ ಲೈನ್‌ಗಳ ಮಧ್ಯೆ ಇರುವುದನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. So you should read between the lines. You should know the spirit of the statement. You should read it. ಆ letter and spirit ನ್ನು ನೋಡಬೇಕೇ ವಿನಃ, ಅವರು ನನ್ನ ಸಾವಿಗೆ ಇಂಥವರೇ ಕಾರಣ ಎಂಬುದಷ್ಟನ್ನು ಹೇಳಿದ್ದಾರೆ, ಸಾಕಲ್ಲವೆ ಸ್ವಾಮಿ. Death Note ಗೂ Dying Declaration ಗೂ ಬೇರೆ ಇದೆ ಎಂದು ನೀವು ಹೇಳುತ್ತೀರಿ. ಹಿಂದೆ Death Note ಬರೆದವರಿಗೆ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ರಿಜಿಸ್ಟರ್ ಮಾಡಲಿಲ್ಲವೆ?

ನೆನ್ನೆ ದಿವಸ ಮುಳುಬಾಗಿಲಿನಲ್ಲಿ ಒಂದು ಪ್ರಸಂಗ ನಡೆದಿದೆ. ಗ್ರಾಮ ಪಂಚಾಯತಿ ಸದಸ್ಯನಿಗೆ ಇಬ್ಬರು ಪತ್ನಿಯರಿದ್ದು, ಅದರ ಬಗ್ಗೆ ವಿಷಯ ಪಂಚಾಯತಿಗೆ ಬಂತು. ಪಂಚಾಯತಿಯವರು ನೀನು ಮಾಡಿದ್ದು ತಪ್ಪು, ನೀನು ಒಬ್ಬಾಕೆಯೊಡನೆ ಜೀವನ ನಡೆಸುವಂತೆ ತಿಳಿಸಿದ್ದಾರೆ. ಅದಕ್ಕೆ ಆ ಪಂಚಾಯತಿ ಸದಸ್ಯ ನೀವು ಈ ರೀತಿ ತೀರ್ಮಾನ ಕೊಟ್ಟಿದ್ದೀರಿ, ನಾನು ವಿಷ ತೆಗೆದುಕೊಂಡು ಸಾಯುತ್ತೇನೆ ಎಂದಿದ್ದಾನೆ. ನೆನ್ನೆ ಪ್ರಕರಣ ದಾಖಲಾಗಿದೆ. ಅಗತ್ಯವಿದ್ದರೆ ತಾವು ದಯವಿಟ್ಟು ಮಾಹಿತಿ ತರಿಸಿಕೊಳ್ಳಿ. ಹಾಗಾದರೆ ಆ Death Note ಮೇಲೆ ಆ ಪೊಲೀಸ್ ಠಾಣೆಯಲ್ಲೇಕೆ ಪ್ರಕರಣ ದಾಖಲಾಯಿತು, ಇಲ್ಲೇಕೆ ಇದನ್ನು Unnatural Death ಎಂದು ನೀವು treat ಮಾಡುತ್ತಿದ್ದೀರಿ? ಪ್ರಕರಣ ಒಂದೇ ತಾನೆ. ಅವರದೂ I.P.C. ಮತ್ತು Cr.P.C. ಪ್ರಕರಣವೇ. ಅಲ್ಲದೆ Death Note ಗೂ Dying Declaration ಯಲ್ಲಿರುವುದಕ್ಕೂ ವ್ಯತ್ಯಾಸ ಇದೆ ಎಂದು ನೀವು ಹೇಳುತ್ತಿದ್ದೀರಿ. 'Dying Declaration' ಎಂದರೆ, ನಮಗೆ ಎಷ್ಟು ಜನರಿಗೆ ಗೊತ್ತು ಸ್ವಾಮಿ? Dying Declaration ಎಂದರೆ ಅವನು ಬರೆಯಬೇಕಾಗಿತ್ತು, 'I, D.S. Veeraiah, I am going to die on so and so day at so and so hour…' ಎಂದು ಬರೆಯಬೇಕಾಗಿತ್ತೇ? Dying Declaration ಎಂಬುದು ಒಂದು format ನಲ್ಲಿರುತ್ತದೆ. ಆದರೆ Death Note ಒಂದು colorful language ನಲ್ಲಿರುತ್ತದೆ. ಸಾಯುವ ವ್ಯಕ್ತಿ ತಾನು ಸಾಯುತ್ತೇನೆ ಎಂದು ನೀವು declare ಮಾಡುವ ರೀತಿ proforma ದಲ್ಲಿರುವಂತೆ ಮಾಡುವುದಕ್ಕಾಗುವುದಿಲ್ಲ. ಏನೋ ಒಂದು ಬರೆದು ಹೋಗಿರುತ್ತಾನೆ, ಅಲ್ಲವೆ. ಅದು ಸಾವಿಗೆ ಮುಂಚೆ ನಡೆದಂಥದ್ದಾಯಿತು.

ಒಬ್ಬ ಸಾಮಾನ್ಯ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡ ನಂತರ ಪೊಲೀಸರು ಅಲ್ಲಿಗೆ ಭೇಟಿ ಕೊಟ್ಟು ಏನು ಮಾಡಬೇಕು? 'Who is the defendant of a deceased' ಎಂದು ನೋಡಬೇಕು. ಮಾನ್ಯ ಉಗ್ರಪ್ಪನವರು ಹೇಳಬೇಕು. The first defendant is the wife. ಹೌದಲ್ಲವೇ ಸ್ವಾಮಿ. ಸಾವು ಸಂಭವಿಸಿದಾಗ ಆತನ ಪತ್ನಿಯನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಬೇಕು, ಮತ್ತೆ ಪಂಚನಾಮೆ ಎನ್ನುತ್ತೀರೋ, ಮಹಜರ್ ಎನ್ನುತ್ತೀರೋ ನನಗೆ ಗೊತ್ತಿಲ್ಲ. ಹಿಂದಿನ ಕಾಲದಲ್ಲಿ ಪರಿಸ್ಥಿತಿ ಬೇರೆ ಇತ್ತು, ಏಕೆಂದರೆ ಆಗೆಲ್ಲಾ ಬಹಳಷ್ಟು ಜನರು ಅಕ್ಷರಸ್ಥರಾಗಿರಲಿಲ್ಲ. ಹಾಗಾಗಿ Investigation Officer

ಬರೆದುದಕ್ಕೆ ಅವರು ಸಹಿ ಮಾಡುತ್ತಿದ್ದರು. ಅವರ ತಂದೆ ಸುಶಿಕ್ಷಿತರು, ಆದರೂ ಏನು ಬರೆದಿದ್ದಾರೆ ಎಂದು ಓದಲಿಲ್ಲ. ಒಂದು ವೇಳೆ ಅವರು ಬರೆದಿದ್ದರೆ ಕಾನೂನು ಪ್ರಕಾರ ಯಾವ ಸಂದರ್ಭದಲ್ಲಿ ಅವರು ಹೇಳಿಕೆ ಕೊಡಬೇಕಾಗಿತ್ತೆಂದರೆ, ಆ ವ್ಯಕ್ತಿಗೆ ಇಂಗ್ಲೀಷ್ ಅಥವಾ ಕನ್ನಡದಲ್ಲಿ ಬರೆಯುವುದಕ್ಕೆ ಬರದಿದ್ದರೆ, ಅವನಿಗೆ ಅರ್ಥವಾಗದಿದ್ದರೆ ಇನ್ನೊಬ್ಬರು ಬರೆದುಕೊಡಬೇಕು. ಇದು ಕಾನೂನಿನಲ್ಲಿದೆ ಅಲ್ಲವೆ. ಜೊತೆಗೆ 'ಓದಿ ಹೇಳಿದ್ದಾರೆ, ಅರ್ಥ ಮಾಡಿಕೊಂಡಿದ್ದೇನೆ, ಸ್ವ ಇಚ್ಛೆಯಿಂದ ಸಹಿ ಮಾಡಿದ್ದೇನೆ' ಎನ್ನುವುದನ್ನು ಸಹ ಸೇರಿಸಬೇಕು. ಈ ರೀತಿ ಈ ಪ್ರಕರಣದಲ್ಲಿ ಆಗಿದೆಯೇ? ಹೇಳಿಕೆ ಇದೆ, ಅದನ್ನು ತರಿಸಿ ಎಲ್ಲರಿಗೂ ಒಂದೊಂದು ಕಾಪಿಯನ್ನು ಕೊಟ್ಟುಬಿಡಿ.

ಜೊತೆಗೆ ಸಾಕ್ಷಿ ಯಾರು ಹಾಕಬೇಕು? ಅವರ ಕುಟುಂಬದವರು, ಆ ಹೊಟೇಲ್‌ನವರು ಮತ್ತು ಅಲ್ಲಿ ಯಾರ್ಯಾರಿದ್ದರು ಅವರೆಲ್ಲಾ ಹಾಕಬೇಕು. It is not the police officer who investigates the case. ಎನ್‌ಕ್ವೈರಿ ಮಾಡಿದರೆ ಇಬ್ಬರ ಸಾಕ್ಷಿ ತೆಗೆದುಕೊಂಡು ಮಾಡುವುದಕ್ಕಾಗುವುದಿಲ್ಲ. ಒಂದು ಆಸ್ತಿಯನ್ನು ಮಾರಾಟ ಮಾಡಬೇಕಾದರೆ ಮೂರನೆಯವರನ್ನು ಕೂಡ ಸಾಕ್ಷಿಯಾಗಿ ಕರೆಯುತ್ತೇವೆ. ಏಕೆಂದರೆ ಒಬ್ಬರು ಸುಳ್ಳು ಹೇಳಿದರೆ ಇನ್ನೊಬ್ಬ ಅಥವಾ ಮತ್ತೊಬ್ಬನಾದರೂ ಸತ್ಯ ಹೇಳುತ್ತಾರೆ ಎನ್ನುವ ಕಾರಣಕ್ಕಾಗಿ. ಹಾಗಾಗಿ ಆ ಸಾಕ್ಷಿಗಳು ಯಾರು? ಅವರ ಸಂಬಂಧಿಕರೇ, ಸಾರ್ವಜನಿಕರೇ, ಆ ಹೊಟೇಲ್ ಮಾಲೀಕರೇ, ಹೊಟೇಲ್‌ನಲ್ಲಿ ಕೆಲಸ ನಿರ್ವಹಿಸುವ ವ್ಯಕ್ತಿಗಳೇ ಅಥವಾ ಆ ಪ್ರಕರಣವನ್ನು ಮೊದಲಿಗೆ ಕಂಡವರು ಯಾರು? ಈ ಎಲ್ಲ ಅಂಶಗಳು ಸಹ ಬರಬೇಕಲ್ಲವೆ? ಅದು ನಿಜವಾದ ಪಂಚನಾಮೆ; ನಿಜವಾದ ಮಹಜರು. ಅದನ್ನು ಬಿಟ್ಟು ಒಂದು ಕಡೆ ಮಗ ಸತ್ತು ನೇತಾಡುತ್ತಿದ್ದಾನೆ, ಅಂತಹ ಸಂದರ್ಭದಲ್ಲಿ ಆ ವ್ಯಕ್ತಿಯ ತಂದೆಯಿಂದ ಹೇಳಿಕೆ ಕೊಡಿಸುತ್ತೀರಲ್ಲಾ, ಆತನಿಗೆ ಆರೋಗ್ಯ ಸರಿಯಿರಲಿಲ್ಲ, ಮಾನಸಿಕ ಖಿನ್ನತೆಗೆ ಒಳಗಾಗಿದ್ದರು ಎಂದೆಲ್ಲಾ ಹೇಳುವುದಕ್ಕೆ ನೀವ್ಯಾರು? Are you a Psychiatrist? ಅಲ್ಲಿಗೆ ಹೋಗಿದ್ದಂತಹ ನಿಮ್ಮ ಪೊಲೀಸ್ ಆಫೀಸರ್ is he qualified to give that opinion? ನನಗಂತೂ ಗೊತ್ತಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಅದನ್ನು ನೀವು ಹಿಡಿದುಕೊಂಡು ಇದು ಅಸಹಜ ಸಾವು ಎನ್ನುವ ತೀರ್ಮಾನಕ್ಕೆ ಹೇಗೆ ಬರುತ್ತೀರಿ?

ಅಲ್ಲಿ ಅವರ ಕುಟುಂಬದವರು ಯಾರೂ ಇಲ್ಲ, ಮದ್ಯಾಹ್ನ ಸುಮಾರು 2:00 ಗಂಟೆಗೆ ಸಾವು ಸಂಭವಿಸಿದೆ ಎಂದು ನಾನು ಓದಿದ್ದೇನೆ. 8 ಗಂಟೆಯವರೆಗೂ ಅವರು ಯಾರೂ ಬರಲಿಲ್ಲ. ಅನಂತರ ಮೊದಲು ಅವರ ತಂದೆಯನ್ನು ಕರೆಸುತ್ತೀರಿ, ಅವರ ಹೆಂಡತಿ ಎಲ್ಲಿದ್ದರು? ಅದನ್ನೂ ಪತ್ತೆಹಚ್ಚಬೇಕಲ್ಲವೆ. ಶವ ಯಾರದು ಎಂದು ಪೊಲೀಸರಿಗೆ ಗೊತ್ತಿರಲಿಲ್ಲವೇನು? ಅವರು ಡಿವೈಎಸ್ಪಿ ಎಂದು ಪೊಲೀಸರಿಗೆ ಗೊತ್ತಿರಲಿಲ್ಲವೆ? ಆತ public servant, ಹೆಸರಿರುವಂಥವನು, ಅಲ್ಲಿಯೇ ಕೆಲಸ ಮಾಡುತ್ತಿದ್ದಂಥವನು, ಆ ಜಿಲ್ಲೆ, ಆ ತಾಲ್ಲೂಕು, ಆ ಊರಿನವನು. ಹಾಗಾದರೆ ನಿಮಗೆ ಯಾರಿಗೂ ಅದು ಗೊತ್ತಿರಲಿಲ್ಲವೆ, ಅವರ ತಂದೆಯನ್ನೇ ಕರೆಸಬೇಕಾಗಿತ್ತೇ? ಹೆಂಡತಿಯನ್ನೇಕೆ ಕರೆಸಲಿಲ್ಲ; ಮಗನನ್ನೇಕೆ ಕರೆಸಲಿಲ್ಲ? ಅವರು ಬರದೆ ನೀವು ಹೇಗೆ ಒಳಗಡೆ ಹೋದಿರಿ? ನೀವು ನಾಳೆ ನ್ಯಾಯಾಲಯದ ಮುಂದೆ ವಾದ ಮಾಡಬೇಕು, ನೇತಾಡುತ್ತಿದ್ದ ಹೆಣವನ್ನು ಯಾರು ಮೊದಲು ನೋಡಿದರು ಎಂದು ನ್ಯಾಯಾಲಯ ಸಾಕ್ಷಿ ಕೇಳುತ್ತದೆ. ಆ ಸಂದರ್ಭದಲ್ಲಿ Investigation Officer, 'ನಾನು ನೋಡಿದೆ' ಎಂದು ಹೇಳುವುದಕ್ಕಾಗುತ್ತದೆಯೇ? ಆದರೆ, ಎಲ್ಲಾ ಅವರೇ ಮಾಡಿದ್ದಾರೆ ಎಂದರೆ, ಅದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ ಎನ್ನುವಂತಹ ಪ್ರಶ್ನೆಯನ್ನು ನಾನು ನೇರವಾಗಿ ಕೇಳಬಯಸುತ್ತೇನೆ. ಅಪ್ಪ ಹೇಳಿಕೆ ಕೊಟ್ಟಾಯಿತು, ಇನ್ನೊಬ್ಬ ಮಗ ಕೂಡ ಪೊಲೀಸ್ ಇಲಾಖೆಯಲ್ಲಿಯೇ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆತನ ಕೈಯಲ್ಲಿ ನೀವು ಹೇಳಿಕೆ ಕೊಡಿಸುತ್ತೀರಲ್ಲಾ ಇದು coercion ಅಲ್ಲವೆ? Is it not made under pressure?

Is it not under the pressure? ಯಾವುದೇ ಒಂದು ಹೇಳಿಕೆ ಒತ್ತಡ ಇಲ್ಲದೇ ಬರಬೇಕು, ಸ್ವತಂತ್ರವಾಗಿ ಬರಬೇಕು, ಸ್ವಇಚ್ಛೆಯಿಂದ ಹೇಳಬೇಕು. ಆ ಹೇಳಿಕೆ ಸ್ವಇಚ್ಛೆಯಿಂದ ಹೇಳಿದ್ದಲ್ಲ. ನಾನು ಹೇಳುತ್ತೇನೆ; coersion ಅಂದರೆ this statement has been taken under the coercion.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಈ ಘಟನೆ ಪ್ರಾರಂಭವಾದದ್ದು ಎಲ್ಲಿಂದ ಎಂದು ಆಲೋಚನೆ ಮಾಡಿದರೆ ಅದು ನೇರವಾಗಿ ಟಿ.ವಿ. ಮಾಧ್ಯಮದಲ್ಲಿ ಬಂದಂತಹ ದೃಶ್ಯಾವಳಿಗಳನ್ನು ನೋಡಿದ ಮೇಲೆಯೇ. ಆ ನಂತರ ಅವರು ಎಲ್ಲಿ ಇದ್ದಾರೆಂದು ಪತ್ತೆ ಹಚ್ಚುವುದಕ್ಕೆ ಹೊರಟಿದ್ದಾರೆ. ಆದಾದ ಮೇಲೆ ಶ್ರೀ ಎಂ.ಕೆ.ಗಣಪತಿಯವರ ತಮ್ಮನನ್ನು ಕರೆಸಿದ್ದಾರೆ ನಂತರ ಅವರ ತಂದೆಯನ್ನು ಕರೆಯಿಸಿದ್ದಾರೆ. ಯಾವಾಗ ಪೊಲೀಸ್ ಅಧಿಕಾರಿಗಳು ಈ ಪ್ರಕರಣದಲ್ಲಿ ಕೈ ಹಾಕಿದರೋ ಅಲ್ಲಿಂದ ನಂತರ ಉದ್ದೇಶಪೂರ್ವಕವಾಗಿ ಟಿ.ವಿ. ಮಾಧ್ಯಮಗಳಲ್ಲಿ ಭಿತ್ತರವಾದಂಥಹ ಅವರ ಹೇಳಿಕೆಗಳನ್ನು ಕಡೆಗಣಿಸಿದ್ದಾರೆ. ನಮಗೆ ಸಂದೇಹ ಬರುವಂಥಹದ್ದೇನೆಂದರೆ ಇವರೆಲ್ಲಾ ಹೇಳಿದ ಸಂಗತಿಗಳೇನೆಂದರೆ ಇಡೀ ಘಟನೆಗೆ ಯಾವುದೋ ಕಾರಣವಾಯಿತೋ ಈ ವಿಚಾರವನ್ನು ತದನಂತರ ಏತಕ್ಕೆ ಕಡೆಗಣಿಸಿದರು. ಈ ಬಗ್ಗೆ ಆದ್ಯತೆ ಕೊಡದೇ ಏತಕ್ಕೆ ಶ್ರೀ ಎಂ.ಕೆ.ಗಣಪತಿಯವರ ತಮ್ಮನನ್ನು ಹಾಗೂ ಅವರ ತಂದೆಯನ್ನು ಕರೆಯಿಸಿ ಈ ರೀತಿಯ ಹೇಳಿಕೆಗಳನ್ನು ಕೊಟ್ಟು ಎಫ್.ಐ.ಆರ್. ಮಾಡುವಂತಹ ಪ್ರಯತ್ನಗಳನ್ನು ಏತಕ್ಕೆ ಮಾಡಿದರು. ಇಲ್ಲಿ ನಮಗೆ ಸಂದೇಹ ಬರುತ್ತಿದೆ. ಇಡೀ ಘಟನೆಗೆ ಕಾರಣವಾದಂತಹದ್ದು ಟಿ.ವಿ. ಮಾಧ್ಯಮಗಳಲ್ಲಿ ಭಿತ್ತರವಾಯಿತು. ಆದಾದ ಮೇಲೆ ಅವರಿಗೂ ಸಂದೇಹ ಬಂದಿದೆ. ಶ್ರೀ ಎಂ.ಕೆ.ಗಣಪತಿಯವರು ಏನೋ ಒಂದು ಹೇಳಿಕೆಯನ್ನು ಮಾಡಿದ್ದಾರೆ. ಅವರು ಏನೋ ಅನಾಹುತ ಮಾಡಿಕೊಳ್ಳಬಹುದೆಂದು ಭಾವಿಸಿ ಹುಡುಕಿ ಅವರನ್ನು ಎಂದು ಕಳುಹಿಸಿದ್ದಾರೆ. ಆದರೆ ಯಾವಾಗ ಅಲ್ಲಿಗೆ ಪೊಲೀಸ್ ಅಧಿಕಾರಿಗಳು ಪ್ರವೇಶಿಸಿ ಈ ಘಟನೆಯನ್ನು ನೋಡಿದರೋ ಅಲ್ಲಿಂದ ಟಿ.ವಿ. ಮಾಧ್ಯಮದ ದೃಶ್ಯಾವಳಿಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ.

ಅಲ್ಲಿ ನಮಗೆ ಸಂದೇಹ ಬರುತ್ತಿದೆ.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ಅಲ್ಲಿ ಎಡವಿದ್ದಾರೆ... ಅಂದರೆ ಆತುರದ ಮನುಷ್ಯ, ಸಾಕ್ಷಿಯನ್ನು ಮುಚ್ಚಿಡುವಂತಹ ವ್ಯಕ್ತಿ ಮತ್ತು ಈ ವಿಚಾರವನ್ನು ದಿಕ್ಕು ತಪ್ಪಿಸುವಂತಹ ವ್ಯಕ್ತಿ ಮಾತ್ರ ಈ ಪ್ರೊಸೀಜರ್‌ಗಳನ್ನು ಅನುಸರಿಸುವುದಿಲ್ಲ. ಇಲ್ಲಿ ಪ್ರೊಸೀಜರ್ ಲಾಪ್ಸ್ ತುಂಬಾ ಇದೆ. ಈ ಬಗ್ಗೆ ಅವರ ಶ್ರೀಮತಿಗೆ ಮಾಹಿತಿ ತಿಳಿಸಬೇಕಾಗಿತ್ತು, ತಿಳಿಸಿಲ್ಲ. ನಂತರ ಅವರ ತಂದೆಯವರಿಗೆ ತಿಳಿಸುತ್ತಾರೆ, ತಮ್ಮನಿಗೆ ತಿಳಿಸುತ್ತಾರೆ. ಅವರ ಮಕ್ಕಳಿಗೆ ತಿಳಿಸಬೇಕು, ತಿಳಿಸಿಲ್ಲ ಅದಕ್ಕಾಗಿ ನಾನು ಈ ವಿಚಾರವನ್ನು ಹೇಳುತ್ತಿರುವುದು. ಅವರ ತಂದೆಯವರು ಮೃತರ ಜೊತೆ ಒಟ್ಟಿಗೆ ವಾಸಿಸುತ್ತಿದ್ದರಾ? ಅವರ ತಮ್ಮ ಒಟ್ಟಿಗೆ ವಾಸಿಸುತ್ತಿದ್ದರಾ? ನೀವು ಎಲ್ಲವನ್ನೂ legality ಯಿಂದಲೇ ಬೇಡಿ... ಮೊದಲು ಮೃತ ವ್ಯಕ್ತಿಯ ಬಗ್ಗೆ ಯಾರಿಗೆ ಮಾಹಿತಿ ತಿಳಿಸಬೇಕು. ಒಂದು ವೇಳೆ ನಾನು ಸತ್ತರೆ ನನ್ನ ಸಾವಿನ ಬಗ್ಗೆ ಮೊದಲು ಯಾರಿಗೆ ಮಾಹಿತಿ ನೀಡಬೇಕು. ಊರಿನಲ್ಲಿರುವ ನನ್ನ ತಮ್ಮನಿಗೆ ಅಥವಾ ಸತ್ತಿರುವ ನನ್ನ ಅಪ್ಪನಿಗೆ ತಿಳಿಸಬೇಕಾ? ನೀವು ಮಾಹಿತಿ ನೀಡಬೇಕಾಗಿರುವುದು ಮೃತನ ಹೆಂಡತಿಗೆ, who is directly concerned to him. ಅದಕ್ಕಾಗಿ ಮೊದಲ ಅವಲಂಬಿತರು ಯಾರು ಎಂದು ನಾನು ಹೇಳುತ್ತಿರುವುದು. ಹಾಗಾಗಿ ಕೆಲಸವಾಗಿಲ್ಲ. ಅಂದರೆ, ಆ ಡಾಕ್ಯುಮೆಂಟ್ ಏನಿದೆ, ಆ death note ಅಲ್ಲ, ಆ ಮಹಜರ್ ಎಂದು ಏನು ತೆಗೆದುಕೊಂಡಿದ್ದಾರೆ ಅವುಗಳೆಲ್ಲಾ null and void in the eyes of law. ಎರಡನೆಯದು, ಈ ಆತ್ಮಹತ್ಯೆಗೆ ಸಾಕ್ಷಿಗಳಿಲ್ಲ. ಯಾವುದೇ ವ್ಯಕ್ತಿ ಬರೆಯುವುದಕ್ಕೆ ಗೊತ್ತಿದ್ದರೆ, ಓದುವುದಕ್ಕೆ ಗೊತ್ತಿದ್ದರೆ ಆತನೇ ಅವನ ಮರಣ ಪತ್ರವನ್ನು ಬರೆಯಬೇಕು. ಈ ವಿಚಾರವನ್ನು ಕಾನೂನು ಹೇಳುತ್ತದೆ. ಹಿಂದೆ ಅನಕ್ಷರಸ್ಥರು ಇರುತ್ತಿದ್ದರು. ಆಗಿನ ಕಾಲದಲ್ಲಿ ಯಾರೋ ಬರೆಯುವ ಮತ್ತು ಅದಕ್ಕೆ ಯಾರೋ ಸಹಿ ಹಾಕುವ ಪದ್ಧತಿ ಇತ್ತು. ಈ ದಿನ ಎಷ್ಟೋ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸ್ವಾಮಿ, ಅವರು ಬರೆದುಕೊಂಡಿರುವುದಕ್ಕೆ ನಾವು ಸಹಿ ಹಾಕಿದ್ದೇವೆಂಬ ಹೇಳಿಕೆಯ ಆಧಾರದ ಮೇಲೆ ಖುಲಾಸೆಯಾಗಿವೆ. ಇವತ್ತು ದಿನಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಅದೇನೆಂದರೆ 'ಸೊಸೆ ಮತ್ತು ಮಗ ನೀಡಿರುವ ದೂರೇ ಅಂತಿಮ'. ಯಾರು ಹೇಳುತ್ತಾರೆ. ಯಾವ ತಂದೆ ಹೇಳಿಕೆಯನ್ನು ನೀಡಿದ್ದಾರೋ...ಹೇಳಿಕೆಯನ್ನು ನೀಡಿರುವುದಲ್ಲ ತೆಗೆದುಕೊಂಡಿರುವುದು ಆ ವ್ಯಕ್ತಿಯೇ 'ನಾನು ನೀಡಿರುವ ಹೇಳಿಕೆಯನ್ನು ಅಸಿಂಧುಗೊಳಿಸಿಯೆಂದು ಹೇಳುತ್ತಾರೆ, ಡಿವೈಎಸ್‌ಪಿ ತಂದೆ ಕುಶಾಲಪ್ಪ. ಸೊಸೆ ಮಗ ನೀಡಿರುವ ದೂರೇ ಅಂತಿಮ'. ಹೌದು, ಸರಿಯಾಗಿದೆ. Jurisprudence ಪ್ರಕಾರ ಅಥವಾ ಸಾಮಾನ್ಯ ಜ್ಞಾನದ ಪ್ರಕಾರ ಅವರು ನೀಡಿರುವ ಹೇಳಿಕೆಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. Where their

statement does stands? ಅವರು ಬಳಿ ತಾವು ತೆಗೆದುಕೊಂಡ ಹೇಳಿಕೆ ಎಲ್ಲಿ ಉಳಿಯುತ್ತದೆ, ಅದು ಅಸಿಂಧುವಾಗುತ್ತದೆ. ಒಂದು ವೇಳೆ ನ್ಯಾಯಾಲಯದಲ್ಲಿ ಯಾವುದೋ ಒಂದು ವಿಚಾರಣೆ ನಡೆಯುತ್ತಿರುವಾಗ ಸಾಕ್ಷಿಯು ತನ್ನ ಸಾಕ್ಷ್ಯವನ್ನು ನುಡಿಯುವಾಗ ತಾನೇ ಕೊಲೆ ಮಾಡಿದ್ದರೂ ಸಹ ತಾನು ಮಾಡಿಲ್ಲವೆಂದು ಸಾಕ್ಷ್ಯವನ್ನು ನುಡಿಯುತ್ತಾನೆ. ಅಂತಹ ಎಷ್ಟೋ ಪ್ರಕರಣಗಳು ಇಂದು ಖುಲಾಸೆಯಾಗಿವೆ. ಪ್ರಕರಣ ಒಂದು ಅಂತಿಮ ಘಟ್ಟ ತಲುಪಿದ್ದಾಗ ಪ್ರತಿಕೂಲ ಸಾಕ್ಷಿಯನ್ನು ಕರೆತರುತ್ತಾರೆ, ಈಗ ಹೇಗೆ ಒತ್ತಡವನ್ನು ಹೇರಿ ಸಾಕ್ಷಿಯನ್ನು ಕರೆತಂದರೋ ಹಾಗೆ. ಈ ರೀತಿ ಸಾಕ್ಷಿಯನ್ನು ನ್ಯಾಯಾಲಯದ ಮುಂದೆ ಕರೆತಂದಾಗ ಆತ (hostile witness) ಪ್ರತಿಕೂಲ ಸಾಕ್ಷಿಯಾಗುತ್ತಾನೆ. ಈ ರೀತಿ ಪ್ರತಿಕೂಲ ಸಾಕ್ಷ್ಯದಿಂದಾಗಿ ನ್ಯಾಯಾಲಯ ಪ್ರಕರಣದಲ್ಲಿ ಆರೋಪಿತರನ್ನು ಖುಲಾಸೆ ಮಾಡುತ್ತದೆ. ಹಾಗಾದರೆ ಈ ಪ್ರಕರಣದಲ್ಲಿ ಏತಕ್ಕೆ ಹೀಗೆ ಮಾಡಬಾರದು? ಇದರಲ್ಲಿ ಹೇಳಿಕೆ ನೀಡದೆ ಆ ವಿಚಾರವನ್ನು ಬರೆದಿಲ್ಲ. ಇಲ್ಲವಾದಲ್ಲಿ ಅವರ ತಂದೆ ಬಾಯಿ ಮಾತಿನಲ್ಲಿ ಹೇಳಿರಬೇಕು ಅಥವಾ ಬರೆದುಕೊಟ್ಟಿರಬೇಕು. ಈಗ ಈ ಹೇಳಿಕೆ ಅಸಿಂಧುವಾಯಿತು. ಹಾಗಾದರೆ ಸಿಂಧು ಯಾವುದು? ಸಾಕ್ಷಿಯೇ ಇಲ್ಲ. ಹಾಗಾಗಿ ಈ ಪ್ರಕರಣದಲ್ಲಿ ವೈಜ್ಞಾನಿಕವಾಗಿ ನಡೆಯಬೇಕಾದಂತಹ ತನಿಖೆ ನಡೆದಿಲ್ಲ. ಕಾನೂನು ಉಲ್ಲಂಘನೆಯಾಗಿದೆ, ಒತ್ತಡದಿಂದ ಹೇಳಿಕೆಯನ್ನು ಪಡೆದಿದ್ದಾರೆ. ಆ ನಂತರ ಈ ಹೇಳಿಕೆಯಲ್ಲಿ criminal intimidation ಇದೆ. Abetment ಇದೆ. ಶ್ರೀ ಎಂ.ಕೆ.ಗಣಪತಿಯವರ ಸಾವಿಗೆ ಅವರು ಹೇಳಿರುವುದು ಒಂದು ದಾಖಲೆ ಮತ್ತು ಆತನಿಗೆ ಕೊಟ್ಟಿರುವ ಕಿರುಕುಳ ಬೇರೆ ದಾಖಲೆ. ಅವೆಲ್ಲವೂ ಕೂಡ all these circumstances made him to commit suicide ಅನ್ನುವಂತದರಲ್ಲಿ ಎರಡು ಮಾತಿಲ್ಲ. ಮೂರನೆಯದು, ಈಗ ಅವನ ಹಿನ್ನೆಲೆ ಏನು? Anti-social element, ದಗಾಕೋರರನ್ನು ಹಿಡಿದಿರುವಂತಹದ್ದು. ಇದಕ್ಕೆ ಅನೇಕ ಸಾಕ್ಷಿಗಳಿವೆ, ಅಲ್ಲವೇ? ಕೊಲೆಗಡುಕರನ್ನು ಹಿಡಿದಿದ್ದಾರೆ, ಒಬ್ಬರನ್ನು ಎನ್‌ಕೌಂಟರ್ ಮಾಡಿ ನಂತರ ಏನೇನು ಅನಾಹುತಗಳಾಯಿತು ಅವೆಲ್ಲವನ್ನು ಮುಗಿಸಿದ್ದಾರೆ. ಇಂತಹ ವ್ಯಕ್ತಿಗೆ ಆತ ಮಾನಸಿಕ ಅಸ್ವಸ್ಥ ಎಂದು ಒಂದು ಅಭಿಪ್ರಾಯಕ್ಕೆ ಬರುವುದಾದರೆ ಎಲ್ಲಾ ಪೊಲೀಸ್ ಅಧಿಕಾರಿಗಳು ಕೂಡ ಮಾನಸಿಕ ಅಸ್ವಸ್ಥರೆ, ಆದ್ದರಿಂದ ಎಲ್ಲಾ ಅಧಿಕಾರಿಗಳಿಗೂ ಮಾನಸಿಕ ಅಸ್ವಸ್ಥರೆಂದು ಪ್ರಮಾಣಪತ್ರವನ್ನು ನೀಡಿ. ಏಕೆಂದರೆ ಇಂತಹ ಒಳ್ಳೆಯ ಕೆಲಸ ಮಾಡಿದಂತಹ ವ್ಯಕ್ತಿಗೆ ನೀವು ಮಾನಸಿಕ ಅಸ್ವಸ್ಥರೆಂದು ಪ್ರಮಾಣ ಪತ್ರ ನೀಡಿದರೆ ಹೇಗೆ? ಕಾನೂನು ಎಂದರೆ ಕಥೆ ಇದ್ದ ಹಾಗೆ. ಇದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. "ಒಬ್ಬ ರಾಜ ತಾನು ರೈಲಿನಲ್ಲಿ ಪ್ರಯಾಣ ಮಾಡಬೇಕು ಎಂದನಿಸಿದಾಗ ರೈಲಿನಲ್ಲಿ ಪ್ರಯಾಣ ಮಾಡಿದ. ಒಂದು ಕೆರೆಯನ್ನು ನೋಡಿ ಆ ಕೆರೆಯಲ್ಲಿ ಸ್ನಾನ ಮಾಡಬೇಕೆಂದು ಇಚ್ಛಿಸಿ ಆ ಕೆರೆಯಲ್ಲಿ ಸ್ನಾನ ಮಾಡಿದನು ಮತ್ತು ತನ್ನ ರಾಜಧಾನಿಯನ್ನು ಕತ್ತಲೆಯಲ್ಲಿ ನೋಡಬೇಕೆಂದು ಭಾವಿಸಿ ಇಡೀ ರಾತ್ರಿ ಆ ರಾಜಧಾನಿಯಲ್ಲಿ ಬೀದಿ ದೀಪಗಳನ್ನು ಆರಿಸಿದನು. ಆ ಕತ್ತಲಲ್ಲಿ ಒಬ್ಬನೇ ಓಡಾಡುತ್ತಿದ್ದನು. ಒಂದು ಡಿ.ಸಿ.ಯನ್ನು ಕಾಣಬೇಕೆಂದು ಹೋದನು ಅಲ್ಲಿ ಆ ರಾಜನನ್ನು ಕಾವಲುಗಾರ ತಡೆಯುತ್ತಾನೆ ಆಗ ರಾಜ ತಡೆಗೋಡೆಯನ್ನು ಹೊಡೆದು ಹೋಗುತ್ತಾನೆ. ನಂತರ ವಾದ ವಿವಾದಗಳು ನಡೆದು ರಾಜನು ಹುಚ್ಚ ಎಂದು ತೀರ್ಮಾನವಾಗುತ್ತದೆ. ನಂತರ ಅವರು ಮೇಲಿನ ಕೋರ್ಟ್‌ಗೆ ಅಫೀಲು ಹೋಗುತ್ತಾರೆ. ಅಲ್ಲಿ ಒಬ್ಬ ಬುದ್ಧಿವಂತ ವಕೀಲರು, ಕೆಳಗಿನ ನ್ಯಾಯಾಲಯದಲ್ಲಿರುವ ವಕೀಲರಿಗಿಂತ ಬಹಳ ಬುದ್ಧಿವಂತ ವಕೀಲರಾಗಿದ್ದರು. ಆ ವಕೀಲರು ರಾಜನ ಪರ ವಾದ ಮಾಡಿ ಒಬ್ಬ ರಾಜನಾದವನಿಗೆ ತನ್ನ ರಾಜಧಾನಿಯನ್ನು ಕತ್ತಲಲ್ಲಿ ನೋಡಬೇಕೆಂಬ ಉದ್ದೇಶವಿರುತ್ತದೆ. ರಾತ್ರಿ ವೇಳೆ ರಾಜಧಾನಿಯಲ್ಲಿ ಏನೇನು ಬೆಳವಣಿಗೆಗಳು ನಡೆಯಬಹುದು ಎಷ್ಟು ಕೊಲೆಗಳಾಗಬಹುದು ಎಂಬ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕೆಂದು ಆ ದಿನ ರಾತ್ರಿ ಇಡೀ ರಾಜಧಾನಿಯ ಬೀದಿ ದೀಪಗಳನ್ನು ಆರಿಸಿದ್ದಾನೆ. ಇದು ಒಬ್ಬ ಬುದ್ಧಿವಂತ ರಾಜ ಮಾಡಬಹುದಾದಂತಹ ಕೆಲಸವನ್ನು ಈ ರಾಜನು ಮಾಡಿದ್ದಾನೆಂದು ವಾದ ಮಾಡಿದನು. ಈ ವಾದವನ್ನು ನ್ಯಾಯಾಲಯವು ಮಾನ್ಯ ಮಾಡಿತು. ಆದರೆ ರೈಲನ್ನು ಏತಕ್ಕೆ ನಿಲ್ಲಿಸಿದನು ಎಂಬ ಪ್ರಶ್ನೆಗೆ ಆತ ಚಲಿಸುವ ರೈಲನ್ನು ಚೈನ್ ಎಳೆದು ನಿಲ್ಲಿಸಿದ್ದಾನೆ ಅದಕ್ಕಾಗಿ ಆತ ದಂಡವನ್ನು ಸಹ ಕಟ್ಟಿದ್ದಾನೆ. ಕೆರೆ ಬಳಿ ಹೋಗಿ ಆ ಕೆರೆಯಲ್ಲಿ ಇಷ್ಟೊಂದು ನೀರು ಇದ್ದು, ಇದರಿಂದ ನನ್ನ ರಾಜ್ಯಕ್ಕೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆ ಎಂಬ ಉದ್ದೇಶದಿಂದ ಅಲ್ಲಿಗೆ ಹೋಗಿದ್ದನೆಂದು ವಾದ ಮಾಡಿದನು. ಇವುಗಳೆಲ್ಲವೂ ಕೂಡ ಒಬ್ಬ ಬುದ್ಧಿವಂತ ರಾಜ ಮಾಡುವ ಲಕ್ಷಣಗಳು ಮತ್ತು ಅವನು

ತೆಗೆದುಕೊಂಡಂತಹ ನಿರ್ಣಯಗಳು ಹಾಗೂ ಅವನ ಮಾಡಿದ ತಪ್ಪಿಗಾಗಿ 50/– ರೂಗಳ ದಂಡವನ್ನು ಸಹ ಕಟ್ಟಿದ್ದಾನೆ. ಆತ ಒಬ್ಬ ಉತ್ತಮ ರಾಜನೆಂದು ತೀರ್ಮಾನವಾಗುತ್ತದೆ. ಅಲ್ಲಿ ಕಾವಲು ಕಾಯುತ್ತಿದ್ದ ಕಾವಲುಗಾರ ರಾಜನನ್ನು ಒಳಗಡೆ ಬಿಡಲಿಲ್ಲ, ಇದಕ್ಕಾಗಿ ರಾಜ ಆತನ ಮೇಲೆ ಕೋಪ ಮಾಡಿಕೊಳ್ಳಲಿಲ್ಲ ಅಥವಾ ಆತನ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಲಿಲ್ಲ ಬದಲಾಗಿ ತಡೆಗೋಡೆಯನ್ನು ಮುರಿದು ಒಳ ಹೋದನು. ಮಾರನೆಯ ದಿನ ಅಲ್ಲಿ ಹೊಸ ತಡೆಗೋಡೆಯನ್ನು ನಿರ್ಮಿಸಿದನು.

**ಶ್ರೀ ಜಿ.ರಘು ಆಚಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನದೊಂದು ಸಂಶಯವಿದೆ ಮಾನ್ಯ ಡಿ.ಎಸ್.ವೀರಯ್ಯನವರೇ...

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಹೇಳಿಕೆಯನ್ನು ಮೊದಲು ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಜಿ.ರಘು ಆಚಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ವೀರಯ್ಯನವರು ಹೇಳಿದ ಉಪಕಥೆಯಲ್ಲಿ ನನಗೆ ಒಂದು ಗೊಂದಲವಿದೆ. ತಾವು ಹೇಳಿದ ಹಾಗೆ ರಾಜ ತನ್ನ ರಾಜಧಾನಿಯನ್ನು ಕತ್ತಲಲ್ಲಿ ನೋಡಬೇಕೆಂಬ ಆಸೆಯಿಂದ ಬೀದಿದೀಪಗಳನ್ನು ಆರಿಸಿ ವೀಕ್ಷಣೆಗೆ ಹೋದನೆಂದು ಹೇಳಿದ್ದಾರೆ ಆದರೆ ಆ ರಾಜನಿಗೆ ಕತ್ತಲಲ್ಲಿ ಏನಾದರೂ ಕಾಣಿಸಿತೇ? ಅದಕ್ಕಾಗಿ ಆ ರಾಜ ಟಾರ್ಚ್ ಏನಾದರೂ ತೆಗೆದುಕೊಂಡು ಹೋಗಿದ್ದರೆ?...

**(ಗೊಂದಲ)**

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ಅವನಿಗೆ ಕಾಣಿಸುವಷ್ಟು ವ್ಯವಸ್ಥೆಯನ್ನು ಆತ ಮಾಡಿಕೊಂಡು ಹೋಗಿದ್ದನು.

**(ಗೊಂದಲ...)**

**ಶ್ರೀ ಡಿ.ಎಸ್.ವೀರಯ್ಯ:–** ಇವುಗಳೆಲ್ಲಾ ಅನಾವಶ್ಯಕ ಪ್ರಶ್ನೆಗಳು. ಈ ಎಲ್ಲಾ ಕಾರಣಗಳಿಂದಾಗಿ ನ್ಯಾಯಾಲಯವು ಈತನೇ ಉತ್ತಮ ರಾಜನೆಂದು, ಈತ ಮಾಡಿರುವುದು ಪ್ರಜೆಗಳ ಒಳಿತಿಗಾಗಿಯೇ, ಅವರ ರಕ್ಷಣೆಗಾಗಿ ಎಂದು ಮತ್ತು ಈ ಎಲ್ಲಾ ಪರೀಕ್ಷೆಗಳು ವೈಜ್ಞಾನಿಕವಾಗಿವೆ, ಬುದ್ಧಿವಂತ ತೀರ್ಮಾನಗಳಾಗಿವೆ ಆದ್ದರಿಂದ ಆತ ಉತ್ತಮ ರಾಜನೆಂದು, ಹುಚ್ಚನಲ್ಲವೆಂದು ತೀರ್ಪನ್ನು ನೀಡಿತು. ಎರಡು ರೀತಿಯ ವಾದಗಳು... ಅದು ನ್ಯಾಯಾಲಯದಲ್ಲಿ ಆಗಬೇಕು. ಇಲ್ಲಿ ನಾವು ಈ ಸದನದಲ್ಲಿ ವಕೀಲಿ ವೃತ್ತಿಯನ್ನು ಮಾಡುತ್ತಿಲ್ಲ. ತಾವು ಕೂಡ ನ್ಯಾಯಾಧೀಶರ ಕೆಲಸವನ್ನು ಮಾಡುತ್ತಿಲ್ಲ. ಇಲ್ಲಿ ನಾವು ಸಾರ್ವಜನಿಕರ ಮನಸ್ಸಿನಲ್ಲಿ ಏನಿದೆ, ಅವರ ಸಮಸ್ಯೆಗಳೇನೆಂದು ಅದಕ್ಕೆ ಪರಿಹಾರ ತೆಗೆದುಕೊಳ್ಳುವುದಕ್ಕೆ ಇಲ್ಲಿ ಕುಳಿತಿದ್ದೇವೆ. ತಾವು ಇಲ್ಲಿ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತು ತಾವೊಬ್ಬರೇ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ ಅಥವಾ ನನ್ನ ವಾದವನ್ನು ಆಲಿಸಿ ನೀವು ಸರಿಯೋ, ತಪ್ಪೋ ಎಂದು ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಇಲ್ಲಿ ಎಲ್ಲವೂ ಸರ್ವಾನುಮತದಿಂದ ಅಂಗೀಕಾರವಾಗಬೇಕು. ಒಂದು ಬಿಲ್ ಪಾಸ್ ಮಾಡಬೇಕಾದರೆ ಮೂರು ಸಲ **'ಹೌದು'** ಎಂದು ಹೇಳಿಸುತ್ತಾರೆ. ಬಲಾಬಲವನ್ನು ನೋಡುತ್ತಾರೆ. ಬೆಂಚ್ ಡಿವೈಡ್ ಮಾಡುತ್ತೀರಿ. ನಂತರ ವಿಧೇಯಕವನ್ನು ಪಾಸ್ ಮಾಡುತ್ತಾರೆ. ಅಂತಹದ್ದರಲ್ಲಿ ಇಲ್ಲಿ ವಾದವನ್ನು ಎಳೆ ಎಳೆಯಾಗಿ ಬಿಡಿಸುವ ಅಗತ್ಯವಿಲ್ಲ ಮತ್ತು ಸೆಕ್ಷನ್‌ಗಳನ್ನು ಹೇಳುವಂಥಹ ಅಗತ್ಯವಿಲ್ಲ. ಹಾಗಾಗಿ, ಶ್ರೀಎಂ.ಕೆ.ಗಣಪತಿಯವರು ತಮ್ಮ ಸೇವಾವಧಿಯಲ್ಲಿ ಅನೇಕ ಜೂಜುಕೋರರನ್ನು, ಕೊಲೆಗಡುಕರನ್ನು ಬಂಧಿಸಿದವರನ್ನು ಹಾಗೂ ಕಾಳಸಂತೆಕೋರರನ್ನು ಜೈಲಿಗೆ ಕಳುಹಿಸಿದವರನ್ನು ನೀವು ಹುಚ್ಚನೆಂದು ಪರಿಗಣಿಸಲು ಸಾಧ್ಯವಿಲ್ಲ ಆತ ಮಹಾನ್ ಬುದ್ಧಿವಂತ ಮತ್ತು ಕರ್ತವ್ಯ ಪ್ರಜ್ಞೆಯುಳ್ಳವನು, ಆತ ಯಾವುದೋ ಒಂದು ಶಿಫಾರಸ್ಸಿನ ಮೇರೆಗೆ ಕೆಲಸಮಾಡಿದವನಲ್ಲ. ಇಂತಹ ಒಳ್ಳೆಯ ಕೆಲಸ ಮಾಡಿದವನನ್ನು, ಒಳ್ಳೆಯ ಹಿನ್ನೆಲೆಯಿರುವ ವ್ಯಕ್ತಿಯನ್ನು...ಇದಕ್ಕೆ ನನ್ನ ಬಳಿ ದಾಖಲೆಗಳಿವೆ. ದಾಖಲೆಗಳಿಲ್ಲದೆ ನಾನು ಮಾತನಾಡುತ್ತಿಲ್ಲ. ಇಂತಹ ವ್ಯಕ್ತಿಯನ್ನು ಸಾರಾಸಗಟಾಗಿ

ಆತ ಮಾನಸಿಕ ಅಸ್ವಸ್ಥನೆಂದು ಅದು, ಆತ ಸತ್ತ ನಂತರ ಈ ತೀರ್ಮಾನಕ್ಕೆ ಬಂದಿರುವುದು ಪೊಲೀಸ್ ಇಲಾಖೆಯ ತನಿಖಾಧಿಕಾರಿಗಳು ಮಾಡಿದಂತಹ ಒಂದು ಷಡ್ಯಂತ್ರವೆಂದು ಮತ್ತು ಮಹಾಪರಾಧ ಹಾಗೂ ಇದು ಜನಗಳ ದೃಷ್ಟಿಯಲ್ಲಿ ಇದೊಂದು ಆರೋಗ್ಯಕರವಾದ ಬೆಳವಣಿಗೆಯಲ್ಲ. ಜನ ಹೊರಗಡೆ ಕಾಯುತ್ತಿದ್ದಾರೆ, ಗಣಪತಿಯವರ ವಿಚಾರ ಏನಾಯಿತು ಎಂದು ನಮ್ಮನ್ನು ಕೇಳುತ್ತಿದ್ದಾರೆ. ಹಾಗಾದರೆ ನಾವು ವಿರೋಧ ಪಕ್ಷದಲ್ಲಿದ್ದು ತಾವು ಏನು ಹೇಳಿದರೂ ಕೇಳಿಕೊಂಡು ಸುಮ್ಮನೆ ಇರಬೇಕಾ? ಹಾಗಾಗಿ ಅವನು ಬಹಳ ಬುದ್ಧಿವಂತ, ಅವನನ್ನು **"ಹುಚ್ಚ"** ಎಂದುಕರೆಯುವ ಮುಖಾಂತರ ಆ ಕುಟುಂಬಕ್ಕೆ, ಈ ಸಮಾಜಕ್ಕೆಒಂದುಕೆಟ್ಟ ಸಂದೇಶವನ್ನು ಕಳಿಸಿದಂತೆ ಆಗುತ್ತದೆ.ಅವನು **"ಹುಚ್ಚ"** ಎಂದುತೀರ್ಮಾನ ಮಾಡುವಂಥವರು psychiatrists.

**ಶ್ರೀ ಪುಟ್ಟಣ್ಣ:-**ಅವರು ಕೊಡುತ್ತಿರುವಂತಹ more than 80% ನೋಡಿದರೆ category ಯಲ್ಲಿ ಬರುತ್ತಾರೆ. ಒಂದೊಂದು ವರ್ಷಕ್ಕೂ ವರ್ಗಾವಣೆ ಮಾಡಿದರೆ ಅವರು ಮಕ್ಕಳನ್ನು ಸ್ಕೂಲಿಗೆ ಎಲ್ಲಿಗೆ ಸೇರಿಸುತ್ತಾರೆ, ಅವರು ಹೆಂಡತಿ ಮಕ್ಕಳ ಜೊತೆಯಲ್ಲಾಗಲಿ ಅವರ ಅಪ್ಪ-ಅಮ್ಮನ ಜೊತೆಯಲ್ಲಾಗಲಿ ಎಲ್ಲಿ ಇರುವುದಕ್ಕೆ ಸಾಧ್ಯ? ಇವರು ಅದನ್ನು ಲೆಕ್ಕ ಹಾಕಿದರೆ ಎಲ್ಲರೂ ಖಿನ್ನತೆಗೆ ಒಳಗಾಗಿರುವವರೆ, ಎಲ್ಲರೂ ಮಾನಸಿಕ ಅಸ್ತವ್ಯಸ್ಥರೆ.ನೀವು ಎಲ್ಲರನ್ನೂ ಅದೇ ರೀತಿ ನೋಡಬೇಕಾಗುತ್ತದೆ. ಅವನು ಸಾಯುವವರೆವಿಗೂ ಚೆನ್ನಾಗಿದ್ದ. ಕರ್ತವ್ಯ ನಿರ್ವಹಿಸುತ್ತಿದ್ದ. ಆದರೆ ಆತ ಸತ್ತುಹೋದ ಮೇಲೆ ಮಾತ್ರ ಖಿನ್ನತೆಗೆ ಒಳಗಾಗಿದ್ದಾರೆ. ಇದು ಸರಿಯಲ್ಲ.

**ಶ್ರೀ ಡಿ.ಎಸ್.ವೀರಯ್ಯ:-** ಅವರು ಹೇಳಿದಂತಹ ಯಾವ ಸಾಕ್ಷಿಯನ್ನು ತೆಗೆದುಕೊಂಡಿದ್ದೀರಿ? ಆ ಡಾಕ್ಯುಮೆಂಟ್ ತರಿಸಿ.

**ಶ್ರೀ ಕೆ.ಅಬ್ದುಲ ಜಬ್ಬಾರ್:-**ಅವರು ಹೇಳಿದಂತಹ ಮಾತುಗಳನ್ನೆಲ್ಲಾ ವಿಡಿಯೋ ಮಾಡಲಾಗಿದೆ.

**ಶ್ರೀ ಡಿ.ಎಸ್.ವೀರಯ್ಯ:-** ನೀವು ವಿಡಿಯೋ ನಂಬುವುದಿಲ್ಲವೆಂದು ಹೇಳುತ್ತೀರಿ, ಪುನಃ ಈಗ ವಿಡಿಯೋರೆಕಾರ್ಡಿಂಗ್ ಎಂದು ಹೇಳುತ್ತೀರಿ. ಒಂದುಕಡೆ ಹೇಳುತ್ತೀರಿ ವಿಡಿಯೋದಲ್ಲಿ ಬಂದಿದ್ದೆಲ್ಲಾ ಸಾಕ್ಷಿಯೇಎಂದು ಕೇಳುತ್ತೀರಿ. ಇನ್ನೊಂದು ಕಡೆ ವಿಡಿಯೋ ತೆಗೆದಿದ್ದಾರೆ ಎಂದು ನೀವೆ ಹೇಳುತ್ತೀರಿ. ನೀವು ಗೊಂದಲಮಯವಾದಂತಹ ಸ್ಟೇಟ್‌ಮೆಂಟ್‌ಕೊಡಬೇಡಿ. ನಾನು ಕೇಳುತ್ತಿರುವಂಥದ್ದು ನೀವು ಹೇಗೆ conclusion ಮಾಡಿದಿರಿ? ನೀವೇನಾದರು Are you a psychiatrist? ನೀವು psychiatrist ಆಗಿ ನಿಮ್ಹಾನ್ಸ್‌ನಲ್ಲಿ ಏನಾದರು ಸರ್ಟಿಫಿಕೇಟ್ ತೆಗೆದುಕೊಂಡಿದ್ದೀರಾ? ಇವರು ಮಾನಸಿಕವಾಗಿ ಅಸ್ತವ್ಯಸ್ಥರು ಎಂದು ಹೇಳುವವರು ಯಾರು? ಯಾರು insane ಎಂದುಹೇಳುವುದಕ್ಕೆ ಆಗುವುದಿಲ್ಲ. ಆನಂತರenquiry ಗೆ ಹಾಕಿಸಿದರಿ. Preliminary enquiry ಆಯಿತು. ಯಾರ ಹತ್ತಿರ ಹೋಗಬೇಕು ಅವರು? ಸರ್ಕಾರ ಏನೇ ಮಾಹಿತಿ ತೆಗೆದುಕೊಳ್ಳಬೇಕಿದ್ದರೆ ಮೊದಲು ಅವರ ಹೆಂಡತಿಯ ಬಳಿ ಹೋಗಿ ಸ್ಟೇಟ್‌ಮೆಂಟ್ ತೆಗೆದುಕೊಳ್ಳಬೇಕಾಗಿತ್ತು. 'ಏನಮ್ಮ ಈ ರೀತಿ ಆಗಿದೆ, ನಿಮ್ಮ ಗಂಡನ ಜೊತೆ ನೀನು ಹೇಗಿದ್ದೆಎಂದುಅವರ ಹೇಳಿಕೆಯನ್ನು ಏನಾದರು ತೆಗೆದುಕೊಂಡಿದ್ದೀರಾ? ಆ ರೀತಿ ಮಾಡುವುದನ್ನು ಬಿಟ್ಟು ನೀವು ಅವರು ಮೆಡಿಸನ್ ತೆಗೆದುಕೊಂಡಿರುವಂತಹ ಆಸ್ಪತ್ರೆಗೆ ಹೋಗುತ್ತೀರಾ? ನಿಮಗೆ ಯಾರುಅಲ್ಲಿಗೆ ಹೋಗುವುದಕ್ಕೆ ಹೇಳಿದವರು?Is it a terms of reference?

**ಶ್ರೀ ಪುಟ್ಟಣ್ಣ:-**ಅವರ ಪತ್ನಿಯವರು ಸಂದರ್ಶನ 'ಕೊಟ್ಟಿದ್ದರು, ಅದು ಟಿ.ವಿ.ಯಲ್ಲಿಯೂ ಸಹ ಪ್ರಸಾರಗೊಂಡಿತ್ತು. ಅವರ ಕುಟುಂಬವನ್ನು ಕರೆಸಿ ಆನಂತರ ಮಹಜರು ಮಾಡಬೇಕಾಗಿತ್ತು. ಆಗ ನಿಮ್ಮ ಮೇಲೆ ಯಾವುದೇ ಆಪಾದನೆಯು ಬರುತ್ತಿರಲಿಲ್ಲ. ಆದರೆ ನೀವು ಅವರು ಬರುವುದಕ್ಕೂ ಮೊದಲೆ ಮಹಜರು ಮಾಡಿಬಿಟ್ಟಿರಿ. ಅವರ ತಂದೆಯವರು ಅಲ್ಲಿ ಪೇಪರ್‌ಗಳಿದ್ದವು ಆದರೆ ಈಗ ಅವೆಲ್ಲಾ ಕಾಣೆಯಾಗಿವೆ ಏನಾಯಿತೋ ಎಂದು ಹೇಳುತ್ತಿದ್ದಾರೆ. ನಾನು ಕೊಟ್ಟಿರುವಂತಹ ಸ್ಟೇಟ್‌ಮೆಂಟ್ ಏನಿದೆ ಅದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇನೆ, ಏಕೆಂದರೆ ಅವರು ಏನೋ ಬರೆದುಕೊಂಡು ಬಂದು ನನಗೆ ಸಹಿ ಮಾಡಿಎಂದು

ಹೇಳಿದರು ಅದಕ್ಕೆ ನಾನು ಸಹಿ ಮಾಡಿದೆ ಎಂದು ನಿನ್ನೆ ದಿವಸ ಹೇಳಿದ್ದಾರೆ. ಎಲ್ಲವನ್ನೂ ನೀವಾಗಿಯೇ ನೀವು ಮಾಡಿಕೊಂಡಿರುವುದು.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಡಿವೈಎಸ್ಪಿ ಗಣಪತಿಅವರು ಏನು ಮೆಡಿಕಲ್ ಶಾಪ್‌ನಲ್ಲಿ ಮೆಡಿಸನ್ ತೆಗೆದುಕೊಳ್ಳುತ್ತಿದ್ದರು ಆ ಶಾಪಿಗೆ ಹೋಗಿ ಅವರುಯಾವ ಮೆಡಿಸನ್ ತೆಗೆದುಕೊಳ್ಳುತ್ತಿದ್ದರು ಎಂದು ಕೇಳುತ್ತಾರೆ.ಆ ಮೆಡಿಸನ್ ಹೆಸರು ಅವರಿಗೆ ಗೊತ್ತಿತ್ತಾ? ಪೊಲೀಸರು ಯಾರು ಅಲ್ಲಿಗೆ ತನಿಖೆಗೆ ಹೋದರೋ ಅವರಿಗೆ ಮೆಡಿಸನ್ ಹೆಸರೆ ಗೊತ್ತಿಲ್ಲ. ಅವರಿಗೆ ಬೇಧಿ ಮಾತ್ರೆ ಅಥವಾ ಜ್ವರದ ಮಾತ್ರೆ ಗೊತ್ತಿರಬಹುದು. ಗಣಪತಿಯವರು ತೆಗೆದುಕೊಳ್ಳುತ್ತಿದ್ದಂತಹ ಮೆಡಿಸನ್ ಏನು ಎಂಬುದು ನಿಮ್ಮ ಪೊಲೀಸಿನವರಿಗೂ ಗೊತ್ತಿಲ್ಲ, ಐಎಎಸ್ ಅಧಿಕಾರಿಗಾಗಲಿ, ಐಪಿಎಸ್ ಅಧಿಕಾರಿಗೂ ಗೊತ್ತಿಲ್ಲ. ನೀವು ಏನೇ ಮಾಹಿತಿ ತೆಗೆದುಕೊಳ್ಳಬೇಕಿದ್ದರೆ ಮೊದಲು ಅವರ ಹೆಂಡತಿಯ ಬಳಿ ಹೋಗಿ ಸ್ಟೇಟ್‌ಮೆಂಟ್ ತೆಗೆದುಕೊಳ್ಳಬೇಕಾಗಿತ್ತು. ಅದುಬಿಟ್ಟು ಅವರು ಎಲ್ಲೆಲ್ಲಿ ಅಡ್ಮಿಟ್ ಆಗಿದ್ದರು, ಯಾವಂ ಯಾವ ವೈದ್ಯರು ಅವರಿಗೆ ಟ್ರೀಟ್‌ಮೆಂಟ್ ಮಾಡಿದ್ದರು ಎಂದು ಏನು ಮಾಹಿತಿ ಪಡೆದುಕೊಂಡಿದ್ದೀರಿ ಅದು illegal ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. It is not expected of an Investigating Officer. ಅಥವಾ ಸರ್ಕಾರವಾಗಲಿ ಅಥವಾ ಮೇಲಧಿಕಾರಿಗಳಾಗಲಿ ಏನಾದರು ಇದೇ ರೀತಿ ಮಾಡಿ ಎಂದು terms of reference ಕೊಟ್ಟಿದ್ದರೆ ಅದರ ಬಗ್ಗೆ ನಾನು ಹೇಳುವುದಕ್ಕೆ ಬರುತ್ತದೆಯೇ? ಆದರೆ ಸಾಮಾನ್ಯ ಪ್ರಜ್ಞೆ ಇರುವಂತಹ ತನಿಖಾಧಿಕಾರಿ ಮೊದಲು ಹೋಗಬೇಕಾದುದು ಎಲ್ಲಿಗೆ ಎಂದರೆಅವರು ಏನು ಹೇಳಿಕೆ ಕೊಟ್ಟಿದ್ದಾರೆ ಅದರಲ್ಲಿ ಯಾರ ಹೆಸರುಇದೆಅವರ ಹತ್ತಿರ ಹೋಗಿ ಏನಮ್ಮ ಈ ರೀತಿ ಪರಿಸ್ಥಿತಿ ಇತ್ತೇಎಂದು ಕೇಳಬೇಕಾಗಿತ್ತು. ಅಸ್ವಸ್ಥರಾಗಿ ಎಷ್ಟು ಸಲ ಆಸ್ಪತ್ರೆಗೆ ಅಡ್ಮಿಟ್ಆಗಿದ್ದಾರೆಂದು ಅವರನ್ನೇ ಕೇಳಬೇಕಾಗಿತ್ತು. ಅಲ್ಲಿ ರೆಕಾರ್ಡ ಸೃಷ್ಟಿ ಮಾಡುವುದಕ್ಕೆ ಆಗುವುದಿಲ್ಲ. ತನಿಖೆಗೆ ಬೇಕಾದಂತಹ ಸಾಕ್ಷಿಯನ್ನು ಎಲ್ಲಿ ತೆಗೆಯಬೇಕೋ ಅದನ್ನು ಬಿಟ್ಟು ಬೇಡವಾದಕಡೆ ಹೋಗಿ ಇದು'ಅಸಹಜ ಸಾವು'ಎಂದು ಹೇಳುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:-**ಆದರೆ ಇವರೇ ನೇಣು ಹಾಕಿ ಕೊಂಡು ಕುಳಿತಿದ್ದಾರೆ. ಹಗ್ಗವನ್ನು ನೀವೇ ಸುತ್ತಿಕೊಳ್ಳುತ್ತಿದ್ದೀರೆ ವಿನಃ ಬೇರೆಯಾರು ಸುತ್ತುತ್ತಿಲ್ಲ.

**ಶ್ರೀ ಡಿ.ಎಸ್.ವೀರಯ್ಯ:-** ಮಾನ್ಯ ಸಭಾಪತಿಯವರೇ, ಈ ರೀತಿಯಒಂದು ಸಾವು ಆದಮೇಲೆ ಅದಕ್ಕೂ ಮೊದಲು ನಡೆದಂತಹ ಘಟನೆಯನ್ನು ಮುಚ್ಚಿ ಹಾಕುವುದಕ್ಕೆ ಏನೇನು ಬೇಕೋ ಅದೆಲ್ಲವನ್ನೂ ಮಾಡಿದ್ದಾರೆ ಅದೆಲ್ಲವೂ ಸಹ ಅಸಿಂಧು ಆಗುತ್ತವೆ.ಆದರೆಅವರಅಪ್ಪ ಮತ್ತು ಮಗ ಸ್ಟೇಟ್‌ಮೆಂಟ್ ಕೊಟ್ಟಮೇಲೆ ಅದು ಅಸಿಂಧು ಆಗಿ ಹೋಯಿತು. ಹಾಗಾದರೆ ನಿಮ್ಮ ಸಾಕ್ಷಿ ಏನಿದೆ ಅಲ್ಲಿ? ಯಾವುದೂ ಇಲ್ಲ. ಏಕೆಂದರೆ ಅಲ್ಲಿ ಮೂರನೆಯವರ ಸಾಕ್ಷಿ ಇಲ್ಲ. ಗಣಪತಿಯವರ ಮಹಜರ್‌ಗಾಗಲಿ, ಪಂಚನಾಮೆಗಾಗಲಿ ಅವರ ಹೆಂಡತಿಯ ಸಾಕ್ಷಿ ಇಲ್ಲ. ಯು.ಡಿ.ಆರ್. ಬಗ್ಗೆ ಹೇಳಿದರು. Unnatural Death Report ಎಂದು ಕೊಟ್ಟಿರಲ್ಲ. ಅದನ್ನು ನೀವು ನೀವೇ ಅಸಹಜ ಸಾವು ಎಂದು ಹೇಳಿದರೆ ಆಗುತ್ತದೆಯೇ? ಪೊಲೀಸ್ ಆಧಿಕಾರಿಗಳು ಹೇಳುವಂತಹ ಮಾತನ್ನು ನಾವು ನಂಬಬೇಕೆ? ಆ ರಿಪೋರ್ಟ್ ಹಾಕುವುದಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕಾಗಿತ್ತೋ, ಎಷ್ಟು ಸೆಕ್ಷನ್ಸ್ ಓದಬೇಕಾಗಿತ್ತು ಅದನ್ನು ಓದಿಲ್ಲ. ಸದನದಲ್ಲಿ ಓದಿದರೆ ಆಗುವುದಿಲ್ಲ. ಯುಡಿಆರ್ ರಿಪೋರ್ಟ್ ತಯಾರು ಮಾಡುವಾಗ ಈಗ ಇಲ್ಲಿ ಹೇಳಿದಂತಹ ಸೆಕ್ಷನ್ಸ್‌ಎಲ್ಲಾ ಫಾಲೋ ಮಾಡಬೇಕಾಗಿತ್ತು. ಆದರೆ ಆ ರೀತಿಯಾವುದೂ ಆಗಲಿಲ್ಲ.Unnatural Deathಎಂದು ನೀವು ಹೇಳಿಬಿಟ್ಟರೆ, ನಿಮ್ಮರಿಪೋರ್ಟ್ ಹೇಳಿದರೆ ಅದನ್ನು ನಾವು ನಂಬಬೇಕೆ?

**ಶ್ರೀ ಶರಣಪ್ಪ ಆರ್.ಮಟ್ಟೂರು:-** ಹಾಗಾದರೆ ಅದು unnatural death ಅಗುತ್ತದೆಯೇ?

**ಶ್ರೀ ಡಿ.ಎಸ್.ವೀರಯ್ಯ:-** ಹತ್ಯೆ ಮಾಡಿರುವುದು ಎಂದು ಎಲ್ಲರೂ ಮಾತನಾಡಿಕೊಳ್ಳುತ್ತಿದ್ದಾರೆ. ನಾನೇನು ಹೇಳಬೇಕಾಗಿದ್ದಿಲ್ಲ. ಅದು ಆತ್ಮಹತ್ಯೆ ಅಲ್ಲ, ಅದು ಹತ್ಯೆ. ಇಲ್ಲದಿದ್ದರೆ ನೀವು ಎಲ್ಲಾ ಪ್ರೊಸೀಜರ್ಸ್‌ನ ಫಾಲೋ ಮಾಡುತ್ತಿದ್ದಿರಿ.

**ಶ್ರೀ ಎಂ.ನಾರಾಯಣಸ್ವಾಮಿ:–** ಹಾಗಾದರೆಅದು ಸಾವು ಎಂದು ಹೇಳಬೇಕಾಗಿತ್ತೆ?

**ಶ್ರೀ ಪುಟ್ಟಣ್ಣ:–** ಅವರೇ ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಹ, ಆತ್ಮಹತ್ಯೆಗೆ ಪ್ರಚೋದನೆ ಮಾಡಿದ್ದೀರಿ. ಅಥವಾ ಪ್ರಚೋದನೆ ಮಾಡಿದ್ದಾರೆ, ತೊಂದರೆ ಕೊಟ್ಟಿದ್ದಾರೆ. ಆ ಕಾರಣಕ್ಕೋಸಸ್ಕರವಾಗಿಯೇ ನನಗೆ ಮುಂದೆ ಏನಾದರೂ ಸಹ ಅವರೇ ಕಾರಣ ಎಂದು ಹೇಳಿದ್ದಾರೆ.

**ಶ್ರೀ ಡಿ.ಎಸ್.ವೀರಯ್ಯ:–** ಹತ್ಯೆ ಮಾಡುವುದಕ್ಕಿಂತಲೂ ಪ್ರಚೋದನೆ ಮಾಡುವುದು ಇದೆಯಲ್ಲಾ ಅದು ಕ್ರೂರವಾದಂತಹ ಅಪರಾಧ. ಕಳ್ಳತನ ಮಾಡುವುದಕ್ಕೆ ಯಾರು ಸಪೋರ್ಟ್ ಮಾಡಿದ್ದಾರೋ ಅದು ಕಳ್ಳತನ ಮಾಡಿದ್ದಕ್ಕಿಂತಲೂ ಹೆಚ್ಚಿನ ಅಪರಾಧ ಎಂದು ಕಾನೂನು ಹೇಳುತ್ತದೆ. ಆದುದರಿಂದ ಯುಡಿಆರ್ ಎಂದು ಏನು ಕೊಟ್ಟಿದ್ದಾರೋ ಅದು self-concluded UDR. UDR ಎನ್ನುವುದಕ್ಕೆ ಅವರ ಹೆಂಡತಿಯ ಸಹಿಯು ಇಲ್ಲ, ಲಾಡ್ಜ್ ಅವರ ಸಹಿ ಇಲ್ಲ, ರೂಂ ಬಾಯ್ ಸಹಿ ಇಲ್ಲ, ಯಾರಿಗೆ ಗಣಪತಿಯವರು ಸತ್ತಿದ್ದಾರೆಂದು ಗೊತ್ತಾಯಿತೋ ಅವರ ಸಹಿ ಸಹ ಇಲ್ಲ. ಹಾಗಾದರೆ ನಿಮ್ಮ ಯುಡಿಆರ್ ಎನ್ನುವುದು ಎಲ್ಲಿಗೆ ನಿಂತುಕೊಳ್ಳುತ್ತದೆ? Where does it stand?

**(ಗೊಂದಲ)**

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೇ, ನಾನು ಅದು ಸರಿ ಇಲ್ಲ ಎಂದು ಹೇಳುತ್ತಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಒಟ್ಟಿಗೆ 6 ಜನರುಎದ್ದು ನಿಂತು ಮಾತನಾಡಿದರೆ ರೆಕಾರ್ಡ್ ಹೇಗೆ ಮಾಡುತ್ತಾರೆ? ಯಾರ ಹೆಸರಿನಲ್ಲಿ ರೆಕಾರ್ಡ್ ಮಾಡುತ್ತಾರೆ?

**(ಗೊಂದಲ)**

**ಸಭಾಪತಿಯವರು:–** ನೀವು ಪ್ರಶ್ನೆ ಕೇಳಿದ್ದಾರೆ ಅವರು ಹೇಳಲಿ. ಉತ್ತರ ಹೇಳುತ್ತಾರೆ.

**ಶ್ರೀ ಡಿ.ಎಸ್.ವೀರಯ್ಯ:–**ಮಾನ್ಯ ಸಭಾಪತಿಯವರೇ, ಸತ್ಯ ಹೇಳುವುದಕ್ಕೆ ಹೋದರೆಈಗೆಯೇ ಆಗುವುದು. ಸತ್ಯ ಯಾವತ್ತೂ ಕಹಿ ಇರುತ್ತದೆ. ನಾನು ಹೇಳಿದೆ, UDR report is falseಎಂದು. ಅವರು ಇದು ಸರಿ ಇದೆ ಎಂದು ಹೇಳಬೇಕಾದರೆ who has to prove it? ಕಾನೂನು ಏನು ಹೇಳುತ್ತದೆ? ಯಾರಿಗೆ ನಾವು ––– ಮಾಡಿದ್ದೇವೆಯೊ ಅವರ ಕೆಲಸ ಆ ರೀತಿ ಅಲ್ಲಪ್ಪ, ಯುಡಿಆರ್ ಈ ರೀತಿ ಇದೆ ಎಂದು ತೋರಿಸಬೇಕು. ದಯವಿಟ್ಟು ತಂದು ತೋರಿಸಿಬಿಡಿ.

**ಶ್ರೀ ಪುಟ್ಟಣ್ಣ:–** ನೀವು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿ. ಅದು ಬಿಟ್ಟು ನೀವು ಏನು ಮಾಡುತ್ತಿದ್ದೀರಿ ಎಂದರೆ, ಅವರು ಎರಡು ಕುಣಿಕೆ ಸುತ್ತಿದ್ದರೆ, ಇವರೇ ಐದು ಕುಣಿಕೆ ಹಾಕುತ್ತಿದ್ದಾರೆ. ಇಲ್ಲಿ ಇರುವಂತಹ ಸಮಸ್ಯೆ ಏನೆಂದರೆ, ಅವರು ಮಾತ್ರ ಹೋಗುವುದಿಲ್ಲ, ನಿಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗುತ್ತಾರೆ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಈ ರಾಜ್ಯದ ಜನರು ಬಹಳ ವಿಚಾರವಂಥರು.

**(ಗೊಂದಲ)**

**ಸಭಾಪತಿಯವರು:–** ಒಟ್ಟಿಗೆ 6 ಜನರುಎದ್ದು ನಿಂತು ಮಾತನಾಡುತ್ತಿದ್ದೀರಿ. ಅದ್ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಯಾರಾದರು ಒಬ್ಬರು ಮಾತನಾಡಿದರೆ ಮಾತ್ರ ರೆಕಾರ್ಡ್ ಮಾಡಿ.

**ಶ್ರೀ ಪುಟ್ಟಣ್ಣ:–** ನೀವು ಸರಿಪಡಿಸಿಕೊಳ್ಳದೇ ಹೋದರೆ, ಇದೇ ರೀತಿ ಮಾಡಿದರೆ ನಿಮ್ಮನ್ನು ಯಾರೂ ಸಹ ಉಳಿಸುವುದಕ್ಕೆ ಆಗುವುದಿಲ್ಲ.

**ಶ್ರೀ ಬಿ.ರಮಾನಾಥರೈ:–** ಸದನದಲ್ಲಿ ನೀವೆಲ್ಲರೂ ಎಷ್ಟು ಮಾತನಾಡಿದಿರಿ, ಒಂದು ವೇಳೆ ಈಗ ನೋಡುವಾಗ ಸತ್ಯಾಂಶ ಏನು ಎಂದುನಿಮಗೆ ಈಗ ಗೊತ್ತಾಗುವುದಿಲ್ಲ. ಆದ್ದರಿಂದ ಒಂದು ರೀತಿಯಲ್ಲಿ ಪರೋಕ್ಷವಾಗಿ ಆ ರೀತಿ ಆಗಿದೆ.

**ಶ್ರೀ ಪುಟ್ಟಣ್ಣ:**–ಅದನ್ನು ಹೇಳುವುದಕ್ಕೆ ನಾವು ನೀವು ಯಾರು? ಅವರು ಸ್ಟೇಟ್‌ಮೆಂಟ್ ಕೊಟ್ಟು ಸತ್ತಿದ್ದಾರೆ. ತೀರ್ಮಾನ ಮಾಡಬೇಕಾದವರು ಯಾರು? ಇದೆಯೇ ಇಲ್ಲವೆ ಎಂದುEnquiry Officer ಹೇಳಬೇಕು. ನೀವು ಯಾರು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅವರನ್ನು ನೀವು enquiry ಮಾಡಬೇಕು. ಅದು ಬಿಟ್ಟು ಡಾಕ್ಟರ್‌ನ ಹುಡುಕಿಕೊಂಡು ಹೋಗಿ ಅವರು ಯಾವ ಮಾತ್ರೆಯನ್ನು ತೆಗೆದುಕೊಂಡಿದ್ದಾರೆ, ಔಷದಿ ಯಾವುದು ಕುಡಿದಿದ್ದಾರೆ ಎಂದು ಕೇಳುತ್ತಾರೆಯೆ? ಅವರ ತಮ್ಮನ್ನನ್ನು ಹಿಡಿದುಕೊಂಡು ಬಂದು ಸ್ಟೇಟ್‌ಮೆಂಟ್ ಮಾಡಿಸುತ್ತಾರಾ? ಅವರ ಅಪ್ಪನನ್ನು ಹುಡುಕಿಕೊಂಡು ಬಂದು ಸ್ಟೇಟ್‌ಮೆಂಟ್ ಮಾಡಿಸುತ್ತಾರಾ? ಇದು ಸರ್ಕಾರ ಮಾಡುವಂತಹ ಕೆಲಸವೆ? ಮಾಡಬೇಕಾಗಿರುವಂತಹ ಕೆಲಸವೇನೆಂದರೆ ಅವರ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಂದು ಮೃತ ದೇಹವನ್ನು ಇಳಿಸಿ ಮಹಜರ್ ಮಾಡಬೇಕಾಗಿತ್ತು.

**ಶ್ರೀ ವಿ.ಎಸ್.ಉಗ್ರಪ್ಪ:**–ಆ ರೀತಿ ಯಾವ ಕಾನೂನಿನಲ್ಲಿದೆ ಹೇಳಿ, ಸುಮ್ಮನೆ ಉಡಾಫೆ ಮಾತುಗಳನ್ನಾಡಬೇಡಿ. ಕಾನೂನಿನಲ್ಲಿ ಏನಿದೆಯೆಂದು ನೀವೇ ಹೇಳಿ.

**(ಗೊಂದಲ)**

**ಸಭಾಪತಿಯವರು:–** ಸಾಕು. ಮಾನ್ಯ ವೀರಯ್ಯನವರೇ, ಕಂಪ್ಲೀಟ್ ಮಾಡಿ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಯಾವ ಕಾನೂನಿನಲ್ಲಿ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಂದು ಮಹಜರ್ ಮಾಡಬೇಕೆಂದು ಇದೆ?

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಇದಕ್ಕೆ ಕಾನೂನು ಬೇಕಾಗಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಡಿ.ಎಸ್.ವೀರಯ್ಯನವರೆ ನಿಮ್ಮ ಮಾತುಗಳನ್ನು ಮುಗಿಸಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರೆ, ಕೋರ್ಟ್‌ನಲ್ಲಿ ಯಾವ ಸೆಕ್ಷನ್‌ನಲ್ಲಿ ಹೆಂಡತಿ ಮಕ್ಕಳನ್ನು ಕರೆದು ಮಹಜರ್ ಮಾಡಬೇಕಾಗಿದೆಂದು ಹೇಳಿ, ನೀವು ಜನಗಳಿಗೆ ಉತ್ತರ ಕೊಡಬೇಕಾಗುತ್ತದೆ. ನೀವು ಕೋರ್ಟಿನಲ್ಲಿ ಪಾಸಾಗಬಹುದು. ಆದರೆ ಜನತಾ ನ್ಯಾಯಾಲಯದಲ್ಲಿ ಫೇಲಾಗುತ್ತೀರಿ. (ಗೊಂದಲ) ಏನು ಕಾನೂನು ಮಾಡುತ್ತೀರಾ? ರಾಜಕಾರಣಿಗಳಿಗೆ ನೈತಿಕತೆ ಬೇಕಲ್ಲವೇ? (ಗೊಂದಲ) ಶ್ರೀ ರೇವಣ್ಣನವರು ಹೇಳಿದರು, ಎಫ್.ಐ.ಆರ್. ಆದ ತಕ್ಷಣ ರಾಜೀನಾಮೆ ಕೊಡಬೇಕಾ ಎಂದು. ಇವತ್ತು ಹೇಳಿಕೆ ಬಂದ ತಕ್ಷಣ ಏನು ಮಾಡಬೇಕಿತ್ತು ಎಂದು ನೀವೇ ಹೇಳಿ?

**(ಗೊಂದಲ)**

**ಸಭಾಪತಿಯವರು:–** ಶ್ರೀ ಉಗ್ರಪ್ಪನವರೆ ಕುಳಿತುಕೊಳ್ಳಿ, ಸದಸ್ಯರನ್ನು ಮಾತನಾಡಲು ಬಿಡಿ. ಅವರು ಚರ್ಚೆಯನ್ನು ಮುಗಿಸಲಿ.

**(ಗೊಂದಲ)**

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ವ್ಯಕ್ತಿಯೊಬ್ಬ ಸತ್ತಾಗ ಪಂಚನಾಮೆ ಮಾಡಬೇಕಾದರೆ ಏನು procedure ಎಂದು ನೀವೇ ಹೇಳಿ.

**(ಗೊಂದಲ)**

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇವರಿಗೆ ಯಾವ ರೀತಿ ಹೇಳಬೇಕೋ ನನಗೆ ಅರ್ಥವಾಗುತ್ತಿಲ್ಲಾ. ತಮಗೆ ಅರ್ಥವಾಗಲಿಲ್ಲ ಅಂದರೆ ಹೇಳಿ, ಮತ್ತೆ ಇನೊಂದು ಸಾರಿ ಹೇಳುವುದಕ್ಕೆ ತಯಾರಿದ್ದೇನೆ.

**(ಗೊಂದಲ)**

**ಸಭಾಪತಿಯವರು:–** ಆಯಿತು, ಉಗ್ರಪ್ಪನವರೆ ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡುವುದನ್ನು ಪೂರ್ತಿಯಾಗಿ ಮುಗಿಸಿಬಿಡಲಿ. ನೇರವಾಗಿ ಹೇಳಿಬಿಡಿ, what is your demand?

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಇದು ಪ್ರಶ್ನೋತ್ತರ ವೇಳೆಯಲ್ಲ. ನಾವು ನೇರವಾಗಿ ಇಂಥದ್ದೇ ಬೇಕೆಂದು ಹೇಳುವುದಕ್ಕಾಗುವುದಿಲ್ಲ. ಇದು ಚರ್ಚೆ. ಮಾನ್ಯ ವಿ.ಎಸ್.ಉಗ್ರಪ್ಪನವರು ಯಾವ ಸೆಕ್ಷನ್ ಹೇಳಿ ಎಂದು ಕೇಳುತ್ತಿದ್ದಾರೆ.

**ಸಭಾಪತಿಯವರು:–** ಶ್ರೀ ಡಿ.ಎಸ್.ವೀರಯ್ಯನವರೆ, ಅವರದು ಏನು ಚರ್ಚೆ ಇದೆ ಅದನ್ನು ಬಿಟ್ಟುಬಿಡಿ, ನಿಮ್ಮದು ಏನು ಇದೆ ಅದನ್ನು ಹೇಳಿ.

**(ಗೊಂದಲ)**

**ಶ್ರೀ ಡಿ.ಎಸ್.ವೀರಯ್ಯ:–** ಸಭಾಪತಿಯವರೆ, ಇದು ಚರ್ಚೆ ನಾನು ಸತ್ಯವನ್ನೇ ಮಾತನಾಡುತ್ತಿದ್ದೇವೆ. ಚರ್ಚೆಯಾಗಿರುವುದರಿಂದ ಸಮಯದ ಬಗ್ಗೆ ದಯವಿಟ್ಟು restrict ಮಾಡಬೇಡಿ. ಆದ್ದರಿಂದ ಈಗ ಏನು ಆಗುತ್ತೆ ಅಂದರೆ ಶ್ರೀ ಉಗ್ರಪ್ಪನವರು, ಅವರ ಹೆಸರನ್ನು ಹೇಳಬಾರದು. ಮಾನ್ಯ ಸಭಾಪತಿಗಳೆ, ಅವರು ಯಾರೇ ಆಗಿರಲಿ. ಈಗ ನಾನು ವೀರಯ್ಯ ನನ್ನ ಒಳಗೆ ಒಬ್ಬ ವೀರಯ್ಯನಿದ್ದಾನೆ.

**ಶ್ರೀ ರಮಾನಾಥ ರೈ (ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೆ, ಏನಾಗುತ್ತದೆಂದರೆ, . . .

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಬೇಕಾದರೆ ಆಮೇಲೆ ಅದರ ಬಗ್ಗೆ ವಿವರವಾಗಿ ಹೇಳಲಿ. ಅವರು ಕೊಡಗಿನಿಂದ ಬಂದವರು. ನೀವು ಕಾಡು ಇರುವಂತಹ ಕಡೆಯಿಂದ ಬಂದವರು, ಜೊತೆಗೆ ಅರಣ್ಯ ಸಚಿವರು ಕೂಡ ಆಗಿದ್ದಾರೆ. ಈಗ ನಾನು ವೀರಯ್ಯ ಇಲ್ಲಿ ಮಾತನಾಡುತ್ತಿದ್ದೇನೆಂದು ಇಟ್ಟುಕೊಳ್ಳಿ ನನ್ನ ಒಳಗಡೆ ಒಬ್ಬ ವೀರಯ್ಯ ಇದ್ದಾನೆ. ಈ ರೀತಿಯ ಕೆಲಸವನ್ನು ಮಾಡುವುದು ಬೇಡ, ಬೇಡವೆಂದು ಹೇಳುತ್ತಾನೆ. ಕೊಲೆ ಮಾಡುವುದಕ್ಕೆ ಹೋದಾಗಲೂ, ಕೊಲೆ ಮಾಡುವವನಿಗೂ, ಕಳ್ಳತನವನ್ನು ಮಾಡುವುದಕ್ಕೆ ಹೋದಾಗ ಕಳ್ಳತನ ಮಾಡುವುದು ಬೇಡವೆಂದು ಎಚ್ಚರಿಕೆ ಕೊಡುತ್ತದೆ. ಅಂದರೆ ಅದು sixth sense. ಪ್ರತಿಯೊಬ್ಬರ ಒಳಗಡೆಯೂ ಒಬ್ಬ ಅವರವರ ಹೆಸರಿನ ಮತ್ತೊಬ್ಬ ಮನುಷ್ಯ ಇರುತ್ತಾರೆ. ಆ sixth sense ಕೆಲಸ ಮಾಡುತ್ತದೆ. ಕೊಲೆ ಮಾಡುವವನಿಗೆ ಬೇಡ ಕಣಯ್ಯ ನೀನು ಕೊಲೆ ಮಾಡುತ್ತಿದ್ದೀಯ ನಿನಗೆ ಶಿಕ್ಷೆಯಾಗುತ್ತದೆಂದು ಹೇಳುತ್ತದೆ. ಆ ರೀತಿಯ guiltiness ಇರುವವರಿಗೆ ನಾನೇನು ಮಾಡುವುದಕ್ಕಾಗುವುದಿಲ್ಲ. ಅವನ ಒಳಗಡೆ ಇರುವವನು ಈ ರೀತಿ ಮಾಡುವುದು ತಪ್ಪು ಮಾಡಬೇಡ ಎಂದು ಎಚ್ಚರಿಕೆ ಕೊಡುತ್ತದೆ. ಆದರೂ ತಪ್ಪು ಮಾಡಿ ಶಿಕ್ಷೆ ಅನುಭವಿಸುತ್ತಾನೆ. ಆದ್ದರಿಂದ ಸತ್ಯ–ಅಸತ್ಯ ಬಯಲಿಗೆ ಬರಲೇ ಬೇಕು. ಕೊನೆಗೆ ಆ ಒಳಗಡೆ ಒಂದು consciousness ಏನು ಇರುತ್ತದೆ, ಅದಕ್ಕೆ ನ್ಯಾಯ ಸಿಗುತ್ತದೆ, ಜಯ ಆಗುತ್ತದೆ. ಆದ್ದರಿಂದ ಆತ್ಮಸಾಕ್ಷಿ ಎಂದು ಹೇಳುವುದು. ಈಗ ನಾನು ತಮ್ಮ ಮುಖಾಂತರ ಹೇಳುವುದು ಇಷ್ಟೇ. ಹಿಂದೆ ಶಿಕ್ಷಣ ಸಚಿವರಾಗಿದ್ದಂತಹ ಶ್ರೀ ಬಿ.ಸೋಮಶೇಖರ್‌ರವರು ಕಾನೂನು ಪದವಿಯ ಪರೀಕ್ಷೆಯಲ್ಲಿ ಯಾರೋ ಕಾಪಿ ಮಾಡಿ ಸಿಕ್ಕಿ ಹಾಕಿಕೊಂಡಿದ್ದರು ಎಂದು ಹೇಳಿದರು. ಪತ್ರಿಕೆಯಲ್ಲಿ ವರದಿಯಾಯಿತು. (ಗೊಂದಲ) ನನಗೆ ಮಾತನಾಡುವುದಕ್ಕೆ ಬಿಡಿ. ಚರ್ಚೆ ಆಯಿತು. ಶ್ರೀ ಬಿ. ಸೋಮಶೇಖರ್‌ರವರು ತಕ್ಷಣ ರಾಜೀನಾಮೆ ಕೊಟ್ಟರು. ಅದೇ ರೀತಿಯಲ್ಲಿ ಸಚಿವರಾಗಿದ್ದಾಗ ಶ್ರೀ ಬಸವಲಿಂಗಪ್ಪನವರು ಎಲ್ಲೋ ಭಾಷಣ ಮಾಡುತ್ತಾ "ಕನ್ನಡದಲ್ಲೇನಿದೆ ಬೂಸಾ.." ಎಂದು ಹೇಳಿದರು. ಅಲ್ಲಿಗೆ ಗಲಾಟೆ ಶುರು ಆಯಿತು. ರಾಜೀನಾಮೆ ಕೊಟ್ಟರು. ಅವರು ಆ

ಸಮಯದಲ್ಲಿ ರಾಜೀನಾಮೆಯನ್ನು ಕೊಟ್ಟರೋ, ಇಲ್ಲವೋ ಎನ್ನುವುದನ್ನು ಆಡಳಿತ ಪಕ್ಷದವರು ಹೇಳಬೇಕು. ಶ್ರೀ ಆರ್.ಡಿ.ಕಿತ್ತೂರು ಹಾಗೂ ಶ್ರೀಮತಿ ಸುಮಿತ್ರಾ ದೇಸಾಯಿರವರು ಕೂಡ ಯಾವುದೋ ಹಗರಣದಲ್ಲಿ ಭಾಗಿಯಾಗಿದ್ದರು ಎಂದು ಬಂದ ತಕ್ಷಣ ರಾಜೀನಾಮೆಯನ್ನು ಕೊಟ್ಟರು. ಅವರೆಲ್ಲ ಮೂರ್ಖರೇ, ಅವರೆಲ್ಲರೂ ಮಂತ್ರಿಗಳು ಆಗಿರಲಿಲ್ಲವೇ, ಅವರಿಗೆಲ್ಲ common sense ಇರಲಿಲ್ಲವೇ, ಅವರಿಗೆಲ್ಲಾ ಇದೇ ರೀತಿಯಲ್ಲಿ ವಾದ ಮಾಡುವ ಶಕ್ತಿ ಇರಲಿಲ್ಲವೇ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ, ಶ್ರೀ ಬಿ.ಸೋಮಶೇಖರ್‌ರವರು ಎಲ್.ಎಲ್.ಬಿ ಪರೀಕ್ಷೆಯಲ್ಲಿ ನಕಲು ಮಾಡುತ್ತಿದ್ದರು ಎಂದು ಆರೋಪ ಬಂದಾಗ ರಾಜೀನಾಮೆಯನ್ನು ಕೊಟ್ಟರು ಎಂದು ಹೇಳಿದರು. ಶ್ರೀ ಬಿ.ಸೋಮಶೇಖರ್‌ರವರು ಕೂಡ ನನ್ನ ನೇತೃತ್ವದ ಸಮಿತಿಯ ಸದಸ್ಯರಾಗಿದ್ದರು. ನಮ್ಮ ಸಮಿತಿಯು ವರದಿಯನ್ನು ಕೊಟ್ಟ ನಂತರವೇ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದು. ನಾವು ಇಬ್ಬರು ಇದ್ದೇವೆ. ಅವರು ಕಮಿಟಿ ಸದಸ್ಯರಾಗಿದ್ದರು. ನಾನು ಛೇರ್‌ಮನ್ ಆಗಿದ್ದೆ. ಈ ಸದನದ ಸಮಿತಿ ಸದಸ್ಯರು ಇದ್ದರು.

**ಶ್ರೀ ಡಿ.ಎಸ್.ವೀರಯ್ಯ:–** ಮಾನ್ಯ ಸಭಾಪತಿಯವರೆ, ನಾನು ಕೂಡ ಸಮಿತಿಯಲ್ಲಿದ್ದೆ. ಅವರು ಆರೋಪ ಬಂದ ತಕ್ಷಣವೇ ಶ್ರೀ ಬಿ.ಸೋಮಶೇಖರ್‌ರವರು ರಾಜೀನಾಮೆಯನ್ನು ಕೊಟ್ಟಿದ್ದರು. ಅದಕ್ಕೆ ಪ್ರತಿಭಟಿಸಿದವನು ನಾನೇ. ಶ್ರೀ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದರು. ಅವರು ರಾಜೀನಾಮೆಯನ್ನು ಕೊಟ್ಟರು.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಸಮಿತಿಯು ವರದಿಯನ್ನು ಕೊಟ್ಟ ನಂತರ ಶ್ರೀ ಬಿ.ಸೋಮಶೇಖರ್‌ರವರು ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದು.

**ಶ್ರೀ ಡಿ.ಎಸ್.ವೀರಯ್ಯ:–** ಆ ವಿಷಯದ ಬಗ್ಗೆ ನಾನು ಮಾತನಾಡುತ್ತಿಲ್ಲ, ಉಲ್ಲೇಖಿಸಿದೆ ಅಷ್ಟೇ. ಹಾಗಾದರೆ ಶ್ರೀ ಆರ್.ಎಲ್.ಜಾಲಪ್ಪನವರ ಮೇಲೆ ಮತ್ತು ಶ್ರೀ ಬಸವಲಿಂಗಪ್ಪನವರ ಮೇಲೆ ಆರೋಪ ಬಂದಾಗ ಅವರು ತನಿಖೆಯಾದ ಮೇಲೆ ರಾಜೀನಾಮೆಯನ್ನು ಕೊಟ್ಟರೆ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನೀವು ಬೆಳಿಗ್ಗೆ ನೀವು ಕೇಳಿದ್ದೀರೋ ಇಲ್ಲವೇ? ಒಂದು ಕಡೆ ಶ್ರೀ ಆರ್.ಎಲ್.ಜಾಲಪ್ಪ, ಶ್ರೀ ಎಂ.ವಿ.ರಾಮ್ ರಾವ್, ಇನ್ನೊಂದು ಕಡೆ ಪ್ರಧಾನ ಮಂತ್ರಿಗಳಾದ ಶ್ರೀ ಮೋದಿಯವರು, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾದ ಅಮಿತ್ ಷಾರವರು, ಆಮೇಲೆ ಕೇಂದ್ರ ಸಚಿವರಾದ ಶ್ರೀಮತಿ ಸುಷ್ಮಾ ಸ್ವರಾಜ್‌ರವರ ಮೇಲೆ ಆರೋಪಗಳು ಬಂದಾಗ, ಅದೇ ರೀತಿಯಲ್ಲಿ ಮಧ್ಯಪ್ರದೇಶ, ರಾಜಸ್ಥಾನದ ಮುಖ್ಯಮಂತ್ರಿಗಳ ಮೇಲೆ ಆರೋಪಗಳು ಬಂದಾಗ ಅವರೇನು ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ?

**ಸಭಾಪತಿಯವರು:–** ಆಯಿತು ಬಿಡಿ, ಅವರು ಮಾತನಾಡಲಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಶ್ರೀ ಡಿ.ಎಸ್.ವೀರಯ್ಯನವರು ಮಾತನಾಡಿದ್ದಕ್ಕೆ ಅವರು correction ಮಾಡುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಕಾಂಗ್ರೆಸ್ ಪಕ್ಷದವರು correction ಆಗುತ್ತಿಲ್ಲ. ಶ್ರೀ ವಿ.ಎಸ್.ಉಗ್ರಪ್ಪನವರು ಅವರು ಮಾಡಿರಲಿಲ್ಲವೇ, ಇವರು ಮಾಡಿರಲಿಲ್ಲವೇ' ಎಂದು ಅವರು ಹೇಳುತ್ತಿದ್ದಾರೆ. ಅವರಿವರು ಮಾಡಿದ್ದಲ್ಲ, ನೀವೇನು ಮಾಡುತ್ತೀರಿ, ಸರ್ಕಾರ ಏನು ಮಾಡುತ್ತದೆ ಎನ್ನುವುದರ ಬಗ್ಗೆ ಹೇಳಲಿ. (ಗೊಂದಲ) ನಾವು ಇದೆ ಎಂದು ಹೇಳುತ್ತಿಲ್ಲ. ಯಾರು ಸತ್ತಿರುವ ಅಧಿಕಾರಿ, ಸಾಯುವುದಕ್ಕೆ ಮುಂಚೆ ಮಾಧ್ಯಮದ ಮುಂದೆ ಹೇಳಿರುವುದನ್ನು ಹೇಳುತ್ತಿರುವುದು.

**(ಗೊಂದಲ)**

**ಸಭಾಪತಿಯವರು:–** ಶ್ರೀ ಭಾನುಪ್ರಕಾಶ ರವರು ಮಾತನಾಡುತ್ತಾರೆ. ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಸರ್ಕಾರದವರು ಸದನದಲ್ಲಿ ನಮ್ಮ ಬಾಯಿ ಮುಚ್ಚಿಸಬಹುದು. ಆದರೆ ಜನರ ಬಾಯಿ ಮುಚ್ಚಿಸುವುದಕ್ಕಾಗುವುದಿಲ್ಲ. ನೀವು ಎಲ್ಲವನ್ನೂ ಕೂಡ ಸ್ವಲ್ಪ correction ಮಾಡಿಕೊಳ್ಳಿ. ಅದು ಹಾಗಿತ್ತು, ಇದು ಹೀಗಿತ್ತು, ಇನ್ನೊಂದಿತ್ತು ಎಂದು ಹೇಳುವುದಕ್ಕೆ ಹೋಗಬೇಡಿ.

**ಶ್ರೀ ರಮಾನಾಥ ರೈ (ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೆ, ಚರ್ಚೆ ನಡೆಯಲಿ. ಖಂಡಿತ ನಾವು ಉತ್ತರವನ್ನು ಕೊಡುತ್ತೇವೆ.

**ಸಭಾಪತಿಯವರು:–** ಎಲ್ಲರು ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡಿ ಮುಗಿಸಲಿ. ಮಾನ್ಯ ಸಚಿವರು ಬಹಳ ಸಮಯದಿಂದ ಪದೇ ಪದೇ ಹಲವು ಬಾರಿ ಮಾತನಾಡಲು ಎದ್ದು ನಿಲ್ಲುತ್ತಿದ್ದಾರೆ.

**ಶ್ರೀ ರಮಾನಾಥ ರೈ:–** ನನಗೆ ಮಾತನಾಡುವುದಕ್ಕೆ ಅಧಿಕಾರವಿಲ್ಲವೇ? (ಈ ಹಂತದಲ್ಲಿ ಸಚಿವರು ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಿದರು)

**ಸಭಾಪತಿಯವರು:–** ಮಾನ್ಯ ಸಚಿವರು ಕುಳಿತುಕೊಂಡು ಕೂಡ ಮಾತನಾಡುತ್ತಿದ್ದಾರೆ ಮತ್ತು ಪದೇ ಪದೇ ನಿಂತುಕೊಂಡು ಮಾತನಾಡುತ್ತಾರೆ. ಅವರಿಗೇನು ಕಾನೂನು ಇಲ್ಲ. ಅವರು ಸಭಾಪತಿಯವರ ಒಪ್ಪಿಗೆಯನ್ನು ಪಡೆದು ಮಾತನಾಡಬೇಕೆಂದಿಲ್ಲ, ಸಭಾಪತಿಗಳಿಗೆ ಸಂಭೋದಿಸುವುದಿಲ್ಲ. ಅವರು ಏನು ಬೇಕಾದರೂ ಮಾತನಾಡಬಹುದು. ಅವರು ಸಚಿವರಾಗಿರುವ ಕಾರಣಕ್ಕಾಗಿ ನಾನು ಅವರಿಗೆ ಬೆಳಿಗ್ಗೆ ಹೇಳಿದೆ. ನನಗೆ ಸಚಿವರಿಗೆ ನೇಮ್ ಮಾಡುವಂತಹ ಮನಸ್ಸಿಲ್ಲ. ಹಾಗೆ ಮಾಡುವುದು ಸರಿಯಲ್ಲ. ಆದರೆ ಸಚಿವರುಗಳು ಈ ರೀತಿ ಪದೇ ಪದೇ ಏನೋ ಪ್ರಾಸಂಗಿಕವಾಗಿ ಒಂದು ಮಾತನಾಡುವುದು ಸರಿ. ಆದರೆ ಪದೇ ಪದೇ ಮಾತನಾಡುವುದು ಈ ಸದನದ ಘನತೆಗೆ ತಕ್ಕುದ್ದಲ್ಲ. ಇದನ್ನು ಸಚಿವರು ಸರಿಯಾಗಿ ಗಮನಿಸಬೇಕು ಮತ್ತು ಪಾಲಿಸಬೇಕು. ದಯವಿಟ್ಟು ಅದನ್ನು ಪಾಲಿಸಿ ಇಲ್ಲದೆ ಹೋದರೆ, ನಾನೇನು ಮಾಡಬೇಕು ಎನ್ನುವುದನ್ನು ತೀರ್ಮಾನ ಮಾಡಬೇಕಾಗುತ್ತದೆ. ದಯವಿಟ್ಟು ನಿರ್ದಿಷ್ಟವಾಗಿ ನಾನು ಸಚಿವರುಗಳಿಗೆ ಹೇಳುತ್ತಿದ್ದೇನೆ.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, . . .

**ಸಭಾಪತಿಯವರು:–** ನನ್ನ ಒಪ್ಪಿಗೆ ಪಡೆಯದೆ, ಅಪ್ಪಣೆ ಪಡೆಯದೇ ನಿಂತುಕೊಂಡು ಮಾತನಾಡಬಾರದು. ನನ್ನ ಅಪ್ಪಣೆ ಪಡೆಯದೇ ಮಾತನಾಡಬಾರದು.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶವನ್ನು ಕೊಡಿ.

**ಸಭಾಪತಿಯವರು:–** ಮಾತನಾಡಿ. ಮಾನ್ಯ ಸಚಿವರು ಏನು ಬೇಕಾದರೂ ಮಾತನಾಡಲಿ. ಎಲ್ಲರೂ ಸುಮ್ಮನಿದ್ದು ಬಿಡಿ.

**ಶ್ರೀ ಬಿ.ರಮಾನಾಥ ರೈ:–** ಮಾನ್ಯ ಸಭಾಪತಿಯವರೆ, ಇದುವರೆಗೂ ಮಾತನಾಡಿದಂತಹ ಎಲ್ಲಾ ಸದಸ್ಯರುಗಳು ನಿಮ್ಮ ಅನುಮತಿ ಪಡೆದು ಮಾತನಾಡಿದ್ದರಾ?

**ಸಭಾಪತಿಯವರು:–** ಅವರು ಬೇರೆ, ನೀವು ಬೇರೆ. You are not an ordinary Member, you are a Minister.

**ಶ್ರೀ ರಮಾನಾಥ ರೈ:–** ನಾನು ಸಚಿವನಾದರೂ ಸಹ ಈ ಸದನದ ಸದಸ್ಯನೇ.

**ಸಭಾಪತಿಯವರು:–** ನೀವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾನು ಉತ್ತರವನ್ನು ಹೇಳಿದೆ. I can name any member here and ask them to leave. But I cannot name a Minister and ask him to leave. That is problem.

**ಡಾ|| ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ತಾವು ಸದನವನ್ನು ವ್ಯವಸ್ಥಿತವಾಗಿ ನಡೆಸಬೇಕು ಎಂದು ತಮಗೆ ಆಸೆ ಇದೆ ಮತ್ತು ಏನು ನಿಯಮ ಇದೆ ಅದನ್ನು ತಾವು ಮಾಡುತ್ತಿದ್ದೀರಿ. ಆದರೆ ಅನಾವಶ್ಯಕವಾಗಿ ಮಾತುಗಳನ್ನು ಆಡುವಂಥದ್ದು. ಸ್ವಾಭಾವಿಕವಾಗಿ ಅದಕ್ಕೆ ಪ್ರತಿಕ್ರಿಯೆ ಬಂದೇ ಬರುತ್ತದೆ.

ಆದ್ದರಿಂದ ಎರಡು ಕಡೆಯ ಸದನದ ಸದಸ್ಯರುಗಳಲ್ಲೂ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇದು ಬಹಳ ಗಂಭೀರವಾದಂತಹ ವಿಚಾರ. ಈ ವಿಷಯದ ಬಗ್ಗೆ ತಾವೇ ಗಾಂಭೀರ್ಯತೆಯನ್ನು ತಂದುಕೊಟ್ಟಿದ್ದೀರಿ. ಆದ್ದರಿಂದ ರಾಜ್ಯದ ಜನತೆ ಉತ್ತರವನ್ನು ಬಯಸುತ್ತಾರೆ. ಸರ್ಕಾರಕ್ಕೆ ಉತ್ತರ ಕೊಡುವುದಕ್ಕೆ ನಾವು ತಯಾರಿದ್ದೇವೆ. ಆದ್ದರಿಂದ ಸದಸ್ಯರುಗಳು ತಮ್ಮ ಚರ್ಚೆಯನ್ನು ಮುಂದುವರೆಸಿ ಆದಷ್ಟು ಬೇಗ ಚರ್ಚೆಯನ್ನು ಮುಗಿಸಿದರೆ ಸದನಕ್ಕೆ ನಾವು ಉತ್ತರವನ್ನು ನೀಡಲು ಸಾಧ್ಯವಾಗುತ್ತದೆ.

**ಸಭಾಪತಿಯವರು:–** ಶ್ರೀ ವೀರಯ್ಯನವರೆ ನಿಮ್ಮ ಮಾತನ್ನು ಮುಂದುವರೆಸಿ. ಆದಷ್ಟು ಬೇಗ ನಿಮ್ಮ ಚರ್ಚೆಯನ್ನು ಮುಗಿಸಿ. ಮಧ್ಯದಲ್ಲಿ ಯಾರೂ ಮಾತನಾಡಬೇಡಿ,

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಯವರೆ, . .

**ಸಭಾಪತಿಯವರು:–** ಮಾನ್ಯ ಡಿ.ಎಸ್.ವೀರಯ್ಯನವರು ಒಪ್ಪಿದರೆ ತಾವು ಮಾತನಾಡಬಹುದು.

**ಶ್ರೀ ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ಸ್ನೇಹಿತರು ಮಾತನಾಡಬೇಕಾದರೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರು ರಾಜೀನಾಮೆ ಕೊಡಲಿಲ್ಲ, ದೇಶದ ಪ್ರಧಾನಿ ರಾಜೀನಾಮೆ ಕೊಡಲಿಲ್ಲ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿ ರಾಜೀನಾಮೆ ಕೊಡಲಿಲ್ಲ ಎಂದು. ಇನ್ನೊಂದು ಕಡೆ ಯಾರ್ಯಾರು ರಾಜೀನಾಮೆಯನ್ನು ಕೊಟ್ಟರು ಎಂದು ಕೂಡ ಹೇಳಿದರು. ನಮ್ಮ ಸ್ನೇಹಿತರಿಗೆ ನೆನಪಿನ ಶಕ್ತಿ ಬಹಳ ಇದೆ. ನಮ್ಮ ಸ್ನೇಹಿತರು argument ಗೆ ನಿಂತರೆ ನಿಜವಾಗಲೂ ಅವರನ್ನು ಗೆಲ್ಲುವುದಕ್ಕೆ ನಮ್ಮಿಂದ ಆಗುವುದಿಲ್ಲ. ಆದರೆ ಆ ಮರೆವು ಅದು ಜಾಣ ಮರೆವು ಆಗಬಾರದು. ಈ ದೇಶದ ಪ್ರಧಾನಮಂತ್ರಿಗಳ ಮೇಲೆ National Coal Scam ಬಂತು. ಅವರು ರಾಜೀನಾಮೆ ಕೊಟ್ಟರಾ? ಈ ದೇಶದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಸೋನಿಯ ಗಾಂಧಿಯವರ ಮೇಲೆ ನ್ಯಾಷನಲ್....

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ಈಗ ಏಕೆ ಅವರುಗಳ ಹೆಸರು ಬರುತ್ತಿದೆ.

**ಶ್ರೀ ಭಾನುಪ್ರಕಾಶ್:–** ಒಂದು ನಿಮಿಷ, ಶ್ರೀ ವಿ.ಎಸ್.ಉಗ್ರಪ್ಪನವರು ಎಲ್ಲರ ಹೆಸರುಗಳನ್ನು ಹೇಳಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, National Coal Scam ವಿಚಾರವನ್ನು ಏಕೆ ಇಲ್ಲಿ ತರುತ್ತೀರಿ? 2G Scam, Railway Scam ಆದಾಗ ಸಂಬಂಧಪಟ್ಟವರು ರಾಜೀನಾಮೆಯನ್ನು ಕೊಡಲಿಲ್ಲವೇ?

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, National Herald case ನಲ್ಲಿ ಕೋರ್ಟ್‌ಗೆ ಬರಬೇಕೆಂದರೆ, ಅವರ ಪಕ್ಷದ ಅಧ್ಯಕ್ಷರು ಬಹಳ ದೊಡ್ಡ ರೀತಿಯಲ್ಲಿ ಮೆರವಣಿಗೆಯನ್ನು ಮಾಡಿದ್ದರು. ನಾವು ಏನನ್ನಾದರೂ ಹೇಳಬೇಕಾದರೂ ಎಲ್ಲವನ್ನು ಹೇಳಬೇಕು, ಅದರಲ್ಲಿ ಜಾಣ ಮರೆವನ್ನು ತೋರಿಸಬಾರದು. ನ್ಯಾಯಾಂಗ ಮತ್ತು ಶಾಸಕಾಂಗಕ್ಕೆ ತಮ್ಮದೇ ಆದ ಒಂದು ಕಾರ್ಯ ವಿಧಾನವಿದೆ. ನ್ಯಾಯಾಂಗದಲ್ಲಿ ವಾದ ಮಾಡಿದ ಹಾಗೆ ಶಾಸಕಾಂಗದಲ್ಲಿ ವಾದವನ್ನು ಮಾಡುವುದಕ್ಕೆ ಆಗುವುದಿಲ್ಲ. ನ್ಯಾಯಾಂಗ ನಾವು frame ಮಾಡಿರತಕ್ಕ ನಿಯಮಗಳ ಪ್ರಕಾರ ನ್ಯಾಯಾಂಗ ಕಾನೂನಿನ ಕ್ರಮಗಳನ್ನು ಕೈಗೊಳ್ಳುತ್ತದೆ. ಇಲ್ಲಿ ಜನರ ಭಾವನೆಗಳಿಗೆ ಬೆಲೆ ಇಲ್ಲ, ಯಾವುದೇ ರೀತಿಯಾದ mercy ಇಲ್ಲ, Merciless DV ನ್ಯಾಯಾಂಗ ತನ್ನ ವ್ಯವಹಾರವನ್ನು ನಡೆಸಬೇಕಾಗುತ್ತದೆ. ಇಲ್ಲಿ ನಾವು ಚುನಾಯಿತ ಪ್ರತಿನಿಧಿಗಳು ಜನರ ಭಾವನೆಗಳಿಗೆ ಬೆಲೆ ಕೊಟ್ಟು ಚರ್ಚೆ ಮಾಡಬೇಕೆ ವಿನಹಃ ಬೇರೆ ತರಹ ಅಲ್ಲ. ಇಲ್ಲಿ ನಾನು ವಿಚಾರಗಳನ್ನು ಕೋಟ್ ಮಾಡಬಾರದೆಂದು ಹೇಳುವುದಿಲ್ಲ. ಆದರೆ ಯಾವುದೇ ವಾದ ಆಗಲಿ ರಾಜ್ಯದ ಜನರು ಎದರು ನೋಡುತ್ತಿರುವ ಕಾರಣ ಈ ವಿಚಾರವನ್ನು ನಿಯಮ 59ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೇಳಿದೆವು. ಏಕೆಂದರೆ ಇಡೀ ರಾಜ್ಯದ ಜನರು ಈ ವಿಚಾರವನ್ನು ಅನುಮಾನದಿಂದ ನೋಡುತ್ತಿದ್ದಾರೆ.

ಕಾಂಗ್ರೆಸ್ ಸರ್ಕಾರದಲ್ಲಿ ಜಾರ್ಜ್ ಒಬ್ಬರನ್ನು ಇಟ್ಟುಕೊಂಡು ಏಕೆ ಅನುಮಾನಕ್ಕೆ ಒಳಗಾಗಬೇಕು. ಅವರೊಬ್ಬರು ರಾಜೀನಾಮೆಯನ್ನು ಕೊಡಲಿ. It is not a punishment. ಸರ್ಕಾರ ಅಧಿಕಾರಿಗಳನ್ನು suspend ಮಾಡಿದಾಗ suspension is not punishment, ಅದನ್ನು ನಂತರದಲ್ಲಿ ಡಿಜತರಿಇಜ ಮಾಡಬಹುದು ಎಂದು ಹೇಳುತ್ತದೆ. ಆದ್ದರಿಂದ ಅವರು ರಾಜೀನಾಮೆಯನ್ನು ಕೊಡಲಿ, ಏಕೆಂದರೆ ಜನರು ಏನು ಸಂಶಯವನ್ನು ವ್ಯಕ್ತಪಡಿಸುತ್ತಿದ್ದಾರೆ, ಅದನ್ನು ನಿವಾರಿಸುವ ಸಲುವಾಗಿ ಅವರಿಂದ ರಾಜೀನಾಮೆಯನ್ನು ಪಡೆಯಬೇಕೆಂದು ಹೇಳುವ ಸಂದರ್ಭಕ್ಕಾಗಿ ಈ ಎಲ್ಲಾ ವಿಚಾರಗಳನ್ನು ಹೇಳುತ್ತಿದ್ದೇವೆ.

**ಶ್ರೀ ಡಿ.ಎಸ್.ವೀರಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಇಲ್ಲಿ ಜಾರ್ಜ್ ಅವರಾಗಲಿ, ಮತ್ತೊಬ್ಬರಾಗಲಿ ಮುಖ್ಯವಲ್ಲ. ವ್ಯವಸ್ಥೆ ಸರಿ ಹೋಗದಿದ್ದರೆ, ಇದೇ ವ್ಯವಸ್ಥೆ ಮುಂದುವರೆದು ನೀವು ಮಾಡಿ ನಾವು ಅದನ್ನೇ ಮಾಡುತ್ತೇವೆ ಎನ್ನುವುದಾದರೆ, ನೀವು ಸತ್ಯ ಹೇಳಿದರೆ ನಾವು ಅಸತ್ಯವನ್ನು ಹೇಳುತ್ತೇವೆ ಎನ್ನುವುದಾದರೆ ಜನರ ಕೋರ್ಟಿನಲ್ಲಿ ನಾವು ಸೋಲುತ್ತೇವೆ. ನಾವಿಲ್ಲಿ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಬೇಕು. ಅವರ ಭಾವನೆಗಳಿಗೆ ಬೆಲೆ ಕೊಟ್ಟು ಮಾತನಾಡಬೇಕು. ಮುಂದಿನ ಪೀಳಿಗೆಗೆ ಮಾದರಿಯಾಗುವಂತೆ ಮಾತನಾಡಬೇಕು. ನಮ್ಮ ಕಾನೂನು ಭದ್ರವಾಗಬೇಕು, ಸಮಾಜದ ರಕ್ಷಣೆ ಆಗಬೇಕು. ಆಗ ಮಾತ್ರ ಅದೊಂದು ಸುಭದ್ರ ಸರ್ಕಾರ ಆಗುತ್ತದೆ. ಆಗ ಮಾತ್ರ ಅಂತಹ ಸರ್ಕಾರ ನಾಗರೀಕ ಸರ್ಕಾರ ಆಗುತ್ತದೆ ಎಂದು ಹೇಳಬಯಸುತ್ತೇನೆ. ಹಾಗಾಗಿ ಜಾರ್ಜ್ ಅವರ ರಾಜೀನಾಮೆ ಇಲ್ಲಿ ಮುಖ್ಯವಾದ ವಿಚಾರವಲ್ಲ. ಆದರೆ ಇಲ್ಲಿ ಕಾನೂನಿನ ಉಲ್ಲಂಘನೆಯನ್ನು ಮಾಡಿ, ಒಬ್ಬರನ್ನು ಹತ್ಯೆ ಮಾಡಿ, ಹೇಗೆ ಅದನ್ನು ಆತ್ಮಹತ್ಯೆ ಎಂದು ಸೃಷ್ಟಿಸಬಹುದು ಎನ್ನುವ ವ್ಯವಸ್ಥೆ ಸರಿಯಲ್ಲ ಎನ್ನುವ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಹಿಂದೆ ರೇಣುಕಾ ರಾಜೇಂದ್ರ ಎನ್ನುವವರು ಇದ್ದರು. ಯಾವುದೋ ಒಂದು offence ನಲ್ಲಿ ಸಿಕ್ಕಿಕೊಂಡು ರಾಜೀನಾಮೆಯನ್ನು ಕೊಟ್ಟರು. Telephone trapping ಆದಾಗ ರಾಜೀನಾಮೆಯನ್ನು ಕೊಟ್ಟರು. ಇದರ ಬಗ್ಗೆ ತನಿಖೆ ಆಗಬಹುದು, ಈ ಎಲ್ಲಾ ತನಿಖೆಗಳು ಆಗುವ ತನಕ ನಾವು ನೀವು ಇರುತ್ತೇವೆಯೇ? ಅಂದರೆ ಈ ಅಧಿಕಾರವನ್ನು ಅನುಭವಿಸಿ ಮತ್ತೊಂದು ಸರ್ಕಾರ ಬಂದಾಗ ಆ ವರದಿ ಬಂದರೂ ಸಹ ಅದು ಸುಳ್ಳು ಎನ್ನುವ ವರದಿ ಬರುತ್ತದೆ. ಜನರು ನಮ್ಮಿಂದ ಕೇಳುತ್ತಿರುವುದು ತಕ್ಷಣದ ಪರಿಹಾರ. ಈ burning issues ಗಳಿಗೆ ಶಾಸನಸಭೆಗಳಲ್ಲಿ ಯಾವ ತೀರ್ಮಾನವನ್ನು ತೆಗೆದುಕೊಂಡರು; ಶಾಸಕರಾಗಿ ಈ ಸಮಸ್ಯೆಗೆ ಹೇಗೆ ಪ್ರತಿಬಿಂಬಿಸಿದರು? ಇದಕ್ಕೆ ಪರಿಹಾರ ಏನು ಎನ್ನುವುದನ್ನು ನೋಡುತ್ತಾರೆಯೇ ವಿನಃ ಮುಂದಿನ ಹತ್ತು ವರ್ಷಕ್ಕೆ ಬರುವ ತೀರ್ಪನ್ನು ಎದುರು ನೋಡುವುದಿಲ್ಲ. ಹಿಂದಿನವರೆಲ್ಲ ಇಂತಹ ಆಪಾದನೆಗಳು ಬಂದಾಗಲೆಲ್ಲ ರಾಜೀನಾಮೆಯನ್ನು ಕೊಡುವುದರ ಮೂಲಕ ಒಂದು ಮಾರ್ಗದರ್ಶನವನ್ನು ನಮಗೆ ಹಾಕಿಕೊಟ್ಟಿದ್ದಾರೆ. ಆದಾದ ಮೇಲೆ ಅವರು ಅಪಾದಿತರಲ್ಲ ಎಂದು ಸಾಬೀತಾಗಿರುವುದನ್ನು ಸಹ ಅವರು ಒಪ್ಪಿಕೊಂಡಿದ್ದಾರೆ. ಆಗ ಇನ್ನು 5 ವರ್ಷಗಳನ್ನು ಹಿಂದಕ್ಕೆ ತಂದು ಅವರನ್ನು ಪುನಃ ಮಂತ್ರಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಹಿಂದಿನ ಪದ್ದತಿಗಳ ಮೇಲೆ ನಿಂತಿರುವ ಶಾಸನಸಭೆ ಇದೆ. ಕಾನೂನು ಎಂದರೆ ಒಂದು ಸಂಪ್ರದಾಯ ಮತ್ತು ಹಿಂದಿನಿಂದ ನಡೆದುಕೊಂಡು ಬಂದಿರುವ ಹಾದಿ. ಇದರಲ್ಲಿ public accountability ಇಲ್ಲವೇ? ವಸಂತ್ ಪೂಜಾರಿಯವರ ಹತ್ಯೆ ನಡೆಯಿತು, ಜನರು ಈ ಹತ್ಯೆಯನ್ನು ಮಾಡಿದವರು ಯಾರೆಂದು ತಿಳಿಯಲು ಬಯಸುವುದಿಲ್ಲವೇ? ಜನರು ಎಷ್ಟು ವರ್ಷಗಳ ಕಾಲ ಕತ್ತಲಿನಲ್ಲಿ ಇರಬೇಕು. ಅದಕ್ಕೆ ತೀರ್ಪನ್ನು ಕೊಡುವವರು ನಾವು ತಾನೇ? ಜನಗಳ ದೃಷ್ಟಿಯಲ್ಲಿ ಶಾಸನಸಭೆ ಕೂಡ ಒಂದು ನ್ಯಾಯಾಲಯ ಅಲ್ಲವೇ? ಏಕೆಂದರೆ ತಕ್ಷಣ ನಾವು ಜನರ ಸಮಸ್ಯೆಗಳಿಗೆ ನಾವು ಪರಿಹಾರವನ್ನು ನೀಡಬೇಕು. ಹಾಡುಹಗಲಿನಲ್ಲಿಯೇ ಕಲ್ಬುರ್ಗಿ ಎನ್ನುವ ಸಾಹಿತಿಯನ್ನು ಕೊಂದರು. ಇದು ಯಾರು ಎನ್ನುವುದನ್ನು ಕಂಡು ಹಿಡಿಯುವುದು ಜವಾಬ್ದಾರಿಯುತ ಸರ್ಕಾರದ ಕರ್ತವ್ಯ ಅಲ್ಲವೇ? ಏಕೆ ಕೊಲೆಗಡುಕರನ್ನು ಇನ್ನೂ ಹಿಡಿಯಲಿಲ್ಲ? ಪುಟ್ಟಪ್ಪ, ಕಲ್ಲಪ್ಪ ಈಗ ಗಣಪತಿ ಇವರೆಲ್ಲರ ಸಾವು ಸಂಭವಿಸಿದೆ. ಮಲ್ಲಿಕಾರ್ಜುನ ಬಂಡೆ ಅವರ ಸಮಸ್ಯೆ ಕೂಡ ಬಂಡೆ ರೀತಿಯಲ್ಲಿದೆ. ಅಧಿಕಾರಿ ರಶ್ಮಿಯವರ ಮೇಲೆ ನಡೆದಿರುವ ಹಲ್ಲೆಯಲ್ಲಿ ಹಲ್ಲುಗಳು ಮುರಿದಿವೆಯೇ ಇಲ್ಲವೇ ಎನ್ನುವುದನ್ನು ಹೋಗಿ ನೋಡಿಕೊಂಡು ಬರಲಿ, ಅವರ ಮೇಲೆ ಚಪ್ಪಲಿ ಎಸೆದಿರುವುದನ್ನು ಜನರು ನೋಡಿಲ್ಲವೇ? ಅದರ ಬಗ್ಗೆ

ತನಿಖೆ ಮಾಡಿ, ಚಪ್ಪಲಿಯನ್ನು ಎಸದೇ ಇಲ್ಲ ಎಂದರೆ ನೋಡಿರುವ ಜನರ ಕಣ್ಣಿಗೆ ಮಣ್ಣು ಎರಚುವ ಕೆಲಸ ಏಕೆ ಮಾಡಬೇಕು? ಇನ್ನು ಶ್ರೀಮತಿ ಶಿಖಾ ಅವರನ್ನು ಎಲ್ಲರೂ ಸಹ ಒಳ್ಳೆಯ ಅಧಿಕಾರಿ ಎಂದು ಹೇಳುತ್ತಾರೆ. ಅವರು ಒಂದು ದೂರನ್ನು ನೀಡಿದ್ದರೂ ಸಹ ಸ್ವೀಕರಿಸಿರುವುದಿಲ್ಲ. As a citizen of India ದೂರನ್ನು ನೀಡುವ ಹಕ್ಕು ಅವರಿಗೆ ಇದೆ. As a DC, as a Magistrate ಅವರಿಗೆ ಎರಡು ರೀತಿಯ ಹಕ್ಕು ಇದೆ. ಇಲ್ಲಿ ಮಾನವ ಹಕ್ಕಿನ ಉಲ್ಲಂಘನೆ ಆಗಿಲ್ಲವೇ? ಇದು Indian Penal Code ನ ಉಲ್ಲಂಘನೆ ಆಗಲಿಲ್ಲವೇ? ಏಕೆ ಶ್ರೀಮತಿ ಶಿಖಾ ಅವರ ದೂರನ್ನು ತೆಗೆದುಕೊಂಡಿಲ್ಲ ಎನ್ನುವುದು ನನ್ನ ಪ್ರಶ್ನೆ. ನಾವು ಮಾಡುವುದನ್ನೆಲ್ಲ ಮಾಡುತ್ತೇವೆ, ನೀವು ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಿ, ಅದಕ್ಕೆ ಉತ್ತರ ಕೊಡಲು ನಾವು ಬಹಳ ಸಮರ್ಥರಿದ್ದೇವೆ ಎಂದು ಹೇಳುತ್ತಾ ಹೋದರೆ ಜನರ ಕೋರ್ಟ್ ಒಂದಿದೆ. ಅವರು ಪುಟ್ಟಣ್ಣನವರು ಹೇಳಿದ ಹಾಗೆ ಪ್ರತಿ ನಿಮಿಷ ಕೂಡ evaluate ಮಾಡುತ್ತಾರೆ. ನಿಮ್ಮನ್ನು ನಾವು evaluate ಮಾಡುವುದಲ್ಲ, ನಮ್ಮ ಜವಾಬ್ದಾರಿಗಳನ್ನು ನಾವು ನಿರ್ವಹಿಸುತ್ತಿದ್ದೇವೆ. ಆದರೆ ಜನರು public accountability ಇದೆ, ಅವರ ಅಕೌಂಟ್‌ನಲ್ಲಿ ನಾವು minus ಆಗುತ್ತಾ ಹೋಗುತ್ತೇವೆ. ಹಾಗಾಗಿ ಈಗ ಸೃಷ್ಟಿಸಿರುವ ದಾಖಲೆಗಳ್ಯಾವುದು ಸಿಂಧುವಲ್ಲ, ಅವು ಅಸಿಂಧು. ಆದ್ದರಿಂದ ಗಣಪತಿಯವರ ಹೆಂಡತಿ ಮತ್ತು ಮಕ್ಕಳು ಪೊಲೀಸ್ ಠಾಣೆಯಲ್ಲಿ ಧರಣಿ ಮಾಡಿದಲ್ಲಿ ಮಾನವೀಯತೆಗಾಗಿ ಆದರೂ ಅವರ ಸಮಸ್ಯೆಗೆ ನಾವು ಪರಿಹಾರವನ್ನು ನೀಡಬೇಕಲ್ಲವೇ? ಇಲ್ಲಿ ಮಾನವೀಯತೆಯನ್ನಾದರೂ ನಾವು ಮೆರೆಯಬೇಕೆಲ್ಲವೇ? ಆಮೇಲೆ ನೀವು ಏನು ಬೇಕಾದರೂ ಮಾಡಿಕೊಳ್ಳಿ. ಆಮೇಲೆ ನೀವು ಏನಾದರೂ ಮಾಡಿಕೊಳ್ಳಿ, ನೀವು ಚತುರರು, B-Report ಹಾಕಿಕೊಳ್ಳುತ್ತೀರೋ, Charge Sheet ನಲ್ಲಿ ಕೈ ಬಿಡುತ್ತೀರೋ ಏನಾದರೂ ಮಾಡಿಕೊಳ್ಳಿ, ಅದು ನಿಮ್ಮ ಇಷ್ಟ. ಕಾನೂನನ್ನು ಜಾರಿ ಮಾಡುವುದು ನಿಮ್ಮ ಕೈಯಲ್ಲಿದೆ, ಅದನ್ನೆಲ್ಲ ತಿರುಚಿ ಹಾಕುವ ತಜ್ಞರು ಕೂಡ ನಿಮ್ಮ ಕೈಯಲ್ಲಿದ್ದಾರೆ. ಆದರೆ ಅವರ ಪರಿವಾರದವರಿಗೆ ನ್ಯಾಯ ಕೊಡಿಸುವ ಸಲುವಾಗಿ ನಾವಿಲ್ಲಿ ಇದ್ದೇವೆ. ಆದ್ದರಿಂದ ನಮ್ಮದು ಒಂದು ಜವಾಬ್ದಾರಿಯುತ ನಾಗರೀಕ ಸರ್ಕಾರವಾಗಿ ಕಾನೂನನ್ನು ಎತ್ತಿ ಹಿಡಿಯಬೇಕು. ನಾವು ಜನಗಳ ಭಾವನೆಯನ್ನು ಎತ್ತಿಹಿಡಿಯಬೇಕು. ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿರುವ ಜನರ ನಿರೀಕ್ಷೆಗೆ ತಕ್ಕ ನ್ಯಾಯವನ್ನು ಈ ಸದನದ ಮೂಲಕ ದೊರಕಿಸಬೇಕಾಗಿದೆ. ದಯಮಾಡಿ ಈ ಕೆಲಸ ಸರ್ಕಾರ ಮಾಡಬೇಕೆಂದು ಒತ್ತಾಯಿಸಿ, ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಸನಗೌಡ ಆರ್ ಪಾಟೀಲ್(ಯತ್ನಾಳ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ನಿಯಮ 68ರಡಿಯಲ್ಲಿ ಡಿವೈಎಸ್‌ಪಿ ಗಣಪತಿಯವರ ಆತ್ಮಹತ್ಯೆಯ ಬಗ್ಗೆ ಚರ್ಚೆಗೆ ಅವಕಾಶ ನೀಡಲಾಗಿದೆ. ಇಡೀ ರಾಜ್ಯದಲ್ಲಿ ಮಾಧ್ಯಮಗಳಲ್ಲಿ, ವಿಧಾನಮಂಡಲದಲ್ಲಿ ಸಾರ್ವಜನಿಕವಾಗಿ ಈ ಬಗ್ಗೆ ಬಹಳ ಗಂಭೀರವಾದ ಚರ್ಚೆ ನಡೆಯುತ್ತಿದೆ. ಈಗಾಗಲೇ ಈ ಬಗ್ಗೆ ಅನೇಕ ಹಿರಿಯ ಸದಸ್ಯರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಅಧಿಕಾರಿಗಳು ಇವತ್ತು ಏಕೆ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಮೂಲ ವಿಚಾರಕ್ಕೆ ನಾವು ಹೋಗಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಅವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ಏಕೆ ಬರುತ್ತಿದೆ; ಇವತ್ತು ಅನೇಕ ಸದಸ್ಯರು ದೇಶದ ಮಧ್ಯಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ, ಉತ್ತರಪ್ರದೇಶದಲ್ಲಿ ಎಷ್ಟು ಆತ್ಮಹತ್ಯೆಗಳಾಗಿವೆ ಎನ್ನುವ ಅಂಕಿಸಂಖ್ಯೆಗಳನ್ನು ಕೊಟ್ಟರು. ಇಲ್ಲಿ ಅಂಕಿಸಂಖ್ಯೆಗಳಿಂದ ಸಮರ್ಥನೆಯನ್ನು ಮಾಡಿಕೊಳ್ಳುವ ವಿಚಾರ ಇದಲ್ಲ. ಯಾವ ಸರ್ಕಾರ ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಡಬೇಕಾಗಿತ್ತು, ಅದನ್ನು ಕೊಡುತ್ತಿಲ್ಲ. ಇವತ್ತು ಈ ರಾಜ್ಯವನ್ನು ಯಾರು ನಡೆಸುತ್ತಿದ್ದಾರೆ. ರಾಜ್ಯದ ಮುಖ್ಯಮಂತ್ರಿಗಳು ನಡೆಸುತ್ತಿದ್ದಾರೆಯೇ? ಈ ರಾಜ್ಯವನ್ನು ಮಾಫಿಯಾಗಳು ನಡೆಸುತ್ತಿವೆ. ಅದು ಗಣಿ ಮಾಫಿಯ ಇರಬಹುದು, ಮರಳಿನ ಮಾಫಿಯಾ ಇರಬಹುದು, ಭೂ ಮಾಫಿಯಾ ಇರಬಹುದು, ಇವರೆಲ್ಲರೂ ಎದ್ದು ವಿಧಾನಮಂಡಲಗಳಿಗೆ ಮತ್ತು ಲೋಕಸಭೆಗೆ ಬಂದರೆ ಒಳ್ಳೆಯ ಪ್ರಮಾಣಿಕ ರಾಜಕಾರಣಿಗಳು ಜನಪರ ಹೋರಾಟಗಾರರು ಇವತ್ತು ಹಣ ಇಲ್ಲದ ಕಾರಣ ವಿಧಾನಮಂಡಲಗಳಿಗೆ ಮತ್ತು ಲೋಕಸಭೆಗೆ ಬರಲು ಸಾಧ್ಯವಾಗುತ್ತಿಲ್ಲ. ಇಲ್ಲಿ ದಕ್ಷ ಪ್ರಾಮಾಣಿಕ ಅಧಿಕಾರಿಗಳನ್ನು ಕೂಡ ನಾವು ಜಾತಿಯಿಂದ ಅಳೆಯುತ್ತೇವೆ. ನಾವು ಮಂತ್ರಿ ಆದ ಮೇಲೆ ನಮ್ಮ ಸಿಬ್ಬಂದಿ ನಮ್ಮ ಜಾತಿಯವರಿರಬೇಕು, ನನ್ನ ಇಲಾಖೆಯ

ಪ್ರಧಾನ ಕಾರ್ಯದರ್ಶಿ ನನ್ನ ಜಾತಿಯವನಾಗಿರಬೇಕು. ಸಂಬಂಧಪಟ್ಟ ಕಮೀಷನರ್ ನನ್ನ ಜಾತಿಯವನಾಗಿರಬೇಕು. ಆದರೆ ಚುನಾವಣೆಗಳಿಗೆ ನಾವು ಹೋದಾಗ ಎಲ್ಲಾ ಸಮಾಜದ ಮತವನ್ನು ಪಡೆದು ಜಾತ್ಯಾತೀತ ವಿಚಾರಗಳನ್ನು ಹೇಳಿಕೊಂಡು, ಭಾಷಣ ಮಾಡಿ ಚುನಾವಣೆಗಳಲ್ಲಿ ಆರಿಸಿ ಬರುತ್ತೇವೆ.

**ಶ್ರೀ ಬಸನಗೌಡ ಆರ್. ಪಾಟೀಲ್,ಯತ್ನಾಳ(ಮುಂದು):-** ಗೆದ್ದು ಬಂದ ಮೇಲೆ ಯಾರು ಮಂತ್ರಿಗಳಾಗುತ್ತಾರೆ, ಯಾರು ಮುಖ್ಯಮಂತ್ರಿಗಳಾಗುತ್ತಾರೆ ಆ ಸಮುದಾಯದವರಿಗೆ ಒಳ್ಳೆಯ ಹುದ್ದೆಗಳನ್ನು ಕೊಡುವುದು ಆಗುತ್ತಿದೆ. ಒಳ್ಳೆಯ ಪ್ರಮಾಣಿಕ ಅಧಿಕಾರಿಗಳನ್ನು ಕಡೆಗಣಿಸಲಾಗುತ್ತಿದೆ. ಇವತ್ತು ಜಾತಿ ವ್ಯವಸ್ಥೆ ಇರುವುದರಿಂದ ಎಷ್ಟೋ ಒಳ್ಳೆಯ ಪ್ರಮಾಣಿಕ ಅಧಿಕಾರಿಗಳು ಕೆಲಸವನ್ನು ಬಿಡುವುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ನಿರ್ಮಾಣವಾಗುತ್ತಿದೆ. ಗಣಪತಿಯವರೊಬ್ಬರ ಸಮಸ್ಯೆ ಅಲ್ಲ ಇದು, ಇದರ ಬಗ್ಗೆ ನಾವು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಐಎಎಸ್ ಅಧಿಕಾರಿಯ ನಿಗೂಢ ಸಾವು, ಇಂತಹ ಪ್ರಕರಣಗಳನ್ನು ಬಿಹಾರದಲ್ಲಿ ಮಾತ್ರ ನೋಡಲಾಗುತ್ತಿತ್ತು.

**(ಈ ಹಂತದಲ್ಲಿ ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರು ಸಭಾಪತಿ ಸ್ಥಾನವನ್ನು ಅಲಂಕರಿಸಿದರು)**

ನಾನು ಎಂಪಿ ಯಾಗಿ ಲೋಕಸಭೆಯಲ್ಲಿ ಕೆಲಸ ಮಾಡಿದ್ದೇನೆ. ಆ ಕಡೆಯ ಎಂಪಿ ಗಳು ನಮ್ಮನ್ನು ಭೇಟಿಯಾದಾಗ ನೀವು ಎಲ್ಲಿಂದ ಬಂದಿದ್ದಿರಾ ಎಂದು ಕೇಳುತ್ತಿದರು. ಕರ್ನಾಟಕ ಎಂದರೆ ಎಲ್ಲರಿಗೂ ಒಳ್ಳೆಯ ಅಭಿಪ್ರಾಯವಿದೆ. ಕರ್ನಾಟಕ ರಾಜ್ಯ ಎಂದರೆ ಸುಸಂಕೃತವಾದ, ಇಡೀ ಭಾರತದಲ್ಲಿ ಅತ್ಯಂತ ಶಿಸ್ತುಬದ್ದಿನ ಒಳ್ಳೆಯ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವ, ಒಳ್ಳೆಯ ಆಡಳಿತ ಇರುವ ರಾಜ್ಯ ಎಂದು ಹೆಸರುವಾಸಿಯಾಗಿತ್ತು. ಆದರೆ ಇವತ್ತು ಒಬ್ಬ ಪೊಲೀಸ್ ಅಧಿಕಾರಿ ತನ್ನ ಸಮವಸ್ತ್ರದಲ್ಲಿಯೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಎಂದು ನೋಡುವುದು ಬೇಡ. ನಮಗೆ ಸ್ವಲ್ಪ ಕಾನೂನಿನ ಜ್ಞಾನ ಇದೆ ಎಂದು ಸೆಕ್ಷನ್‌ಗಳ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ನ್ಯಾಯಾಂಗದಲ್ಲಿ ಸೆಕ್ಷನ್‌ಗಳು ಇವೆ ಅಲ್ಲಿ ಮಾತನಾಡಲಿ. ಇಲ್ಲಿ ಮಾನವೀಯ ಮೌಲ್ಯಗಳ ಮೇಲೆ ನಾವು ಮಾತನಾಡಬೇಕಾಗುತ್ತದೆ. ಮಾನವೀಯ ಮೌಲ್ಯಗಳ ಮೇಲೆಯೇ ಆಡಳಿತ ನಡೆಸಬೇಕಾಗಿದೆ. ಒಬ್ಬ ಮುಖ್ಯಮಂತ್ರಿ ಎಂದರೆ ಯಾರು, ಇಡೀ ರಾಜ್ಯದ ಎಲ್ಲ ಜನಾಂಗದ ಪ್ರತಿನಿಧಿ. ಒಬ್ಬ ಮುಖ್ಯಮಂತ್ರಿಯಾದವರು ಜಾರ್ಜ್‌ರವರು ಕ್ರಿಶ್ಚಿಯನ್ ಅದಕ್ಕಾಗಿಯೇ ಬಿಜೆಪಿ ಯವರು ಅವರ ಮೇಲೆ ಟೀಕೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಸಂತೋಷ ಲಾಡ ರಾಜೀನಾಮೆಗೆ ಬಿಜೆಪಿ ಹೋರಾಟ ಮಾಡಿದಾಗ ಜಾತಿ ಬರಲಿಲ್ಲವೆ ಆಗ? ಯಾವುದೆ ವ್ಯಕ್ತಿ ಲಿಂಗಾಯತ ಇರಬಹುದು, ಒಕ್ಕಲಿಗ ಇರಬಹುದು ಯಾವುದೆ ಸಮಯದಾಯಕ್ಕೆ ಸೇರಿರಬಹುದು... ಅಧಿಕಾರಿಗಳನ್ನು ವ್ಯವಸ್ಥಿತವಾಗಿ ಜಾತಿಯ ಮೇಲೆ ಲೆಕ್ಕಚಾರ ಹಾಕಲಾಗುತ್ತದೆ. ಕೆಲವು ಅಧಿಕಾರಿಗಳು ಈ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳಿಗೆ ಮರ್ಯಾದೆ ಇಲ್ಲ, ಒಳ್ಳೆಯ ಹುದ್ದೆಯನ್ನು ಕೊಡುತ್ತಿಲ್ಲ. ಒಕ್ಕಲಿಗ ಸಮುದಾಯದ ಅಧಿಕಾರಿಗಳಿಗೆ ಒಳ್ಳೆಯ ಹುದ್ದೆಯನ್ನು ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಒಬ್ಬ ರಾಜ ಹೇಗೆ ಇರಬೇಕು ಎನ್ನುವುದನ್ನು ರಾಜಧರ್ಮದಲ್ಲಿ ಚಾಣಿಕ್ಯ ಹೇಳಿದ್ದಾನೆ. ನಾವು ಮಂತ್ರಿಯಾದ ಮೇಲೆ ಯಾವುದೆ ರಾಗ,ದ್ವೇಷ,ಜಾತಿಯತೆ ಇಲ್ಲದೆ ಈ ರಾಜ್ಯದ ಈ ದೇಶದ ಜನರ ನನ್ನ ಗಮನಕ್ಕೆ ಬರುವ ಯಾವುದೆ ವಿಷಯದ ಬಗ್ಗೆ ಅದು ಅನ್ಯಾಯವಾಗಿದ್ದರೆ ಪ್ರತಿಭಟನೆ ಮಾಡುತ್ತೇನೆ ಎಂದು ಪ್ರಮಾಣ ವಚನ ತೆಗೆದುಕೊಳ್ಳುತ್ತೇವೆ. ನಾನು ಕೇಂದ್ರದಲ್ಲಿ ರೇಲ್ವೆ ರಾಜ್ಯ ಸಚಿವನಾಗಿ ಕೆಲಸ ಮಾಡಿದ್ದೆನೆ. ನನ್ನ ಕಛೇರಿಯಲ್ಲಿ ನನ್ನ ಜಾತಿಯವರು ಇರಲಿಲ್ಲ. ಈ ಜಾತಿ ವ್ಯವಸ್ಥೆಯನ್ನು ನಾವು ಎಲ್ಲಿಗೆ ತಂದು ನಿಲ್ಲಿಸಿದ್ದೇವೆ ಎಂದರೆ, ದಕ್ಷ ಅಧಿಕಾರಿಗಳು ಇವತ್ತು ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನುವ ಸ್ಪೂರ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಜಾತಿ ಆಧಾರದ ಮೇಲೆ ಅಧಿಕಾರಿಗಳನ್ನು ತರುವುದು ಬೇಡ. ಮಾನ್ಯ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಒಳ್ಳೆಯ ಸರ್ಕಾರ ಇರಬೇಕು. ಗಣಪತಿಯವರು ಒಬ್ಬ ಮಂತ್ರಿಯ ಹೆಸರು ಮತ್ತು ಇಬ್ಬರು ಪೊಲೀಸ್ ಅಧಿಕಾರಿಗಳ ಹೆಸರನ್ನು ಹೇಳಿದ್ದಾರೆ. ತನಿಖಾಧಿಕಾರಿಗಳನ್ನು ಯಾವ ಆಧಾರದ ಮೇಲೆ ನೇಮಿಸುತ್ತೀರಿ? ರಾಜಕೀಯವನ್ನು ತಲೆಯಲ್ಲಿ ಇಟ್ಟುಕೊಂಡಿರುವಂತಹ ಕೆಲವು ಅಧಿಕಾರಿಗಳು ಇರುತ್ತಾರೆ. ಅವರು ನಿವೃತ್ತರಾದ ತಕ್ಷಣ ರಾಜಕೀಯಕ್ಕೆ ಬರಬೇಕು, ಎಂಎಲ್ಎ ಆಗಬೇಕು, ಮಂತ್ರಿಯಾಗಬೇಕು ಅನ್ನುವುದು ಅವರ ತಲೆಯಲ್ಲಿ ಇರುತ್ತದೆ. ಅದಕ್ಕಾಗಿ ಯಾವ ಪಕ್ಷದವರು ಟಿಕೆಟ್ ಕೊಡುತ್ತಾರೆ ಅಂತಹ ಪಕ್ಷಕ್ಕೆ

ಅನುಕೂಲವಾಗು ರೀತಿಯಲ್ಲಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಾರೆ. ಗಣಪತಿಯವರಿಗೆ ಹುಚ್ಚು ಹಿಡಿದಿದ್ದರೆ ಮಾನ್ಯ ಡಾ:ಜಿ.ಪರಮೇಶ್ವರರವರ ಹೆಸರನ್ನು ಏಕೆ ಹೇಳಲಿಲ್ಲ ಅವರು? ಇಡೀ ರಾಜ್ಯದ ಜನತೆ ಮುಂದೆ ಆ ಅಧಿಕಾರಿಗೆ ಅವಮಾನವಾಗುವ ಹಾಗೆ ಅವರಿಗೆ ಮಾನಸಿಕ ತೊಂದರೆ ಇತ್ತು, ಕುಟುಂಬದಲ್ಲಿ ತೊಂದರೆ ಇತ್ತು ಎಂದು ಬಿಂಬಿಸಲಾಗುತ್ತಿದೆ. ಹೀಗೆ ಮಾಡಿದರೆ ಅಧಿಕಾರಿಗಳು ಹೇಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ? ಜಾತಿ ಆಧಾರದ ಮೇಲೆಯೇ ಅಧಿಕಾರಿಗಳನ್ನು ನೋಡಿದರೆ ಒಳ್ಳೆಯ ಪ್ರಮಾಣಿಕ ಅಧಿಕಾರಿಗಳ ಗತಿ ಏನು? ಎಷ್ಟೊ ಪ್ರಮಾಣಿಕ ಅಧಿಕಾರಿಗಳು ಕೆಲಸ ಮಾಡುವಂತಹ ಮಾನಸಿಕ ಸ್ಥೇರ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಒಬ್ಬ ಸಾಮಾನ್ಯ ಕಾರ್ಯಕರ್ತನಿಂದ ಮೈಸೂರು ಜಿಲ್ಲೆಯ ಪ್ರಮಾಣಿಕ ಅಧಿಕಾರಿಗೆ ತೊಂದರೆಯಾಯಿತು. ಯಾವನೊ ಒಬ್ಬ ಮುಖ್ಯಮಂತ್ರಿಗಳಿಗೆ ಬೇಕಾದವನು ಎನ್ನುವ ಕಾರಣಕ್ಕೆ ಅವರನ ಪರವಾಗಿ ಮಾತನಾಡಿದರೆ, ಪ್ರಮಾಣಿಕ ಅಧಿಕಾರಿಗಳಲ್ಲಿ ಏನು ನೈತಿಕ ಸ್ಥೇರ್ಯ ಉಳಿಯುತ್ತದೆ? ಅವರು ಹೇಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಅವರು ನಮ್ಮ ಫಾಲೋವರ್ ಇರಬಹುದು, ನಮಗೂ ಸಾವಿರಾರು ಜನ ಫಾಲೋವರ್ ಇರುತ್ತಾರೆ. ಅವರನ್ನು ಎಲ್ಲಿ ಇಡಬೇಕು ಅಲ್ಲಿ ಇಡಬೇಕು. ರಾಜಕಾರಣದಲ್ಲಿ ನಾವು ಶಾಶ್ವತವಾಗಿ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಇರುವುದಿಲ್ಲ. ಒಂದು ದಿನ ಮಾಜಿಯಾಗುವುದು ನಿಶ್ಚಿತ. ಆದರೆ ಯಾರು ಒಳ್ಳೆಯ ಆಡಳಿತವನ್ನು ಕೊಟ್ಟಿರುತ್ತಾರೆ ಅವರನ್ನು ದೇಶದ ಜನ ನೆನಪಿಸಿಕೊಳ್ಳುತ್ತಾರೆ. ದಿ:ಲಾಲ ಬಹದ್ದೂರ ಶಾಸ್ತ್ರಿಯವರನ್ನು, ದಿ:ವಲ್ಲಭಾಯಿ ಪಟೇಲ್‌ರವರನ್ನು, ಮಾನ್ಯ ಅಟಲ ಬಿಹಾರಿ ವಾಜಪೇ ಯವರನ್ನು, ದಿ:ಕೆಂಗಲ ಹನಮಂತಯ್ಯನವರನ್ನು, ದಿ: ದೇವರಾಜ ಅರಸುರವರನ್ನು, ದಿ: ಜೆ.ಎಚ್.ಪಟೇಲ್‌ರವರನ್ನು, ದಿ:ರಾಮಕೃಷ್ಣ ಹೆಗಡೆಯವರನ್ನು ನೆನಪಿಸಿಕೊಳ್ಳುತ್ತೇವೆ. ಆಡಳಿತಕ್ಕೆ ಬಂದ ಮೇಲೆ ಜಾತಿ ವಿಚಾರವನ್ನು ಬಿಟ್ಟು ಒಳ್ಳೆಯ ವಿಚಾರವನ್ನು ಇಟ್ಟುಕೊಂಡು ಒಳ್ಳೆಯ ಆಡಳಿತವನ್ನು ಕೊಡಬೇಕು. ಇವತ್ತಿನ ಗೃಹ ಮಂತ್ರಿಗಳು ಒಳ್ಳೆಯ ಸುಸಂಕೃತರು. ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನುವುದು ಅವರ ಮನಸ್ಸಿನಲ್ಲಿ ಇದೆ. ನಾನು ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇಲ್ಲಿ ಪೂರ್ವಾಗ್ರಹಪೀಡಿತರಾಗಿ ಗಣಪತಿಯವರ ಬಗ್ಗೆ ಕೆಟ್ಟದನ್ನು ಸೃಷ್ಠಿ ಮಾಡಿ... ಸೇವೆಯಲ್ಲಿ ಇದ್ದಾಗ ವರ್ಷಕ್ಕೆ ಒಮ್ಮೆ ವೈದ್ಯಕೀಯ ಪರೀಕ್ಷೆ ಮಾಡಿರುವ ವೈದ್ಯಕೀಯ ವರದಿ ಇರುತ್ತದೆ. ಇಷ್ಟು ವರ್ಷಗಳ ಸೇವೆಯಲ್ಲಿ ಒಂದು ವರ್ಷವು ಅವರಿಗೆ ಮಾನಸಿಕ ತೊಂದರೆ ಇತ್ತು ಎನ್ನುವ ವರದಿ ಇಲ್ಲ. ಐಪಿಎಸ್ ಅಧಿಕಾರಿ ಯಾರನ್ನೊ ಖುಷಿಪಡಿಸಲು ಒಂದು ವರದಿಯನ್ನು ಕೊಡುತ್ತಾರೆ, ಮುಂದಿನ ಅವರ ರಾಜಕೀಯ ಭವಿಷ್ಯದ ಬಗ್ಗೆ, ಮುಂದಿನ ಬಡ್ತಿಗೆ ಉಪಯೋಗಿಸಿಕೊಳ್ಳಬೇಕು ಎನ್ನುವ ಮನೋಭಾವ ಇರುವ ಅಧಿಕಾರಿಗಳನ್ನು ಹೊರತುಪಡಿಸಿ, ನಿಷ್ಪಕ್ಷಪಾತವಾದ ತನಿಖೆ ಮಾಡುವುದಕ್ಕೆ ನಾನು ಆಗ್ರಹ ಮಾಡುತ್ತೇನೆ. ಸಚಿವರು ರಾಜೀನಾಮೆಯನ್ನು ಕೊಡಬೇಕು. ಗಣಪತಿಯವರು ಮೂರು ಜನರ ಹೆಸರನ್ನು ಉಲ್ಲೇಖ ಮಾಡಿದ ಮೇಲೆ.. ಈಗ ನಾನೇ ತಪ್ಪು ಮಾಡಿದರೆ ತಕ್ಷಣ ಎಫ್‌ಐಆರ್ ಹಾಕುತ್ತೀರಿ. ಈಗ ನನ್ನ ಉದಾಹರಣೆಯನ್ನೆ ಹೇಳುತ್ತೇನೆ, ಮಾನ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅಧಿಕಾರ ಸ್ವೀಕಾರ ಮಾಡಿದ ದಿವಸ ನಾನು ಏನು ಗಲಾಟೆ ಮಾಡಿರಲಿಲ್ಲ, ಆದರೂ ನನ್ನ ಮೇಲೆ ಎಫ್‌ಎಆರ್ ಹಾಕಿ 18 ಕೇಸ್‌ಗಳನ್ನು ದಾಖಲೆ ಮಾಡಿಕೊಂಡರು. ಹೆಣ್ಣುಮಕ್ಕಳ ಮಾನಭಂಗ ಮಾಡಿದ್ದಾರೆ ಎಂದು ಬರೆದರು. ಆಗ ಮಾನ್ಯ ಜಾರ್ಜ್‌ರವರೆ ರಾಜ್ಯದ ಗೃಹ ಮಂತ್ರಿಗಳಾಗಿದ್ದರು. 18 ದೂರುಗಳನ್ನು ದಾಖಲು ಮಾಡಿ 22 ದಿನ ನನ್ನನು ಜೈಲಿಗೆ ಹಾಕಿದರು. ಹೈಕೋರ್ಟ್‌ನಲ್ಲಿ ಎಲ್ಲವು ಕಿತ್ತುಕೊಂಡು ಹೋದವು. ಈ ರೀತಿ ಅಧಿಕಾರಿಗಳ ಪರಿಸ್ಥಿತಿ ಗಂಭೀರವಾದರೆ ಯಾವುದೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಸರ್ಕಾರ ಒಳ್ಳೆಯ ಹೆಸರನ್ನು ಪಡೆಯಬೇಕಾದರೆ, ಒಳ್ಳೆಯ ಅಧಿಕಾರಿಗಳಿಗೆ ಬೆಂಬಲ ಕೊಡಬೇಕು. ಅವರು ಕೆಲಸ ಮಾಡುವಂತೆ ಸ್ಪೂರ್ತಿ ಕೊಡಬೇಕು. ಈ ರೀತಿ ಏಕೆ ಆತ್ಮಹತ್ಯೆಗಳಾಗುತ್ತವೆ? ಮಾನ್ಯ ಗೃಹ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಪೊಲೀಸ್ ವರ್ಗಾವಣೆಯನ್ನು ರಾಜಕೀಯ ಹಸ್ತಕ್ಷೇಪದಿಂದ ಮುಕ್ತಗೊಳಿಸಬೇಕು. ಏಕೆಂದರೆ ಗೃಹ ಇಲಾಖೆ ಎಂದರೆ ಶಾಸಕರಿಗೆ ಹಣ ಗಳಿಸುವಂತಹ ಒಂದು ಇಲಾಖೆಯಾಗಿದೆ. ಆರು ತಿಂಗಳಿಗೆ ಒಬ್ಬ ಪಿಎಸ್‌ಐ ಬದಲಾವಣೆ ಮಾಡಲಾಗುತ್ತಿದೆ. ನಾನು ಬಿಜಾಪೂರದಲ್ಲಿ ನೋಡಿದ್ದೇನೆ, ಒಬ್ಬ ಬಿಳಿ ಅಂಗಿಹಾಕಿಕೊಂಡು ಟ್ರಾಫಿಕ್ ಪಿಎಸ್‌ಐ ಬುಲೆಟ್ ಮೇಲೆ ಓಡಾಡುತ್ತಿರುವಾಗಲೆ ಅವನನ್ನು ತೆಗೆದು ಇನ್ನೊಬ್ಬ ಪಿಎಸ್‌ಐ ಅಲ್ಲಿಗೆ ಬಂದಿರುತ್ತಿದ್ದರು. ಒಬ್ಬ ಎರಡು ಲಕ್ಷ ಕೊಟ್ಟು ಅಲ್ಲಿಗೆ ಬಂದಿರುತ್ತಾನೆ. ನಂತರ ಇನ್ನೊಬ್ಬ ಮೂರು ಲಕ್ಷ ರೂ.ಗಳನ್ನು ಕೊಟ್ಟು ಅಲ್ಲಿಗೆ ಬರುತ್ತಾರೆ. ಈ ರೀತಿ ವರ್ಗಾವಣೆ ಮಾಡುವುದರಿಂದ ಒಳ್ಳೆಯ

ಅಧಿಕಾರಿಗಳು ಕೆಲಸ ಮಾಡಲು ಆಗುವುದಿಲ್ಲ. ಆಗ ಅವರು ಭ್ರಷ್ಟರಾಗಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಮರಳು ಮಾಫಿಯಾ ಯಾವ ಮಟ್ಟಕ್ಕೆ ಬಂದಿದೆ ಎಂದರೆ, ಇವತ್ತೆ ನಾನು ಭವಿಷ್ಯ ಹೇಳುತ್ತೇನೆ, ಇನ್ನು 10 ವರ್ಷ ಹೀಗೆ ಎಲ್ಲಾ ಮಾಫಿಯಾಗಳನ್ನು ಬೆಳೆಸುತ್ತಾ ಹೋದರೆ ಇಲ್ಲಿ ಯಾರು ಒಳ್ಳೆಯ ರಾಜಕಾರಣಿ ಇರುವುದಿಲ್ಲ. ಮುಂದೆ ಇಲ್ಲಿ ಮಾಫಿಯಾ ಸರ್ಕಾರ ಬರುತ್ತದೆ. ನಾವು ಎಲ್ಲರೂ ರಾಜಕಾರಣಿಗಳು ಅವರ ಮನೆ ಮುಂದೆ ನಿಂತು, ಅವರ ಕೈ ಕೆಳಗೆ ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಗಣಪತಿ ಪ್ರಕರಣಕ್ಕೆ ಆಡಳಿತ ಪಕ್ಷದವರು ಏನೋ ಒಂದು ಉತ್ತರ ಕೊಟ್ಟು, ವಿರೋಧ ಪಕ್ಷದವರು ಚೆನ್ನಾಗಿ ಮಾತನಾಡಿದರು ಎಂದು ಪತ್ರಿಕೆಗಳಲ್ಲಿ ಬಂದು, ನಾಲ್ಕು ಜನ ಚೆನ್ನಾಗಿ ಮಾತನಾಡಿದ್ದರಿಂದ ವಂದನೆಗಳು ಎಂದು ಹೇಳಿಬಿಟ್ಟರೆ ನಾವು ಖುಷಿ ಪಡಬಾರದು. ನಾವು ಈಗ ಇರಬಹುದು ಅಥವಾ ಮುಂದೆ ಇಲ್ಲಿರುವುದಿಲ್ಲ. ಆದರೆ ಒಂದು ಒಳ್ಳೆಯ ಸರ್ಕಾರವಾಗಿ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಒಳ್ಳೆಯ ಕೆಲಸ ಮಾಡಲಿ ಎಂದು ಬಯಸುತ್ತೇವೆ. ಮಾನ್ಯ ಜಿ.ಪರಮೇಶ್ವರ್‌ರವರು ಸುಸಂಸ್ಕೃತರು ಹಾಗೂ ರಾಜ್ಯದ ಒಳ್ಳೆಯ ನಾಯಕರಲ್ಲಿ ಒಬ್ಬರಾಗಿದ್ದಾರೆ. ಅದೇ ರೀತಿ ಮಾನ್ಯ ಕಾಗೋಡು ತಿಮ್ಮಪ್ಪನವರೂ ಇದ್ದಾರೆ. ಹೊಸ ಸಚಿವ ಸಂಪುಟ ಬಂದ ಮೇಲೆ ರಾಜ್ಯದಲ್ಲಿ ಬದಲಾವಣೆ ಕಾಣುವ ರೀತಿ ನಿಷ್ಪಕ್ಷಪಾತವಾಗಿ, ಯಾವುದೇ ಒಂದು ಜಾತಿಗೆ ಸೀಮಿತ ಮಾಡದೇ ಯಾವುದೇ ಒಂದು ವರ್ಗವನ್ನು ತುಳಿಯಬೇಕು ಎಂಬುದನ್ನು ತಲೆಯಲ್ಲಿ ಇಟ್ಟುಕೊಳ್ಳಬಾರದು. ಮೇಲಿಂದ ಮೇಲೆ ಅಹಿಂದ ಸರ್ಕಾರ ಎಂದು ಹೇಳಿಕೊಂಡಾಗ ಇದು ಏನು ಅಹಿಂದ ಸರ್ಕಾರ? ಎಲ್ಲಾ ಜಾತಿ-ವರ್ಗಗಳನ್ನು ತೆಗೆದುಕೊಂಡು ಹೋಗುವ ಸರ್ಕಾರ ಇರಬೇಕೆ ವಿನ: ಯಾವುದೇ ಜಾತಿಗಳನ್ನು ದ್ವೇಷ ಮಾಡುವ ಅಥವಾ ಯಾವುದೇ ಜಾತಿಗಳನ್ನು ತಲೆ ಮೇಲೆ ಕೂರಿಸುವ ಸರ್ಕಾರ ಇರಬಾರದು. ಈ ರೀತಿಯಾದರೆ ನ್ಯಾಯ ಕೊಟ್ಟಂತೆ ಆಗುವುದಿಲ್ಲ. ಆದ್ದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ತಕ್ಷಣ ಮಾನ್ಯ ಜಾರ್ಜ್‌ರವರ ರಾಜೀನಾಮೆ ತೆಗೆದುಕೊಳ್ಳಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ. ನಿಷ್ಪಕ್ಷಪಾತವಾಗಿ ತನಿಖೆ ಮಾಡಬೇಕು ಹಾಗೂ ಈ ರೀತಿ ಕರ್ನಾಟಕದ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಳ್ಳುವ ಮಾನಸಿಕ ಸ್ಥಿತಿ ಏಕೆ ಬರುತ್ತಿದೆ ಎಂಬುದನ್ನು ಸರ್ಕಾರ ಗಂಭೀರವಾಗಿ ಅಧ್ಯಯನ ಮಾಡಬೇಕು. ಅದಕ್ಕೆ ಪರಿಹಾರಗಳನ್ನು ಕಂಡು ಹಿಡಿಯಬೇಕು. ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳಿಗೆ ಕೊಡುತ್ತಿರುವ ಕಿರುಕುಳದ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಒಳ್ಳೆಯ ಸರ್ಕಾರ ಕೊಡುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕಳೆದ 3 ದಿವಸಗಳಿಂದ ಉನ್ನತ ಅಧಿಕಾರಿಯಾದ ಗಣಪತಿಯವರ ಸಾವಿನ ಬಗ್ಗೆ ಎರಡೂ ಮನೆಗಳಲ್ಲಿ ಚರ್ಚೆಯಾಗುತ್ತಿದೆ. ನಾನು ನ್ಯಾಯಾಂಗದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನ್ಯಾಯಾಂಗದ ಬಗ್ಗೆ ಅನೇಕ ಸದಸ್ಯರುಗಳು ಮಾತನಾಡಿದ್ದಾರೆ. ಶಾಸಕಾಂಗ ಮತ್ತು ಕಾರ್ಯಾಂಗಗಳ ವ್ಯವಸ್ಥೆಯಡಿಯಲ್ಲಿ ರಾಜಕಾರಣ ಯಾವ ರೀತಿ ಮುಂದೆ ಹೋಗುತ್ತಿದೆ ಎಂದು ಕಳೆದ 3 ದಿನಗಳಿಂದ ನಡೆಯುತ್ತಿರುವ ಚರ್ಚೆಯಿಂದ ಕಾಣುತ್ತಿದೆ. ಕರ್ನಾಟಕದ ಉತ್ತಮ ಅಧಿಕಾರಿಯಾದ ಗಣಪತಿಯವರ ಸಾವಿನ ಬಗ್ಗೆ 3 ದಿನಗಳಿಂದ ಎರಡೂ ಸದನಗಳಲ್ಲಿ ಚರ್ಚೆ ನಡೆಸುತ್ತಿರುವುದರಿಂದ ಒಂದು ರೀತಿ ನಗೆಪಾಟಲಿಗೆ ಈಡಾಗುತ್ತಿದ್ದೇವೆ ಎಂದು ಗೋಚರವಾಗುತ್ತಿದೆ. ನಾನೂ ಕೂಡ 1999ರಲ್ಲಿ ಶಾಸಕನಾಗಿ ಹಾಗೂ ಮುಖ್ಯ ಸಚೇತಕನಾಗಿ ಕೆಳಮನೆಯಲ್ಲಿ ಕೆಲಸ ಮಾಡುತ್ತಿದ್ದೆನು. ಸರ್ಕಾರದಲ್ಲಿ ಕೆಲಸ ಮಾಡುವ ಅಧಿಕಾರಿಗಳ ಬಗ್ಗೆ ವಿರೋಧ ಪಕ್ಷದವರು ತಪ್ಪುಗಳನ್ನು ಕಂಡು ಹಿಡಿದು ಅಧಿಕಾರಿಗಳಿಗೆ ಉಗ್ರ ಶಿಕ್ಷೆ ಆಗಬೇಕೆಂದು ಹೋರಾಟ ಮಾಡುವ ಸಂದರ್ಭದಲ್ಲಿ ಸುಮಾರು 16 ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿತ್ತು. 2002–03ರಲ್ಲಿ ಸುಮಾರು 09 ಅಧಿಕಾರಿಗಳು ಆತ್ಮಹತ್ಯೆಗೆ ಒಳಪಟ್ಟರು. ನಾನು ಈ ವಿಷಯವನ್ನು ಏಕೆ ಪ್ರಸ್ತಾಪಿಸುತ್ತಿದ್ದೇನೆ ಎಂದರೆ ಇವತ್ತು ಪತ್ರಿಕೆಗಳಲ್ಲಿ ಬಂದಿರುವ ವಿಚಾರವನ್ನು ಸಂಪೂರ್ಣವಾಗಿ ತೆಗೆದುಕೊಂಡು 3 ದಿನಗಳ ಕಾಲ ಸಮಗ್ರವಾಗಿ ಚರ್ಚೆಯನ್ನು ಮಾಡುತ್ತಿದ್ದೇವೆ. ಕಾನೂನಾತ್ಮಕವಾಗಿ ಹಾಗೂ ಮಾನವೀಯತೆಯಿಂದ ಆ ಕುಟುಂಬಕ್ಕೆ ಅನ್ಯಾಯ ಆಗಬಾರದು ಎಂಬ ದೃಷ್ಟಿಯಿಂದ ವಿರೋಧ ಪಕ್ಷದವರು ಹಾಗೂ ಆಡಳಿತ ಪಕ್ಷದವರು ಚರ್ಚೆ ನಡೆಸುತ್ತಿರುವುದು ಇಂದಿಗೂ ಮುಕ್ತಾಯವಾಗಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

ನನಗೆ ಅನಿಸುವುದೇನೆಂದರೆ, 30ನೇ ತಾರೀಖಿನವರೆಗೂ ಚರ್ಚೆ ನಡೆದರೆ ಆ ಕುಟುಂಬಕ್ಕೆ ನ್ಯಾಯ ಸಿಗಬಹುದೇ? ಎಂಬುದು ನನ್ನ ಪ್ರಶ್ನೆಯಾಗಿದೆ. ಒಂದು ರಾಜಕೀಯ ವ್ಯವಸ್ಥೆಯಲ್ಲಿ ಅಧಿಕಾರಿ ಇರಬಹುದು, ರೈತ ಇರಬಹುದು, ಅಥವಾ ಕೂಲಿ ಕಾರ್ಮಿಕರು ಇರಬಹುದು, ಒಂದು ವರ್ಷದಲ್ಲಿ ಸುಮಾರು ಸಾವಿರ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ನಾನು ಇವತ್ತು ಶಾಸಕರ ಭವನದಿಂದ ಬರುವಾಗ ಉತ್ತರ ಕರ್ನಾಟಕ ಭಾಗದ ಜನರು ' ಒಂದು ರೀತಿ ಹುಚ್ಚರ ಸಂತೆ ಮುಗಿಯಿತೆ?' ಎಂದು ಮಾತನಾಡಿಕೊಳ್ಳುತ್ತಿದ್ದರು. ಈ ವಿಷಯ ನಗೆಪಾಟಲಿಗೆ ಹೋಗುತ್ತಿದ್ದು, ಸರಿಯಾದ ಮತ್ತು ಸಮಗ್ರವಾದ ಚಿಂತನೆ ಮಾಡಲು ಆಗುತ್ತಿಲ್ಲ. ಪತ್ರಿಕೆಗಳಲ್ಲಿರುವ ವಿಚಾರ ಮತ್ತು ಸರ್ಕಾರ ಕೊಡುತ್ತಿರುವ ವಿಚಾರಗಳ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಸಲು ಆಗುತ್ತಿಲ್ಲ. ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಮಾತನಾಡುವಾಗ ಅನಗತ್ಯವಾಗಿ ಯಾರೂ ಏಳಬಾರದು, ಐದಾರು ಜನ ಒಟ್ಟಿಗೆ ಎದ್ದು ಮಾತನಾಡುವುದು ಸರಿಯಲ್ಲ ಎಂದು ಉಲ್ಲೇಖ ಮಾಡಿದಿರಿ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸದನ ಹೇಗೆ ನಡೆಯಬೇಕು ಎಂಬ ತಮ್ಮ ಆದೇಶವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪತ್ರಿಕೆಗಳಲ್ಲಿ ವಿಚಾರ ಬಂದಿದೆ. ಕಾಂಗ್ರೆಸ್ ಪಕ್ಷದ ಶಾಸಕರು ಒಂದು ಮೌನ ವಹಿಸಿರುವುದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ನನಗೆ 2 ಗಂಟೆಗಳ ಕಾಲ ಅವಕಾಶ ಕೊಟ್ಟರೆ ಒಂದೇ ಪತ್ರಿಕೆಯಲ್ಲಿ ವಿಭಿನ್ನವಾಗಿ ಬಂದಿರುವ ಹೇಳಿಕೆಗಳನ್ನು ಹೇಳುತ್ತೇನೆ. ಇವತ್ತು ಸುಮಾರು 17 ಪುಟಗಳ ಪತ್ರಿಕೆಯಲ್ಲಿ ಇಡೀ ರಾಜ್ಯದ ಮೂಲೆ ಮೂಲೆಗಳಲ್ಲಿ ನಡೆದ ವಿಚಾರಗಳ ಬಗ್ಗೆ ಸಂಪೂರ್ಣವಾಗಿ ಓದಲು 2 ತಾಸು ಬೇಕಾಗುತ್ತದೆ. ತಾವು ಅನುಮತಿ ಕೊಟ್ಟರೆ ಸಂಪೂರ್ಣ ಚಿತ್ರಣವನ್ನು ಹೇಳುವುದಕ್ಕೆ ಬಯಸುತ್ತೇನೆ. 'ಗಣಪತಿ ಆತ್ಮಹತ್ಯೆ ಪ್ರಕರಣ, ತೀವ್ರಗೊಂಡ ಪ್ರತಿಭಟನೆ' ಎಂದು ವರದಿಯಾಗಿದೆ. 17 ಪುಟಗಳ ಈ ಪತ್ರಿಕೆಯಲ್ಲಿ 17 ರೀತಿ ವ್ಯತಿರಿಕ್ತ ಹೇಳಿಕೆಗಳು ಬಂದಿವೆ. ಈ ರೀತಿಯ ವ್ಯವಸ್ಥೆ ಇಟ್ಟುಕೊಂಡು ನಾವು ಚರ್ಚೆ ಮಾಡಿ ಆ ಕುಟುಂಬಕ್ಕೆ ನ್ಯಾಯವನ್ನು ಕೊಡಿಸುತ್ತಿದ್ದೇವೆಯೇ? ಇಡೀ ರಾಜ್ಯದಲ್ಲಿ ಸಾವಿರಾರು ಆತ್ಮಹತ್ಯೆಗಳು ನಡೆಯುವ ಸಂದರ್ಭದಲ್ಲಿ ಅಧಿಕಾರಿಯಾದ ಗಣಪತಿಯವರ ಪ್ರಕರಣ ತೆಗೆದುಕೊಂಡು ಚರ್ಚೆ ಮಾಡುವಾಗ ನಮ್ಮ ಸರ್ಕಾರವು ಆ ಕುಟುಂಬಕ್ಕೆ ನ್ಯಾಯವನ್ನು ದೊರಕಿಸಿಕೊಡುವಾಗ, ಮಾನ್ಯ ಮುಖ್ಯಮಂತ್ರಿಗಳು ಕೆಳಮನೆಯಲ್ಲಿ ಸಮಗ್ರವಾಗಿ ಉತ್ತರವನ್ನು ನೀಡಿದ್ದಾರೆ. ಈ ಚರ್ಚೆ ಮುಗಿದ ನಂತರ ಮಾನ್ಯ ಗೃಹ ಸಚಿವರು ಈ ಮನೆಯಲ್ಲಿಯೂ ಆ ಕುಟುಂಬದ ಬಗ್ಗೆ ಮತ್ತು ರಾಜ್ಯದಲ್ಲಿ ಆಡಳಿತ ಮಾಡುತ್ತಿರುವ ಅಧಿಕಾರಿಗಳ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡುತ್ತಾರೆ. ನನಗೆ ಎಲ್ಲೋ ಒಂದು ಕಡೆ ಕಾರ್ಯಾಂಗದಲ್ಲಿ ತಪ್ಪು ಮಾಡಿರುವ ವ್ಯಕ್ತಿಗಳು ಈ ರೀತಿ ಆತ್ಮಹತ್ಯೆ ಅಥವಾ ತಪ್ಪು ಮಾಡಿರುವುದಕ್ಕೆ ಶಿಕ್ಷೆಯನ್ನು ಕೊಡುವಾಗ ....... ನಮ್ಮ ಸದನದಲ್ಲಿಯೇ 3 ವರ್ಷದಿಂದ ಉಗ್ರವಾದ ಹೋರಾಟವನ್ನು ನೋಡುತ್ತಿದ್ದೇವೆ. ಯಾವುದೇ ಒಬ್ಬ ತಪ್ಪು ಮಾಡಿದ ವ್ಯಕ್ತಿಯನ್ನು ಶಿಕ್ಷೆಗೆ ಒಳಪಡಿಸಬೇಕು ಎಂದು ವಿರೋಧ ಪಕ್ಷಗಳು ಬಾವಿಗಿಳಿದು ಹೋರಾಟ ಮಾಡಿರುವುದನ್ನು ನೋಡಿದ್ದೇವೆ. 1999ರಲ್ಲಿ ನಾನು ಬಿಜೆಪಿ ಶಾಸಕನಾಗಿ ಮತ್ತು ಮುಖ್ಯ ಸಚೇತಕನಾಗಿ ಹೋರಾಟ ಮಾಡಿದ್ದೆನು. ಇದನ್ನು ನಾನು ಬಹಳ ಗೌರವದಿಂದ ಹೇಳುತ್ತಿದ್ದೇನೆ. ಏಕೆಂದರೆ ಕಾರ್ಯಾಂಗದಲ್ಲಿ ಕೆಲಸ ಮಾಡುವಾಗ ಜನ ಪ್ರತಿನಿಧಿಗಳಾಗಿರುವ ನಾವೆಲ್ಲರೂ ಅಂದರೆ ಸರ್ಕಾರ ಇರಲಿ ಅಥವಾ ವಿರೋಧ ಪಕ್ಷ ಇರಲಿ, ಯಾವ ರೀತಿ ಜನರಿಗೆ ನ್ಯಾಯವನ್ನು ಕೊಡಬೇಕು ಎಂಬ ಚಿಂತನೆಯ ವ್ಯವಸ್ಥೆಯೊಳಗೆ ನಾವು ಹೋಗಬೇಕಾಗುತ್ತದೆ. ಆದರೆ ಆ ಕೆಲಸವನ್ನು ಸಮಗ್ರವಾಗಿ ಮಾಡುತ್ತಿದ್ದೇವೆ ಎಂದು ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ.

**ಶ್ರೀ ಎಂ.ಡಿ.ಲಕ್ಷ್ಮಿನಾರಾಯಣ(ನಾಮನಿರ್ದೇಶನ)(ಮುಂದು):–** ಆ ದೃಷ್ಟಿಯಿಂದ ನೋಡಿದಾಗ ಶಾಸಕಾಂಗದಲ್ಲಿ ಒಳ್ಳೆಯವರೂ ಇದ್ದಾರೆ. ಕೆಟ್ಟವರೂ ಇದ್ದಾರೆ. ಕಾರ್ಯಾಂಗದಲ್ಲಿಯೂ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಆದರೆ ಸರ್ಕಾರ ಆಡಳಿತ ಮಾಡಬೇಕಾದಂತಹ ವ್ಯವಸ್ಥೆಯೊಳಗೆ ಅದನ್ನು ಸಮಗ್ರವಾಗಿ ನಿರ್ವಹಿಸತಕ್ಕಂತಹ ಶಕ್ತಿಯನ್ನು, ಅದರ ಬಗ್ಗೆ ಕಿವಿ ಹಿಂಡುವಂತಹ ಕೆಲಸವನ್ನು ವಿರೋಧ ಪಕ್ಷವು ಮಾಡಬೇಕಾಗುತ್ತದೆ. ಸರ್ಕಾರದ ಕಿವಿ ಹಿಂಡಿ ಎಲ್ಲಿ ತಪ್ಪಾಗಿರುತ್ತದೆಯೋ ಅದನ್ನು ಸರಿಪಡಿಸುವುದಕ್ಕಾಗಿ ಕಿವಿ ಮಾತನ್ನು ಹೇಳಬೇಕಾಗುತ್ತದೆ. ಆ ಕಿವಿ ಮಾತು ಹೇಳುವಂತಹ ಕಾಲದಲ್ಲಿ ಗಣಪತಿಯವರ ಆತ್ಮಹತ್ಯೆ

ವಿಚಾರವಾಗಿ ಮೂರು ದಿನಗಳ ಕಾಲ ಇಲ್ಲಿ ಚರ್ಚೆಯಾಗಿದೆ. ಇಡೀ ರಾಜ್ಯದಲ್ಲಿ ಇನ್ನೂ ಅನೇಕ ಸಮಸ್ಯೆಗಳಿವೆ. ಗಣಪತಿಯವರ ಕುಟುಂಬಕ್ಕೆ ಇವತ್ತು ಸರ್ಕಾರ ಯಾವ ರೀತಿಯ ಅನುಕೂಲವನ್ನು ಮಾಡಿಕೊಡಬೇಕು ಎಂದು ಹೇಳುವವರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ಗಣಪತಿಯವರು ಇವತ್ತು ನಮ್ಮಿಂದ ದೂರವಾಗಿದ್ದಾರೆ. ಅವರಿಗೆ ಆಗಿರುವ ಅನ್ಯಾಯವನ್ನು ಸರಿ ಪಡಿಸುವ ವಿಚಾರದಲ್ಲಿ ಅವರ ಆತ್ಮಹತ್ಯೆ ಮೂಲ ಕಾರಣವಾಗಿರಲಿಲ್ಲ. ಇದರ ಬಗ್ಗೆ ನಾವೆಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ. ಒಬ್ಬ ಅಧಿಕಾರಿ ಆತ್ಮಹತ್ಯೆಯಂತಹ ತಪ್ಪು ಮಾಡುವಂತಹ ಸಂದರ್ಭದಲ್ಲಿ ಅವರ ಕುಟುಂಬ ಇರಬಹುದು, ಸಹೋದ್ಯೋಗಿಗಳಿರಬಹುದು, ಸರ್ಕಾರ ಇರಬಹುದು ಅಥವಾ ಅವರನ್ನು ನಂಬಿರತಕ್ಕಂತಹ ಆತ್ಮೀಯರಿರಬಹುದು, ಅವರೆಲ್ಲರಿಗೂ ಅನ್ಯಾಯವಾಗುತ್ತದೆ. ನಮ್ಮ ರಾಜ್ಯದಲ್ಲಿ ಸಹಸ್ರಾರು ಜನ ಅಧಿಕಾರಿ ಬಂಧುಗಳಿದ್ದಾರೆ. ಅವರೆಲ್ಲಾ ಇದೇ ರೀತಿಯ ಪರಿಸ್ಥಿತಿಗೆ ಹೋದರೆ ರಾಜ್ಯದ ಸ್ಥಿತಿ ಏನಾಗುತ್ತದೆ ಎನ್ನುವುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ವಿರೋಧಪಕ್ಷದವರು ಸರ್ಕಾರಕ್ಕೆ ಕಿವಿ ಹಿಂಡತಕ್ಕಂತಹ ಕೆಲಸವನ್ನು ಮಾಡಿದ್ದರೂ ಕೂಡ ಕಾರ್ಯಾಂಗದಲ್ಲಿ ತನ್ನ ತಪ್ಪನ್ನು ಸರಿಪಡಿಸಿಕೊಂಡು ಮುಂಬರುವ ದಿನಗಳಲ್ಲಿ ಅದನ್ನು ನ್ಯಾಯಾಂಗಕ್ಕೆ ಒಪ್ಪಿಸುವಂತಹ ಕರ್ತವ್ಯ ಮತ್ತು ಜವಾಬ್ದಾರಿ ಸರ್ಕಾರದ್ದಾಗಿದೆ. ಗಣಪತಿಯವರು ಜಾರ್ಜ್ ಅವರ ಹೆಸರು ಹೇಳಿರಬಹುದು. ಮೊಹಾಂತಿ ಅವರ ಹೆಸರು ಹೇಳಿರಬಹುದು. ಆ ದೃಷ್ಟಿಯಿಂದ ಸರ್ಕಾರ ಇವತ್ತು ತನ್ನದೇ ಆದ ನಿಲುವನ್ನು ತೆಗೆದುಕೊಳ್ಳಬೇಕಾಗಿದೆ. ಇಡೀ ಕರ್ನಾಟಕದಲ್ಲಿರುವಂತಹ ಆರೂವರೆ ಕೋಟಿ ಜನ ಎಲ್ಲೋ ಒಂದು ಕಡೆ ಸರ್ಕಾರ ತಪ್ಪು ಮಾಡುತ್ತಿದೆಯೇನೋ ಆ ಕ್ಷಣದಲ್ಲಿಯೇ ತಪ್ಪು ಮಾಡಿದವರಿಗೆ ಶಿಕ್ಷೆ ಆಗಬೇಕಿತ್ತೇನೋ ಎಂದು ಮಾತನಾಡುತ್ತಿದ್ದಾರೆ. ಕಾನೂನು ವ್ಯಾಪ್ತಿಯಲ್ಲಿ ಅದು ಯಾವುದೂ ಕೂಡ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಏನು ಮಾಡಬಹುದು? ಕಾಂಗ್ರೆಸ್ ಸರ್ಕಾರಕ್ಕೂ ಮುನ್ನ ಅನೇಕ ಸರ್ಕಾರಗಳಿದ್ದವು. ಸರ್ಕಾರಗಳಿದ್ದಂತಹ ಸಂದರ್ಭದಲ್ಲಿ ನಾವು ಏನನ್ನು ಮಾಡಿದ್ದೆವು. ಕಾರ್ಯಾಂಗವನ್ನು ಯಾವ ರೀತಿ ಹಿಡಿದು ಕೊಂಡಿದ್ದೆವು ಎನ್ನುವುದರ ಬಗ್ಗೆ ಚಿಂತನೆ ಮಾಡುವ ಒಂದು ವ್ಯವಸ್ಥೆಯೊಳಗೆ ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಸಾವಿರಾರು ಜನ ಅಮಾಯಕರ ಕುಟುಂಬಗಳಲ್ಲಿ ಪ್ರತಿನಿತ್ಯ ಎರಡರಿಂದ ಮೂರು ಆತ್ಮಹತ್ಯೆ ಆಗುವಂತಹ ಸಂದರ್ಭದಲ್ಲಿ ಆ ಕುಟುಂಬಗಳಿಗೆ ನಾವು ಯಾವ ರೀತಿಯ ನ್ಯಾಯವನ್ನು ಒದಗಿಸುತ್ತಿದ್ದೇವೆ. ನಮ್ಮ ನಮ್ಮ ಕ್ಷೇತ್ರಗಳಲ್ಲಿ ಒಂದೆರಡು ಕುಟುಂಬಗಳಲ್ಲಿ ಆತ್ಮಹತ್ಯೆಯಾದಾಗ ಅವರಿಗೇನಾದರೂ ಸಾಂತ್ವನ ಹೇಳುವಲ್ಲಿ, ಸರ್ಕಾರದಿಂದ ಸ್ಪಂದಿಸುವಲ್ಲಿ ಜನ ಪ್ರತಿನಿಧಿಗಳಾಗಿರತಕ್ಕಂತಹ ನಮ್ಮೆಲ್ಲರ ಜವಾಬ್ದಾರಿಯನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ. ಆ ಹಿನ್ನೆಲೆಯಲ್ಲಿ ಎಲ್ಲಾ ವಿಷಯಗಳನ್ನು ಬದಿಗೊತ್ತಿ ಮೂರು ದಿನಗಳಿಂದ ನಡೆಯುತ್ತಿರುವ ಈ ಒಂದು ಉನ್ನತ ಅಧಿಕಾರಿಯ ಸಾವಿನ ಬಗೆಗಿನ ಚರ್ಚೆ ಮೂರು ದಿನಗಳು ಕಳೆದಿದೆ. ಸರ್ಕಾರದಿಂದ ಉತ್ತರ ಸಹ ಸಿದ್ಧವಾಗಿದೆ. ಇನ್ನು, ನ್ಯಾಯಾಂಗದ ಬಗ್ಗೆ ನಾವು ಮಾತನಾಡುವ ಶಕ್ತಿ ನಮಗಿಲ್ಲ ಎಂಬುದು ನನ್ನ ಭಾವನೆ. ಈ ಹಿನ್ನೆಲೆಯಲ್ಲಿ ಇವತ್ತು ಸರ್ಕಾರ ತೆಗೆದುಕೊಳ್ಳತಕ್ಕಂತಹ ತೀರ್ಮಾನವು ಸ್ಪಷ್ಟವಾಗಿಯೂ ನಿಷ್ಪಕ್ಷಪಾತವಾಗಿಯೂ ಇರಬೇಕೆಂದು ನಾವು ನಮ್ಮ ನಾಯಕರಿಗೆ ಹಾಗೂ ನಮ್ಮ ಮುಖ್ಯಮಂತ್ರಿಗಳಿಗೆ ಹೇಳಲಿಚ್ಛಿಸುತ್ತೇನೆ. ಮಾನವೀಯತೆಯ ದೃಷ್ಟಿಯಿಂದ ಗಣಪತಿಯವರ ಕುಟುಂಬಕ್ಕೆ ಏನೇನು ಆಗಬೇಕು ಎನ್ನುವ ಬಗ್ಗೆ ಸರ್ಕಾರವು ಕಟಿಬದ್ಧವಾಗಿರುವ ಈ ಸಂದರ್ಭದಲ್ಲಿ ಈ ವಿಚಾರವನ್ನು ಇಲ್ಲಿಗೆ ಮುಕ್ತಾಯಗೊಳಿಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಬರಗಾಲ, ಅತಿವೃಷ್ಟಿ, ಕುಡಿಯುವ ನೀರಿನ ಸಮಸ್ಯೆ, ಕೂಲಿಕಾರ್ಮಿಕರ ಸಮಸ್ಯೆ, ಹರಿಜನ ಗಿರಿಜನರ ಸಮಸ್ಯೆ, ನೇಕಾರರ ಸಮಸ್ಯೆ ಇನ್ನೂ ಅನೇಕ ವಿಚಾರಗಳು ಚರ್ಚೆಗೆ ತೆಗೆದುಕೊಳ್ಳಬೇಕಾಗಿದ್ದು, ಇವೆಲ್ಲವುಗಳ ಬಗ್ಗೆ ಚರ್ಚೆ ಮಾಡಬೇಕು. ನಾನು ಶಾಸಕರ ಭವನದಿಂದ ಬರುವಾಗ ಉತ್ತರ ಕರ್ನಾಟಕದ ಜನ ಇದೊಂದು ಹುಚ್ಚರ ಸಂತೆ ಎಂದು ಮಾತನಾಡಿಕೊಳ್ಳುತ್ತಿದ್ದರು. ಖಂಡಿತವಾಗಿಯೂ ಕೂಡ ಈ ಕೆಟ್ಟ ಆಪಾದನೆ ಹೊತ್ತುಕೊಳ್ಳದೆ ಜನಪ್ರತಿನಿಧಿಗಳಾಗಿರತಕ್ಕಂತಹ ನಾವು ಸದನದ ಗೌರವವನ್ನು ಹೇಗೆ ಉಳಿಸಬೇಕು ಎನ್ನುವ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಬೇಕು. ನಮ್ಮ ಕರ್ನಾಟಕ ಸರ್ಕಾರದ ಉನ್ನತ ಪೊಲೀಸ್ ಅಧಿಕಾರಿಗಳ ನಂಬಿಕೆ ಇಟ್ಟುಕೊಂಡು ಗಣಪತಿಯವರ ಸಾವಿಗೆ ಕಾರಣೀಭೂತರಾದವರನ್ನು ತನಿಖೆ ಮಾಡಬೇಕಾಗುತ್ತದೆ. ಹಿಂದೆ ನಮ್ಮ ವಿರೋಧ ಪಕ್ಷದ ಮಿತ್ರರು

ಡಿ.ಕೆ.ರವಿಯವರ ಸಾವಿನ ಸಂದರ್ಭದಲ್ಲಿ ಪ್ರಕರಣವನ್ನು ಸಿ.ಬಿ.ಐ., ಗೆ ವಹಿಸಬೇಕೆಂದು ಒತ್ತಡವನ್ನು ತಂದರು. ಆದರೆ ಇವತ್ತಿನವರೆಗೂ ಏನು ಆಗಿರುವುದಿಲ್ಲ. ಅದಕ್ಕೋಸ್ಕರ ನಾವೆಲ್ಲ ನಮ್ಮ ಪೋಲೀಸ್ ಇಲಾಖೆಯ ಮೇಲೆ ನಂಬಿಕೆಯಿಟ್ಟು ಸಿ.ಐ.ಡಿ., ತನಿಖೆಯನ್ನು ಮಾಡಿಸಿ ಮೃತರ ಕುಟುಂಬಕ್ಕೆ ನ್ಯಾಯವನ್ನು ಒದಗಿಸಬೇಕೆಂಬ ದೃಷ್ಟಿಯಿಂದ ಹೋಗೋಣ ಎನ್ನುವಂತಹ ಮಾತನ್ನು ಹೇಳುತ್ತೇನೆ. ಮಂತ್ರಿಮಂಡಲದ ಜಾರ್ಜ್ ಇರಬಹುದು, ಪೋಲೀಸ್ ಅಧಿಕಾರಿಗಳಾದ ಪ್ರಸಾದ್ ಇರಬಹುದು, ಮೊಹಾಂತಿ ಇರಬಹುದು, ತಪ್ಪಿತಸ್ಥರು ಯಾರೇ ಇರಬಹುದು ಅವರ ಮೇಲೆ ಸಿ.ಐ.ಡಿ. ವರದಿ ಬಂದ ನಂತರ ಸರ್ಕಾರ ಕ್ರಮ ತೆಗೆದುಕೊಂಡು ಆ ಕುಟುಂಬಕ್ಕೆ ನ್ಯಾಯ ಒದಗಿಸಿಕೊಡಬೇಕು ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ನಿನ್ನೆಯ ದಿನ ನಾವು ಪ್ರಮುಖರೆಲ್ಲಾ ಕುಳಿತು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಚರ್ಚೆ ನಡೆಯುತ್ತಿರಲಿ. ಸರ್ಕಾರದ ಪರ ಉತ್ತರ ಸಿದ್ಧವಾದ ಮೇಲೆ ಯಾರು ಮಾತನಾಡುತ್ತಿರುತ್ತಾರೆಯೋ ಅವರದ್ದು ಮುಗಿದ ತಕ್ಷಣ ಸರ್ಕಾರದ ಪರವಾಗಿ ಉತ್ತರವನ್ನು ಕೊಡಿಸುವುದು ಎಂದು ತೀರ್ಮಾನವಾಯಿತು. ಅದಕ್ಕೆ ಎಲ್ಲರ ಸಹಮತವೂ ಇತ್ತು. ಈಗಾಗಲೇ ಬಹಳಷ್ಟು ಜನ ಈ ವಿಷಯದ ಬಗ್ಗೆ ಮಾತನಾಡಿದ್ದಾರೆ. ಬಹಳಷ್ಟು ಜನ ನಮಗೆ ಮೂರರಿಂದ ಐದು ನಿಮಿಷಗಳ ಕಾಲಾವಕಾಶವನ್ನು ಕೊಡಿ ಎಂದು ಕೇಳಿದ್ದಾರೆ. ನಾಲ್ಕು ಜನಕ್ಕೆ ತಲಾ ಐದು ನಿಮಿಷಗಳ ಕಾಲಾವಕಾಶವೆಂದರೆ ಗರಿಷ್ಠ 20 ನಿಮಿಷಗಳಾಗುತ್ತದೆ. ಹಾಗಾಗಿ ಇಷ್ಟು ಹೊತ್ತಿನವರೆವಿಗೂ ನಾವು ಸಹನೆಯಿಂದ ಇದ್ದೇವೆ.

**ಶ್ರೀ ಐವನ್ ಡಿ'ಸೋಜ(ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಈ ಚರ್ಚೆಯನ್ನು ಶುರು ಮಾಡಿ ಎರಡು ದಿನಗಳಾಯಿತು. ಇಂದು ಸಂಜೆ 06.00 ಗಂಟೆಗೆ ಸಚಿವ ಸಂಪುಟದ ಸಭೆಯಿದೆ. ಈಗಾಗಲೇ ಕೆಳಮನೆಯಲ್ಲಿ ಉತ್ತರವನ್ನು ನೀಡಲಾಗಿದೆ. ಈಗ ಇಲ್ಲಿ ಮೇಲ್ಮನೆಯಲ್ಲಿ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಗೃಹ ಸಚಿವರು ಇಲ್ಲಿ ಬಂದಿದ್ದಾರೆ. ಉತ್ತರವನ್ನು ಕೊಡುವುದಕ್ಕೆ ನೀವು ಅವಕಾಶವನ್ನು ನೀಡದೆ ಇತರರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಲ್ಲಿ ಇದು ನಾಳೆಗೂ ಮುಂದುವರೆಯುತ್ತದೆ.

**ಸಭಾಪತಿಯವರು:–** ನಾಳೆಗೆ ಮುಂದೂಡುವುದಿಲ್ಲ. ಈಗಲೇ ಉತ್ತರವನ್ನು ಕೊಡಿಸುತ್ತೇವೆ.

**ಶ್ರೀ ಐವನ್ ಡಿ'ಸೋಜ:–** ಆದರೆ ನೀವು 06.00 ಗಂಟೆಗೆ ಕಲಾಪವನ್ನು ಮುಗಿಸಲೇಬೇಕಾದ ಅನಿವಾರ್ಯತೆ ಇದೆ. ಅವರು ಸಚಿವ ಸಂಪುಟ ಸಭೆಗೆ ಹೋಗಬೇಕು. ನಿಯಮ 68ರ ಅಡಿಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈಗಾಗಲೇ ನಾವು ಸರ್ಕಾರದ ಪರ ಉತ್ತರ ತಯಾರಾದ ತಕ್ಷಣ ಸರ್ಕಾರದಿಂದ ಉತ್ತರವನ್ನು ಕೊಡಿಸುವುದಕ್ಕೆ ಒಪ್ಪಿಕೊಂಡಿರುವುದರಿಂದ ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿರೋಧಪಕ್ಷದವರಲ್ಲಿಯೂ ಸಹ ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಆಯಿತು. ಈಗಾಗಲೇ ನಾನು ಇದನ್ನು ಉಲ್ಲೇಖ ಮಾಡಿರುತ್ತೇನೆ. ಇದರೊಳಗೆ ಈಗ ಒಂದು ಸಣ್ಣ compromise ಮಾಡುತ್ತೇನೆ. ಮಹಿಳೆಯರು ಜಾಸ್ತಿ ಜನ ನಮ್ಮ ಸದನದಲ್ಲಿ ಇಲ್ಲ. ಮಹಿಳೆಯರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳಿದಾಗ ಅದಕ್ಕೆ ನಾನು ಇಲ್ಲ ಎಂದು ಹೇಳುವುದು ಸರಿ ಹೋಗುವುದಿಲ್ಲ. ನಾಲ್ಕು ಜನರ ಬದಲು ಐದು ನಿಮಿಷಗಳ ಕಾಲ ಮಾತ್ರ ಶ್ರೀಮತಿ ವಿಮಲಾ ಗೌಡರವರಿಗೆ ಅವಕಾಶವನ್ನು ನೀಡುತ್ತೇನೆ. ಅವರು ಮಾತನಾಡಿದ ನಂತರ ಸರ್ಕಾರದಿಂದ ಉತ್ತರವನ್ನು ನೀಡಲಾಗುವುದು. ಕೇವಲ ಐದು ನಿಮಿಷಗಳು ಮಾತ್ರ.

**ಶ್ರೀಮತಿ ವಿಮಲಾಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈಗ ಕಳೆದ ಮೂರು ದಿನಗಳಿಂದ ಡಿವೈಎಸ್ಪಿ ಆಗಿದ್ದ ಗಣಪತಿಯವರ ಆತ್ಮಹತ್ಯೆ ವಿಷಯವಾಗಿ ಸುದೀರ್ಘವಾದ ಚರ್ಚೆಯು ನಡೆಯುತ್ತಿದೆ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ರಕ್ಷಣೆಯನ್ನು ಮಾಡುತ್ತಿರುವ, ಅತ್ಯಂತ ಕ್ರಿಯಾಶೀಲವಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುತ್ತಿರುವ ಪೋಲೀಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಹ ಪ್ರಭಾವಿ ರಾಜಕಾರಣಿಗಳ ಒತ್ತಡದಿಂದಾಗಿ ಉಂಟಾಗುವ ಮಾನಸಿಕ ಹಿಂಸೆಯಿಂದ ಅವರು ಆತ್ಮಹತ್ಯೆ ಘಟ್ಟವನ್ನು ತಲುಪುತ್ತಾರೆ ಎಂದು ಹೇಳಿದರೆ ಗಂಭೀರವಾಗಿ

ಯೋಚನೆ ಮಾಡಬೇಕಾದಂತಹ ಪರಿಸ್ಥಿತಿ ಬಂದಿದೆ. ಪೊಲೀಸ್ ಅಧಿಕಾರಿಯಾಗಿ ನೇಮಕವಾಗಬೇಕಾದರೆ ಎಲ್ಲಾ ರೀತಿಯ ತರಬೇತಿಯನ್ನು ಪಡೆದಿರಬೇಕು. ಮಾನಸಿಕವಾಗಿ ದೈಹಿಕವಾಗಿ ಗಟ್ಟಿಯಾಗಿರಬೇಕು. ಅಂತಹವರು ಮಾನಸಿಕವಾಗಿ ಜರ್ಜರಿತರಾಗಿ ಈ ಹಿಂಸೆಯನ್ನು, ಈ ನೋವನ್ನು ತಡೆಯುವುದಕ್ಕಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎನ್ನುವ ಮಟ್ಟಕ್ಕೆ ಬಂದಿರುವುದು ಶೋಚನೀಯ. ಈ ದೌರ್ಜನ್ಯವನ್ನು, ಹಿಂಸೆಯನ್ನು ನಾನು ತಡೆಯುವುದಕ್ಕಾಗುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಅನ್ನುವಂತಹ ಮಟ್ಟಕ್ಕೆ ಬಂದು ಬಿಟ್ಟರೆ ನಾವು ಸೀರಿಯಸ್ ಆಗಿ ಯೋಚನೆ ಮಾಡುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಕಲ್ಲಪ್ಪ ಹಂಡಿಬಾಗ್ ಅವರ ಮೇಲೆ ಒಂದು ದೂರು ಬಂತು. ಕಲ್ಲಪ್ಪ ಹಂಡಿಬಾಗ್‌ರವರು ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿದ್ದರು ಎಂದು ಅವರ ಮೇಲೆ ದೂರು ಬಂದಾಗ ಅವರು ಇಮ್ಮಿಡಿಯೆಟ್ ಆಗಿ ಆತ್ಮಹತ್ಯೆ ಮಾಡಿಕೊಂಡರು. ಆದರೆ ಅವರ ಮನೆಯ ಪರಿಸ್ಥಿತಿಯನ್ನು ಅವರ ವಾಸ್ತವ್ಯದ ಪರಿಸ್ಥಿತಿಯನ್ನು ಗಮನಿಸಿದಾಗ ಕಲ್ಲಪ್ಪ ಹಂಡಿಬಾಗ್ ರವರ ಮೇಲೆ ಬಂದಿರುವಂತಹ ಆರೋಪ ದೂರ ಅಂತ ಹೇಳಿ ಗೊತ್ತಾಗುತ್ತದೆ. ಡಿ.ಕೆ.ರವಿಯಂತಹ ಪ್ರಾಮಾಣಿಕ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡರು. ಕಲಬುರ್ಗಿ ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಇವತ್ತು ಮಲ್ಲಿಕಾರ್ಜುನ ಬಂಡೆ ತೀರಿಕೊಂಡರು. ಅವರನ್ನು ಕೊಂದರು. ಅವರ ಶ್ರೀಮತಿಯವರು ಇವತ್ತು ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ. ಅವರ ಎರಡು ಮಕ್ಕಳು ಇವತ್ತು ಬೀದಿಗೆ ಬಂದಿದ್ದಾರೆ. ಸಾಕಷ್ಟು ಜನ ಅದರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಅದೇ ರೀತಿ ಮಹಿಳಾ ಡಿವೈಎಸ್‌ಪಿ ಅನುಪಮಾ ಶಣೈ ಅವರ ಸ್ಥಿತಿ ಏನಾಯಿತು. ಈ ರಾಜ್ಯದಲ್ಲಿ ಐ.ಎ.ಎಸ್ ಅಧಿಕಾರಿಣಿ ರಶ್ಮೀ ಮಹೇಶ್ ರವರ ಸ್ಥಿತಿ ಏನಾಯಿತು. ಒಬ್ಬ ಮೈಸೂರು ಜಿಲ್ಲೆಯ ಮ್ಯಾಜಿಸ್ಟ್ರೇಟ್ ಆಗಿರುವಂತಹ ಜಿಲಾಧಿಕಾರಿಗಳಿಗೆ ಆದ ಅವಮಾನವೇನು? ಇದೆಲ್ಲವನ್ನು ನಾವು ನೋಡಿದಾಗ ನಿಜಕ್ಕೂ ನಾವೆಲ್ಲಿದ್ದೇವೆ ಅನ್ನುವಂತಹ ಸಂಶಯ ನಮಗೆ ಬರುತ್ತದೆ. ಗಣಪತಿಯವರು ತಾವು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮುಂಚೆ ಆಟೋದಲ್ಲಿ ಒಂದು ಖಾಸಗೀ ಟಿ.ವಿ ಚಾನಲ್‌ಗೆ ಹೋಗುತ್ತಾರೆ. ಖಾಸಗಿ ಟಿ.ವಿ ಚಾನಲ್‌ನಲ್ಲಿ ಅವರು ಕುಳಿತುಕೊಂಡು ನಾನು ಹೇಳುವಂತಹ ಮಾತುಗಳನ್ನು ರೆಕಾರ್ಡ್ ಮಾಡಿ ಅಂತ ಹೇಳುತ್ತಾರೆ. ಅವರು ಮಾನಸಿಕವಾಗಿ ಸ್ಥಿಮಿತದಲ್ಲಿ ಇಲ್ಲವೆಂದು ಪೊಲೀಸ್ ಅಧಿಕಾರಿಗಳು ಹೇಳುತ್ತಾರೆ. ನಾವು ದಿವಸ ಪತ್ರಿಕೆಗಳಲ್ಲಿ ಸಹ ನೋಡುತ್ತಿದ್ದೇವೆ. ಆದರೆ ಮಾನಸಿಕವಾಗಿ ಅವರು ಸಿಮಿತದಲ್ಲಿಲ್ಲವೆಂದು ಹೇಳುವಂತಹ ಸ್ಥಿತಿಯಲ್ಲಿ ಇರಲಿಲ್ಲ. ಬಹಳ ಚೆನ್ನಾಗಿ ಅವರು ಟಿ.ವಿ ಸಂದರ್ಶನದಲ್ಲಿ ಮಾತನಾಡಿದ್ದಾರೆ. ತನಗೆ ಯಾವ ಯಾವ ರೀತಿಯ ಕಿರುಕುಳ ಆಯಿತು. ಆ ಚರ್ಚ್ ಘಟನೆ ನಡೆದಾಗ ಬೆಂಗಳೂರಿನಲ್ಲಿ ಸಚಿವರ ಆಪ್ತನಿನ ಮೇಲೆ ಇವರು ಕ್ರಮ ತೆಗೆದುಕೊಂಡಾಗ ಯಾವ ರೀತಿ ಅವರಿಗೆ ಹಿಂಸೆ ಕೊಟ್ಟರು. ಅವರ ಮೇಲೆ ನಡೆದಂತಹ ದೌರ್ಜನ್ಯ, ಕಿರುಕುಳ ಕೊಟ್ಟರು. ಡಿ.ವೈಎಸ್‌ಪಿ ಆದಾಗ, ಎಸ್.ಪಿ ಆದಾಗ ನನ್ನನ್ನು ಒಬ್ಬ ಗುಮಾಸ್ತನ ರೀತಿ ನಡೆಸಿಕೊಂಡರು ಎಂದು ಅವರು ಹೇಳುತ್ತಾರೆ. ನಿಜಕ್ಕೂ ಶೋಚನೀಯ ಪರಿಸ್ಥಿತಿ. ಅವರು ಹೇಳಿ 3 ಹೆಸರುಗಳನ್ನು ಉಲ್ಲೇಖ ಮಾಡುತ್ತಾರೆ. ನಿನ್ನೆ ಅವರು ಹೇಳಲೇ ಇಲ್ಲ. ಅವರು ಒಂದು ದೃಶ್ಯ ಮಾಧ್ಯಮದಲ್ಲಿ ಹೇಳಲೇ ಇಲ್ಲ ಯಾರು ತಮಗೆ ಕಿರುಕುಳ ಕೊಟ್ಟರು ಅಂತ ಹೇಳಿ ಅನ್ನುವ ವಾದವನ್ನು ಈ ಕಡೆ ಆಡಳಿತ ಪಕ್ಷದಿಂದ ಬಂತು. ಇವತ್ತು ಪತ್ರಿಕೆ ನೋಡಿರಬಹುದು. ಸಾವಿಗೆ ಮುನ್ನಾ ಏನು ಸ್ಟೇಟ್‌ಮೆಂಟ್ ಮಾಡುತ್ತಾನೆ ಸಾಯುವಂತಹ ವ್ಯಕ್ತಿ ಅದನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆಂದು ಕೋರ್ಟಿನಿಂದ ಆದೇಶವಾಗಿರುವುದು ಪತ್ರಿಕೆಯಲ್ಲಿ ಬಂದಿದೆ. ಅವರು ಹೇಳುತ್ತಾರೆ. ನನಗೆ ಇಬ್ಬರು ಪ್ರಮುಖ ಪೊಲೀಸ್ ಅಧಿಕಾರಿಗಳು ನನಗೆ ಮಾನಸಿಕವಾಗಿ, ದಹಿಕವಾಗಿ ಹಿಂಸೆ ಕೊಟ್ಟಿದ್ದಾರೆ. ರಾಜ್ಯ ಸರ್ಕಾರದ ಪ್ರಮುಖ ಮಂತ್ರಿಗಳು ಮಾಜಿ ಗೃಹಸಚಿವರು ಸಹ ನನಗೆ ಬಹಳ ತೊಂದರೆ ಕೊಟ್ಟಿದ್ದಾರೆ ಅನ್ನುವಂತಹ ಮಾತನ್ನು ಹೇಳುತ್ತಾರೆ. ಆ ಮಾತನ್ನು ಹೇಳಿ ಅವರು ಅಲ್ಲಿಂದ ಬಂದು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೆ. ಅವರು ಆತ್ಮಹತ್ಯೆ ಮಾಡಿಕೊಂಡಾಗ ಅವರ ಪತ್ನಿಗೆ ತಾನೆ ಸುದ್ದಿ ಹೋಗಬೇಕು. ಪೊಲೀಸ್‌ನವರಿಗೆ ಇಮ್ಮಿಡಿಯೇಟಾಗಿ ಗೊತ್ತಾಗುತ್ತದೆ. ಇಮ್ಮಿಡಿಯೇಟ್‌ಆಗಿ ಗೊತ್ತಾದಾಗ ಪೊಲೀಸ್‌ನವರು ಬರುತ್ತಾರೆ. ಎಲ್ಲಾ ಲಾಡ್ಜ್‌ಅನ್ನು ಹುಡುಕುತ್ತಾರೆ. ಅವರು ಉಳಿದುಕೊಂಡು ಆತ್ಮಹತ್ಯೆ ಮಾಡಿಕೊಂಡಂತಹ ಲಾಡ್ಜ್‌ಗೆ ಬರುತ್ತಾರೆ. ಆ ಲಾಡ್ಜ್‌ನಲ್ಲಿ ನನಗೆ ಕೆಲವೊಂದು ಸಂಶಯ ಕಾಡುತ್ತದೆ. ಅವರು ಆತ್ಮಹತ್ಯೆ ಮಾಡಿಕೊಂಡಾಗ ಅವರು ಡೆತ್‌ನೋಟ್ ಬರೆದು ಇಟ್ಟಿದ್ದರು ಅಂತ ಇದೆ. ಇವತ್ತು ಆ ಡೆತ್‌ನೋಟ್ ಇಲ್ಲ. ಆ ಘಟನೆ ನಡೆದಾಗ ದೃಶ್ಯ ಮಾಧ್ಯಮಗಳು ತೋರಿಸುತ್ತದೆ. ಅವರ ಶವದ ಸಮೀಪ ಪೆನ್ನು ಮತ್ತು ಪತ್ರ ಇತ್ತು ಹಾಗೂ ಕಾರ್‌ನ ಕೀ ಇತ್ತು ಅಂತ

ಹೇಳಿದ್ದರು. ಅದು ಯಾವುದು ಇಲ್ಲವೆನ್ನುವಂತಹದ್ದನ್ನು ಹೇಳುತ್ತಾರೆ. ಜೊತೆಗೆ 2 ಪೆನ್‌ಡ್ರೈವ್ ಅವರು ಮೊದಲೇ ಹೇಳಿರುತ್ತಾರೆ ನನ್ನ ಹತ್ತಿರ 2 ಪೆನ್‌ಡ್ರೈವ್ ಇದೆ ಅದು ಏನಾಗುತ್ತದೋ ಗೊತ್ತಿಲ್ಲ ಅಂತ. ಅದರ ಬಗ್ಗೆ ಸುದ್ದಿ ಬರುತ್ತಿಲ್ಲ ಮತ್ತು ಗಣಪತಿರವರು ಹೇಳಿರುವಂತೆ ಅಧಿಕಾರಿಗಳಾದ ಶ್ರೀ ಪಿ.ಮೊಹಂತಿ, ಶ್ರೀ ಎಂ.ಎಂ.ಪ್ರಸಾದ್ ಹಾಗೂ ಸನ್ಮಾನ್ಯ ಸಚಿವ ಜಾರ್ಜ್ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಮಾನಸಿಕ ಕಿರುಕುಳ ಅಂತ ಹೇಳಿ ಅವರು ಹೇಳಿಕೆ ಕೊಟ್ಟಾಗಲೂ ಸಹ ಯಾವುದೇ ಪ್ರಕರಣವನ್ನು, ಅಂದರೆ ಸಾವಿಗೆ ಮುಂಚೆ ಕೊಟ್ಟಂತಹ ಹೇಳಿಕೆ, ಯಾವುದೇ ಪ್ರಕರಣವನ್ನು ಅವರ ವಿರುದ್ಧ ದಾಖಲು ಮಾಡಿಕೊಂಡಿಲ್ಲ. ಅವರ ವಿರುದ್ಧ ಕ್ರಮವನ್ನು ತೆಗೆದುಕೊಂಡಿಲ್ಲ. ಅವರು ಆತ್ಮಹತ್ಯೆ ಮಾಡಿಕೊಂಡಾಗ ಆ ಸನ್ನಿವೇಶವನ್ನು ಯಥಾವತ್ತಾಗಿ ವಿಡಿಯೋ ರೆಕಾರ್ಡ್ ಮಾಡಿಕೊಳ್ಳಬೇಕು. ಆ ವಿಡಿಯೋ ರೆಕಾರ್ಡ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು. ಇದು ಆಗಿದೆಯಾ? ಇದೊಂದು ಸಂಶಯ ನಮ್ಮನ್ನು ಕಾಡುತ್ತಿದೆ. ಆತ್ಮಹತ್ಯೆ ಬಳಿಕ ಅಧಿಕಾರಿ ಪತ್ನಿಯಿಂದ ದೂರನ್ನು ಪಡೆಯಬೇಕು. ಅದನ್ನು ಬಿಟ್ಟು ಪೊಲೀಸ್ ಅಧಿಕಾರಿಗಳೇ ತಾವೇ ದೂರು ಬರೆದು, ಗಣಪತಿಯವರ 80 ವರ್ಷದ ತಂದೆಯವರಾದ ಶ್ರೀ ಕುಶಾಲಪ್ಪರವರಿಂದ ಸೈನ್ ತೆಗೆದುಕೊಳ್ಳುತ್ತಾರೆ ಅನ್ನುವುದಾದರೆ ಕುಶಾಲಪ್ಪ ಹೇಳಿದ್ದಾರೆ. ಅದು ಯಾವುದೋ ಕಂಪ್ಲೇಂಟ್ ಕಾಪಿ ಅಂತ ಹೇಳಿದರು. ಅವರ ಮಗ ಸತ್ತ ಆ ಮಗನ ಶವ ನೇತಾಡುತ್ತಿತ್ತು ಅಂತ ಆ ಸಮಯದಲ್ಲಿ ಹೇಳಿದರೆ, ಆ ತಂದೆಯ ಮನಸ್ಥಿತಿ ಹೇಗಿರಬಹುದು ಆ ಸಮಯದಲ್ಲಿ ಸೈನ್ ಹಾಕು ಅಂತ ಹೇಳಿದರು ನಾನು ಸೈನ್ ಹಾಕಿದೆ ಅಂತ ಹೇಳಿ ಅವರ ಕೈಯಲ್ಲಿ ಸೈನ್ ಹಾಕಿಸುತ್ತಾರೆ. ಜೊತೆಗೆ ಅವರ ತಮ್ಮ ಸಹ ರಾಮನಗರದಲ್ಲಿ ಡಿ.ವೈ.ಎಸ್‌ಪಿ ಆಗಿರುತ್ತಾರೆ. ಅವರನ್ನು ಕರೆಸಿ ಒಂದು ಸ್ಟೇಟ್‌ಮೆಂಟ್ ಮಾಡಿಸುತ್ತಾರೆ. ಅಂದರೆ ಅವರು ಡಿ.ವೈ.ಎಸ್‌ಪಿ ತನ್ನ ಕೆಲಸಕ್ಕೆ ಎಲ್ಲಿ ಸಂಚಕಾರ ಬರುತ್ತದೆ ಅಂತ ಹೇಳಿ ತನ್ನ ಕೆಲಸದಲ್ಲಿ ತೊಂದರೆ ಆಗುತ್ತದೆಂದು ಕೊಟ್ಟಿರಬಹುದು. ಆದರೆ ಇದೆಲ್ಲಾ ಒಂದು-------- ಅಂತ ಮೇಲ್ನೋಟಕ್ಕೆ ಗೊತ್ತಾಗುವುದಿಲ್ಲವೇ? ಗಣಪತಿಯವರ ಸಾವಿನ ಸುತ್ತ ಒಂದು ರಾಜಕೀಯ ಮ್ಯಾನುಪ್ಲೇಟ್ ಮಾಡುತ್ತಿದ್ದಾರೆಂದು ಅನ್ನುವುದು ಮೇಲ್ನೋಟಕ್ಕೆ ಕಾಣುವುದಿಲ್ಲವೇ? ಇವತ್ತು ನಾನು ಹೇಳುತ್ತೇನೆ ಇವತ್ತು ಮೈಸೂರಿನ ಹೆಣ್ಣುಮಗಳು ಜಿಲ್ಲಾಧಿಕಾರಿ ಶೀಖಾರವರ ಮೇಲೆ ಬಳಸಬಾರದ ಪದವನ್ನು ಆ ವ್ಯಕ್ತಿ ಬಳಸಿದ್ದಾನೆ ಶ್ರೀಮಾನ್ ಮರಿಗೌಡ. ಆತ ಜಾಮೀನಿಗೆ ಅರ್ಜಿಯನ್ನು ನಿನ್ನೆ ಹಾಕಿಕೊಂಡಿದ್ದರು. ಅದು ತಿರಸ್ಕೃತವಾಗಿದೆ. ತಿರಸ್ಕೃತವಾದಾಗ ಇಮ್ಮಿಡಿಯೇಟ್ ಆಗಿ ಅರೆಸ್ಟ್ ಮಾಡಬಹುದಲ್ಲವೇ? ಆ ವ್ಯಕ್ತಿಯನ್ನು ಇಮ್ಮಿಡಿಯೇಟ್ ಆಗಿ ಇನ್ನೂ ಅರೆಸ್ಟ್ ಮಾಡಿಲ್ಲ. **(ಗೊಂದಲ)** ಸಿಗದೇ ಏನು ಪಾತಾಳದಲ್ಲಿ ಅಡಗಿಕೊಳ್ಳುತ್ತಾನೆಯೇ? ಸಿಗದೇ ಪಾತಾಳದಲ್ಲಿ ಅಡಗಿಕೊಳ್ಳಲು ಸಾಧ್ಯವೇ? ಪುರಾಣ ಪುಣ್ಯ ಕಥೆಗಳಲ್ಲಿ ಓದುತ್ತಿದ್ದೆವು. ಹೋಗಿ ವೈಶಂಪಾಯನ ಸರೋವರದಲ್ಲಿ ಅಡಗಿಕೊಂಡಿದ್ದ ದುರ್ಯೋಧನನೆಂದು. ದುರ್ಯೋಧನ ಅಂತ ಹೇಳಿದೆವು. ದುರ್ಯೋಧನನ ತಮ್ಮ ಬಳಸಿದ ಪದವನ್ನು, ದುರ್ಯೋಧನನ ತಮ್ಮ ನಡೆಸಿದ ಕೃತ್ಯವನ್ನು ಈತ ಬಾಯಿಯಲ್ಲಿ ಹೇಳಿದ್ದಾನೆ ನಿಮಗೆ ಗೊತ್ತಿರಲಿ. ಬಾಯಿಯಲ್ಲಿ ಹೇಳಿದ್ದಾನೆ. ಆ ಮಹಿಳಾ ಜಿಲ್ಲಾಧಿಕಾರಿಗೆ ನಿನಗೆ ಆ ರೀತಿ ಮಾಡುತ್ತೇನೆ ನಾನು. ಮಹಾಭಾರತದ ದ್ರೌಪದಿಯ ಕಥೆಯನ್ನು ನೆನಪಿಸಿದ್ದಾನೆ. ಆಗಬಹುದಾ... ಆಗಬಹುದಾ ಈ ಕಾಲದಲ್ಲಿ, ಯಾವ ಹೆಣ್ಣು ಮಗಳು ಸಹಿಸಿಕೊಳ್ಳುತ್ತಾರೆ ಸರ್. ನೀವೆಲ್ಲಾ ಹೆಣ್ಣು ಮಕ್ಕಳಿಲ್ಲವಾ ಇಲ್ಲಿ. ಮೋಟಮ್ಮ ಇದ್ದೀರಾ, ವೀಣಾ ಇದ್ದಾರೆ. ಜಯಮ್ಮ ಇದ್ದಾರೆ. ಜಯಮಾಲ ಇದ್ದಾರೆ. ತಾರಾ ಇದ್ದಾರೆ. ಯಾರು ಸಹಿಸಿಕೊಳ್ಳುತ್ತಾರೆ ಸರ್. (----------ನಾನು ಸಹಿಸಿಕೊಂಡಿಲ್ಲ)ಯಾರು ಸಹಿಸಿಕೊಳ್ಳುತ್ತಾರೆ ಈಗಿನ ಕಾಲದಲ್ಲಿ ಹೇಳಿ? ಆ ಪದವನ್ನು ಉಪಯೋಗಿಸಬಹುದೇ? ಅವನು ಒಬ್ಬನೇ ಮಾಡಲಿಕ್ಕೆ ಸಾಧ್ಯನಾ? ಹೆಣ್ಣು ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಲ್ಲಳು. ರುದ್ರೇ ಆಗುವಂತಹ ಶಕ್ತಿ ಹೆಣ್ಣಿಗೆ ಇದೆ. ಚಾಮುಂಡಿ ಆಗುವ ಶಕ್ತಿ ಇರಬಹುದು. ಇರಬಹುದು **ಶ್ರೀಮತಿ ಸೋನಿಯಾಗಾಂಧಿಯವರು ಇರಬಹುದು. ಅಲ್ಲ ಅಲ್ಲ ನಾನು ಶ್ರೀಮತಿ ಸೋನಿಯಾಗಾಂಧಿಯವ ಹೆಸರನ್ನು ಪ್ರಸ್ತಾಪ ಮಾಡಲೇ ಇಲ್ಲಪ್ಪ ಇಲ್ಲಿ.** ಶ್ರೀಮತಿ ಸೋನಿಯಾಗಾಂಧಿಯವರು ಶಕ್ತಿಯುತ ಶಕ್ತಿವಂತ ಮಹಿಳೆಯಾಗಿರುವುದರಿಂದ, ಆ ಒಂದು ಶಕ್ತಿ ಇರುವುದರಿಂದ, ಆ ಕೆಪ್ಯಾಸಿಟಿ ಇರುವುದರಿಂದ, ಆ ಕೆಪೇಬಲಿಟಿ ಇರುವುದರಿಂದ ನಿಮ್ಮೆಲ್ಲರನ್ನೂ ಕೂರಿಸಿ ಅವರು ಅಧ್ಯಕ್ಷರಾಗಿದ್ದಾರೆ. ಅಷ್ಟು ವರ್ಷ ಶ್ರೀಮತಿ ಇಂದಿರಾಗಾಂಧಿರವರು ಈ ರಾಷ್ಟ್ರದ ಪ್ರಧಾನಿಯಾಗಿದ್ದರು ಎಂದರೆ ಆ ಮಹಿಳೆಯ ಶಕ್ತಿಯನ್ನು, ಆ ಮಹಿಳೆಯ ಎದೆಗಾರಿಕೆಯನ್ನು, ಆ ಮಹಿಳೆಯ ವಿಲ್ ಪವರ್ ಅನ್ನು ಏನೇನು ಮಾಡಬೇಕು

ಹೇಳಿ ಯಾರ ಕೈಲಾದರೂ ಸಾಧ್ಯನಾ?. . . . **(ಗೊಂದಲ)** ಎಷ್ಟು ದೇಶಗಳಲ್ಲಿ ಈ ಮಹಿಳೆ ಸಮರ್ಥವಾಗಿ ಆಳುತ್ತಿದ್ದಾಳೆ.

ಸನ್ಮಾನ್ಯ ಸಭಾಪತಿಯವರೇ, ಇವತ್ತು ಎಷ್ಟೋ ದೇಶಗಳಲ್ಲಿ ಮಹಿಳೆ ಸಮರ್ಥವಾಗಿ ಆಡಳಿತವನ್ನು ನಿರ್ವಹಿಸುತ್ತಿದ್ದಾಳೆ.

**ಶ್ರೀ ಕೆ.ಗೋವಿಂದರಾಜುಃ–** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ವಿಮಲಾಗೌಡರಿಗೆ ಅನ್ಯಾಯವಾದ ಸಂದರ್ಭದಲ್ಲಿ ನಾನೇ ಅವರಿಗೆ ಬೆಂಬಲ ನೀಡಿದ್ದೇನೆ.

**ಶ್ರೀಮತಿ ವಿಮಲಾಗೌಡಃ–** ಸನ್ಮಾನ್ಯ ಸಭಾಪತಿಯವರೇ, ಒಮ್ಮೆ ನಮಗೆ ಅನ್ಯಾಯವಾಗುತ್ತದೆ, ಮತ್ತೊಮ್ಮೆ ನಮಗೆ ಅನ್ಯಾಯ ಮಾಡಿದವರಿಗೆ ಅನ್ಯಾಯವಾಗುತ್ತದೆ. ಇಂತಹ ಒಂದು ಪ್ರಕ್ರಿಯೆ ನಡೆಯುತ್ತಿರುತ್ತದೆ.

**ಸಭಾಪತಿಯವರುಃ–** ಶ್ರೀಮತಿ ವಿಮಲಾಗೌಡರೇ, ಇನ್ನು 2–3 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ ಸಮಯವಾಗುತ್ತಿದೆ.

**ಶ್ರೀಮತಿ ವಿಮಲಾಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀಮತಿ ಸಿ.ಶಿಖಾರವರಿಗೆ ಮರಿಗೌಡ ಎನ್ನುವ ವ್ಯಕ್ತಿಯಿಂದ ಅವಮಾನವಾಗಿದೆ. ಅದರ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಂಡಿದೆ? ಮರಿಗೌಡನನ್ನು ಇಲ್ಲಿಯವರೆಗೆ ಏಕೆ ಅರೆಸ್ಟ್ ಮಾಡಿಲ್ಲ, ಆತನನ್ನು ಅರೆಸ್ಟ್ ಮಾಡಬೇಕಾಗಿದೆ.

**ಸಭಾಪತಿಯವರುಃ–** ಶ್ರೀಮತಿ ವಿಮಲಾಗೌಡರೇ, ತಮ್ಮ ಮಾತುಗಳನ್ನು ಬೇಗನೇ ಮುಗಿಸಿ.

**ಶ್ರೀಮತಿ ವಿಮಲಾಗೌಡಃ–** ಸನ್ಮಾನ್ಯ ಸಭಾಪತಿಯವರೇ, ತಾವು ಬೇರೆ ಎಲ್ಲ ಸದಸ್ಯರಿಗೂ ಮಾತನಾಡಲು ಬಹಳಷ್ಟು ಕಾಲಾವಕಾಶವನ್ನು ಕೊಡುತ್ತೀರಿ. ನನಗೆ ಮಾತ್ರ ಬೇಗ ಮುಗಿಸಿ ಎಂದು ಹೇಳುತ್ತೀರಿ? ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡುತ್ತಿದ್ದೀರಿ?

**ಸಭಾಪತಿಯವರುಃ–** ತಾವು ಮಾತನಾಡಲು ಪ್ರಾರಂಭಿಸಿ ಸುಮಾರು 12 ನಿಮಿಷಗಳಾಗಿವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ಃ–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಆರೋಗ್ಯ ಸರಿಯಿಲ್ಲ. ಆದರೂ ಸಹ ಈ ವಿಚಾರದ ಬಗ್ಗೆ ಮಾತನಾಡಬೇಕೆಂದು ಬಂದಿದ್ದಾರೆ. ದಯವಿಟ್ಟು ಅವರಿಗೆ ಮಾತನಾಡಲು ಇನ್ನೂ 5 ನಿಮಿಷಗಳ ಕಾಲಾವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರುಃ–** ಬೆಳಿಗ್ಗೆ ಮಾತನಾಡುವವರ ಪಟ್ಟಿಯಲ್ಲಿ ಶ್ರೀಮತಿ ವಿಮಲಾಗೌಡರ ಹೆಸರೇ ಮೊದಲನೆಯದಾಗಿತ್ತು. ಅವರು ಬೆಳಿಗ್ಗೆ ಸದನದಲ್ಲಿ ಹಾಜರಾಗಿದ್ದರೆ, ಅವರು ಎಷ್ಟು ಸಮಯ ಕೇಳಿದ್ದರೂ ನಾನು ಕೊಡುತ್ತಿದ್ದೆ. ಅನಾರೋಗ್ಯದ ನಿಮಿತ್ತ ಅವರು ಬೆಳಿಗ್ಗೆ ಸದನಕ್ಕೆ ಬರಲು ಸಾಧ್ಯವಾಗಲಿಲ್ಲ. ಸದನಕ್ಕೆ ಬಂದಾಗ ಅವರು ಕೇಳುವಷ್ಟು ಸಮಯವನ್ನು ಕೊಡುವುದಕ್ಕೆ ನನ್ನ ಬಳಿ ಸಮಯವಿಲ್ಲ. ಬೆಳಿಗ್ಗೆ ಅವರು ಬಂದಿದ್ದರೆ ಖಂಡಿತವಾಗಿಯೂ ಅವರಿಗೆ ಒಂದು ಗಂಟೆಗಳ ಕಾಲಾವಕಾಶವನ್ನು ಕೊಡುತ್ತಿದ್ದೆ. ಮಾನ್ಯ ಡಿ.ಎಸ್.ವೀರಯ್ಯನವರಿಗೆ ಮಾತನಾಡಲು ಒಂದು ಗಂಟೆಗಳ ಕಾಲಾವಕಾಶವನ್ನು ನೀಡಿದ್ದೆ. ಅದೇ ರೀತಿಯಲ್ಲಿ ಅವರಿಗೂ ಒಂದು ಗಂಟೆ ಕಾಲಾವಕಾಶವನ್ನು ನೀಡುತ್ತಿದ್ದೆ.

**ಶ್ರೀಮತಿ ವಿಮಲಾಗೌಡಃ–** ಸನ್ಮಾನ್ಯ ಸಭಾಪತಿಯವರೇ, ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಬೆಳಿಗ್ಗೆ ಸದನಕ್ಕೆ ಬರಲು ಸಾಧ್ಯವಾಗಲಿಲ್ಲ ತಡವಾಗಿ ಬಂದಿದ್ದೇನೆ, ದಯವಿಟ್ಟು ಕ್ಷಮಿಸಿ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)ಃ–** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ವಿಮಲಾಗೌಡರು ಆರೋಗ್ಯ ಸರಿಯಿಲ್ಲದಿದ್ದರೂ ಬಂದು ಮಾತನಾಡುತ್ತಿದ್ದಾರೆ. ಮಾನ್ಯ ಡಿ.ಎಸ್.ವೀರಯ್ಯನವರು ಮಾತನಾಡಲು ಒಂದು ಗಂಟೆಗಳ ಕಾಲಾವಕಾಶವನ್ನು ನೀಡಿ, ಈಗ ಇವರಿಗೆ 5 ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಿ ಎಂದು ಹೇಳುತ್ತಿದ್ದೀರಿ, ಹೆಣ್ಣುಮಕ್ಕಳಿಗೆ ಅನ್ಯಾಯ ಮಾಡುತ್ತಿದ್ದೀರಿ.

**ಸಭಾಪತಿಯವರು:–** ಇವತ್ತು ಯಾರು ಮೊದಲು ಮಾತುಗಳನ್ನು ಪ್ರಾರಂಭ ಮಾಡಬೇಕು ಎನ್ನುವವರ ಪಟ್ಟಿಯಲ್ಲಿ ಶ್ರೀಮತಿ ವಿಮಲಾಗೌಡರ ಹೆಸರು ಮೊದಲಿತ್ತು. ಬೆಳಿಗ್ಗೆ ಮಾತನಾಡಿದ ಎಲ್ಲ ಸದಸ್ಯರಿಗೂ ನಾನು ಸಮಯದ ಮಿತಿಯನ್ನು ಹೇರಲಿಲ್ಲ. ಶ್ರೀಮತಿ ವಿಮಲಾಗೌಡರು ಆರೋಗ್ಯ ಸರಿ ಇಲ್ಲವೆನ್ನುವ ಕಾರಣದ ಹಿನ್ನೆಲೆಯಲ್ಲಿ ಅವರು ಸದನಕ್ಕೆ ತಡವಾಗಿ ಬಂದಿದ್ದಾರೆ. ತಡವಾಗಿ ಬಂದ ಮೇಲೂ 'ಮಾತನಾಡಲು ನನಗೆ ಪೂರ್ಣ ಸಮಯ ಕೊಡಿ' ಎಂದು ಕೇಳುವುದು ನ್ಯಾಯವಲ್ಲ. ನನ್ನ ಬಳಿ ಸಮಯವಿಲ್ಲ.

**ಶ್ರೀಮತಿ ವಿಮಲಾಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾನು 'ಪೂರ್ಣ ಸಮಯ ಕೊಡಿ' ಎಂದು ಕೇಳುತ್ತಿಲ್ಲ. ದಯವಿಟ್ಟು ಕ್ಷಮಿಸಿ. ಇನ್ನು 5 ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಡಿವೈ.ಎಸ್.ಪಿ. ಗಣಪತಿಯವರಿಗೆ ಅನ್ಯಾಯವಾಗಿದೆ. ಅವರು ದುರ್ಬಲ ವ್ಯಕ್ತಿಯಲ್ಲ. ಅದಕ್ಕೆ ಒಂದು ಉದಾಹರಣೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ಗಣಪತಿಯವರು ಮಡಿವಾಳ ಪೊಲೀಸ್‌ಠಾಣೆಯಲ್ಲಿ ಎ.ಸಿ.ಪಿ.ಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಆಗ ನಮ್ಮ ಏರಿಯಾದಲ್ಲಿ ಒಬ್ಬ ದಂಪತಿಗಳ ನಡುವೆ ವಿಸರವುಂಟಾಗಿ, ಅದು ಪೊಲೀಸ್‌ಠಾಣೆಯ ಮೆಟ್ಟಿಲೇರಿತು. ಆಗ ನಾನು ಅಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ಅವರಿಗೆ ದೂರನ್ನು ನೀಡಿದ್ದೆ. ಆಗ ಎ.ಸಿ.ಪಿ.ಯಾಗಿದ್ದ ಗಣಪತಿಯವರಿಗೆ ಮೇಲಾಧಿಕಾರಿಗಳು ಈ ಪ್ರಕರಣವನ್ನು ವಹಿಸಿಕೊಟ್ಟಿದ್ದರು. ಅವರು ನಮ್ಮ ಮನೆಗೆ ಬಂದಿದ್ದರು. ಅವರು ಅತ್ಯಂತ ನಿಷ್ಪಕ್ಷಪಾತವಾಗಿ ಆ ಸಮಸ್ಯೆಯನ್ನು ಪರಿಹರಿಸಿ ಕೊಟ್ಟಿದ್ದರು. ಅವರು ಅತ್ಯಂತ ಪ್ರಾಮಾಣಿಕ ಮತ್ತು ಖಡಕ್ ಅಧಿಕಾರಿಯಾಗಿದ್ದರು. ಅಂತಹ ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವ ಘಟ್ಟಕ್ಕೆ ಹೋಗುತ್ತಾರೆಂದರೆ, ಅವರು ಎಂತಹ ಪರಿಸ್ಥಿತಿಯಲ್ಲಿದ್ದರು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಗಣಪತಿಯವರ ಪತ್ನಿ ಪಾವನ ಅವರಿಗೆ ಪತಿಯ ಆತ್ಮಹತ್ಯೆಯ ಬಗ್ಗೆ ಮೊದಲು ಮಾಹಿತಿ ನೀಡದೇ ತೊಂದರೆ ಕೊಟ್ಟಿದ್ದಾರೆ. 'ಕೌಟುಂಬಿಕ ಕಲಹವಿತ್ತು, ಪತಿಪತ್ನಿಯರ ನಡುವೆ ಅನ್ಯೋನ್ಯತೆ ಇರಲಿಲ್ಲ, ಆತ್ಮಹತ್ಯೆಗೆ ಅದೂ ಒಂದು ಕಾರಣ' ಎಂದು ಮಾತನಾಡುವುದಕ್ಕೆ ಇವರಿಗೆ ಯಾರು ಅಧಿಕಾರ ಕೊಟ್ಟಿದ್ದಾರೆ. ಪೊಲೀಸ್ ಅಧಿಕಾರಿಗಳು ಮತ್ತು ಸರ್ಕಾರದ ಪ್ರಮುಖರು ಸಹ ಅದೇ ರೀತಿ ಹೇಳುತ್ತಿದ್ದಾರೆ. ಇವರುಗಳು ಹೋಗಿ ಅವರ ಸಂಸಾರವನ್ನು ನೋಡಿದ್ದಾರೆಯೇ? ಪ್ರಪಂಚದಲ್ಲಿ ಯಾವ ಗಂಡಹೆಂಡತಿಯವರು ಜಗಳವಾಡುವುದಿಲ್ಲವೇ? ಜಗಳವಾಡುತ್ತಾರೆ ಒಂದಾಗುತ್ತಾರೆ. ಅವರ ಕುಟುಂಬವನ್ನು ಬೀದಿಗೆಳೆಯಬಹುದೇ? ಅವರ ಕುಟುಂಬದ ಬಗ್ಗೆ ಮತ್ತು ಅವರ ದಾಂಪತ್ಯದ ಬಗ್ಗೆ ಮಾತನಾಡುವುದಕ್ಕೆ ಯಾರು ಇವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ? ಗಣಪತಿಯವರ ಪತ್ನಿ ಪಾವನ ಮತ್ತು ಮಕ್ಕಳು ದೂರು ಕೊಡಲು ಹೋದರೆ, ಪೊಲೀಸರು ಆ ದೂರನ್ನು ಸ್ವೀಕಾರ ಮಾಡದೇ ಇರುವ ಕಾರಣ ಅವರುಗಳು ಪೊಲೀಸ್‌ಠಾಣೆಯ ಮುಂದೆ ಧರಣಿ ಕುಳಿತುಕೊಂಡರು. ಶ್ರೀಮತಿ ಮೋಟಮ್ಮನವರು ಮಾತನಾಡುತ್ತಾ, 'ಸಿಐಡಿ ಅವರಿಗೆ ತನಿಖೆಗೆ ವಹಿಸಿಕೊಟ್ಟಿರುವುದರಿಂದ ಅಲ್ಲಿನ ಪೊಲೀಸಿನವರು ದೂರನ್ನು ಸ್ವೀಕಾರ ಮಾಡುವುದಕ್ಕೆ ಸಾಧ್ಯವಿಲ್ಲ' ಎನ್ನುವ ಮಾತುಗಳನ್ನು ಹೇಳಿದ್ದರು. ಯಾರಾದರು ಹೋಗಿ ದೂರು ಕೊಟ್ಟರೆ ಪೊಲೀಸಿನವರು ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದರಲ್ಲೂ ಅವರ ಧರ್ಮಪತ್ನಿಯವರು ಹೋಗಿ ದೂರು ಕೊಟ್ಟಾಗ, ಪೊಲೀಸಿನವರು ಆ ದೂರನ್ನು ಸ್ವೀಕಾರ ಮಾಡಿ ವಿಚಾರಣೆ ಮಾಡಬೇಕಾಗುತ್ತದೆ.

**ಶ್ರೀಮತಿ ಮೋಟಮ್ಮ:–** ಸನ್ಮಾನ್ಯ ಸಭಾಪತಿಯವರೇ, ಪೊಲೀಸಿನವರು ದೂರನ್ನು ಸ್ವೀಕಾರ ಮಾಡಿದ್ದಾರೆ. ಎಫ್.ಐ.ಆರ್. ಫೈಲ್ ಮಾಡುವುದಕ್ಕೆ ಬರುವುದಿಲ್ಲವೆಂದು endorsement ಕೊಟ್ಟಿದ್ದಾರೆ. ನಿನ್ನೆ ನಾನು ಆ endorsement ನ್ನು ಓದಿದ್ದೇನೆ.

**ಶ್ರೀಮತಿ ವಿಮಲಾಗೌಡ:–** ಸನ್ಮಾನ್ಯ ಸಭಾಪತಿಯವರೇ, ಎಫ್.ಐ.ಆರ್. ಫೈಲ್ ಮಾಡಬೇಕಾಗುತ್ತದೆ ಮತ್ತು ಆ ಕುಟುಂಬಕ್ಕೆ ಮಾನಸಿಕ ಮತ್ತು ನೈತಿಕ ಧೈರ್ಯವನ್ನು ತುಂಬುವುದರ ಮೂಲಕ ಆ ಸಂಸಾರವನ್ನು ಉಳಿಸಬೇಕಾಗುತ್ತದೆ. ದೂರದರ್ಶನದಲ್ಲಿ ಶ್ರೀಮತಿ ಪಾವನರವರು ಮಾತನಾಡುತ್ತಾ, 'ನಾನು ಮತ್ತು ಪತಿ ಹೊಂದಾಣಿಕೆಯಿಂದ ಇದ್ದೆವು, ನಮ್ಮಿಬ್ಬರ ನಡುವೆ ಯಾವುದೇ ತೊಂದರೆ ಇರಲಿಲ್ಲ. ಅವರು ಆತ್ಮಹತ್ಯೆ ಮಾಡಿಕೊಳ್ಳುವ ದಿನ ಬೆಳಿಗ್ಗೆ ಸಹ ನನ್ನ ಜೊತೆಗೆ ಮಾತನಾಡಿಕೊಂಡು ಹೋಗಿದ್ದಾರೆ. ನನ್ನ ಬಗ್ಗೆ ಈ ರೀತಿ

ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ನಾನು ಸಹ ಆತ್ಮಹತ್ಯೆ ಮಾಡಿಕೊಳ್ಳಬೇಕೇ?' ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಾಗಿರುವ ಡಾ॥ಜಿ ಪರಮೇಶ್ವರ್‌ರವರನ್ನು ನಾನು ಬಹಳ ವರ್ಷಗಳಿಂದ ನೋಡಿದ್ದೇನೆ. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಬಹಳ ಪ್ರಾಮಾಣಿಕತೆಯಿಂದ ಯಾರಿಗೂ ಯೀಲ್ಡ್ ಆಗದೇ ಕೆಲಸ ಮಾಡಿಕೊಂಡು ಬಂದಿದ್ದಾರೆ. ಆದರೆ, ಇವತ್ತು ಮಾನ್ಯ ಪರಮೇಶ್ವರ್‌ರವರು ತಮ್ಮ ಅಸಹಾಯಕತೆಯನ್ನು ತೋರಿಸಿಕೊಳ್ಳುತ್ತಿದ್ದಾರೆ. ಅವರು ಹೈಕಮಾಂಡ್‌ಗೆ 'ನನ್ನ ಇಲಾಖೆಯಲ್ಲಿ ಹಸ್ತಕ್ಷೇಪ ನಡೆಯುತ್ತಿದೆ. ಅದನ್ನು ತಡೆಯಬೇಕು' ಎಂದು ದೂರನ್ನು ಕೊಡುತ್ತಾರೆ. ನಿವೃತ್ತ ಐ.ಪಿ.ಎಸ್., ಐ.ಎಫ್.ಎಸ್.. .. . .

**ಡಾ॥ಜಿ.ಪರಮೇಶ್ವರ್(ಗೃಹ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ವಿಮಲಾಗೌಡರಿಗೆ ನಾನು ಹೈಕಮಾಂಡ್‌ಗೆ ದೂರು ಕೊಟ್ಟಿದ್ದೇನೆಂದು ಯಾರು ಹೇಳಿದರು ಎನ್ನುವುದು ಗೊತ್ತಾಗುತ್ತಿಲ್ಲ.

**ಶ್ರೀಮತಿ ವಿಮಲಾಗೌಡಃ–** ಸನ್ಮಾನ್ಯ ಸಭಾಪತಿಯವರೇ, ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ದೂರದರ್ಶನದಲ್ಲಿ ಸುದ್ದಿ ಪ್ರಸಾರವಾಗಿದೆ.

**ಡಾ॥ಜಿ.ಪರಮೇಶ್ವರ್ಃ–** ಸನ್ಮಾನ್ಯ ಸಭಾಪತಿಯವರೇ, ಪತ್ರಿಕೆಗಳಲ್ಲಿ ಬಂದಿರಬಹುದು. ಅಂತಹ ಯಾವುದೇ ಬೆಳವಣಿಗೆಗಳು ನಡೆದಿಲ್ಲ.

**ಸಭಾಪತಿಯವರುಃ–** ಶ್ರೀಮತಿ ವಿಮಲಾಗೌಡರೇ, ತಾವು ಇನ್ನೂ ಮಾತನಾಡುವುದಿದ್ದರೆ, ಹೆಚ್ಚು ಸಮಯಾವಕಾಶವಿಲ್ಲ. ಬೆಳಿಗ್ಗೆ ಮಾತನಾಡಿದ್ದರೆ ತಾವು ಕೇಳಿದಷ್ಟು ಸಮಯ ಕೊಡುತ್ತಿದ್ದೆ. 'ಬೇರೆಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಾ, ನನಗೆ ಕೊಡುವುದಿಲ್ಲ' ಎಂದು ನನ್ನ ಮೇಲೆ ಕೋಪ ಮಾಡಿಕೊಂಡಿದ್ದೀರಿ. ತಮಗೆ 5 ನಿಮಿಷಗಳ ಕಾಲಾವಕಾಶವನ್ನು ನೀಡಿದ್ದೆ. ಈಗ 20 ನಿಮಿಷಗಳಾಗಿವೆ. ಬೇಗ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಿ.

**ಶ್ರೀಮತಿ ವಿಮಲಾಗೌಡಃ–** ಸನ್ಮಾನ್ಯ ಸಭಾಪತಿಯವರೇ, ಇನ್ನೊಂದು ನಿಮಿಷದಲ್ಲಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಡಾ॥ಜಿ.ಪರಮೇಶ್ವರ್‌ರವರು ಅತ್ಯುತ್ತಮವಾಗಿರುವ ಗೃಹ ಸಚಿವರು, ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ ಮತ್ತು ಎಲ್ಲರಿಗೂ ನ್ಯಾಯ ಒದಗಿಸಿಕೊಡುತ್ತಾರೆಂದು ನಾನು ಭಾವಿಸಿದ್ದೇನೆ. ಗಣಪತಿ ಈಶ್ವರನ ಮಗ, ಪರಮೇಶ್ವರ ಇದ್ದು ಗಣಪತಿಗೆ ಅನ್ಯಾಯವಾಗುವುದಕ್ಕೆ ಸಾಧ್ಯವೆ?

**ಶ್ರೀ ಬಿ.ಜೆ.ಪುಟ್ಟಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಪರಮೇಶ್ವರ್‌ಗೆ ಯಾರೋ ಒಬ್ಬರು ಬೆನ್ನೇರಿದ್ದಾರೆ. ಅದೇ ಈಗ ಸಮಸ್ಯೆಯಾಗಿದೆ.

**ಶ್ರೀಮತಿ ವಿಮಲಾಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಯಾವುದೇ ರೀತಿಯಲ್ಲಿಯೂ ಅನ್ಯಾಯ ಮಾಡದಂತೆ ಗಣಪತಿಯವರ ಸಾವಿನ ಹಿನ್ನೆಲೆಯನ್ನು ಕಂಡುಹಿಡಿದು ತಪ್ಪಿತಸ್ಥರು ಎಂದು ನಾನು ಹೇಳುವುದಿಲ್ಲ. ತಪ್ಪಿತಸ್ಥರು ಆಗಿದ್ದರೆ ಅವರಿಗೆ ಸರಿಯಾದ ರೀತಿಯಲ್ಲಿ ಶಿಕ್ಷೆ ಕೊಡುವುದಕ್ಕೆ ಸಂಬಂಧಪಟ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರುಃ–** ಬಹಳಷ್ಟು ಹೊಸ ಸದಸ್ಯರು ನಮ್ಮ ಸದನಕ್ಕೆ ಆಯ್ಕೆಯಾಗಿ ಬಂದಿದ್ದಾರೆ. ಅವರುಗಳು ಸಹ ಮಾತನಾಡಬೇಕೆಂದು ಅಪೇಕ್ಷೆಪಟ್ಟಿದ್ದಾರೆ. ಸದನ ಪ್ರಾರಂಭವಾದಾಗಿನಿಂದ ಅವರು ಬಂದು ಕುಳಿತು ಬೇರೆಯವರು ಮಾತನಾಡುವುದನ್ನು ಕೇಳಿಕೊಂಡು ಹೋಗುತ್ತಿದ್ದಾರೆ. ಶ್ರೀಮತಿ ವೀಣಾ ಅಚ್ಚಯ್ಯರವರು 'ನಾನು ಒಂದೆರಡು ನಿಮಿಷಗಳ ಕಾಲ ಮಾತನಾಡುತ್ತೇನೆ' ಎನ್ನುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಅವರಿಗೆ ಮಾತನಾಡಲು ಈಗ ಅವಕಾಶವನ್ನು ನೀಡುತ್ತಿದ್ದೇನೆ. ಶ್ರೀಮತಿ ವೀಣಾ ಅಚ್ಚಯ್ಯನವರೇ, ತಾವು ತಮ್ಮ ಮಾತುಗಳನ್ನು 5 ನಿಮಿಷಗಳಲ್ಲಿ ಮುಗಿಸಬೇಕಾಗಿದೆ. ನನಗೆ ಈ ರೀತಿ ಹೇಳುವುದಕ್ಕೆ ಬೇಸರವಾಗುತ್ತಿದೆ.

ಮೊದಲನೆಯ ಬಾರಿ ಮಾತನಾಡುತ್ತಿದ್ದೀರಿ, ಸಮಯದ ನಿರ್ಬಂಧವನ್ನು ವಿಧಿಸುವುದು ಸರಿಯಲ್ಲ. ತಾವು ಬೆಳಿಗ್ಗೆ ಮಾತನಾಡಲು ಅವಕಾಶವನ್ನು ಕೇಳಿದ್ದರೆ ಅರ್ಧ ಗಂಟೆಗಳ ಕಾಲಾವಕಾಶವನ್ನು ನೀಡುತ್ತಿದ್ದೆ. ಈಗ ಸಮಯ ಕಡಿಮೆ ಇರುವುದರಿಂದ ತಾವು ಮಾತನಾಡಲು ಕೇಳಬಾರದಾಗಿತ್ತು ಎನ್ನುವುದು ನನ್ನ ಭಾವನೆಯಾಗಿದೆ. 'ಸಂಜೆ 6 ಗಂಟೆಗೆ ಸಚಿವ ಸಂಪುಟ ಸಭೆ ಇದೆ. ನಾವೆಲ್ಲರೂ ಸಚಿವ ಸಂಪುಟ ಸಭೆಗೆ ಹಾಜರಾಗಬೇಕಾಗಿದೆ. ಆ ಕಾರಣದ ಹಿನ್ನೆಲೆಯಲ್ಲಿ ಸದರಿ ವಿಚಾರಕ್ಕೆ ಸರ್ಕಾರದಿಂದ ಉತ್ತರ ಕೊಟ್ಟು ಹೋಗುವುದಕ್ಕೆ ಅವಕಾಶವನ್ನು ನೀಡಿ' ಎಂದು ಸಭಾ ನಾಯಕರೂ ಆಗಿರುವ ಮಾನ್ಯ ಗೃಹ ಸಚಿವರು ಮನವಿ ಮಾಡಿಕೊಂಡಿದ್ದಾರೆ. ಸರ್ಕಾರ ಉತ್ತರ ನೀಡುವುದು ಬೇಡ ನಾವುಗಳು ಮಾತನಾಡುತ್ತೇವೆಂದು ಆಡಳಿತ ಪಕ್ಷದವರು ಬಯಸಿದರೆ, ಮಾನ್ಯ ಸಭಾ ನಾಯಕರ ಮತ್ತು ಸರ್ಕಾರದ ಮುಖ್ಯ ಸಚೇತಕರ ಒಪ್ಪಿಗೆಯನ್ನು ತೆಗೆದುಕೊಳ್ಳಿ, ಅವರು ಹೇಳಿದಂತೆ ನಾನು ಮಾಡುತ್ತೇನೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಸನ್ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಮಾನ್ಯ ಉಗ್ರಪ್ಪನವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಆಡಳಿತ ಪಕ್ಷದ ಪ್ರತಿಯೊಬ್ಬ ಸದಸ್ಯರು, 'ನಮ್ಮ ಸಮಯವನ್ನು ಅವರಿಗೆ ಕೊಡಿ, ನಾವುಗಳು ಮಾತನಾಡುವುದಿಲ್ಲ' ಎಂದು ಹೇಳಿದ ಹಿನ್ನೆಲೆಯಲ್ಲಿ ಅವರು ಸುಮಾರು ಒಂದು ಗಂಟೆಗಳ ಕಾಲ ಮಾತನಾಡಿದ್ದಾರೆ. ಈಗ ಪುನಃ ಆಡಳಿತ ಪಕ್ಷದವರು ಮಾತನಾಡಲು ನಮಗೆ ಅವಕಾಶ ಕೊಡಬೇಕೆಂದು ಕೇಳುವುದು ಸರಿಯೇ?

**(ಗೊಂದಲ)**

**ಸಭಾಪತಿಗಳು:–** ಎಲ್ಲರಿಗೂ ಅವಕಾಶ ಕೊಡುತ್ತೇನೆ, ಆದರೆ ಇವತ್ತು ಉತ್ತರ ಸಿಗುವುದಿಲ್ಲ. ನಿಮಗೆ ಉತ್ತರ ಬೇಡವೇ? ಸರ್ಕಾರ ಉತ್ತರ ಕೊಡುವುದಕ್ಕೆ ಯಾವಾಗ ತಯಾರಾಗುತ್ತದೆಯೋ ಅಂತಹ ಸಂದರ್ಭದಲ್ಲಿ ಮಾತನಾಡುತ್ತಿರಬಹುದಾದ ಸದಸ್ಯರು ತಮ್ಮ ಮಾತುಗಳನ್ನು ಮುಗಿಸಿದ ತಕ್ಷಣ ಸರ್ಕಾರದ ಉತ್ತರ ಇರುತ್ತದೆ ಎಂದು ನನ್ನ ಕೊಠಡಿಯಲ್ಲಿ ತೀರ್ಮಾನವಾಗಿತ್ತು. ಅದನ್ನು ಮೀರಿ, ಮಹಿಳೆಯರೊಬ್ಬರು ಮಾತನಾಡಲು ಅಪೇಕ್ಷೆ ಪಟ್ಟಿದ್ದಾರೆ ಎಂದು ಅವರಿಗೆ ಸಮಯ ಕೊಟ್ಟೆ. ಆದರೆ ಅವರು, ನನಗೆ ಹೆಚ್ಚು ಸಮಯ ಬೇಕಾಗಿತ್ತು, ಸಾಕಷ್ಟು ಸಮಯವನ್ನು ಕೊಡಲೇ ಇಲ್ಲ ಎಂದು ನನ್ನ ಮೇಲೆಯೇ ಮಾತನಾಡಿಬಿಟ್ಟರು. ಅವರು ಬೆಳಿಗ್ಗೆ ಕೇಳಿದ್ದರೆ ಹೆಚ್ಚು ಸಮಯ ಕೊಡುತ್ತಿದ್ದೆ. ಈಗ ಹೊಸ ಸದಸ್ಯರೊಬ್ಬರು ಕೇಳಿದ್ದಾರೆ ಎನ್ನುವ ಕಾರಣಕ್ಕೆ, 4–5 ನಿಮಿಷ ಮಾತನಾಡಿ ಎಂದು ಹೇಳಿದೆ. ಬೇರೆಯವರು ನಾವೂ ಮಾತನಾಡಬೇಕು ಎನ್ನುವುದಾದರೆ ಈ ಚರ್ಚೆಯನ್ನು ಆರು ಗಂಟೆಗೆ ಮುಗಿಸಿ ಸದನವನ್ನು ಮುಂದೂಡುತ್ತೇನೆ. ಉತ್ತರ ಬೇಡ ಎನ್ನುವುದಾದರೆ ನನ್ನದೇನೂ ಅಭ್ಯಂತರ ಇಲ್ಲ.

**ಶ್ರೀ ಎಂ.ಭಾನುಪ್ರಕಾಶ್:–** ನಮ್ಮ ಮುಖ್ಯ ಸಚೇತಕರು, ನಿಮ್ಮ ಹೆಸರು ಇದೆ ಎಂದು ನನಗೆ ಹೇಳಿದರು. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಮಾತನಾಡುತ್ತೇನೆ, ಇಲ್ಲದಿದ್ದರೆ ಇಲ್ಲ.

**ಸಭಾಪತಿಗಳು:–** ಏನೇನು ನಡೆಯಿತು ಎಂಬುದನ್ನು ನಾನು ಸದನದ ಮುಂದೆ ಇಟ್ಟಿದ್ದೇನೆ. ಶ್ರೀಮತಿ ವೀಣಾ ಅಚ್ಚಯ್ಯನವರು ಮೊದಲನೆ ಬಾರಿಗೆ ಮಾತನಾಡಲು ಅವಕಾಶ ಕೇಳುತ್ತಿದ್ದಾರೆ ಎಂದು ಅವರಿಗೆ ಮಾತನಾಡಿ ಎಂದು ಹೇಳಿದೆ.

**ಶ್ರೀ ಎಂ.ಭಾನುಪ್ರಕಾಶ್:–** ಸುಮ್ಮನಿರಿ ಎಂದು ತಾವು ಹೇಳಿದ ಮೇಲೂ ಕೆಲವರು ಮಾತನಾಡುತ್ತಾರೆ, ಅಂತಹ ಧೈರ್ಯ ನಮಗೆ ಇಲ್ಲ. . .

**ಸಭಾಪತಿಗಳು:–** ಹಾಗಾದರೆ ಎಲ್ಲರೂ ಮಾತನಾಡಿ, ಉತ್ತರ ಇವತ್ತು ಸಿಗುವುದಿಲ್ಲ. 6 ಗಂಟೆಗೆ ಕ್ಯಾಬಿನೆಟ್ ಇರುವುದರಿಂದ ಮಾನ್ಯ ಗೃಹ ಸಚಿವರು ಹೋಗಬೇಕು . . .

**ಶ್ರೀ ಕೆ.ಎಸ್.ಈಶ್ವರಪ್ಪ:–** ಆರು ಗಂಟೆಗೆ ಏಕೆ ಹೋಗಬೇಕು? ಕ್ಯಾಬಿನೆಟ್ ಮೀಟಿಂಗನ್ನು ಒಂದು ಗಂಟೆ ಮುಂದೆ ಹಾಕಲಿ. ಸದನಕ್ಕಿಂತ ಕ್ಯಾಬಿನೆಟ್ ದೊಡ್ಡದೇ?

**(ಗೊಂದಲ)**

**ಶ್ರೀ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಗಳೆ, ಯಾರ್‍ಯಾರು ಮಾತನಾಡಬೇಕೋ ಅವರಿಗೆ ಅವಕಾಶ ಕೊಡಿ. ನಾನು ನಾಳೆ ಉತ್ತರ ಕೊಡುತ್ತೇನೆ. ನಾಳೆ 11 ಗಂಟೆಗೆ ಬಂದ ತಕ್ಷಣ ಉತ್ತರ ಕೊಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾಳೆ ಉತ್ತರ ಕೊಡುವ ಪ್ರಶ್ನೆ ಇಲ್ಲ, ಇವತ್ತೇ ಕೊಡಬೇಕು . . .(ಗೊಂದಲ)

**ಸಭಾಪತಿಗಳು:–** ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾದ ತಕ್ಷಣ ಅದಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ನಾವು ಚರ್ಚೆ ಮಾಡಿ ಒಪ್ಪಿದ್ದೆವು. ಶ್ರೀಮತಿ ವಿಮಲಾಗೌಡರೊಬ್ಬರು ಮಾತನಾಡಲಿ ಎಂದು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟೆ. ಶ್ರೀಮತಿ ವೀಣಾ ಅಚ್ಚಯ್ಯ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದು ಬೇರೆ ಸದಸ್ಯರಿಗೆ ಕೋಪ ಬರುವುದಾದರೆ ಬೇಡ.

**ಶ್ರೀ ಕೆ.ಎಸ್.ಈಶ್ವರಪ್ಪ:–** ತಾವು ಬೇಜಾರಾಗುವುದು ಬೇಡ. ಒಳಗಡೆ ಕುಳಿತಾಗ ನಾವೇನು ಮಾತನಾಡಿದೆವೋ ಆ ತಮ್ಮ ಮಾತಿಗೆ ನಾವು ಬದ್ಧ. ಹೊಸದಾಗಿ ಬಂದಿರುವ ನಮ್ಮ ಸಹೋದರಿಗೆ ಮಾತನಾಡಲು ಅವಕಾಶ ಕೊಡುವಂಥದ್ದು ಸರಿಯಿದೆ. ಅದೇರೀತಿ ಇನ್ನೊಂದಿಬ್ಬರಿಗೆ ಅವಕಾಶ ಕೊಡುವುದಿದ್ದರೆ ಕೊಡಿ, ನಂತರ ಮಂತ್ರಿಗಳು ಉತ್ತರ ಕೊಡಲಿ. ಕ್ಯಾಬಿನೆಟ್ ಮುಖ್ಯ, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಕ್ಯಾಬಿನೆಟ್‌ಗಿಂತಲೂ ಸದನ ಮುಖ್ಯವಾದುದು. ಹೊಸದಾಗಿ ಬಂದಿರುವ ನಮ್ಮ ಸಹೋದರಿಗೆ ಮಾತನಾಡಲು ಅವಕಾಶ ಕೊಡಿ. ನಂತರ ಇನ್ನೊಂದಿಬ್ಬರಿಗೆ ಅವಕಾಶ ಕೊಟ್ಟರೆ ಕೊಡಿ, ಮುಂದಿನದು ನಿಮಗೆ ಬಿಟ್ಟದ್ದು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಮಾನ್ಯ ಗೃಹ ಸಚಿವರು 6 ಗಂಟೆಗೆ ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗಬೇಕು . . .

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಮಂತ್ರಿಗಳು ಉತ್ತರ ಕೊಟ್ಟು . . .

**ಶ್ರೀ ಜಿ.ಪರಮೇಶ್ವರ್:–** 6 ಗಂಟೆಯ ಒಳಗೆ ಉತ್ತರವನ್ನು ಕೊಟ್ಟು ಮುಗಿಸಬೇಕಾಗುತ್ತದೆ. ಇಲ್ಲದಿದ್ದರೆ ನಾಳೆ ಉತ್ತರ ಕೊಡುತ್ತೇನೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:–** 6 ಗಂಟೆಗೆ ಮುಗಿಸಬೇಕು ಎನ್ನುವುದು ಎಲ್ಲಿದೆ? . . .(ಗೊಂದಲ)

**ಶ್ರೀ ಜಿ.ಪರಮೇಶ್ವರ್:–** ನಾನು ಸಭಾಪತಿಗಳ ಹತ್ತಿರ ಮನವಿ ಮಾಡಿಕೊಳ್ಳುತ್ತಿದ್ದೇನೆ. 6 ಗಂಟೆಗೆ ಕ್ಯಾಬಿನೆಟ್ ಇದೆ. ಹಾಗಾಗಿ ನಾಳೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಸಭಾಪತಿಗಳು ತೀರ್ಮಾನ ಮಾಡುತ್ತಾರೆ. ಚರ್ಚೆ ಮಾಡುವವರಿದ್ದರೆ ಮಾಡಲಿ, ನಾಳೆ 11 ಗಂಟೆಗೆ ಉತ್ತರ ಕೊಡುತ್ತೇನೆ, ನಮ್ಮದೇನೂ ತಕರಾರು ಇಲ್ಲ ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಮಗೆ ಇವತ್ತು ಉತ್ತರ ಬೇಕು. ಮಾನ್ಯ ಸಭಾಪತಿಗಳೆ, ನಮ್ಮ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡುವುದಾದರೆ ಕೊಡಿ, ಇಲ್ಲವೇ ಅದನ್ನು ತಮಗೆ ಬಿಡುತ್ತೇನೆ. ಉತ್ತರ ಇವತ್ತೇ ಬೇಕು.

**ಶ್ರೀ ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಆಯ್ಕೆಯಾದವರು)**:–ಮಾನ್ಯ ಸಭಾಪತಿಗಳೆ, ನಾನು ಕೊಡಗಿನ ಜಿಲ್ಲೆಯವಳಾಗಿ ಎರಡು ಮಾತುಗಳನ್ನಾಡಲು ಇಚ್ಛೆಪಡುತ್ತಿದ್ದೇನೆ. ಬಹುಶಃ ಗಣಪತಿಯವರ ಸಾವು ನಿಜಕ್ಕೂ ಕೊಡಗಿನ ಜನರಿಗೂ ಮತ್ತು ಇಡೀ ರಾಜ್ಯದ ಜನರಿಗೆ ಅತೀವ ದುಃಖ ತಂದಿದೆ. ಗಣಪತಿಯವರ ಸಾವಿನ ಸಂದರ್ಭದಲ್ಲಿ ಅವರ ಮಡದಿಯ ಜೊತೆ ನಾನೂ ಕೂಡ ಇದ್ದೆ. Post-mortem ಮುಗಿದು ಆ್ಯಂಬ್ಯುಲೆನ್ಸ್‌ನಲ್ಲಿ ಕರೆದುಕೊಂಡು ಹೋಗುವ ಸಂದರ್ಭದಲ್ಲಿ ಅವರ ಮಡದಿಯ ಜೊತೆ ನಾನು ಕುಳಿತುಕೊಂಡಿದ್ದೆ. ಇಂತಹ ದುರ್ಘಟನೆ ನಡೆಯಬಾರದಿತ್ತು. ಕೊಡಗಿನ ಜನರು ಶೂರರು, ವೀರರು ಎಂದು ಹೇಳುವಾಗ ಅವರು ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದಾಗಿತ್ತು. ಈ ವಿಚಾರವನ್ನು ನಾನು ಆವತ್ತೇ ಪತ್ರಿಕೆಗಳ ಮುಲಕ ತಿಳಿಸಿದ್ದೆ. ಆ ಸುಸಂಸ್ಕೃತ ಕುಟುಂಬಕ್ಕೆ ಸಂಬಂಧಪಟ್ಟ ಮಾತು ಇವತ್ತು ಇಡೀ ರಾಜ್ಯದ ಜನರ

ಬಾಯಲ್ಲಿ ಬರುತ್ತದೆ ಎಂಬುದನ್ನು ನಾನು ಖಂಡಿತವಾಗಿ ನಂಬಿರಲಿಲ್ಲ. ಕೊಡಗಿಗೆ ತನ್ನದೇ ಆದ ಇತಿಹಾಸ ಇದೆ. ನಾವು ರಾಜಕಾರಣ ಮಾಡುವುದಾದರೂ ಅದನ್ನು ಕೊಡಗಿನವರು ರಾಜಕಾರಣ ಎಂದು ತೆಗೆದುಕೊಳ್ಳುವುದಿಲ್ಲ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಆಡಳಿತ ಪಕ್ಷ–ವಿರೋಧ ಪಕ್ಷ ಎಂದಿರುತ್ತದೆ. ಆದರೆ ಕೊಡಗಿನ ಜನರು ಆ ರೀತಿ ಇಲ್ಲ. ರಾಜಕಾರಣಿಗಳನ್ನು ಎಷ್ಟು ಗೌರವಿಸಬೇಕೋ ಅಷ್ಟೂ ಗೌರವಿಸುತ್ತಾರೆ. ಕೊಡಗಿನ ಜನತೆಯ ಜೊತೆ ನಮ್ಮ ಸ್ನೇಹ ಅಲ್ಲಿ ತುಂಬಾ ಚೆನ್ನಾಗಿರುತ್ತದೆ. ಕೊಡಗಿನಲ್ಲಿ ಖಂಡಿತವಾಗಿ ರಾಜಕಾರಣ ಮಾಡುವುದಿಲ್ಲ. ಆದರೆ ಗಣಪತಿಯವರ ಸಾವಿನಿಂದ ಕೊಡಗಿನಲ್ಲಿ ಇವತ್ತು ಹತ್ತಿ ಉರಿಯುವಂತಹ ಪರಿಸ್ಥಿತಿ ಬಂದಿದೆ. ಇದು ವಿಷಾದನೀಯ. ಈ ರೀತಿ ಆಗಬಾರದಿತ್ತು. ಸುಮಾರು 3–4 ದಿನಗಳಿಂದ ಈ ಕುರಿತ ಚರ್ಚೆ ನಡೆಯುತ್ತಿದೆ. ಆದರೆ ನಾವೇನು ಸಾಧನೆ ಮಾಡಿದ್ದೇವೆ ಎಂದು ಖಂಡಿತಾ ನನಗೆ ಗೊತ್ತಾಗುತ್ತಿಲ್ಲ. ಇವತ್ತು ನಾವು ಅವರ ಕುಟುಂಬಕ್ಕೆ ಸಾಂತ್ವನ ಹೇಳಬೇಕು, ಅವರಿಗೆ ಆದ ಅನ್ಯಾಯವನ್ನು ಸರಿಪಡಿಸಬೇಕು. ಆ ನಿಟ್ಟಿನಲ್ಲಿ ಸರ್ಕಾರ ಒಂದು ಉತ್ತಮ ಹೆಜ್ಜೆ ಇಡುತ್ತದೆ ಎನ್ನುವ ನಂಬಿಕೆ ನನಗೂ ಇದೆ. ಒಬ್ಬ ಮಡದಿ ತನ್ನ ಗಂಡನನ್ನು ಕಳೆದುಕೊಂಡಿದ್ದಾರೆ, ವಯಸ್ಸಾದ ತಂದೆ–ತಾಯಿ ಮಗನನ್ನು ಕಳೆದುಕೊಂಡಿದ್ದಾರೆ, ಇಬ್ಬರು ಗಂಡು ಮಕ್ಕಳು ತಂದೆಯನ್ನು ಕಳೆದುಕೊಂಡಿದ್ದಾರೆ. ಅವರ ಬಗ್ಗೆ ನಾವು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಅದನ್ನು ಬಿಟ್ಟು ಬಹುಶಃ ಕಾಲಹರಣ ಮಾಡುತ್ತಿದ್ದೇವೇನೋ ಎನ್ನುವ ಆಲೋಚನೆ ನನಗೆ ಬರುತ್ತಿದೆ. ನಾನು ಹೇಳುವುದಿಷ್ಟೆ. ಕೊಡಗಿನ ಜನರ ವಿಶ್ವಾಸವನ್ನು ಗಳಿಸಬೇಕಾಗಿದೆ. ಅವರ ಸಂಸಾರಕ್ಕೆ ಉತ್ತಮ ಭವಿಷ್ಯಯವನ್ನು ರೂಪಿಸಿ ಕೊಡಬೇಕಾಗಿದೆ. ಆ ನಿಟ್ಟಿನ್ನಲಿ ನಮ್ಮ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳು, ಎಲ್ಲಾ ಸಹೋದ್ಯೋಗಿಗಳು ಸೇರಿ, ಆಡಳಿತ ಪಕ್ಷ–ವಿರೋಧ ಪಕ್ಷ ಎಂದು ಭೇದ–ಭಾವ ಮಾಡದೇ ಆ ಸಂಸಾರಕ್ಕೆ ಮುಂದಿನ ದಿನಗಳಲ್ಲಿ ಸಹಕಾರ ಕೊಡಬೇಕೆಂದು ಕೊಡಗಿನ ಜನರ ಪರವಾಗಿ ಹಾಗೂ ಆ ಸಂಸಾರದ ಪರವಾಗಿ ಕೇಳಿಕೊಳ್ಳುತ್ತೇನೆ. ಎಲ್ಲಾ ಶಾಂತ ರೀತಿಯಲ್ಲಿ, ಸೌಹಾರ್ದ ರೀತಿಯಲ್ಲಿ ನಡೆದುಕೊಂಡು ಹೋಗಬೇಕು, ಅವರಿಗೆ ಉತ್ತಮವಾದ ಪರಿಹಾರ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮೀಡಿಯಾಗಳಲ್ಲಿ, ಪತ್ರಿಕೆಗಳಲ್ಲಿ ದಿನ ಅವರ ಕುಟುಂಬದ ಹೆಸರು ಬರುವುದು ನೋಡಿದರೆ ನಮಗೆಯೇ ಬೇಜಾರಾಗುತ್ತದೆ, ಇದನ್ನು ಕೊಡಗಿನ ಜನ ಖಂಡಿತಾ ಸಹಿಸುವುದಿಲ್ಲ. ಇದಕ್ಕೆ ಒಂದು ಅಂತಿಮ ರೂಪವನ್ನು ಕೊಡಬೇಕು. ನಾವೆಲ್ಲಾ ಜೊತೆ ಸೇರಿ ಪರಿಹಾರ ಹುಡುಕಬೇಕು. ಆ ನಿಟ್ಟಿನಲ್ಲಿ ಸರ್ಕಾರ ನಮ್ಮ ಜೊತೆ ಇರುತ್ತದೆ, ಅವರ ಸಂಸಾರದ ಜೊತೆ ಇರುತ್ತದೆ ಎಂದು ಭಾವಿಸಿ, ಎರಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ತಾರಾಅನೂರಾಧ:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಶ್ರೀ ಎಂ.ಭಾನುಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು):– ಮಾ**ನ್ಯ ಸಭಾಪತಿಗಳೆ, ನಾನು ಎರಡೇ ನಿಮಿಷ ಮಾತನಾಡುತ್ತೇನೆ. ಗಣಪತಿ ಸಾವಿನ ಸುತ್ತ ಬಹಳಷ್ಟು ಚರ್ಚೆ ನಡೆದಿದೆ. ಆತನ ಸಾವಿನ ರಹಸ್ಯವನ್ನು, ಆತ್ಮಹತ್ಯೆ ರಹಸ್ಯವನ್ನು ಹೇಳುವುದಕ್ಕೆ ಅವರಿಗೆ ಮಾತ್ರ ಸಾಧ್ಯವಿದೆಯೇ ಹೊರತು ಇನ್ಯಾರಿಗೂ ಅದನ್ನು ಹೇಳುವುದಕ್ಕೆ ಅಗುವುದಿಲ್ಲ. ಆದರೆ, ಈಗ ಸಿಕ್ಕಿರುವ ಸುಳಿವಿನ ಆಧಾರದ ಮೇಲೆ, ಆತನ ಬರೆದಿಟ್ಟಿರುವುದಿರಬಹುದು, ಆತನ ಜೀವನ, ಆತನ ಮನೆಯವರ ಹೇಳಿಕೆ, ಆತ ಅಧಿಕಾರ ಮಾಡಿದಂಥ ಸಂದರ್ಭದಲ್ಲಿ ಜನರ ಹೇಳುತ್ತಿದ್ದ ಹೇಳಿಕೆ ಇವುಗಳ ಆಧಾರದ ಮೇಲೆ ನಿನ್ನೆಯಿಂದ ಇಲ್ಲಿ ಮಂಥನ ನಡೆದಿದೆ. ನಾನು ವಿಶೇಷವಾಗಿ ಮಾನ್ಯ ಉಗ್ರಪ್ಪನವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಬಹಳ ಒಳ್ಳೆಯ ವಾದ ಮಾಡಿದರು. ಆದರೆ, ನಾನೊಂದು ಮಾತನ್ನು ಹೇಳುತ್ತೇನೆ. You can win the case by quoting sections and articles of the Constitution. But, you cannot win the heart of the Karnataka people by quoting the sections. ಈ ದಿಸೆಯಲ್ಲಿ ಸರ್ಕಾರದ ಸೂಕ್ತ ಕ್ರಮವನ್ನು ನಾವು ಬಯಸುತ್ತಿದ್ದೇವೆ. ಏಕೆಂದರೆ ಕೋರ್ಟ್‌ನಲ್ಲಿ ನಮ್ಮ ದೇಶದ ಯಾವುದ್ಯಾವುದೋ ಕೇಸುಗಳು ಎಷ್ಟೋ ವರ್ಷಗಳು ನಡೆದು ಈಗಲೂ ಕೂಡ ಅನೇಕರಿಗೆ ಕುತ್ತಿಗೆಯ ಉರುಳಾಗುವಂತಹ ಸನ್ನಿವೇಶ ಬಂದಿದೆ. ನಮ್ಮ ದೇಶದ ಕಾನೂನು ಹೆಬ್ಬಾವಿನ ತರಹ ಮೊದಲು ಹಿಡಿದುಕೊಳ್ಳುವುದು ಕಡಿಮೆಯಾದರೂ ನುಂಗುತ್ತಾ, ನುಂಗುತ್ತಾ ಹೋದರೆ ಎಲ್ಲಿಯವರೆಗೆ ಹೋಗುತ್ತದೆ

ಎನ್ನುವುದು ಈ ಸದನದಲ್ಲಿರುವ ಎಲ್ಲರಿಗೂ ಗೊತ್ತಿದೆ. ನಾವು ಗಣಪತಿಯ ಆತ್ಮಕ್ಕೆ ಶಾಂತಿ ಕೋರಬಹುದು. ಇದಾದ ಮೇಲೆ ಈ ಘಟನೆಯ ಕಾರಣ ಅವರ ಮನೆಯವರಿಗೆ, ಈ ರಾಜ್ಯದ ಜನಕ್ಕೆ, ಸರ್ಕಾರದ ಅಧಿಕಾರಿಗಳಿಗೆ, ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಎಲ್ಲರಿಗೂ ಒಂದು ಸಂದೇಶ ಸರ್ಕಾರದಿಂದ ಹೋಗಬೇಕಾಗಿದೆ. ಈ ಸರ್ಕಾರದಿಂದ ನ್ಯಾಯ ಸಿಗಬೇಕು ಎಂದು ಕೇಳಿರುವವರು ಮಾನ್ಯ ಈಶ್ವರಪ್ಪನವರು, ತಮ್ಮ ಅಧ್ಯಕ್ಷತೆ ಇದೆ ತಮ್ಮ ಹೆಸರನ್ನು ನಾನು ಉಲ್ಲೇಖ ಮಾಡಬೇಕಾಗಿಲ್ಲ. ಕೊಡಬೇಕಾಗಿರುವವರು ಪರಮೇಶ್ವರ, ಮೂರು ಜನ ಇದ್ದು ಗಣಪತಿ ಸಾವಿಗೆ ನ್ಯಾಯ ಸಿಗುವುದಿಲ್ಲವೆಂದರೆ ಇನ್ನು ಎಲ್ಲಿ ನ್ಯಾಯ ಸಿಗಬೇಕು ಎಂಬುದನ್ನು ಯೋಚನೆ ಮಾಡಿ. ನಮ್ಮದು ಬಹಳ perfect demand. ಸಿ.ಬಿ.ಐ.ಗೆ ಏಕೆ, ಸಿ.ಐ.ಡಿ.ಗೆ ಏಕೆ ಅಲ್ಲ? ಸಿ.ಐ.ಡಿ ಪೊಲೀಸ್‌ನವರ ಬಗ್ಗೆ ನಮಗೂ ಬಹಳ ಗೌರವವಿದೆ. ನಾವು ಸರ್ಕಾರ ನಡೆಸಿದವರು, ನಾವು ಸಿ.ಐ.ಡಿ.ಯಿಂದ ತನಿಖೆ ಮಾಡಿಸಿದ್ದೇವೆ. ಆದರೆ ನಾನು ನಮ್ಮ ಸರ್ಕಾರ, ನಿಮ್ಮ ಸರ್ಕಾರ ಎಂದು ಹೇಳುವುದಿಲ್ಲ. ಒಟ್ಟಾರೆ ಈ ಸದನದಿಂದ ರಾಜ್ಯದ ಜನಕ್ಕೆ ಸಂದೇಶ ಏನು ಹೋಗಬೇಕಾಗಿದೆ ಎಂದರೆ ಅವರು ಕೇಳುತ್ತಿದ್ದಾರೆ, ಇದರಲ್ಲಿ ಯಾರ ಪಾತ್ರ ಇದೆ ಎಂದು ಅನುಮಾನ ಬಂದಿದೆಯೋ ಅವರನ್ನು ಸರ್ಕಾರದ ನೇತೃತ್ವದಲ್ಲಿ ಇಟ್ಟುಕೊಳ್ಳಬೇಡಿ. ಅವರಿಗೆ ರಾಜೀನಾಮೆ ಕೊಡಿಸಿ. ರಾಜೀನಾಮೆ ಕೊಟ್ಟ ಮೇಲೆ ಈ ಪ್ರಕರಣವನ್ನು ಭೇದಿಸುವುದಕ್ಕೆ ಪ್ರಯತ್ನ ಮಾಡಿ. ಇಲ್ಲಿರುವಂತಹ ಜಾರ್ಜ್ ಮೇಲೆ ಆಗಲಿ ಅಥವಾ ಮೊಹಂತಿ ಮೇಲೆ ಆಗಲಿ, ಪ್ರಸಾದ್‌ರವರ ಮೇಲೆ ಆಗಲಿ ನಮಗೇನು ಯಾವುದೇ ವೈಯಕ್ತಿಕ ದ್ವೇಷ ಇಲ್ಲ. ಈ ಸರ್ಕಾರ ಪೂರ್ಣ ಸಮಯ ಇರಬೇಕು ಎನ್ನುವುದಾದರೆ ಆಗಾಗ್ಗೆ ಬರುವಂತಹ ಸಂಶಯವನ್ನು ನಿವಾರಿಸುವಂತಹ ಕೆಲಸ ಸರ್ಕಾರದ್ದೇ. ನಮ್ಮದೇನಿದ್ದರು ವಿರೋಧ ಪಕ್ಷ. ನಮಗೆ ಜನ ಹೇಳಿರುವುದು ನೀವು ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳಿ ಎಂದು. ಅವರಿಗೆ ಆಡಳಿತ ಕೊಟ್ಟಿದ್ದಾರೆ. ನಮ್ಮದ್ದು ಹೇಳುವಂತಹ ಕೆಲಸ. 'The Opposition has a say; the Government has a way'. ಅವರಿಗೊಂದು ಮಾರ್ಗ ಇದೆ, ಅವರು ಅದನ್ನು ತೆಗೆದುಕೊಂಡು ಬಗೆಹರಿಸಿ ರಾಜ್ಯದ ಜನಕ್ಕೆ ಸಂದೇಶ ಕೊಡಲಿ. ನಾವು ರಾಜ್ಯದ ಪರವಾಗಿ ಹೇಳುತ್ತಿದ್ದೇವೆ. ಅನೇಕ ಪತ್ರಿಕೆಗಳಲ್ಲಿ, ಟಿ.ವಿ.ಗಳಲ್ಲಿ ಬರುತ್ತಿದೆ. ಜಾರ್ಜ್ ರಾಜೀನಾಮೆ ಕೊಡಬೇಕೆ ಎಂದು ಕೇಳಿದರೆ 99 ಪರ್ಸೆಂಟ್ ಜನ ಹೌದು ಎಂದು ಹೇಳಿದ್ದಾರೆ. ಅವರು ಜನರ ಭಾವನೆಗಳಿಗೆ ಬೆಲೆ ಕೊಡಬೇಕು ಎನ್ನುವುದು ನಮ್ಮ ಆಗ್ರಹ. ಅವರು ಕೋರ್ಟ್‌ನಲ್ಲಿ ಗೆಲ್ಲಬಹುದು. ಆದರೆ ಜನರ ಮನಸ್ಸನ್ನು ಗೆಲ್ಲಬೇಕೆಂದರೆ ಜನರಿಗೆ ಮಾರ್ಗದರ್ಶಕವಾಗಿ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಡಬೇಕೆನ್ನುವುದು ಮಾತ್ರ ನಮ್ಮ ಆಗ್ರಹ. ನಾನು ಇನ್ನು ಯಾವ ಕೊಟೇಶನ್‌ಗೂ ಹೋಗುವುದಿಲ್ಲ, ಯಾವ ಕೋಟಿಂಗ್‌ಗೂ ಹೋಗುವುದಿಲ್ಲ.

**ಶ್ರೀ ಎಚ್.ಎಂ.ರೇವಣ್ಣ:–** ಸಮಯ ಆಯಿತು.

**ಶ್ರೀ ಭಾನುಪ್ರಕಾಶ್:–** ಸಮಯ ಆಯಿತು ಎಂದು ಸಭಾಪತಿಗಳು ಹೇಳಬೇಕು, ನೀವಲ್ಲ. ಸಭಾಪತಿಗಳು ಹೇಳಿರುವ ಸಮಯ ಆದ ಮೇಲೆ ನಾನು ಅರ್ಧ ಸೆಕೆಂಡ್ ನಿಲ್ಲುವುದಿಲ್ಲ. ನಮಗೆ ನಿಮ್ಮಷ್ಟು ಧೈರ್ಯವೂ ಇಲ್ಲ.

ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಸರ್ಕಾರಕ್ಕೆ ಆಗ್ರಹ ಮಾಡುವುದೇನೆಂದರೆ, ನನ್ನದು ಎರಡು ಬೇಡಿಕೆಗಳಿವೆ. ಸರ್ಕಾರದಿಂದ ಸಿ.ಐ.ಡಿ. ತನಿಖೆ ಮಾಡಿಸುವುದಕ್ಕಿಂತ ಮುಂಚೆಯೇ ಈಗಾಗಲೇ ಹೇಳಿಕೆಗಳನ್ನು ಕೊಟ್ಟುಬಿಟ್ಟಿದ್ದಾರೆ. ಜಾರ್ಜ್ ಪಾತ್ರ ಇಲ್ಲ ಎಂದು ಮಾನ್ಯ ಗೃಹಸಚಿವರು 10ನೇ ತಾರೀಖು ಹೇಳಿದ್ದಾರೆ. ಜಾರ್ಜ್ ಪಾತ್ರ ಇಲ್ಲ. ಸ್ವಾಮಿ, ನಾನು ಕೇಳುತ್ತೇನೆ ಸದನ ನಡೆಯುತ್ತಿದೆ, 6ನೇ ತಾರೀಖು ರಂಜಾನ್ ಇತ್ತು, ಅದು 7ನೇ ತಾರೀಖಿಗೆ ಪೋಸ್ಟ್‌ಪೋನ್ ಆಯಿತು. 8,9,10ನೇ ತಾರೀಖು ರಜಾ ಮಾಡಿದ್ದಾರೆ. 11ನೇ ತಾರೀಖು ಅಧಿವೇಶನ ಇತ್ತು. ಸದನ ನಡೆಯುವಂತಹ ಮಧ್ಯದಲ್ಲಿ ಹೊರಗಡೆ ಮಾನ್ಯ ಗೃಹ ಸಚಿವರು ಇದರ ಬಗ್ಗೆ ಹೇಳಿಕೆ ಕೊಡುವುದು ಯಾವ ನ್ಯಾಯ ಎಂದು ನಾನು ಕೇಳುತ್ತಿದ್ದೇನೆ. ಸದನ ನಡೆಯುವಂತಹ ಸಂದರ್ಭ ಇದ್ದಾಗ ಸದನದಲ್ಲಿ ಮೊದಲು ಹೇಳಿಕೆ ಮಾಡಬೇಕಾಗಿರುವುದು ಸರ್ಕಾರದ ಕರ್ತವ್ಯವಲ್ಲವೆ? ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟು ಜಾರ್ಜ್ ಪಾತ್ರ ಇಲ್ಲ ಎಂದು ಹೇಳಿದರು, ಸಂತೋಷ ಸ್ವಾಮಿ. ಜಾರ್ಜ್ ಪಾತ್ರ ಇಲ್ಲದಿದ್ದರೆ ನಮಗೂ ಸಂತೋಷವಾಗುತ್ತದೆ.

ನಮಗೇನು ಅವರ ಬಗ್ಗೆ ವೈಯಕ್ತಿಕ ದ್ವೇಷವೇ? ಮಂತ್ರಿಮಂಡಲದಲ್ಲಿ ಯಾರನ್ನಾದರೂ ಇಟ್ಟುಕೊಳ್ಳುವುದು ಅವರ ಹಕ್ಕು. ಅವರು ಕೆಲಸ ಮಾಡಲಿ. ಆದರೆ ಮೊದಲಿಗೆ ಜಾರ್ಜ್ ಪಾತ್ರ ಇಲ್ಲ, ಸಿ.ಐ.ಡಿ. ಅಧಿಕಾರಿಗಳಿಂದ ಮಾಡಿಸುತ್ತೇನೆ, ಇದರಲ್ಲಿ ಏನು ಇಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಸಚಿವರು ಸದನ ನಡೆಯುವಂತಹ ವೇಳೆಯಲ್ಲಿ ಹೊರಗಡೆ ಹೇಳಿಕೆ ಕೊಡುವುದು ಎಷ್ಟು ಸಮಂಜಸ? ಆ ಹಿನ್ನೆಲೆಯಲ್ಲಿ ನಾವು ಈ ಎಲ್ಲಾ ಚರ್ಚೆಯನ್ನು ಮಾಡಿದ್ದೇವೆ. ಇದನ್ನು ಗಣನೆಗೆ ತೆಗೆದುಕೊಳ್ಳಿ. ದಯಮಾಡಿ ಈ ರಾಜ್ಯದ ಜನಕ್ಕೆ ಸರಿಯಾದ ಸಂದೇಶ ಕೊಡಿ. ಸರ್ಕಾರ ಸರಿಯಾಗಿ ನಡೆಯುತ್ತಿದೆ, ಸರ್ಕಾರ ಜನಪರವಾಗಿದೆ, ಸರ್ಕಾರ ಜನರ ಭಾವನೆಗಳಿಗೆ ಗೌರವ ಕೊಡುತ್ತದೆ, ಸರ್ಕಾರ ಜನರ ಭಾವನೆಗಳಿಗೆ ಮನ್ನಣೆ ಕೊಡುತ್ತದೆ ಎನ್ನುವ ಸಂದೇಶವನ್ನು ಕೊಡುವುದಕ್ಕೆ ಯೋಗ್ಯ ತೀರ್ಮಾನವನ್ನು ತೆಗೆದುಕೊಳ್ಳಿ. ಆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮಾತ್ರ ವಿರೋಧ ಪಕ್ಷದ ನಾಯಕರು ನಮ್ಮ ಕಡೆಯಿಂದ ಪ್ರಸ್ತಾಪ ಮಾಡಿರುವಂತಹ ಯಾವ ವಿಷಯ ಇದೆ ಅದನ್ನು ಒಪ್ಪಿಕೊಳ್ಳಿ ಎನ್ನುವ ಮಾತನ್ನು ಹೇಳಿ ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್:–** ಮಾನ್ಯ ಸಭಾಪತಿಯವರೆ, ಇಲ್ಲಿ ನನ್ನ ಹೆಸರನ್ನು ಸಾಕಷ್ಟು ಬಾರಿ ಉಲ್ಲೇಖಿಸಲಾಗಿದೆ. ಅದಕ್ಕಾಗಿ ನಾನು ಸ್ಪಷ್ಟೀಕರಣವನ್ನು ನೀಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ನಾರಾಯಣಸ್ವಾಮಿಯವರು ಮಾತನಾಡಿದ ನಂತರ ನೀವು ಮಾತನಾಡಿ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂಥ ಸದಸ್ಯರುಗಳಿಗೆ ಪ್ರೋತ್ಸಾಹವನ್ನು ನೀಡುತ್ತಿರುವುದಕ್ಕೆ ನಿಜವಾಗಿಯೂ ಸಹ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾವು ಸಹ ಮೂರು ದಿನಗಳಿಂದ ಈ ಚರ್ಚೆಯನ್ನು ನೋಡುತ್ತಿದ್ದೇವೆ. ವಿರೋಧ ಪಕ್ಷದಲ್ಲಿರತಕ್ಕಂಥ ಹಿರಿಯರು, ಆಡಳಿತ ಪಕ್ಷದಲ್ಲಿರತಕ್ಕಂಥ ಹಿರಿಯರು ಮಾತನಾಡತಕ್ಕಂಥ ರೀತಿಯನ್ನು ನಾನು ನೋಡಿ ಕಲಿಯಬೇಕಾಗಿರುವುದು ಬಹಳಷ್ಟಿದೆ ಎಂದು ಭಾವಿಸಿ ನಾವೂ ಸಹ ಕಲಿಯುತ್ತಿದ್ದೇವೆ. ಒಂದು ವಿಚಾರದಲ್ಲಿ ನಮಗೆ ದುಃಖವಾಗುತ್ತಿದೆ. ಇಷ್ಟೆಲ್ಲಾ ಪ್ರತಿಭಾನ್ವಿತರು, ಹಿರಿಯರು ಇಲ್ಲಿದ್ದು, ಕೇವಲ ಪತ್ರಿಕೆಗಳಲ್ಲಿ, ಟೀವಿ ಮಾಧ್ಯಮದಲ್ಲಿ ಬಂದಿರತಕ್ಕಂಥ ವರದಿಗಳ ಆಧಾರದ ಮೇಲೆ ಇಷ್ಟೊಂದು ಚರ್ಚೆಯಾಗುತ್ತಿದೆಯಲ್ಲಾ, ಇದು ನ್ಯಾಯವೇ ಎಂದು ಎಲ್ಲೋ ಒಂದು ಆತಂಕ ನಮಗೂ ಸಹ ಕಾಡುತ್ತಿದೆ. ಇವತ್ತು ಗಣಪತಿಯವರ ಸಾವಿನಿಂದ ಆಗಿರುವ ದುಃಖ–ದುಮ್ಮಾನ ವಿರೋದ ಪಕ್ಷದವರಿಗೆ ಮಾತ್ರ ಇದೆ, ಆಡಳಿತ ಪಕ್ಷದಲ್ಲಿ ಕುಳಿತಿರತಕ್ಕಂಥ ನಮಗೆ ಆ ದುಃಖ–ದುಮ್ಮಾನ ಇಲ್ಲವೆಂದು ತಾವುಗಳು ಯಾರೂ ಸಹ ಭಾವಿಸಬಾರದು. ಇವತ್ತು ಗಣಪತಿಯವರ ಸಾವು ಒಂದೇ ಅಲ್ಲ, ಯಾವುದೇ ಒಬ್ಬ ವ್ಯಕ್ತಿ ಮಾನವೀಯತೆಯ ದೃಷ್ಟಿಯಿಂದ ಒಂದು ಸಂಸಾರದಲ್ಲಿ ಆಗಿರತಕ್ಕಂಥ ನೋವನ್ನು ಪ್ರತಿಯೊಬ್ಬರೂ ಸಹ ಇವತ್ತಿನ ದಿವಸ ಹಂಚಿಕೊಳ್ಳಬೇಕಾಗುತ್ತದೆ. ಗಣಪತಿಯವರು ತೀರಿಕೊಂಡಿದ್ದಾರೆ. ಅವರು ಇಹಲೋಕವನ್ನು ತೊರೆದು ಹೋಗಿದ್ದಾರೆ. ಆದರೆ ಅವರ ಸಂಸಾರ ಇವತ್ತಿನ ದಿವಸ ನಾವಿಕನಿಲ್ಲದ ದೋಣಿಯಂತಾಗಿದೆ. ಮಕ್ಕಳಿಗೆ ತಂದೆ ಇಲ್ಲ, ಹೆಂಡತಿಗೆ ಗಂಡ ಇಲ್ಲ, ತಂದೆ–ತಾಯಿಗೆ ಮಗ ಇಲ್ಲ. ಆದರೆ ಮುಂದೆ ಅವರ ಸಂಸಾರ ಯಾವ ರೀತಿಯಾಗಿ ನಡೆದುಕೊಂಡು ಹೋಗುತ್ತದೆ ಎನ್ನುವ ಕಾಳಜಿ ನಮಗ್ಯಾರಿಗೂ ಸಹ ಇಲ್ಲ. ಇವತ್ತು ಏನೋ ಆಗಿದೆ, ಹೇಳಿಕೆ ಬಂದಿದೆ. ಅದಕ್ಕೋಸ್ಕರ ಸಚಿವರು ರಾಜೀನಾಮೆಯನ್ನು ಕೊಡಬೇಕು, ಇನ್ನಿಬ್ಬರು ಅಧಿಕಾರಿಗಳು ರಾಜೀನಾಮೆಯನ್ನು ಕೊಡಬೇಕು ಎನ್ನತಕ್ಕಂಥಾದ್ದನ್ನು ಮಾತ್ರ ನಾವಿಲ್ಲಿ ಮಾತನಾಡುತ್ತಿದ್ದೇವೆ. ರಾಜೀನಾಮೆಯನ್ನು ಕೊಟ್ಟಾಕ್ಷಣ ಅವರ ಸಂಸಾರಕ್ಕೆ ನ್ಯಾಯ ಸಿಗುತ್ತದೆಯೇ? ಅಥವಾ ರಾಜೀನಾಮೆಯನ್ನು ಕೊಟ್ಟ ತಕ್ಷಣ ಗಣಪತಿಯವರು ಮತ್ತೆ ಹುಟ್ಟಿ ಬರುತ್ತಾರೆಯೇ? ಇದರ ಬಗ್ಗೆ ನಾವು ಯೋಚನೆಯನ್ನು ಮಾಡಬೇಕಾಗಿದೆ. ಪತ್ರಿಕೆಗಳ ಆಧಾರದ ಮೇಲೆಯೇ ಮಾತನಾಡುವುದಾದರೆ, ಒಂದೊಂದು ಪತ್ರಿಕೆಯಲ್ಲಿ ಒಂದೊಂದು ವಿಷಯ ಬಂದಿದೆ. ಇದೇ ಗಣಪತಿಯವರು ಮಂಗಳೂರಿನ ಚರ್ಚ್ ಮೇಲೆ ಧಾಳಿಯಾದಂಥ ಸಂದರ್ಭದಲ್ಲಿ ಚರ್ಚ್‌ನಲ್ಲಿರತಕ್ಕಂಥವರ ಮೇಲೆ ಲಾಠಿ ಚಾರ್ಜ್ ಮಾಡುತ್ತಾರೆ,

ಅಲ್ಲಿರುವವರನ್ನು ಹೊಡೆಯುತ್ತಾರೆ. ಆಗ ಸರ್ಕಾರ ಜಸ್ಟಿಸ್ ಸೋಮಶೇಖರ್‌ರವರ ಆಯೋಗವನ್ನು ನೇಮಕ ಮಾಡುತ್ತದೆ. ಈ ಆಯೋಗ ಅಲ್ಲಿಗೆ ಹೋಗಿ ಏನಾಗಿದೆ ಎಂಬುದನ್ನು ಪರಿಶೀಲನೆ ಮಾಡುವುದಕ್ಕೆ ಹೋದಾಗ ಆ ಚರ್ಚ್‌ನಲ್ಲಿ ಎಲ್ಲರೂ ಸಹ ಸೇರಿರುತ್ತಾರೆ. ಅಲ್ಲಿ ಏನಾಗಿದೆ ಎಂದು ಸಮೀಕ್ಷೆಯನ್ನು ಮಾಡುತ್ತಿರುವಂಥ ಸಂದರ್ಭದಲ್ಲಿ ಅಲ್ಲಿನ ಜನರು, ಅಲ್ಲಿರತಕ್ಕಂಥ Nun ಗಳ ಮೇಲೆ ಲಾಠಿ ಚಾರ್ಜ್ ಮಾಡಿದ್ದರಲ್ಲಾ, ಆ ಹೆಣ್ಣುಮಕ್ಕಳು ಅವಮಾನವನ್ನು ಸಹಿಸಿಕೊಂಡು, ಸೀರೆಯನ್ನು ಮೇಲಕ್ಕೆ ಎತ್ತುಕೊಂಡು ಅವರಿಗೆ ಆಗಿರುವ ಬಾಸುಂಡೆಯನ್ನು ತೋರಿಸುತ್ತಾರೆ. ಆವತ್ತು ಇದೇ ಗಣಪತಿಯವರು ಆ ಜಾಗದಲ್ಲಿರುತ್ತಾರೆ. ಅವರು ದೂರವಾಣಿಯನ್ನು ಮಾಡಿ ಬಿಜೆಪಿ ಯವರಿಗೆ, ಭಜರಂಗ ದಳದ ಕಾರ್ಯಕರ್ತರನ್ನು ಕರೆಯುತ್ತಾರೆ. ಇಲ್ಲಿ ನೀವುಗಳು ಯಾರೂ ಸಹ ಇಲ್ಲ, ಬೇಗನೇ ಬನ್ನಿ. ಸೋಮಶೇಖರ್ ಆಯೋಗದ ಸದಸ್ಯರುಗಳು ಇಲ್ಲಿಗೆ ಬಂದಿದ್ದಾರೆ, ನೀವೆಲ್ಲರೂ ಬನ್ನಿ ಎನ್ನುತ್ತಾರೆ. ಇದೇ ವರದಿ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಅವರೆಲ್ಲರನ್ನು ಕರೆಸಿಕೊಳ್ಳುತ್ತಾರೆ. ಆಗ ಸೋಮಶೇಖರ್ ಆಯೋಗ ಸಮೀಕ್ಷೆಯನ್ನು ಮಾಡಿ ಆಯೋಗದ ಸದಸ್ಯರು ಹೊರಗಡೆಗೆ ಬಂದಾಗ ನೂರಾರು ಜನ ಕಾರ್ಯಕರ್ತರು ಅಲ್ಲಿ ಜಮಾಯಿಸಿರುತ್ತಾರೆ. ಆ ಕಾರ್ಯಕರ್ತರು ಇವರನ್ನು ಕುರಿತು ನಮ್ಮ ವರದಿಯನ್ನು ಸಹ ಪಡೆದುಕೊಳ್ಳಿ ಎಂದು ಕೇಳುತ್ತಾರೆ. ಅದಕ್ಕವರು ನಾವು ವರದಿಯನ್ನು ತೆಗೆದುಕೊಳ್ಳುವುದಿಲ್ಲ, ನೀವೇನಾದರೂ ಹೇಳುವುದಿದ್ದರೆ ಸರ್ಕ್ಯೂಟ್ ಹೌಸ್‌ಗೆ ಬನ್ನಿ ಎನ್ನುತ್ತಾರೆ. ಆಯೋಗದ ಸದಸ್ಯರೆಲ್ಲರೂ ಸಹ ಅಲ್ಲಿರುತ್ತಾರೆ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತು ನಾವು ಪತ್ರಿಕೆಯಲ್ಲಿ ಬಂದಿರತಕ್ಕಂಥ ವರದಿಗಳ ಆಧಾರದ ಮೇಲೆ ಮಾತನಾಡುವುದಾದರೆ, ಪತ್ರಿಕೆಯಲ್ಲಿ ಬಂದಿರತಕ್ಕಂಥ ಈ ವರದಿಯನ್ನು ಸಹ ಏಕೆ ತಾವು ಪರಿಗಣಿಸಬಾರದು? ಆದ್ದರಿಂದ ನಾವು ಇವೆಲ್ಲವನ್ನು ನೋಡಿದಾಗ ಗಣಪತಿಯವರ ಸಂಸಾರಕ್ಕೆ ನ್ಯಾಯವನ್ನೊದಗಿಸುತ್ತಿದ್ದೇವೆಯೇ? ನಾಳೆಯ ದಿವಸ ಮೃತನ ಹೆಂಡತಿಯ ಪರಿಸ್ಥಿತಿ ಏನಾಗುತ್ತದೆ? ಅವರ ಸಂಸಾರವನ್ನು ತೂಗುವವರು ಅಥವಾ ಅವರ ಸಂಸಾರವನ್ನು ಮುನ್ನಡೆಸುವವರು ಯಾರು? ಅವರಿಗೆ ಆಗಿರತಕ್ಕಂಥ ಅನ್ಯಾಯಕ್ಕೆ ಸರ್ಕಾರದ ವತಿಯಿಂದ ಏನು ಸವಲತ್ತುಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ನಾವು ಮಾತನಾಡುತ್ತಿಲ್ಲ. ಇವತ್ತು ಶ್ರೀಮತಿ ವೀಣಾ ಅಚ್ಚಯ್ಯರವರು ಮಾತನಾಡಿದರು. ಈ ಘಟನೆಯಿಂದ ತುಂಬಾ ನೋವಾಗುತ್ತಿದೆ, ಗಣಪತಿಯವರ ಸಾವಿನ ನಂತರ ಅವರ ಕುಟುಂಬದವರ ಜೊತೆಗೆ ನಾನೂ ಸಹ ಇದ್ದೆ ಎಂದು ಹೇಳಿದರು. ಗಣಪತಿಯವರ ಹೆಂಡತಿಗೆ, ಆ ಸಹೋದರಿಗೆ ಆಗಿರತಕ್ಕಂಥ ಅನ್ಯಾಯವನ್ನು ನಾವು ಯಾವುದೇ ರೀತಿಯ ಚರ್ಚೆಯನ್ನು ಮಾಡಿದರೂ ಸಹ ಮತ್ತೆ ಆಕೆಯ ಗಂಡನನ್ನು ವಾಪಸ್ ಕರೆತರಲು ನಮ್ಮ ಕೈಯಲ್ಲಿ ಸಾಧ್ಯವಿಲ್ಲ. ಇವತ್ತು ಆ ಮಕ್ಕಳಿಗೆ ತಂದೆಯನ್ನು ತಂದುಕೊಡಲು ಮತ್ತು ತಂದೆ-ತಾಯಿಗೆ ಅವರ ಮಗನನ್ನು ತಂದು ಕೊಡುವುದಕ್ಕೆ ನಮಗೆ ಸಾಧ್ಯವಿಲ್ಲ. ಆದರೆ ಮುಂದೆ ಗಣಪತಿಯವರ ಕುಟುಂಬದವರು ಸಂಸಾರವನ್ನು ತೂಗಿಸುವುದಕ್ಕೋಸ್ಕರವಾಗಿ ಸರ್ಕಾರದ ವತಿಯಿಂದ ಏನು ಕೊಡಬೇಕಾಗಿದೆ ಎಂಬುದನ್ನು ವಿಚಾರ ಮಾಡಬೇಕು. ಅವರಿಗೆ ಉದ್ಯೋಗವನ್ನು ಕೊಡಬೇಕೇ ಅಥವಾ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಕೊಡಬೇಕೇ, ವಯಸ್ಸಾದ ತಂದೆ-ತಾಯಿ ಸಂಸಾರವನ್ನು ತೂಗಿಸಲು ಏನು ಮಾಡಬೇಕು ಎಂದು ಆ ಸವಲತ್ತುಗಳ ಬಗ್ಗೆ ನಾವು ಗಮನವನ್ನು ಕೊಡಬೇಕಾಗಿದೆ. ನಿನ್ನೆಯ ದಿವಸ ಮಾನ್ಯ ತಾರಾರವರು ತುಂಬಾ ಚೆನ್ನಾಗಿ ಮಾತನಾಡಿದರು. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಇವತ್ತಿನ ದಿವಸ ರಾಜೀವ್ ಗಾಂಧೀಯನ್ನು ಹತ್ಯೆ ಮಾಡಿದಂಥ ವ್ಯಕ್ತಿಗಳನ್ನು ಬಂಧಿಸುವುದರಲ್ಲಿ ಸಫಲತೆಯನ್ನು ತೋರಿಸಿ ಕೀರ್ತಿಯನ್ನು ತಂದುಕೊಟ್ಟರು. ಅದೇ ರೀತಿ ಕಾಡುಗಳ್ಳ ವೀರಪ್ಪನ್‌ನನ್ನು ಹಿಡಿಯಲಿಕ್ಕೆ ಸಾಧ್ಯವಿಲ್ಲವೆನ್ನುವಾಗ, ಅವನನ್ನು ಹಿಡಿದವರು ಕರ್ನಾಟಕ ರಾಜ್ಯ ಪೊಲೀಸ್‌ನವರು ಎನ್ನುವ ಮಾತನ್ನು ಹೇಳಿದರು. ಒಂದು ಕಡೆ ನಾವು ನಮ್ಮ ಕರ್ನಾಟಕ ರಾಜ್ಯ ಪೊಲೀಸರಿಗೆ ಪ್ರಶಂಸಿಸುತ್ತೇವೆ. ಇನ್ನೊಂದು ಕಡೆ ಇದೇ ದಕ್ಷ, ಪ್ರಾಮಾಣಿಕ ಅಧಿಕಾರಿಗಳು ಇರತಕ್ಕಂಥ ಸಿಐಡಿ ಯವರಿಗೆ ಈ ಪ್ರಕರಣವನ್ನು ವಹಿಸಬೇಕೆಂದಾಗ ಸಿಐಡಿಯವರ ಬಗ್ಗೆ ಇವರಿಗೆ ನಂಬಿಕೆ ಇಲ್ಲ. ಎಲ್ಲೋ ಒಂದು ಕಡೆ ಪ್ರಾಮಾಣಿಕವಾಗಿ ದುಡಿಯುತ್ತಿರುವ ಪೊಲೀಸ್ ಅಧಿಕಾರಿಗಳಿಗೆ ನೀವು ಮುಂದೆ ಹೋಗಬೇಡಿ, ಹಿಂದೆ ಇರಿ ಎಂದು ಕಾಳೆಲೆಯತಕ್ಕಂಥ ಕೆಲಸವನ್ನು ಇವತ್ತಿನ ದಿವಸ ನಾವೇ ಮಾಡುತ್ತಿದ್ದೇವೆ. ನಮ್ಮ ಪೊಲೀಸರ ಬಗ್ಗೆ ನಮಗೆ ಗೌರವ ಇರಬೇಕು. ಮೊದಲು ಸಿಐಡಿ ತನಿಖೆಯಾಗಲಿ. ಅದರಲ್ಲಿ ಯಾರು ತಪ್ಪಿತಸ್ಥರು ಎನ್ನುವುದು ಬಂದಾಗ, ಇವರಿಗೆ ನಂಬಿಕೆ ಇಲ್ಲದೇ ಇದ್ದಾಗ ಆಗ ಈ ಪ್ರಕರಣವನ್ನು ಸಿಬಿಐ ಗೆ

ವಹಿಸಬಹುದು. ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಿರುವಂಥ ಉದಾಹರಣೆಗಳು ಇವತ್ತಿನ ದಿವಸ ಎಷ್ಟಿವೆ? ಇವತ್ತು ಸನ್ಮಾನ್ಯ ಡಿ.ಕೆ.ರವಿಯವರ ಬಗ್ಗೆ ಮಾತನಾಡುತ್ತಿದ್ದೇವೆ. ಅವರು ತೀರಿಕೊಂಡು ಸುಮಾರು ಒಂದೂವರೆ ವರ್ಷವಾಗಿದೆ. ಡಿ.ಕೆ.ರವಿಯವರನ್ನು ಜನರು, ರಾಜಕಾರಣಿಗಳು ಮರೆತು ಹೋಗಿದ್ದರು. ಆದರೆ ಗಣಪತಿಯವರ ಪ್ರಕರಣ ಬಂದ ಮೇಲೆ ಇವತ್ತಿನ ದಿವಸ ಇದೂ ಸಹ ಈಚೆಗೆ ಬರುತ್ತಿದೆ. ನಾಳೆ ದಿವಸ ಗಣಪತಿ ಅವರ ಕೇಸನ್ನೂ ಕೂಡ ಸಿಬಿಐಗೆ ಕೊಟ್ಟಾಗ ಸಿಬಿಐ ಒಂದು ವರ್ಷ, ಎರಡು ವರ್ಷ ತೆಗೆದುಕೊಳ್ಳುತ್ತದೆ ಎಂದರೆ ಇದನ್ನು ನಾವೆಲ್ಲರೂ ಕೂಡ ಮರೆತು ಹೋಗಿರುತ್ತೇವೆ.

**ಸಭಾಪತಿಯವರು:–** ಸಾಕು ಮಾಡಿ, ಸಮಯ ಆಗಿದೆ. ನಾನು ಕೊಟ್ಟ ಸಮಯ double ಆಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೆ, ಸರ್ಕಾರಕ್ಕೆ ತಾವು ದಯಮಾಡಿ, ಈ ವಿಚಾರದಲ್ಲಿ ಅವಕಾಶವನ್ನು ಮಾಡಿಕೊಡಿ. ಸರ್ಕಾರ ಯಾವತ್ತು ಕೂಡ ಯಾರ ಪರವಾಗಿಯೂ ಇಲ್ಲ. ಈ ಸಂಸಾರಕ್ಕೆ ಆಗಿರುವಂತಹ ನೋವನ್ನು ತುಂಬಲಿಕ್ಕೆ ಶ್ರೀಮಾನ್ ಗೃಹ ಸಚಿವರಾದಂತಹ ಡಾ॥ ಪರಮೇಶ್ವರ್‌ರವರು, ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಸಿದ್ದರಾಮಯ್ಯನವರು ಸೂಕ್ತವಾದ ಕ್ರಮವನ್ನು ಕೈಗೊಳ್ಳುತ್ತಾರೆನ್ನುವ ನಂಬಿಕೆ ನಮಗೆ ಇದೆ. ಆದ್ದರಿಂದ, ದಯಮಾಡಿ ತಾವೆಲ್ಲರೂ ಇದಕ್ಕೆ ಸಹಕಾರ ಕೊಡಬೇಕೆಂದು ಹೇಳಿ, ನನಗೆ ಎರಡು ಮಾತನಾಡಲಿಕ್ಕೆ ಅವಕಾಶ ಕೊಟ್ಟಂತಹ ಸನ್ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**ಸಭಾಪತಿಯವರು:–** ಈಗ ಶ್ರೀಯುತ ಪ್ರಾಣೇಶ್‌ರವರು ಮಾತನಾಡುತ್ತಾರೆ. ಎರಡು–ಮೂರು ನಿಮಿಷಗಳಲ್ಲಿ ತಾವು ಮುಗಿಸಬೇಕು. ಆಗುವುದಿಲ್ಲವೆಂದರೆ ಕಷ್ಟವಾಗುತ್ತದೆ.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬಹುಶ: ನಮ್ಮ ಜೀವ ಶಾಶ್ವತವಲ್ಲ. ನಮ್ಮ ನಡೆ–ನುಡಿ, ನಾವು ಹೋಗುವಂತಹ ದಾರಿ ಮಾತ್ರ ಶಾಶ್ವತ. ಹಾಗಾಗಿ, ಈ ನಮ್ಮ ಅಧಿಕಾರವೂ ಸಹ ಶಾಶ್ವತವಲ್ಲ. ಅದಕ್ಕೋಸ್ಕರ, ನೀವು ರಾಜೀನಾಮೆಯನ್ನು ಕೊಟ್ಟು, ಬೇರೆಯವರಿಗೆ ಮಾದರಿಯಾಗಿ ಎಂದು ಹೇಳಿ, ನಾನು ಮಾನ್ಯ ಸಚಿವರಾದ ಶ್ರೀಯುತ ಜಾರ್ಜ್‌ರವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಕಾರಣ ಇಷ್ಟೆ. ನಿಮ್ಮ ಮೇಲೆ ಆರೋಪ ಬಂದಿದೆ. ಈ ಆರೋಪ ಬಂದಿರುವುದರಿಂದ, ಈ ಆರೋಪದಿಂದ ಮುಕ್ತರಾಗಬೇಕು. ಆಗ ನೀವು ಅಧಿಕಾರಕ್ಕೆ ಮತ್ತೆ ಬನ್ನಿ. ಅದಕ್ಕೆ ನಮ್ಮ ಸ್ವಾಗತವೂ ಇದೆ. ಈ ಹಿಂದೆ, ಮಾತನಾಡಬೇಕಾದರೆ, ಸನ್ಮಾನ್ಯ ಸಚಿವರಾದ ಶ್ರೀಯುತ ಕೃಷ್ಣ ಬೈರೇಗೌಡರವರು ಒಂದು ಮಾತನ್ನು ಹೇಳಿದರು. ನಾನು ಏನೋ ಒಂದು ಪದವನ್ನು ಬಳಸಿದಂತಹ ಸಂದರ್ಭದಲ್ಲಿ "ಇಲ್ಲ, ನೀವು

ಈ ಸದನಕ್ಕೆ ಹೊಸಬರಿದ್ದೀರಿ, ಈ ಸದನದಲ್ಲಿ ನೀವು ಏನು ಮಾತನಾಡಬೇಕು, ಏನು ಮಾತನಾಡಬಾರದು ಎಂದು ಗೊತ್ತಿಲ್ಲವೆಂದು ಭಾವಿಸಿದ್ದೇನೆ ಎನ್ನುವ ಮಾತನ್ನು ಹೇಳಿದರು. ಆದರೆ, ನನ್ನಂತಹ ಒಬ್ಬ ಕಿರಿಯ ಸದಸ್ಯನಿಂದ ಬುದ್ಧಿವಾದ ಹೇಳಿಸಿಕೊಳ್ಳುವಂತಹ ಪರಿಸ್ಥಿತಿ ಈಗ ಆಡಳಿತದಲ್ಲಿರುವಂತಹ ಸರ್ಕಾರಕ್ಕೆ ಬಂದಿದೆಯಲ್ಲಾ ಎಂದು ಹೇಳಿ, ನನಗೆ ನಿಜವಾಗಿಯೂ ವಿಷಾದದಿಂದ ಹೇಳಬೇಕಾಗುತ್ತದೆ. ಕಾರಣ ಇಷ್ಟೆ. ಈಗಾಗಲೇ ಹಿರಿಯ ಮಂತ್ರಿಗಳು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು, ಶ್ರೀಮಾನ್ ರಮೇಶ್‌ಕುಮಾರ್‌ರವರು, ಡಾ॥ ಪರಮೇಶ್ವರ್‌ರವರು ಮಂತ್ರಿಗಳಾಗಿದ್ದೀರಿ. ಈ ವಿಚಾರವಾಗಿ ಹೊರಗಡೆ ಮಾತನಾಡುತ್ತಿದ್ದಾರೆ. ಇದು ನನ್ನ ಮಾತಲ್ಲ, ಖಂಡಿತವಾಗಿಯೂ ಸಹ ಎಲ್ಲರೂ ಮಾತನಾಡುತ್ತಾರೆ. ಇಂತಹ ಎಲ್ಲಾ ಮಂತ್ರಿಗಳಿದ್ದು, ಇಂತಹ ಸಂದರ್ಭದಲ್ಲಿ ಇವರುಗಳು ಮಾತನಾಡುತ್ತಿಲ್ಲವೆಂದು, ಎಲ್ಲಾ ಮೇಲ್ನೋಟಕ್ಕೆ ಸಾಬೀತಾಗಿರುವಂತಹ ಆರೋಪವನ್ನು ಇವರು ಏತಕ್ಕೆ ಸದನದಲ್ಲಿ ಮಾತನಾಡಿ, ಅವರ ರಾಜೀನಾಮೆಯನ್ನು ಕೊಡಿಸುವಂತಹ ಕೆಲಸವನ್ನು ಮಾಡುತ್ತಿಲ್ಲ, ಇವರು ಈ ಸದನದ ಒಳಗಡೆ ಕೇವಲ ನಾಮಕಾವಸ್ಥೆ ಮಂತ್ರಿಗಳಾಗಿದ್ದಾರೆಯೇ ಎನ್ನುವಂತಹ ಮಾತು ಹೊರಗಡೆ ಚರ್ಚೆಯಾಗುತ್ತಿದೆ. ಹಾಗೆಯೇ ಇವರ ಅಧಿಕಾರ ಏನೂ ನಡೆಯುವುದಿಲ್ಲವೇ ಎನ್ನುವ ಭಾವನೆ ಜನರಲ್ಲಿ ಬರುತ್ತಿದೆ ಎನ್ನುವುದನ್ನು ಮಾನ್ಯ ಸಭಾಪತಿಯವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇಲ್ಲಿ ಹಲವಾರು ಜನ ಮಾನ್ಯ ಸದಸ್ಯರುಗಳು ಮಾತನಾಡಿದರು. ಮಾತನಾಡುವಂತಹ ಸಂದರ್ಭದಲ್ಲಿ ನಾನು ಈಗಾಗಲೇ ಆಡಳಿತದ ಪಾರದರ್ಶಕತೆಯ

ಬಗ್ಗೆಯೂ ಸಹ ಮಾತನಾಡಿದೆ. ಆಡಳಿತದ ಪಾರದರ್ಶಕತೆ ಎಂದರೆ ಏನು? ಬಹುಶ: ತಪ್ಪು ಮಾಡಿದಂತಹ ಮಂತ್ರಿಗಳನ್ನು, ಮತ್ತೆ, ನಮಗೆ ಬೇಕಾದಂತಹ ಅಧಿಕಾರಿಗಳನ್ನು ಉಳಿಸಿಕೊಳ್ಳುವಂತಹ ವ್ಯವಸ್ಥೆಯೇ ಪಾರದರ್ಶಕತೆಯೇ? ಇದನ್ನು ಜವಾಬ್ದಾರಿ ಇರುವಂತಹ ನಾವೆಲ್ಲರೂ ಯೋಚನೆ ಮಾಡಬೇಕಾದಂತಹ ಕರ್ತವ್ಯ ನಮ್ಮ ಮೇಲೆ ಇದೆ ಎಂದು ನಾನು ಭಾವಿಸಿದ್ದೇನೆ. ಮತ್ತೆ, ಮಾತನಾಡಿದಂತಹ ಸಂದರ್ಭದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ. . . ಪತ್ರಿಕಾ ರಂಗದ ಬಗ್ಗೆ ಈಗಾಗಲೇ ಹೇಳುತ್ತಾ, ನಾಲ್ಕು ರಂಗಗಳಲ್ಲಿ ಪತ್ರಿಕಾ ರಂಗವೂ ಒಂದು ಪ್ರಮುಖವಾಗಿದೆ ಎನ್ನುವ ಮಾತನ್ನು ಹೇಳಿದರು. ಅಂದರೆ, ಆಡಳಿತ ಪಕ್ಷದಲ್ಲಿ ಇರುವಂತಹವರು ವಿರೋಧ ಪಕ್ಷದ ಇರುವಂತಹ ಸಂದರ್ಭದಲ್ಲಿ ಪತ್ರಿಕಾರಂಗ ಬೇಕು, ಆದರೆ, ಆಡಳಿತಕ್ಕೆ ಬರುವಂತಹ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಬರುವಂತಹ ಹೇಳಿಕೆಗಳು ಸುಳ್ಳು. ಇದು ಕೇವಲ ಅವರ ಮನಸ್ಸೋ ಇಚ್ಛೆ ಪತ್ರಕೆಗಳಲ್ಲಿ ಬರೆಯುವಂತಹ ವ್ಯವಸ್ಥೆಯನ್ನು ಮಾಡುತ್ತಾರೆನ್ನುವ ಮಾತನ್ನು ಹೇಳಿದರು. ಆದರೆ, ಅವರನ್ನು ಏತಕ್ಕೆ ಒಳಗಡೆ ಬಿಡುತ್ತೀರಿ? ಸದನದ ಒಳಗಡೆ ಅವರನ್ನು ಏತಕ್ಕೆ ಬಿಡುತ್ತೀರಿ? ಸದನದಲ್ಲಿ ಇರುವಂತಹ ಚರ್ಚೆಗಳಲ್ಲಿ ಭಾಗವಹಿಸಲಿಕ್ಕೆ ಅವಕಾಶಗಳನ್ನು ನಾವು ಏತಕ್ಕೆ ಮಾಡಿಕೊಡಬೇಕು? ಇದನ್ನೆಲ್ಲಾ ನಾವು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಹಾಗಾಗಿ, ತಾವು ಎಲ್ಲೋ ಒಂದು ಕಡೆ ತಪ್ಪಿಸಿಕೊಳ್ಳಲಿಕ್ಕೆ ಈ ಒಂದು ಕೆಲಸವನ್ನು ಮಾಡುತ್ತಿದ್ದೀರಿ. ಅಂದರೆ, ನಾನು ಹೇಳುವುದು, ನೀವು ಕೊಲೆ ಮಾಡಿದ್ದೀರಿ, ನೀವು ಅವರನ್ನು ಆತ್ಮಹತ್ಯೆ ಮಾಡಿಸಿದ್ದೀರಿ ಎಂದು ಹೇಳುತ್ತಿಲ್ಲ. ಇದು ಸಾರ್ವಜನಿಕವಾಗಿ ಚರ್ಚೆಯಾಗುತ್ತಿರುವಂತಹ ವ್ಯವಸ್ಥೆಯಾಗಿದೆ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯೊಳಗಡೆ, ಶಾಸಕಾಂಗದ ಒಳಗಡೆ ಕಾರ್ಯ ನಿರ್ವಹಿಸುತ್ತಿರುವವರಾಗಿದ್ದೇವೆ. ಇದು ನಮ್ಮ ಜವಾಬ್ದಾರಿಯೂ ಕೂಡ ಹೌದು. ಹಾಗಾಗಿ, ನಾವು ಬೇರೆಯವರಿಗೆ ಮಾರ್ಗದರ್ಶನ ತೋರಿಸುವಂತಹ ಜವಾಬ್ದಾರಿಯೂ ಸಹ ನಮ್ಮ ಮೇಲೆ ಇದೆ. ಹಾಗೆಯೇ ಶ್ರೀಯುತ ಶರಣಪ್ಪ ಮಟ್ಟೂರ ರವರು ಮತ್ತು ಶ್ರೀಯುತ ಉಗ್ರಪ್ಪನವರು ಇಬ್ಬರು ಸಹ ತುಂಬಾ ಬುದ್ದಿವಂತರಿದ್ದೀರಿ. ನೀವುಗಳು ಲಾಯರ್‌ಗಳಿದ್ದೀರಿ. ನಿಮ್ಮ ಮಾತುಗಳನ್ನು ಕೇಳಲಿಕ್ಕೆ ನಮಗೆ ತುಂಬಾ ಖುಷಿಯಾಗುತ್ತದೆ. ಆದರೆ, ನೀವುಗಳು ತಪ್ಪಿತಸ್ಥರನ್ನು ಉಳಿಸುವುದಕ್ಕೋಸ್ಕರ ಚರ್ಚೆಯನ್ನು ಮಾಡುತ್ತಿರುವುದು ಭಾರಿ ದು:ಖಕರವಾದಂತಹ ಸಂಗತಿ. ನಿಮ್ಮಿಂದ ಅದನ್ನು ನಾವು ಖಂಡಿತವಾಗಿಯೂ ಸಹ ನಿರೀಕ್ಷೆ ಮಾಡುವುದಿಲ್ಲ. ನೀವು ಹೈಕೋರ್ಟ್‌ನಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ಇದ್ದರೆ . . .

**(ಗೊಂದಲ)**

**ಸಭಾಪತಿಯವರು:–** ಅವರ ಅಭಿಪ್ರಾಯವನ್ನು ಹೇಳಲಿ ಬಿಡಿ. ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಾರೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಹಾಗೆಯೇ ಸರ್ಕಾರದಲ್ಲಿ ಆಗುತ್ತಿರುವಂತಹ ವ್ಯವಸ್ಥೆಯನ್ನು ಮತ್ತು ತಪ್ಪುಗಳನ್ನು ಮುಚ್ಚಿ ಹಾಕಲಿಕ್ಕೆ ಇವರಿಬ್ಬರು ಕೊಡುವಂತಹ ಅಸ್ತ್ರವನ್ನು ಮಾಡಿಕೊಂಡಿದ್ದಾರೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಹಾಗೆಯೇ ನಾನು ಇನ್ನೊಂದು ಮಾತನ್ನು ಹೇಳಿ ನನ್ನ

ಮಾತನ್ನು ಮುಗಿಸುತ್ತೇನೆ. ಈ ವಿಚಾರದಲ್ಲಿ ಎಲ್ಲರೂ ಹೇಳಿದರು. ಇವರು ಆತ್ಮಹತ್ಯೆ ಮಾಡಿಕೊಂಡಂತಹ ಸಂದರ್ಭದಲ್ಲಿ Death Note ಇರಲಿಲ್ಲ, ಹಾಗೆ ಅವರು Death Note ಅನ್ನು ಅವರು ಬರೆಯಲಿಲ್ಲ, ಮಾಧ್ಯಮದಲ್ಲಿ ಮಾತ್ರ ತಮ್ಮ ಹೇಳಿಕೆಯನ್ನು ಕೊಟ್ಟರು ಎಂದು ಹೇಳಿದರು. ಅವರು ಸಹ ಸರ್ಕಾರದೊಳಗಡೆ ಹಲವಾರು ವರ್ಷಗಳ ಕಾಲ ಕೆಲಸ ಮಾಡಿದಂತಹವರು. ಹಾಗಾಗಿ, ಮೇಲಾಧಿಕಾರಿಗಳು ನಾನು Death Note ಅನ್ನು ಬರೆದರೆ, ಆ Death Note ಅನ್ನು ಎನ್ನನ್ನು ಮಾಡಬಹುದು ಎನ್ನುವ ತಿಳುವಳಿಕೆಯೊಂದಿಗೆ ಅವರು Death Note ಅನ್ನು ಬರೆದಿಟ್ಟಿದ್ದರೂ ಕೂಡ ಮಾಧ್ಯಮಗಳ ಮುಂದೆ ಹೋದರು. ಏತಕ್ಕೆ ಹೋದರು ಎಂದರೆ ಇದನ್ನು ನೀವು ಯಾರು ಮುಚ್ಚಿ ಹಾಕಲಿಕ್ಕೆ, ನಾವು ಯಾರು ಮುಚ್ಚಿ ಹಾಕಲಿಕ್ಕೆ ಸಾಧ್ಯವಿಲ್ಲ. ಅವರು ಏನು ಟಿ.ವಿ. ಮಾಧ್ಯಮದಲ್ಲಿ ತಮ್ಮ ಹೇಳಿಕೆಯನ್ನು ಕೊಟ್ಟರು, ಅವರು ಯೋಚನೆಯನ್ನು ಮಾಡಿಯೇ ಕೊಟ್ಟಿದ್ದಾರೆ. ಮುಂದಿನ ದಿವಸಗಳಲ್ಲಿ ಇದನ್ನು ಮುಚ್ಚಿ ಹಾಕುವಂತಹ ಪ್ರಯತ್ನ ಆದರೆ ಯಾವುದೇ

ಕಾರಣಕ್ಕೂ ಮುಚ್ಚಿ ಹೋಗಬಾರದು. ಇಡೀ ರಾಜ್ಯದ ಜನತೆಗೆ ಗೊತ್ತಾಗಬೇಕು, ಇವತ್ತು ನಮ್ಮ ಮೇಲೆ ಯಾವ ರೀತಿಯ ಒತ್ತಡಗಳನ್ನು, ಒಬ್ಬ ಪ್ರಮಾಣಿಕ ಅಧಿಕಾರಿಯನ್ನು ಮುಂದೆ ಹೋಗಲಿಕ್ಕೆ ಬಿಡುವುದಿಲ್ಲ, ಯಾವುದೋ ಹಳೆಯ ದ್ವೇಷಗಳನ್ನು ಇಟ್ಟುಕೊಂಡು ಅವರ ಮೇಲೆ ಆರೋಪಗಳನ್ನು ಹೊರಿಸುವಂತಹ ವ್ಯವಸ್ಥೆಯನ್ನು ಮಾಡುತ್ತಾರೆನ್ನುವುದಕ್ಕೋಸ್ಕರ ಅವರು ಮಿಡಿಯಾದೊಳಗಡೆ ಹೋಗಿದ್ದಾರೆಂದು ನನಗೆ ಅನಿಸುತ್ತದೆ. ಈ ವಿಚಾರದಲ್ಲಿ ಸನ್ಮಾನ್ಯ ಉಗ್ರಪ್ಪನವರು ಒಂದು ಮಾತನ್ನು ಹೇಳಿದರು.

**ಶ್ರೀ ಕೆ.ಅಬ್ದುಲ್ ಜಬ್ಬಾರ್:–** ಕಲ್ಲಪ್ಪ ಹಂಡಿಬಾಗ್ ಬಗ್ಗೆ ಸ್ವಲ್ಪ ಹೇಳಿ.

**ಶ್ರೀ ಎಂ.ಕೆ.ಪ್ರಾಣೇಶ್:–** ಸುಮಾರು 20 ವರ್ಷಗಳ ಕಾಲ ಅಧಿಕಾರದಲ್ಲಿದ್ದು, ರಾಜಕಾರಣವನ್ನು ಮಾಡಿದಂತಹವರು ಅವರ ಹೆಸರಿಗೆ ಈ ರೀತಿಯ ಚ್ಯುತಿ ತರುವಂತಹ ವ್ಯವಸ್ಥೆ ಆಗಬಾರದು, ಅವರನ್ನು ಮಂತ್ರಿ ಪದವಿಯಿಂದ ಇಳಿಸಬಾರದು ಎನ್ನುವ ಮಾತನ್ನು ಹೇಳಿದರು. ಆದರೆ, ಗಣಪತಿಯವರು ಸಹ 20 ವರ್ಷಗಳ ಕಾಲ ಈ ಸರ್ಕಾರದೊಳಗೆ ಪ್ರಮಾಣಿಕವಾಗಿ ಕೆಲಸ ಮಾಡಿ, ತಾನು ಸಬ್–ಇನ್ಸ್‌ಪೆಕ್ಟರ್‌ರವರಿಂದ ಸರ್ಕಲ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ರವರಿಂದ ಡಿವೈಎಸ್ಪಿ ಆಗುವುದಕ್ಕೆ ಎಷ್ಟು ಸಮಯವನ್ನು ತೆಗೆದುಕೊಂಡರು? ಅದನ್ನು ಯೋಚನೆ ಮಾಡಬೇಕಲ್ಲವೇ? ಅದರ ಮಧ್ಯೆದೊಳಗೆ ಕೇವಲ 18 ದಿವಸಗಳ ಅವಧಿ ಮಾತ್ರ ಅವರನ್ನು ಅಮಾನತ್ತು ಮಾಡಿದ್ದೇವೆಂದು ನಮ್ಮ ಸ್ನೇಹಿತರು ಹಾಗು ಒಳ್ಳೆಯ ವಾಗ್ಮೀಗಳಾದಂತಹ ಶ್ರೀಮಾನ್ ಉಗ್ರಪ್ಪನವರು ಹೇಳಿದರು. ಸ್ವಾಮಿ, ಅಡಿಕೆ ತಿಂದರೂ ಕಳ್ಳನೆ, ಆನೆ ತಿಂದರೂ ಕಳ್ಳನೆ. ಸಾರ್ವಜನಿಕರು ಏನು ಹೇಳುತ್ತಾರೆ? 18 ದಿವಸ ಅಮಾನತ್ತು ಆದರೆ, ಅದು ಅಮಾನತ್ತು ಅಲ್ಲವೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಸದನಕ್ಕೆ ತಪ್ಪು ಮಾಹಿತಿ ಹೋಗುತ್ತಿದೆ.

(ಗೊಂದಲ)

**ಶ್ರೀ ಎಂ.ಕೆ. ಪ್ರಾಣೇಶ್:–** ಇಲ್ಲಿ ಒಬ್ಬರಿಗೆ ಒಂದು ಕಾನೂನು, ಮತ್ತೊಬ್ಬರಿಗೆ ಒಂದು ಕಾನೂನು ಇಲ್ಲ. ಈ ಸರ್ಕಾರದೊಳಗಡೆ ಖಂಡಿತವಾಗಿಯೂ ಸಹ ಈ ಒಂದು ತನಿಖೆ ಆಗಬೇಕು, ಗಣಪತಿಯವರ ಕುಟುಂಬಕ್ಕೆ ನ್ಯಾಯ ಸಿಗಬೇಕು, ಗಣಪತಿಯವರ ಆತ್ಮಕ್ಕೆ ಶಾಂತಿ ಸಿಗಬೇಕೆಂದರೆ ಪ್ರಮಾಣಿಕವಾಗಿ ಇಲ್ಲಿನ ಈಗಿನ ಗೃಹ ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕು.

**(ಗೊಂದಲ)**

ಇಲ್ಲಾ, ಕ್ಷಮಿಸಿ, ನಾನು ತಮ್ಮ ಕ್ಷಮೆಯನ್ನು ಕೇಳುತ್ತೇನೆ. ಹಿಂದಿನ ಗೃಹ ಮಂತ್ರಿಗಳು ರಾಜೀನಾಮೆಯನ್ನು ಕೊಡಬೇಕು. ಹಾಲಿ ಇರುವಂತಹ ಗೃಹಮಂತ್ರಿಗಳು ಪ್ರಮಾಣಿಕವಾಗಿ ಕೆಲಸವನ್ನು ಮಾಡಿ ಗೃಹ ಮಂತ್ರಿ ಎಂದರೇನು ಇಡೀ ಸಮಾಜಕ್ಕೆ ತೋರಿಸಿಕೊಡುವಂತಹ ಕೆಲಸ ಆಗಬೇಕೆಂದು ಹೇಳುತ್ತಾ, ಈ ತನಿಖೆಯನ್ನು ಮೇಲಾಧಿಕಾರಿಗಳು ಒಬ್ಬ ಸಿಐಡಿ ಅಧಿಕಾರಿಯಿಂದ ಮಾಡಿಸುತ್ತೇವೆಂದರೆ ಮೇಲಾಧಿಕಾರಿಗಳ ತನಿಖೆಯನ್ನು ಕೆಳ ಅಧಿಕಾರಿಗಳು ಮಾಡಲಿಕ್ಕೆ ಸಾಧ್ಯವೇ? ಖಂಡಿತವಾಗಿಯೂ ಸಾಧ್ಯವಿಲ್ಲ. ಇದನ್ನು ಸಿಬಿಐಗೆ ಕೊಡಬೇಕೆನ್ನುವ ಒತ್ತಾಯದೊಂದಿಗೆ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳು.

**ಶ್ರೀಮತಿ ಮೋಟಮ್ಮ:–** ಇವರು ಕಲ್ಲಪ್ಪ ಹಂಡಿಬಾಗ್ ರವರ ಬಗ್ಗೆ ಮಾತನಾಡಲೇ ಇಲ್ಲ.

**(ಗೊಂದಲ)**

**ಸಭಾಪತಿಯವರು:–** ಈಗ ಸಚಿವರಾದ ಶ್ರೀಯುತ ಜಾರ್ಜ್‌ರವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಕೆ.ಜೆ.ಜಾರ್ಜ್:–** ಸನ್ಮಾನ್ಯ ಸಭಾಪತಿಯವರೆ,

**ಶ್ರೀ ಎಂ.ಕೆ.ಪ್ರಾಣೇಶ್:–** ಆ ವಿಷಯ ನನ್ನ ಜಿಲ್ಲೆಗೆ ಸಂಬಂಧಪಟ್ಟಿದ್ದಾಗಿದ್ದು, ಕಲ್ಲಪ್ಪ ಹಂಡಿಬಾಗ್‌ನವರು ಏನು ಆತ್ಮಹತ್ಯೆ ಮಾಡಿಕೊಂಡಿದ್ದರು, ಅದರ ಬಗ್ಗೆ ಪ್ರಮಾಣಿಕ ತನಿಖೆಯಾಗಬೇಕು, ಅದನ್ನು ಸಿಐಡಿ ತನಿಖೆಗೆ ಹಾಕುತ್ತೀರೋ, ಸಿಬಿಐ ತನಿಖೆಗೆ ಹಾಕುತ್ತೀರೋ ಅವರ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಕಲ್ಲಪ್ಪ ಹಂಡಿಬಾಗ್ ರವರ ವಿಚಾರದಲ್ಲಿ ಆಡಳಿತ ಪಕ್ಷದವರಾದ ನೀವು ಅವರನ್ನು ಏತಕ್ಕೆ ಕೇಳುತ್ತಿದ್ದೀರಿ. ನೀವು ಈ ಬಗ್ಗೆ ಕ್ರಮ ತೆಗೆದುಕೊಳ್ಳಿ. ಇದರಲ್ಲಿ ಯಾರ ಕೈವಾಡ ಇದೆ ಅವರನ್ನು ಸಸ್ಪೆಂಡ್ ಮಾಡಿ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ನಾವುಗಳೇ ಅಪರಾಧಿ ಎನ್ನುವುದಾದರೆ, ನಾನು ಇಲ್ಲಿಯೇ ಇವತ್ತೇ ರಾಜೀನಾಮೆಯನ್ನು ಸಭಾಪತಿಯವರಿಗೆ ಕೊಟ್ಟು, ಹೊರಗಡೆ ಹೋಗುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಈಗ ಸಚಿವರಾದ ಶ್ರೀಯುತ ಜಾರ್ಜ್‌ರವರು ಮಾತನಾಡುತ್ತಾರೆ. ಅವರು ನನ್ನ ಹೆಸರು ಪ್ರಸ್ತಾಪವಾಗಿದೆ, ನನಗೆ ಈ ಬಗ್ಗೆ ಕ್ಲಾರಿಫಿಕೇಷನ್ ಮಾಡಲಿಕ್ಕೆ ಸ್ವಲ್ಪ ಸಮಯ ಕೊಡಿ ಎಂದು ನನಗೆ ಒಂದು . . .

**(ಗೊಂದಲ)**

**ಶ್ರೀ ಪುಟ್ಟಣ್ಣ:–** ನೋಡಿ, ಅದನ್ನೆಲ್ಲಾ ಅವರು ಮಾಡಿಕೊಂಡಿದ್ದರಿಂದಲೇ ನೀವು ಆ ಕಡೆ ಬಂದಿರುವುದಾಗಿದೆ. ಇದು ನಿಜ ತಾನೆ? ಇವರು ಮಾಡಿದ ತಪ್ಪುಗಳಿಂದ ನೀವು ಅ ಕಡೆ ಕುಳಿತಿದ್ದೀರಿ. ಇದು ನಿಜ ಅಲ್ಲವೇ? ಮತ್ತೆ ನೀವು ಏತಕ್ಕೆ ತಪ್ಪುಗಳನ್ನು ಮಾಡುತ್ತೀರಿ.? ನೀವು ಈ ಕಡೆ ಬರಲಿಕ್ಕೆ ಇಷ್ಟವೇ?

**(ಗೊಂದಲ)**

**ಸಭಾಪತಿಯವರು:–** ಸಚಿವರಾದ ಶ್ರೀಯುತ ಜಾರ್ಜ್‌ರವರು ಮಾತನಾಡಲಿ.

**ಶ್ರೀ ಕೆ.ಜೆ.ಜಾರ್ಜ್(ಬೆಂಗಳೂರು ಅಭಿವೃದ್ಧಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಸುಮಾರು ಎರಡು ದಿವಸಗಳಿಂದ ಈ ಸದನದಲ್ಲಿ ಸನ್ಮಾನ್ಯ ಗಣಪತಿ ಅವರ ಆತ್ಮಹತ್ಯೆ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಸುದ್ದಿ ತಿಳಿದ ಕೂಡಲೇ ನಾನು ಮಾಧ್ಯಮದವರಿಗೆ ಹೇಳಿದೆ, 'ಇದು ನನಗೆ ನೋವಾಗಿದೆ, ಬಹುಶಃ ನಮ್ಮ ರಾಜ್ಯ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಂತಹ ಅಂತಹ ಒಬ್ಬ ಡಿವೈಎಸ್ಪಿ ಅವರು ಆತ್ಮಹತ್ಯೆ ಮಾಡಿಕೊಳ್ಳಬಾರದಾಗಿತ್ತು. ಆದರೆ ದುರಾದೃಷ್ಟವಶಾತ್ ಆಗಿದೆ, ಅವರ ಕುಟುಂಬ ವರ್ಗದವರಿಗೆ ಈ ಒಂದು ನಷ್ಟವನ್ನು ಸಹಿಸಿಕೊಳ್ಳುವುದಕ್ಕೆ ದೇವರು ಶಕ್ತಿ ಕೊಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ' ಎಂದು ನಾನು ಈಗಾಗಲೇ ಹೇಳಿದ್ದೇನೆ. ಸನ್ಮಾನ್ಯ ಸಭಾಪತಿಯವರೇ, ನಾನು 1989ನೇ ಇಸವಿಯಲ್ಲಿ ಸಚಿವನಾಗಿದ್ದಾಗ ತಾವು ಈ ಸದನದಲ್ಲಿದ್ದಿರಿ. ಮಾನ್ಯ ರಾಮಚಂದ್ರಗೌಡರು ಶ್ರೀ ಬಿ.ಜೆ.ಪುಟ್ಟಸ್ವಾಮಿಯವರು ಸಹ ಈ ಸದನದ ಸದಸ್ಯರಾಗಿದ್ದಿರಬಹುದು. ಮಾನ್ಯ ಕೆ.ಬಿ.ಶಾಣಪ್ಪನವರು ಆ ಸಂದರ್ಭದಲ್ಲಿ ಲೋಕಸಭಾ ಸದಸ್ಯರಾಗಿದ್ದರು. ನಾನು 1969ನೇ ಇಸವಿಯಲ್ಲಿ ಕೊಡಗಿನಲ್ಲಿ ನನ್ನ ರಾಜಕೀಯ ಜೀವನವನ್ನು ಪ್ರಾರಂಭ ಮಾಡಿದೆ. ಆ ಸಂದರ್ಭದಲ್ಲಿ ಬಿ.ಜೆ.ಪಿ. ಎನ್ನುವಂತಹ ಪಕ್ಷ ಇರಲಿಲ್ಲ, ಜನಸಂಘ ಎನ್ನುವುದಿತ್ತು. ಬಹುಶಃ ಅವತ್ತು ಶ್ರೀ ಎ.ಕೆ.ಸುಬ್ಬಯ್ಯನವರು ಕೊಡಗಿನಲ್ಲಿ ಜನಸಂಘದ ನಾಯಕರಾಗಿದ್ದರು. ಯುವ ಕಾಂಗ್ರೆಸ್‌ನ ಸದಸ್ಯನಾಗಿ ನಾನು ಸಹ ನಮ್ಮ ಪಕ್ಷವನ್ನು ಸಂಘಟನೆ ಮಾಡುತ್ತಿದ್ದೆ. ನಮ್ಮ ಪಕ್ಷದ ಡಿ.ಸಿ.ಸಿ. ಅಧ್ಯಕ್ಷರಾಗಿ ಶ್ರೀ ಎ.ಆರ್.ಬೆಳ್ಳಿಯಪ್ಪನವರಿದ್ದರು. ಸನ್ಮಾನ್ಯ ಆರ್.ಗುಂಡೂರಾವ್ ಅವರು ಸಹ ನಮ್ಮ ಕೊಡಗಿನಿಂದ ಬಂದವರು. ಶ್ರೀ ಎ.ಕೆ.ಸುಬ್ಬಯ್ಯ ಅವರು ಸಹ ಇದ್ದರು. ಅವರೆಲ್ಲರ ಒಡನಾಟದಿಂದ ನಾನು ಹಂತಹಂತವಾಗಿ

ರಾಜಕೀಯದಲ್ಲಿ ಬೆಳೆದುಬಂದೆ. ನಾನು ರಾಜಕೀಯಕ್ಕೆ ಬರುವಾಗ ಬಹುಶಃ ಎಂ.ಎಲ್.ಎ. ಆಗುತ್ತೇನೆ, ಮಂತ್ರಿಯಾಗುತ್ತೇನೆ ಎಂದು ಕನಸು ಮನಸ್ಸಿನಲ್ಲಿಯೂ ಸಹ ನೆನೆಸಿರಲಿಲ್ಲ. ಏಕೆಂದರೆ ನನ್ನ ಕುಟುಂಬದಲ್ಲಿ ಯಾರೂ ಸಹ ರಾಜಕೀಯದ ಪರಂಪರೆಯಿಂದ ಬಂದವರಿರಲಿಲ್ಲ. ತಮಗೆ ಗೊತ್ತಿದೆ, ಕೊಡಗಿನ ಯುವಕನಾಗಿ ಎಲ್ಲರೊಟ್ಟಿಗೆ ಬದುಕಿ ನಾನು ನನ್ನ ರಾಜಕೀಯ ಜೀವನವನ್ನು ಪ್ರಾರಂಭ ಮಾಡಿದೆ. ನಂತರ ಬೆಂಗಳೂರಿಗೆ ಬಂದೆ, 1983ನೇ ಇಸವಿಯಲ್ಲಿ ಚುನಾವಣೆಗೆ ಸ್ಪಧಿಸಿದೆ. ಮೈಕೆಲ್ ಫರ್ನಾಂಡೀಸ್‌ರವರು ಎಂ.ಎಲ್.ಎ. ಆಗಿದ್ದರು. ಅವರ ವಿರುದ್ಧವಾಗಿ ಭಾರತೀ ನಗರದಲ್ಲಿ ಸ್ಪರ್ಧಿಸಿ ನಾನು 5000 ಮತಗಳಲ್ಲಿ ಪರಾಜಿತನಾದೆ. ನಂತರ 1985ನೇ ಇಸವಿಯಲ್ಲಿ ಅದೇ ಮೈಕೆಲ್ ಫರ್ನಾಂಡೀಸ್‌ರವರ ವಿರುದ್ಧ ಸ್ಪರ್ಧಿಸಿ ನಾನು 5000 ಮತಗಳ ಅಂತರದಿಂದ ಸೋಲಿಸಿದೆ. 1989ನೇ ಇಸವಿಯಲ್ಲಿ ಸನ್ಮಾನ್ಯ ವೀರೇಂದ್ರ ಪಾಟೀಲ್‌ರವರ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಸಾರಿಗೆ ಸಚಿವನಾಗಿ ನಾನು ಕಾರ್ಯನಿರ್ವಹಿಸಿದ್ದೇನೆ. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಸಾರಿಗೆ ಇಲಾಖೆ ಸಾಕಷ್ಟು ಅಧಿಕಾರಿಗಳು ಮತ್ತು ನೌಕರರು ಕಾರ್ಯನಿರ್ವಹಿಸುವಂತಹ ಒಂದು ಸಂಸ್ಥೆ ಎಂಬುದು ತಮಗೂ ಸಹ ಗೊತ್ತಿದೆ. ನಂತರ ನಗರಾಭಿವೃದ್ಧಿ ಸಚಿವನಾಗಿ ಸನ್ಮಾನ್ಯ ಬಂಗಾರಪ್ಪನವರ ಸಚಿವ ಸಂಪುಟದಲ್ಲಿ ಕೆಲಸ ಮಾಡಿದ್ದೇನೆ, ಒಂದು ಸಂದರ್ಭದಲ್ಲಿ ನಗರಾಭಿವೃದ್ಧಿ ಇಲಾಖೆಯ ಜೊತೆಗೆ ಸಾರಿಗೆ ಇಲಾಖೆಯ ಸಚಿವನಾಗಿ ಕೂಡ ಕೆಲಸ ನಿರ್ವಹಿಸಿದ್ದೇನೆ. ನಂತರ ಈ ಸರ್ಕಾರದಲ್ಲಿ ಈ ಮೊದಲು ಸುಮಾರು ಎರಡೂವರೆ ವರ್ಷಗಳ ಕಾಲ ಗೃಹ ಸಚಿವನಾಗಿ ಕಾರ್ಯನಿರ್ವಹಿಸಿ ಈಗ ಬೆಂಗಳೂರು ಅಭಿವೃದ್ಧಿ ಸಚಿವನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಟಿ.ವಿ. ಸಂದರ್ಶನವನ್ನು ನೋಡಿದ ಸಂದರ್ಭದಲ್ಲಿ ನನಗೂ ಬಹಳ ಆಘಾತವಾಯಿತು. ಗಣಪತಿಯವರು ಆ ಸಂದರ್ಶನದಲ್ಲಿ ನನ್ನ ಬಗ್ಗೆ ಎರಡು ವಿಚಾರಗಳನ್ನು ತಿಳಿಸಿದ್ದಾರೆ. ಜಾರ್ಜ್ ಅವರು ಗೃಹಮಂತ್ರಿಯಾಗಿದ್ದಾಗ, ಸುಮಾರು 8 ವರ್ಷಗಳ ಮೊದಲು ಅಂದರೆ, 2008ರಲ್ಲಿ ಚರ್ಚ್ ಪ್ರಕರಣ ಆಗಿದೆ, ಇವರು ಮಂಗಳೂರಿಗೆ ಹೋಗಿದ್ದರು, ಅಲ್ಲಿ ಕ್ರೈಸ್ತ ಲೀಡರ್‌ಗಳೆಲ್ಲಾ ನನ್ನ ವಿಚಾರವನ್ನು ಜಾರ್ಜ್ ಅವರಿಗೆ ಹೇಳಿದರು. ನಂತರ ಇವರು ನನ್ನ ಮೇಲೆ ದ್ವೇಷ ಮತ್ತು ಸೇಡಿನಿಂದಾಗಿ ಇದನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಮಂಗಳೂರಿಗೆ ಹೋಗಿದ್ದು ನಿಜ, ಜೂನ್ 18ನೇ ತಾರೀಖಿನಂದು ನಾನು ಉಡುಪಿಗೆ ಹೋಗಿದ್ದೆ, ನಂತರ 19ನೇ ತಾರೀಖು ನಾನು ಮಂಗಳೂರಿಗೂ ಹೋಗಿದ್ದೆ. ಅಂದಿನ ನನ್ನ ಪ್ರವಾಸ ಕಾರ್ಯಕ್ರಮ ಈ ರೀತಿ ಇತ್ತು.

"ಮಂಗಳೂರಿನ ಆರ್ಚ್ ಬಿಷಪ್ ಅವರ ಮನೆಗೆ ಭೇಟಿ ಕೊಟ್ಟು, ಬೆಳಿಗ್ಗೆ 8:00 ಗಂಟೆಗೆ ಅವರ ಜೊತೆಯಲ್ಲಿ ಬೆಳಗಿನ ಉಪಹಾರವನ್ನು ಸ್ವೀಕರಿಸಿದೆ. ನಂತರ ಉಳ್ಳಾಲ ದರ್ಗಕ್ಕೆ ಭೇಟಿ ಕೊಟ್ಟೆ, ನಂತರ ಕುದ್ರೋಳಿ ಗೋಕರ್ಣನಾಥ ದೇವಸ್ಥಾನಕ್ಕೆ ಭೇಟಿ ಕೊಟ್ಟಿದ್ದೆ. ನಂತರ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಭೇಟಿ, ಕಾಂಗ್ರೆಸ್ ಕಾರ್ಯಕರ್ತರೊಡನೆ ಚರ್ಚೆ. ಜನಪ್ರತಿನಿಧಿಗಳೊಡನೆ ಅನೌಪಚಾರಿಕ ಭೇಟಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿ. ಪೊಲೀಸ್ ಕಮೀಷನರ್, ಅಧೀಕ್ಷಕರ ಕಛೇರಿ ಭೇಟಿ. ಪತ್ರಿಕಾ ಸಂದರ್ಶನ"

ಇವಿಷ್ಟೂ ಆ ದಿನದ ಕಾರ್ಯಕ್ರಮಗಳಾಗಿದ್ದವು. ತದನಂತರ ನಾನು ಬೆಂಗಳೂರಿಗೆ ಬಂದಿದ್ದು, ಬರುವಾಗ ನನಗೆ ಯಾರೂ ಗಣಪತಿಯವರ ವಿಚಾರವನ್ನು ಹೇಳಲಿಲ್ಲ. ಸೆಪ್ಟೆಂಬರ್‌ನಲ್ಲಿ ಗಣಪತಿಯವರಿಗೆ ರಾಜಗೋಪಾಲನಗರ ಪೊಲೀಸ್ ಠಾಣೆಗೆ ಪೋಸ್ಟಿಂಗ್ ಆಯಿತು. ನಾನು ಕೇಳುವುದೇನೆಂದರೆ, ನನಗೇನಾದರೂ ದ್ವೇಷ ಇದ್ದಿದ್ದರೆ ಅಥವಾ ಅವರ ಮೇಲೆ ಸಿಟ್ಟಿದ್ದಿದ್ದರೆ ಅಥವಾ ನನ್ನ ಕ್ರೈಸ್ತ ನಾಯಕರು ಅವರ ಬಗ್ಗೆ ನನಗೆ ಹೇಳಿದ್ದರೆ ಅವರಿಗೆ ಆ ಒಂದು ಪೋಸ್ಟಿಂಗ್, ಎಲ್ಲರಿಗೂ ಗೊತ್ತಿದೆ, ಮಾನ್ಯ ಸೋಮಣ್ಣನವರಿಗೂ ಗೊತ್ತು. ರಾಜಗೋಪಾಲನಗರ ಪೊಲೀಸ್ ಠಾಣೆಗೆ executive post ಕೊಟ್ಟಿದ್ದೇವೆ. ಇದಕ್ಕಿಂತ ಮೊದಲು ಅವರು ಮಂಗಳೂರಿನಿಂದ ಯಶವಂತಪುರ ಪೊಲೀಸ್ ಠಾಣೆಗೆ ಪೋಸ್ಟಿಂಗ್ ಆಗಿದ್ದರು. ಯಶವಂತಪುರದಲ್ಲಿ ಪೋಸ್ಟಿಂಗ್ ಆದಾಗ ಒಂದು ಎನ್‌ಕೌಂಟರ್ ಆಗಿತ್ತು. ನಂತರ ಅದರ ಬಗ್ಗೆ ಏನೋ ಒಂದು ತನಿಖೆ ಕೂಡ ಆಗಿದೆ. ಅದೇ ರೀತಿ ಮಡಿವಾಳ ಪೊಲೀಸ್ ಠಾಣೆಯಲ್ಲಿದ್ದಾಗಲೂ ಸಹ ಅವರ ಮೇಲೆ ಏನೋ ಒಂದು ತನಿಖೆ ಆಗಿತ್ತು. ಅದು ನಾನು ಗೃಹ

ಸಚಿವನಾಗಿದ್ದ ಸಂದರ್ಭದಲ್ಲಿ ಅಲ್ಲ. ಇದೆಲ್ಲಾ ಇದ್ದರೂ ರಾಜಗೋಪಾಲನಗರ ಪೊಲೀಸ್ ಠಾಣೆಯಲ್ಲಿ ಸುಮಾರು 6 ತಿಂಗಳಷ್ಟು ಕಾಲ ಕೆಲಸ ನಿರ್ವಹಿಸಿದ್ದಾರೆ. ಆ ರೀತಿ ಕೆಲಸ ಮಾಡುತ್ತಿದ್ದಾಗ ಏನಾಯಿತು, ಆ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಔರಾದ್‌ಕರ್‌ರವರು ಪೊಲೀಸ್ ಕಮಿಷನರ್ ಆಗಿದ್ದರು, ಅವರು ಇವರನ್ನು ಯಾವುದೋ ಒಂದು ಖಾಸಗಿ ದೂರಿನ ಮೇಲೆ ಸಸ್ಪೆಂಡ್ ಮಾಡಿದ ನಂತರ 'ಸರ್ ನಾನು ಇನ್ಸ್‌ಪೆಕ್ಟರ್ ಗಣಪತಿಯವರನ್ನು ಸಸ್ಪೆಂಡ್ ಮಾಡಿದ್ದೇನೆ' ಎಂದು ನನಗೆ ಬಂದು ಹೇಳಿದರು.

ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿದೆ. ಇಲ್ಲಿಯವರೆಗೆ ನಾನು ಯಾವುದೇ ಇಲಾಖೆಯ ಸಚಿವನಾದಾಗ ಕೂಡ ಶಿಸ್ತಿನ ವಿಚಾರದಲ್ಲಿ ಒಂದು ದಿನ ಕೂಡ ನಾನು ಮಧ್ಯಪ್ರವೇಶ ಮಾಡಿದವನಲ್ಲ. ಹೀಗಾಗಿ ಪೊಲೀಸ್ ಕಮಿಷನರ್‌ರವರು ನನಗೆ ಬಂದು ಹೇಳಿದಾಗ 'ಆಯಿತು, ಅದು ಕಮಿಷನರ್ ಅವರಿಗೆ ಬಿಟ್ಟಂತಹ ವಿಚಾರ' ಎಂದು ಹೇಳಿದೆ. ಸುಮಾರು ಒಂದು ವಾರದ ನಂತರ ಇರಬಹುದು, ಬಹುಶಃ ನನಗೆ ಅದು ಅಷ್ಟು ಸರಿಯಾಗಿ ನೆನಪಿಲ್ಲ, ಗಣಪತಿಯವರು ನನ್ನ ಹತ್ತಿರ ಬಂದು 'ಸರ್, ನನಗೆ suspension ಆಗಿದೆ, ದಯವಿಟ್ಟು ಅದನ್ನು revoke ಮಾಡಬೇಕು' ಎಂದು ಕೇಳಿಕೊಂಡರು. ಆ ಸಂದರ್ಭದಲ್ಲಿ ನಾನು ಗಣಪತಿಯವರಿಗೆ 'ನೋಡಿ, ನಾನು ಯಾವಾಗಲೂ ಶಿಸ್ತಿನ ವಿಚಾರದಲ್ಲಿ, disciplinary action ವಿಚಾರದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ, ನಾನು ಗೃಹ ಸಚಿವ, ನೀವು ಏನಾದರೂ ಹೇಳುವುದಿದ್ದರೆ ಎನ್‌ಕ್ವೈರಿ ಆಫೀಸರ್ ಇರುತ್ತಾರೆ, ಅವರ ಹತ್ತಿರ ಹೋಗಿ ನಿಮ್ಮ ದಾಖಲೆಗಳು, ನಿಮ್ಮ ವಿಚಾರಗಳೇನಾದರೂ ಇದ್ದರೆ ಅಲ್ಲಿ ಹೋಗಿ ಹೇಳಿ' ಎಂದು ತಿಳಿಸಿದೆ. ಅವರು ಅಲ್ಲಿಂದ ಹೋಗುತ್ತಾರೆ. ಅದೇ ನಾನು ಕೊನೆಯದಾಗಿ ಅವರನ್ನು ಭೇಟಿ ಮಾಡಿದ್ದು. ನಂತರ ಅವರ ವಿಚಾರ ಏನಾಯಿತು, ಎಲ್ಲಿ ಪೋಸ್ಟಿಂಗ್ ಆಯಿತು ಎನ್ನುವುದು ಗೊತ್ತಾಗಲಿಲ್ಲ. ಸುಮಾರು 2000 ಜನ ಇನ್ಸ್‌ಪೆಕ್ಟರ್‌ಗಳು ನಮ್ಮ ರಾಜ್ಯದಲ್ಲಿದ್ದಾರೆ. ಎಲ್ಲಾ ಇನ್ಸ್‌ಪೆಕ್ಟರ್‌ಗಳ ವೈಯಕ್ತಕ ಪರಿಚಯ ನನಗಿಲ್ಲ, ಅದೇರೀತಿ ಗಣಪತಿಯವರ ಪರಿಚಯ ಕೂಡ ನನಗಿರಲಿಲ್ಲ. ಕೆಲವರೆಲ್ಲಾ ಇದ್ದಾರೆ, ಗಣಪತಿ ಎನ್ನುವ ಇನ್ನೊಬ್ಬರು ಪೊಲೀಸ್ ಅಧಿಕಾರಿ ಬೆಂಗಳೂರಿನಲ್ಲಿದ್ದರು. ಅವರು ಬಹಳ ದಕ್ಷ ಅಧಿಕಾರಿಯಾಗಿ, ಬಹಳ ಒಳ್ಳೆಯ ಪ್ರಸಿದ್ಧಿ ಪಡೆದು ಎಸ್ಪಿ ಆಗಿ ನಿವೃತ್ತರಾದರು. ಉತ್ತಪ್ಪನವರು ಅಂತಹ ಕೆಲವರೆಲ್ಲಾ ಇದ್ದರು, ಅವರ ಪರಿಚಯ ಮೊದಲಿನಿಂದಲೂ ಇತ್ತು. ನನ್ನ ಮತಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿರುವಂತಹ ಇನ್ಸ್‌ಪೆಕ್ಟರ್‌ಗಳ ಪರಿಚಯ ಇತ್ತು, ಬೇರೆಯವರ ಪರಿಚಯ ಸ್ವಲ್ಪ ಕಡಿಮೆ.

ಟಿ.ವಿ.ಯಲ್ಲಿ ಗಣಪತಿಯವರ ಸಂದರ್ಶನ ಬಂದ ಮೇಲೆ ಕೆಲವು ದಾಖಲೆಗಳನ್ನು ತೆಗೆಸಿದೆ. ದಿನಾಂಕ:10.03.2014ರಲ್ಲಿ ಅವರು suspension ಆದಮೇಲೆ ದಿನಾಂಕ:09.04.2014ರಲ್ಲಿ ಅವರ suspension revoke ಆಗುತ್ತದೆ, ಅವರ ಕೇಸ್ ಕ್ಲೋಸ್ ಆಗುತ್ತದೆ. ಅಂದರೆ, ಒಂದೇ ಒಂದು ತಿಂಗಳು ಅವರು ಅಮಾನತ್ತಿನಲ್ಲಿದ್ದರು, ಆ ಒಂದು ತಿಂಗಳಲ್ಲಿ ಸಹಿತ ನಾನು ಎನ್‌ಕ್ವೈರಿ ಮಾಡಲಿಲ್ಲ, ಎನ್‌ಕ್ವೈರಿ ಆಫೀಸರ್ ಜೊತೆಯಲ್ಲಿಯೂ ಮಾತನಾಡಲಿಲ್ಲ, ಯಾರಿಗೂ ಮಾತನಾಡಲಿಲ್ಲ. ಪೊಲೀಸ್ ಕಮಿಷನರ್‌ರವರೇ ಆ ಕೇಸ್ ಕ್ಲೋಸ್ ಮಾಡಿ ಅವರನ್ನು ಮತ್ತೆ ರಿವೋಕ್ ಮಾಡಿದರು.

ನನ್ನ ಮೇಲೆ ಅವರು ಮಾಡಿರುವ ಇನ್ನೊಂದು ಆರೋಪ, ಅವರ ಪ್ರಮೋಷನ್ ಅನ್ನು ನಾನು ತಡೆಹಿಡಿದೆ ಎನ್ನುವುದಾಗಿದೆ. ಆ ಪ್ರಮೋಷನ್ ಫೈಲೇ ನನಗೆ ಬರಲಿಲ್ಲ. ಸಾಕಷ್ಟು ಜನರ ಪ್ರಮೋಷನ್ ಫೈಲ್‌ಗಳು ನನಗೆ ಬಂದಿದೆ. ಆ ರೀತಿ ಯಾವುದೇ ಆಫೀಸರ್ ಪ್ರಮೋಷನ್ ಫೈಲ್ ಬಂದರೆ, ತಕ್ಷಣವೇ ನಾನು ಅದನ್ನು ಕ್ಲಿಯರ್ ಮಾಡಿಕೊಟ್ಟಿದ್ದೇನೆ. ಇದು ಪ್ರತಿಯೊಬ್ಬ ಪೊಲೀಸ್ ಅಧಿಕಾರಿಗೂ ಗೊತ್ತಿದೆ. ಇವರ ಫೈಲ್ ಏಕೆ ಬರಲಿಲ್ಲ ಎಂದು ಕೇಳಿದರೆ, ಡಿಪಾರ್ಟ್‌ಮೆಂಟ್‌ನಲ್ಲಿ ಯಾವುದಾದರೂ ಎನ್‌ಕ್ವೈರಿಗಳು, ಅದು ಎನ್‌ಕೌಂಟರ್ ಇರಬಹುದೋ ಏನೋ ನನಗೆ ಗೊತ್ತಿಲ್ಲ, ಬಹುಶಃ ನಮ್ಮ ಗೃಹ ಮಂತ್ರಿಗಳು ಪರಿಶೀಲನೆ ಮಾಡಿದರೆ ಅದು ಯಾವ ಎನ್‌ಕ್ವೈರಿ ಎನ್ನುವುದು ಗೊತ್ತಾಗುತ್ತದೆ. ಯಾವ ಕಾರಣಕ್ಕಾಗಿ ಅವರ ಪ್ರಮೋಷನ್ ಫೈಲ್ ನನಗೆ ಬರಲಿಲ್ಲ ಎನ್ನುವುದು ಗೊತ್ತಿಲ್ಲ, ಆದರೆ ಅದು ನನಗೆ ಬರಲಿಲ್ಲ. ಡಿ.ಪಿ.ಸಿ. ಮಾಡಬೇಕಾದರೆ, ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಪೆಂಡಿಂಗ್ ಇದ್ದರೆ ಅವರ ಎನ್‌ಕ್ವೈರಿ ಕ್ಲಿಯರ್ ಆಗುವವರೆಗೆ ಪ್ರಮೋಷನ್ ಫೈಲ್ ಬರುವುದಿಲ್ಲ. ಆದರೆ ನನ್ನ ಕಾಲದಲ್ಲಿ ಆಗಿದ್ದು ಕ್ಲಿಯರ್ ಆಗಿತ್ತು. ಹಳೆಯದೇನಾದರೂ ಪೆಂಡಿಂಗ್

ಇದ್ದಿರಬಹುದುದೇನೋ, ನನ್ನ ಟೈಮ್‌ನಲ್ಲಿ ಅವರ ಪ್ರಮೋಷನ್ ಫೈಲ್ ನನಗೆ ಬರಲಿಲ್ಲ. ಇವತ್ತು ನಾನೇನಾದರೂ ತಪ್ಪು ಮಾಡಿದ್ದರೆ, ಅವರ ಟಿ.ವಿ. ಸಂದರ್ಶನವನ್ನು ನಾನು ನೋಡಿದೆ. ಅವರು ನೇರವಾಗಿ ಯಾವುದೇ ವಿಚಾರವನ್ನು ನನ್ನ ಮೇಲೆ ಹೇಳಲಿಲ್ಲ. ಅವರು ಏನು ಹೇಳಿದರೆಂದರೆ, ನನಗೆ ಕಿರುಕುಳ ಕೊಟ್ಟರು, ಚರ್ಚ್ ಪ್ರಕರಣದಲ್ಲಿ ಕಿರುಕುಳ ಕೊಟ್ಟರು, ಪ್ರಮೋಷನ್ ವಿಚಾರದಲ್ಲಿ ಕಿರುಕುಳ ಕೊಟ್ಟರು ಎನ್ನುವಂತಹ ಎರಡು ವಿಚಾರವನ್ನು ತಿಳಿಸಿದ್ದಾರೆ. ಆ ಎರಡು ವಿಚಾರಗಳಲ್ಲಿ ಸಹ ನಾನು ಇವತ್ತು ವಿವರಣೆ ಕೊಟ್ಟಿದ್ದೇನೆ.

ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ತಿಳಿಸುತ್ತೇನೆ, ತಮಗೂ ಗೊತ್ತಿದೆ. ನಾನು ಮಂತ್ರಿಯಾಗಿದ್ದಾಗ ಯಾವ ರೀತಿ ಕೆಲಸ ನಿರ್ವಹಿಸಿದ್ದೇನೆ ಎನ್ನುವುದನ್ನು ತಾವು ಸಹ ನೋಡಿದ್ದೀರಿ. ನಾನು ಮಂತ್ರಿಯಾದ ಅವಧಿಯ ನಂತರದಲ್ಲಿ ಸುಮಾರು 14 ವರ್ಷ legislature ನಲ್ಲಿ ಇರಲಿಲ್ಲ. ಬಹುಶಃ ಆ ಸಮಯದಲ್ಲಿ ನಾನು ಪಕ್ಷದಲ್ಲಿ ಕೆಲಸ ಮಾಡಿದ್ದೇನೆ. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಎಲ್ಲರಜೊತೆಗೆಅಂದರೆ ಮಾನ್ಯ ಎಸ್.ಎಂ.ಕೃಷ್ಣಾರವರ ಜೊತೆ, ಮಾನ್ಯ ಧರ್ಮಸಿಂಗ್‌ರವರ ಜೊತೆಯಲ್ಲಿ ಮಾನ್ಯ ಪೂಜಾರಿ ಅವರ ಜೊತೆಯಲ್ಲಿ, ಮಾನ್ಯರಂಗನಾಥ್ ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಈ ರೀತಿ ನಾನು ಪಕ್ಷದಲ್ಲಿ ಹೆಚ್ಚಾಗಿ ಕೆಲಸ ಮಾಡಿದ್ದೇನೆ.ಆದರೆ 14 ವರ್ಷ ಕಾರಣಾತರಗಳಿಂದ ನನಗೆ ಟಿಕೇಟ್‌ಕೊಡಲಿಲ್ಲ, ನಾನು ಅದಾದಮೇಲೆ 2008ರಲ್ಲಿ ಎಂ.ಎಲ್.ಎ. ಆಗಿ ಬಂದು ಈಗ ಕೆಲಸ ಮಾಡುತ್ತಿದ್ದೇನೆ. ನಾನು ಯಾವಾಗಲೂ ಅಧಿಕಾರಕ್ಕೆ ಅಂಟಿಕೊಂಡವನಲ್ಲ, ಅಧಿಕಾರ ಇವತ್ತು ಬರುತ್ತದೆ, ನಾಳೆ ಹೋಗುತ್ತದೆ. ಇದು ಶಾಶ್ವತವಲ್ಲಎಂದು ತಿಳಿದುಕೊಂಡೇ ನಾನು ನನ್ನ ಕೆಲಸ ಮಾಡುತ್ತಿದ್ದೇನೆ. ನನ್ನ ಕೆಲಸದಲ್ಲಿ ನಿಷ್ಠಾವಂತ ಅಧಿಕಾರಿಗಳಿಗೆ ಯಾವಾಗಲೂ ನಾನು ಬೆಂಬಲ ಕೊಟ್ಟಕೊಂಡೇ ಬಂದಿದ್ದೇನೆ, ಅದೇರೀತಿಯಾರೇ ಭ್ರಷ್ಟ ಅಧಿಕಾರಿಗಳಿದ್ದರೆ ಅವರ ಮೇಲೆ ನಿರ್ಧಾಕ್ಷ್ಯಣ್ಯವಾಗಿ ಕ್ರಮ ಜರುಗಿಸುವುದಕ್ಕೆ ನಾನು ಹಿಂಜರಿಯುವುದಿಲ್ಲ. ಅದು ತಮಗೂ ಸಹ ತಿಳಿದಿದೆ.ಯಾರೇಒಬ್ಬಅಧಿಕಾರಿ ಬೆಂಗಳೂರಿನಲ್ಲಿ ಎಗ್ಸಿಕ್ಯೂಟೀವ್‌ನಲ್ಲಿ 5 ವರ್ಷಗಳ ಕಾಲ ಕೆಲಸ ಮಾಡಿದಂಥವರುಅಲ್ಲಿಇರಬಾರದುಎಂದು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದಾಗಅವರುಅದನ್ನುಒಪ್ಪಿದಾಗ ನಾವು ಬೆಂಗಳೂರಿನಲ್ಲಿ ಯಾರ್‍ಯಾರು 5 ವರ್ಷಗಳಿಗಿಂತ ಜಾಸ್ತಿ ಕೆಲಸ ಮಾಡುತ್ತಿದ್ದರುಅವರೆಲ್ಲರನ್ನೂ ಬೆಂಗಳೂರಿನಿಂದ ಹೊರಗಡೆ ಕಳುಹಿಸುವಂತಹ ಕೆಲಸ ಮಾಡಿದ್ದೇವೆ. ಪ್ರತಿಯೊಂದು ವಿಚಾರದಲ್ಲಿಯೂ ಸಹ. ನಾನು ಮೊದಲನೇ ಅಧಿಕಾರಿಗಳ ಸಭೆಯಲ್ಲಿ ಹೇಳಿದೆ; rank is important, post is not important.ನಮಗೆ ಸಾಕಷ್ಟು ಪೋಸ್ಟ್‌ಗಳಿವೆ.ಎಲ್ಲರೂಅವರವರರ‍್ಯಾಂಕ್ ಪ್ರಕಾರ ಕೆಲಸ ಮಾಡಬೇಕಾಗುತ್ತದೆ.ಈ ರೀತಿ ನಾನು ಕೆಲಸ ಮಾಡಿಕೊಂಡು ಬಂದಿದ್ದೇನೆ.ಇವತ್ತು ನನ್ನ ಮೇಲೆ ಆರೋಪ ಬಂದಿದೆ.ಆರೋಪ ಮಾಡಿದಮೇಲೆಅದರ ಮೇಲೆ ತನಿಖೆ ಆಗಬೇಕು, ವಿಚಾರಣೆ ಆಗಬೇಕು, ನಾನು ತಪ್ಪು ಮಾಡಿದ್ದೇನೆಎಂದುಕಂಡು ಬಂದರೆಯಾವುದೇ ಶಿಕ್ಷೆಯನ್ನು ಕೊಟ್ಟರೂ ಸಹ ಅದನ್ನು ಅನುಭವಿಸುವುದಕ್ಕೆ ಸಿದ್ಧನಿದ್ದೇನೆ.ಇವತ್ತು ಸದನಗಳಲ್ಲಿ ನಾವೆ ತನಿಖೆಯನ್ನು ಮುಗಿಸುವುದು, ವಿಚಾರಣೆಇಲ್ಲಿಯೇ ಆಗುವುದು, ಇಲ್ಲಿಯೇ ಶಿಕ್ಷೆ ಕೊಡುತ್ತಾ ಬಂದರೆ ನಾವು ಇವತ್ತುಇಲ್ಲಿಇರಬಹುದು, ಬಹುಶಃ ಈ ಜಾಗಕ್ಕೆಇ ನ್ನೊಬ್ಬರು ಬರಬಹುದು. ನಾನು ಈ ಸಮಯದಲ್ಲಿ ಮಾನ್ಯ ವಿರೋಧ ಪಕ್ಷದವರಿಗೆ ಹೇಳುವುದೇನೆಂದರೆ, ನಾವು ತಪ್ಪು ಸಂಪ್ರದಾಯವನ್ನು ಮಾಡಬಾರದು. ಇವತ್ತು ಕೇಂದ್ರದಲ್ಲಿ ತಮ್ಮ ಪಕ್ಷಅಧಿಕಾರದಲ್ಲಿದೆ.ಅದೇರೀತಿ ಬೇರೆಬೇರೆ ರಾಜ್ಯಗಳಲ್ಲಿ ತಮ್ಮ ಪಕ್ಷಅಧಿಕಾರದಲ್ಲಿದೆ.ಒಂದು ವೇಳೆ ಅಲ್ಲಿಏನಾದರುಯಾರೋಒಬ್ಬರು ಸಾಕ್ಷ್ಯಾಧಾರಗಳು ಇಲ್ಲದೆಯೇ, ನೇರವಾಗಿಯಾವುದೇ ಸಂಬಂಧವಿಲ್ಲದೆಇರುವಂತಹ ವಿಚಾರದಲ್ಲಿ ಕಿರುಕುಳ ಕೊಟ್ಟರುಎಂದು ಹೇಳಿ, ಯಾರಾದರುಆತ್ಮಹತ್ಯೆ ಮಾಡಿಕೊಂಡರೆರಾಜಿನಾಮೆಯನ್ನುಕೊಡಬೇಕೆಂದು ಹೇಳಿದರೆ ಯಾವ ಸರ್ಕಾರ ಕೆಲಸ ಮಾಡುವುದಕ್ಕೆಆಗುತ್ತದೆ.ಇವತ್ತು ನಾನು ಬೆಂಗಳೂರು ನಗರಾಭಿವೃದ್ಧಿ ಸಚಿವನಾಗಿ ಕೆಲಸ ಮಾಡುತ್ತಿದ್ದೇನೆ.ನಾಳೆ ನಾನು ಹೋಗುತ್ತೇನೆ.ಯಾರೋಒಬ್ಬಅಧಿಕಾರಿ ಸರಿಯಾಗಿ ಕೆಲಸ ಮಾಡುವುದಿಲ್ಲ.ಅವರನ್ನು ಸಸ್ಪೆಂಡ್ ಮಾಡಬೇಕಾಗುತ್ತದೆ, ಅವರಿಗೆ ಸ್ವಲ್ಪಜೋರಾಗಿ ಮಾತನಾಡಬೇಕಾಗುತ್ತದೆ.ಅದಕ್ಕೆಯಾರಾದರು ಹೋಗಿ ಆತ್ಮಹತ್ಯೆ ಮಾಡಿಕೊಂಡರೆಅದಕ್ಕೆ ನಾನು ರಾಜಿನಾಮೆಯನ್ನುಕೊಡಬೇಕೆಂದು ಕೇಳಿದರೆ ಅದುಯಾವರೀತಿಯಲ್ಲಿ ನಾವು ಕೆಲಸ ಮಾಡುವುದಕ್ಕೆ

ಸಾಧ್ಯ?ನೀವು ಹಲವಾರುಜನರು ಸಚಿವರಾಗಿ ಕೆಲಸ ಮಾಡಿದ್ದೀರಿ.ಮಾನ್ಯ ವಿರೋಧ ಪಕ್ಷದ ನಾಯಕರು ಉಪ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ.ಆದರೆ ಬೇಕೆಂದೇಯಾರಿಗಾದರು ಕಿರುಕುಳ ಕೊಡುವುದು, ತೊಂದರೆಕೊಡುವುದು, ಅವರಆತ್ಮಹತ್ಯೆಗೆದೂಡುವಂತಹ ಕೆಲಸ ಮಾಡಿದರೆ ನಿಜವಾಗಿಯುತಪ್ಪು. ಅದಕ್ಕೆ ನಾನು ಹೇಳುವುದೇನೆಂದರೆ, ಇವತ್ತು ಸಿ.ಐ.ಡಿ. ತನಿಖೆ ನಡೆಯುತ್ತಿದೆ, ಇವತ್ತು ಕೆಳಮನೆಯಲ್ಲಿ ಉತ್ತರಕೊಡುವಾಗ ಹೇಳುತ್ತಾರೆ.ಆದರೆ ನಾನು ಒಂದು ಹೇಳಿದ್ದೇನೆ, ಇವತ್ತುಇಲ್ಲಿಯೂ ಹೇಳುತ್ತಿದ್ದೇನೆ ಮಾನ್ಯ ಮುಖ್ಯಮಂತ್ರಿಯವರು ಏನೇ ಹೇಳಿದರೂ ಸಹ ಅದನ್ನು ನಾನು ಶಿರಸಾವಹಿಸುತ್ತೇನೆ.ಒಂದು ವೇಳೆ ಅವರುರಾಜಿನಾಮೆಯನ್ನುಕೊಡಿಎಂದು ಹೇಳಿದರೆ ಒಂದು ನಿಮಿಷ ಸಹ ನಾನು ಮಂತ್ರಿ ಸ್ಥಾನದಲ್ಲಿರುವುದಿಲ್ಲ.ಏಕೆಂದರೆಎಲ್ಲಾ ವಿವರಗಳು ಗೊತ್ತಿರುತ್ತದೆ, ಅದೇರೀತಿ ನಮ್ಮ ಗೃಹ ಸಚಿವರಿಗೂ ಸಹ ಗೊತ್ತಿರುತ್ತದೆ.ಆದರೆದಯವಿಟ್ಟು ನೀವು ಒಂದೇ ಸಲ ನೀವು ತಪ್ಪು ಮಾಡಿದ್ದೀರಿ, ರಾಜಿನಾಮೆಯನ್ನುಕೊಡಿಎಂದು ಹೇಳಿದರೆ ಯಾರೂಇಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ.ಏಕೆಂದರೆ, ಕೇಂದ್ರದಲ್ಲಿಯೂ ನಿಮ್ಮ ಸರ್ಕಾರವೇಇದೆ.ಇವತ್ತು ಹಲವಾರುಜನರ ಮೇಲೆ ಕೋರ್ಟಿನಲ್ಲಿಕೇಸ್ಇದ್ದರೂ ಸಹ ಅವರು ಸಚಿವರಾಗಿ ಕೆಲಸ ಮಾಡುತ್ತಿದ್ದಾರೆ.ನಾನು ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ.ನಾನು ಹೇಳುವುದೇನೆಂದರೆ, ತಪ್ಪು ಮಾಡಿದವರು ಶಿಕ್ಷೆಯನ್ನು ಅನುಭವಿಸಲೇ ಬೇಕಾಗುತ್ತದೆ.ಡಿವೈಎಸ್ಪಿಗಣಪತಿಯವರಕುಟುಂಬದ ಸದಸ್ಯರು ಏನೇ ಸ್ಟೇಟ್‌ಮೆಂಟ್‌ಕೊಟ್ಟರೂ ಸಹ ನಾನು ತಪ್ಪು ತಿಳಿಯುವುದಿಲ್ಲ. ಏಕೆಂದರೆ ಈಗ ಅವರಿಗೆದುಃಖವಾಗಿದೆ.ಅವರಧರ್ಮಪತ್ನಿ ಪತಿಯನ್ನು ಕಳೆದುಕೊಂಡಿದ್ದಾರೆ, ಮಗ ತಂದೆಯನ್ನು ಕಳೆದುಕೊಂಡಿದ್ದಾರೆ, ಕುಶಾಲಪ್ಪನವರು ಮಗನನ್ನು ಕಳೆದುಕೊಂಡಿದ್ದಾರೆ.ಬಹುಶಃ ನಾನೂ ಸಹ ಕೊಡಗಿನಿಂದ ಬಂದಂಥವನು.ಅವರು ಈ ಸಂದರ್ಭದಲ್ಲಿಗಣಪತಿಯವರು ನಾನು ಅವರಿಗೆಕಿರುಕುಳ ಕೊಟ್ಟಿದ್ದಾರೆಂದು ಹೇಳಿದ್ದಾರೆ, ನಾನು ಈ ಸದನದ ಮೂಲಕ ಅವರಿಗೂ ಹಾಗೂ ಇಡೀಕರ್ನಾಟಕದಜನತೆಗೆ ಹೇಳುತ್ತಿದ್ದೇನೆ ನಾನು ಅವರಿಗೆಯಾವುದೇ ಕಿರುಕುಳವನ್ನು ಕೊಟ್ಟಿಲ್ಲ.ಯಾವುದೇರೀತಿಯಲ್ಲಿ ಹಸ್ತಕ್ಷೇಪ ಮಾಡಲಿಲ್ಲ.ನಾನು ಪ್ರಾಮಾಣಿಕವಾದ, ದಕ್ಷವಾದ ಆಡಳಿತವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.ಅದರಲ್ಲಿ ಸಾಕಷ್ಟು ಅಡಚಣೆಗಳು ಬರುತ್ತಿರಬಹುದು.ಆದರೂ ನೀವೆಲ್ಲರೂ ನನಗೆ ಒಂದುಧೈರ್ಯಕೊಟ್ಟರೆಇನ್ನು ಮುಂದೆಯೂ ಸಹ ನಾನು ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ.ಆದುದರಿಂದದಯವಿಟ್ಟು ನಾನು ನಿಮ್ಮಲ್ಲಿಒಂದೇಒಂದು ವಿಷಯವನ್ನು ಕೇಳುವುದೇನೆಂದರೆ, ತನಿಖೆ ಆಗಬೇಕು.ಬಹುಶಃ ವಿಚಾರಣೆ ಆಗಬೇಕು, ತನಿಖೆ ಆಗಬೇಕು.ನಾನು ತಪ್ಪು ಮಾಡಿದ್ದೇನೆಂದು ಹೇಳಿದರೆ ಏನು ಶಿಕ್ಷೆ ಬರುತ್ತದೋಅದನ್ನುಅನುಭವಿಸುವುದಕ್ಕೆತಯಾರಿದ್ದೇನೆ ಎಂಬ ಮಾತನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ॥ಜಿ.ಪರಮೇಶ್ವರ್(ಸಭಾ ನಾಯಕರು):– ಮಾನ್ಯ ಸಭಾಪತಿಯವರೇ, ನಾನು ಈಗಾಗಲೆ ತಮಗೆ ತಿಳಿಸಿರುವಂತೆ 6 ಗಂಟೆ ಸಚಿವ ಸಂಪುಟದ ಸಭೆ ನಡೆಯುತ್ತದೆ. ಎಲ್ಲಾ ಸಚಿವರುಗಳು ಇಲ್ಲಿಯೇಇದ್ದಾರೆ.ಅವರುಗಳಿಗೆ ಸಬ್ಜೆಕ್ಟ್‌ಕೂಡ ಇವೆ.ಹಾಗಾಗಿ ನಾಳೆ ಬೆಳಿಗ್ಗೆ 11 ಗಂಟೆಗೆ ನಾನು ಉತ್ತರಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಸಚಿವರ ಸಂಪುಟದ ಸಭೆಯನ್ನು ಒಂದು ಗಂಟೆ ಮುಂದೆ ಹಾಕಿದರೆ ಏನು ತೊಂದರೆ ಆಗುವುದಿಲ್ಲ. ಇವತ್ತಿನ ದಿವಸ ಇಡೀ ಕರ್ನಾಟಕರಾಜ್ಯ ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರಕೊಡುತ್ತಾರೆಂದು ಕಾಯುತ್ತಿದ್ದಾರೆ. ಹಾಗಾಗಿ ದಯವಿಟ್ಟು ಇರುವಂತಹ ಸಂಪ್ರದಾಯವನ್ನು ಮುರಿಯಬೇಡಿ. ಈಗ ಉತ್ತರಕೊಡಬೇಕಾದಂತಹ ಕರ್ತವ್ಯ ಸರ್ಕಾರಕ್ಕಿದೆ. ಎಲ್ಲರೂ ಮಾತನಾಡಿದ್ದಾರೆ.ದಯವಿಟ್ಟುತಾವುಒಂದುಗಂಟೆ ಸಚಿವ ಸಂಪುಟದ ಸಭೆಯನ್ನು ಮುಂದಕ್ಕೆ ಹಾಕಿ.

**ಡಾ॥ಜಿ.ಪರಮೇಶ್ವರ್:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ತಮ್ಮಲ್ಲಿಯೂ ಸಹ ಮನವಿ ಮಾಡಿಕೊಳ್ಳುತ್ತೇನೆ, ಬಹಳಷ್ಟು ಜನರು ಮಾತನಾಡಿದ್ದಾರೆ. ಸುಮಾರು 20 ಜನ ಸದಸ್ಯರು ಮಾತನಾಡಿದ್ದಾರೆ. ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಲಹೆಗಳನ್ನು ಕೊಟ್ಟಿದ್ದೀರಿ, ಅದೇರೀತಿ ಟೀಕೆಗಳನ್ನು ಸಹ

ಮಾಡಿದ್ದೀರಿ. ಅದಕ್ಕೆಲ್ಲಾ ಸರ್ಕಾರ ಉತ್ತರ ಕೊಡಬೇಕಾಗುತ್ತದೆ ಅಲ್ಲವೆ? ಸುಮ್ಮನೆ ನಾನು ಈಗ ಒಂದು ಲೈನಿನಲ್ಲಿ ನಾನೇನಾದರು ಹೇಳುವುದಿದ್ದರೆ ಈಗಲೇ ಹೇಳಿ ಹೋಗಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:**–ಒಂದು ಲೈನಿನಲ್ಲಿ ಹೇಳುವುದಕ್ಕೂ ಸಹ ನಿಮಗೆ ಅವಕಾಶವಿದೆ.

**ಡಾ||ಜಿ.ಪರಮೇಶ್ವರ್:**–ನೀವು ಹೇಳುವುದನ್ನೆಲ್ಲಾ ಹೇಳಿ, ನಮಗೆ ಒಂದು ಲೈನಿನಲ್ಲಿಉತ್ತರ ಹೇಳಬೇಕು ಎಂದರೆಆಗುತ್ತದೆಯೇ? ನೀವು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ.ಬಹಳಷ್ಟು ಗಹನವಾದ ಮುಖ್ಯವಾದಂತಹ ಸಲಹೆಗಳನ್ನು ಸಹ ಕೊಟ್ಟಿದ್ದೀರಿ.ಅವೆಲ್ಲವನ್ನೂ ಸಹ ನಾವು ಸ್ವೀಕಾರ ಮಾಡಬೇಕಲ್ಲವೆ?

**ಶ್ರೀ ಕೆ.ಎಸ್.ಈಶ್ವರಪ್ಪ:**– ಮಾನ್ಯ ಗೃಹ ಸಚಿವರೇ, ತಾವು ಹಿರಿಯ ಸಚಿವರು. ನೀವು ಅನುಭವಸ್ಥರು. ಸಚಿವ ಸಂಪಟವನ್ನು ಎಷ್ಟು ಹೊತ್ತಿಗಾದರು ಮಾಡಿಕೊಳ್ಳಬಹುದು. ಆದರೆ ಸದನವನ್ನೇ ನಾವು ಮುಂದಕ್ಕೆ ಹಾಕುತ್ತೇವೆ ಎನ್ನುವಂಥದ್ದನ್ನು ಖಂಡಿತ ಪದ್ಧತಿ ಅಲ್ಲ, ದಯವಿಟ್ಟು ತಾವು ಉತ್ತರಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಡಾ||ಜಿ.ಪರಮೇಶ್ವರ್:**–ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಪುನಃ ಮನವಿ ಮಾಡಿಕೊಳ್ಳುತ್ತೇನೆ, ಸಚಿವ ಸಂಪುಟದ ಸಭೆಯಲ್ಲಿ ಅನೇಕ ಗಹನವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಎಲ್ಲಾ ಸಚಿವರು ಇದ್ದಾರೆ.ಈ ವಿಷಯಕ್ಕೆ ಸಂಬಂಧಪಟ್ಟಂತೆ ಕೆಳಗಿನ ಮನೆಯಲ್ಲಿ ಮೂರು ದಿವಸಗಳ ಕಾಲ ಚರ್ಚೆ ನಡೆದಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:**–ಒಂದೆರಡುಗಂಟೆ ಸಚಿವ ಸಂಪುಟದ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲವೆ?

**ಡಾ||ಜಿ.ಪರಮೇಶ್ವರ್:**– ಸಚಿವ ಸಂಪುಟದ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲ.ಇದೇ ವಿಚಾರವಾಗಿ ಕೆಳಗಿನ ಮನೆಯಲ್ಲಿ ಮೂರು ದಿವಸ ಚರ್ಚೆ ನಡೆದಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:**–ಸಚಿವ ಸಂಪುಟದ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲವೆ?

**ಡಾ||ಜಿ.ಪರಮೇಶ್ವರ್:**–ಖಂಡಿತವಾಗಿ ಸಚಿವ ಸಂಪುಟದ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:**– ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದಂತಹ ಪದ್ಧತಿ ಇದೆ. ಇದು ಖಂಡಿತವಾಗಿಯು ಸಭೆಗೆ ಅಗೌರವ ತೋರಿದಂತಾಗುತ್ತದೆ. ಸಭೆಗೆ ಅಗೌರವ ತೋರಿಸುವಂತಹ ಪದ್ಧತಿ ಏನಿದೆ ಇದು ಖಂಡಿತವಾಗಿಯೂ ಒಳ್ಳೆಯದಲ್ಲ.

**ಸಭಾಪತಿಯವರು:**– ಸಭಾ ನಾಯಕರು ಮಾತನಾಡುತ್ತಾರೆ.

**ಡಾ||ಜಿ.ಪರಮೇಶ್ವರ್:**– ಮಾನ್ಯ ಸಭಾಪತಿಯವರೇ, ತಾವು ಹೇಳಿದಂತೆ ಕ್ಯಾಬಿನೆಟ್‌ದು ಒಂದು ವಿಚಾರ. ಎಲ್ಲಾ ವಿಷಯಗಳಿಗೂ ನಾವು ಉತ್ತರಕೊಡಬೇಕಲ್ಲವೆ? ಹಾಗಾಗಿ ಒಂದು ಕಡೆ ಕ್ಯಾಬಿನೆಟ್ ಇದೆ, ಅದೇ ರೀತಿ ಎಲ್ಲಾ ವಿಚಾರಗಳಿಗೂ ಕೂಡ ತಾವು ಮಾತನಾಡಿದ್ದೀರಿ, ಅದೇರೀತಿ ನಮ್ಮ ಆಡಳಿತ ಪಕ್ಷದಲ್ಲಿಯೂ ಸಹ ಮಾತನಾಡಿದ್ದಾರೆ, ಬಹಳಷ್ಟು ಜನ ಸದಸ್ಯರು ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಪ್ರಾಣೇಶ್‌ಅವರು ನನ್ನ ರಾಜಿನಾಮೆಯನ್ನು ಸಹ ಕೇಳಿದ್ದಾರೆ. ಹಾಗಾಗಿ ಉತ್ತರ ಕೊಡಬೇಕಾಗಿದೆ. ಅದಕ್ಕೋಸ್ಕರಅದಕ್ಕೂಉತ್ತರಕೊಡಬೇಕಾಗುತ್ತದೆ.ದಯಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರು ಸಹಕರಿಸಬೇಕೆಂದು ಕೋರುತ್ತೇನೆ.ಏಕೆಂದರೆ, ನಾವು ಎಲ್ಲಾ ರೀತಿಯಿಂದಲೂ ಸಹ ನಿಮಗೆ ಸಹಕರಿಸಿದ್ದೇವೆ.

**(ಗೊಂದಲ)**

**ಡಾ||ಜಿ.ಪರಮೇಶ್ವರ್:–** ನಾವು ಎಲ್ಲಾರೀತಿಯಿಂದಲೂ ಸಹಕರಿಸಿದ್ದೇವೆ, ನೀವು ಮಾತನಾಡುವುದೆಲ್ಲವನ್ನೂ ಸಹ ನಾವು ಕೇಳಿದ್ದೇವೆ. ಯಾರುಯಾರು ಮಾತನಾಡಬೇಕುಎಲ್ಲರಿಗು ನಾವು ಸಮಯ ಕೊಟ್ಟುಕೊಂಡು ನಾವು ಕೇಳಿಸಿಕೊಂಡಿದ್ದೇವೆ. ದಯಮಾಡಿ ತಾವು ಸಹಕರಿಸಬೇಕೆಂದು ಮಾನ್ಯ ಸಭಾಪತಿಯವರಿಗೆ ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಮಾನ್ಯ ಸದಸ್ಯರು:– ಬೆಳಿಗ್ಗೆ –––– ಕೊಡಲಿ.

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ.ಮಾನ್ಯ ಸಭಾ ನಾಯಕರು ಮಾತನಾಡುವಾಗ ಏಕೆ ಮಧ್ಯದಲ್ಲಿ ಮಾತನಾಡುತ್ತೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಎಲ್ಲಾ ಹಿರಿಯ ಸದಸ್ಯರಿದ್ದಾರೆ. ಸದನದಗೌರವನ್ನುಕಾಪಾಡಬೇಕಾದಂತಹಕರ್ತವ್ಯಇವರದುಇದೆ.ಚರ್ಚೆ ನಡೆಯುತ್ತಿದೆ.ನಿಲುವಳಿ ಸೂಚನೆ ಬಗ್ಗೆ ಚರ್ಚೆಯಾಗಿಉತ್ತರ ನೀಡಲು ಸಮಯ ನಿಗದಿ ಮಾಡಿದ್ದೀರಿ.ನಿಗದಿ ಮಾಡಿರುವಂತಹ ಸಂದರ್ಭದಲ್ಲಿಇವರು 6 ಗಂಟೆಗೆ ಸಚಿವ ಸಂಪುಟದ ಸಭೆಯನ್ನುಇಟ್ಟುಕೊಂಡಿದ್ದೇವೆ ಎಂಬ ಒಂದೇಕಾರಣಕ್ಕೆ ಸದನವನ್ನೇ ನಾಳೆ ಮುಂದಕ್ಕೆ ಹಾಕುತ್ತೇವೆಎನ್ನುವುದುಯಾವ ನ್ಯಾಯ?

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡುತ್ತಾರೆ.

**ಡಾ||ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೇ, ನಾನು ಪದೇ ಪದೇಅದನ್ನೇ ಹೇಳುತ್ತಿದ್ದೇನೆ...

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು 6 ಗಂಟೆಗೆ ಸಚಿವ ಸಂಪುಟದ ಸಭೆಇದೆಎಂದು ಹೇಳಿದರು. ಈಗಾಗಲೆ 6 ಗಂಟೆ 10 ನಿಮಿಷಗಳು ಕಳೆದಿದೆ.

**ಡಾ||ಜಿ.ಪರಮೇಶ್ವರ್:–**ಅದಕ್ಕೋಸ್ಕರವೆ ಈಗಾಗಲೇ ತಡವಾಗುತ್ತಿದೆ. ಆದುದರಿಂದ ತಾವು ಅನುಮತಿಯನ್ನು ಕೊಟ್ಟರೆ ಒಳ್ಳೆಯದು.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಆ ಮನೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟು, ಸುಮಾರುಒಂದೂವರೆ ಗಂಟೆಗಳಿಗೂ ಮೇಲ್ಪಟ್ಟು ಚರ್ಚೆ ಆಗಿದೆ.ಅದನ್ನು ನಾನು ಕುಳಿತುಕೊಂಡು ನೋಡಿದ್ದೇನೆ.

**ಶ್ರೀ ವಿ.ಸೋಮಣ್ಣ(ಮುಂದು):–** ತಮ್ಮಲ್ಲಿ ಒಂದು ವಿಚಾರವನ್ನು ವಿನಂತಿಸಿಕೊಳ್ಳುವುದೇನೆಂದರೆ ಹಿಂದಿನಿಂದ ನಡೆದುಬಂದಿರುವ ಸಂಪ್ರದಾಯಕ್ಕೆ ಸಾಕಷ್ಟು ಉದಾಹರಣೆಗಳಿವೆ. ಆದರೆ ಸದನ ನಡೆಯುತ್ತಿರುವ ಸಂದರ್ಭದಲ್ಲಿ ಜರೂರಾದ ವಿಚಾರಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ಸಲುವಾಗಿ ಈಗ ಸಚಿವಸಂಪುಟದ ಸಭೆಯನ್ನು ಕರೆದಿದ್ದೀರಿ. ಆದರೆ ಇಲ್ಲಿ ಎಲ್ಲ ಸಚಿವರುಗಳು ಇರುವುದರಿಂದ ಈ ಸದನದ ಗಾಂಭೀರ್ಯವನ್ನು ಸಹ ಅರ್ಥ ಮಾಡಿಕೊಂಡು ಒಂದು ಗಂಟೆಯ ಅವಧಿಗೆ ಕ್ಯಾಬಿನೆಟ್ ಅನ್ನು ಮುಂದಕ್ಕೆ ಹಾಕಿ, ಎಲ್ಲಾ ಸಚಿವರು ಒಂದು ಗಂಟೆಗಳ ಕಾಲ ಹೆಚ್ಚಿಗೆ ಕೆಲಸ ಮಾಡುವುದರಿಂದ ಯಾವುದೇ ರೀತಿಯ ಅನಾನುಕೂಲ ಆಗುವುದಿಲ್ಲ. ನಾನು ಮಾನ್ಯ ಸಭಾನಾಯಕರಿಗೆ ವಿನಂತಿಸಿಕೊಳ್ಳುವುದೇನೆಂದರೆ ಒಂದು ಗಂಟೆ ಒಳಗೆ ಇಲ್ಲಿನ ಕಲಾಪವೆಲ್ಲ ಮುಗಿಯುತ್ತದೆ. ಸರ್ಕಾರದ ಉತ್ತರ ಆದ ಮೇಲೆ ಒಂದೆರಡು clarification ಇರುತ್ತದೆ, ಅದಕ್ಕೂ ಉತ್ತರ ನೀಡಿದ ಮೇಲೆ ಸದನದ ಕಲಾಪ ಮುಗಿಯುತ್ತದೆ. ಒಂದು ಗಂಟೆ ಕ್ಯಾಬಿನೆಟ್ ಸಭೆ ಮುಂದಕ್ಕೆ ಹಾಕಿದರೆ ಏನಾಗುತ್ತದೆ? ಮುಂದಕ್ಕೆ ಹಾಕುವುದರಲ್ಲಿ ತಪ್ಪೇನಿದೆ?

**ಡಾ||ಜಿ.ಪರಮೇಶ್ವರ್(ಗೃಹಸಚಿವರು):–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರುಗಳು ಅನೇಕ ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆಲ್ಲ ಮಾಹಿತಿಗಳನ್ನು ತರಿಸಿಕೊಳ್ಳಬೇಕಾಗುತ್ತದೆ. ಸರ್ಕಾರ ಕೂಡ ಜವಾಬ್ದಾರಿಯುತವಾಗಿ ಈ ಸದನಕ್ಕೆ ಮಾಹಿತಿಗಳನ್ನು ನೀಡಬೇಕಾಗುತ್ತದೆ. ವಿವರಗಳನ್ನು ಕೂಡ

ತರಿಸಬೇಕಾಗುತ್ತದೆ. ಅದಕ್ಕಾಗಿ ದಯಮಾಡಿ ಸಹಕರಿಸಬೇಕು. ನಾವು ಪ್ರತಿ ಪಕ್ಷಗಳು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಎಲ್ಲಾ ರೀತಿಯಿಂದಲೂ ಸಹಕಾರವನ್ನು ನೀಡಿದ್ದೇವೆ.

**ಶ್ರೀ ವಿ.ಸೋಮಣ್ಣ:–** ಸರ್ಕಾರಕ್ಕೆ ಮಾಹಿತಿ ಇಲ್ಲ, ಉತ್ತರ ನೀಡಲು ತಯಾರಿಲ್ಲ ಎಂದುಕೊಳ್ಳೋಣವೇ?

**ಡಾ||ಜಿ.ಪರಮೇಶ್ವರ್:–** ಹಾಗೆಯೇ ಅಂದುಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸರ್ಕಾರದಲ್ಲಿ ಬಹಳಷ್ಟು ಹಿರಿಯರು ಇದ್ದಾರೆ. ಆಗಿದ್ದೂ ಸಹ ಸದನವನ್ನು ಇಷ್ಟು ಹಗುರವಾಗಿ ಪರಿಗಣಿಸುವುದೇ? ಇದು ನ್ಯಾಯವೇ? ಇಷ್ಟು ಚರ್ಚೆ ಆದ ಮೇಲೆ ಉತ್ತರ ಕೊಡುವುದು ಬೇಡವೇ?

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಕ್ಯಾಬಿನೆಟ್ ಸಭೆಯನ್ನು 6 ಗಂಟೆಗೆ ನಿಗಧಿ ಮಾಡಿದ ಕಾರಣ ಏನೆಂದರೆ ಸದನ 6 ಗಂಟೆ ತನಕ ನಡೆಯುತ್ತದೆ, ಅದಾದ ಮೇಲೆ ಕ್ಯಾಬಿನೆಟ್ ಎಂದು ತೀರ್ಮಾನ ಮಾಡಿದ್ದೆವು. ಇಲ್ಲದಿದ್ದರೆ 11 ಗಂಟೆಗೆ ಇಡುತ್ತಿದ್ದೆವು. ಆದ್ದರಿಂದ ನಾವು ಸದನವನ್ನು ಹಗುರವಾಗಿ ಭಾವಿಸಿದ್ದೇವೆ ಎಂದು ಯಾರು ಅಂದುಕೊಳ್ಳಬಾರದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸದನವನ್ನು ಮುಂದಕ್ಕೆ ಹಾಕುವುದು ಒಳ್ಳೆಯದೋ, ಸಚಿವಸಂಪುಟದ ಸಭೆಯನ್ನು ಮುಂದಕ್ಕೆ ಹಾಕುವುದು ಒಳ್ಳೆಯದೋ ಎನ್ನುವುದನ್ನು ಹಿರಿಯ ಸಚಿವರಾದ ನೀವೇ ಹೇಳಿ. ಯಾವುದಕ್ಕೆ ಮಹತ್ವ, ಯಾವುದಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕೆಂದು ನೀವೆ ತೀರ್ಮಾನಿಸಿ. ಕರ್ನಾಟಕದ ಜನತೆ ಸರ್ಕಾರ ಯಾವ ಉತ್ತರ ಕೊಡುತ್ತದೆ ಎನ್ನುವ ನಿರೀಕ್ಷಣೆಯಲ್ಲಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:–** ನಿನ್ನೆಯ ದಿವಸ ಕೆಳಗಿನ ಮನೆಯಲ್ಲಿಯೂ ಸಹ ಚರ್ಚೆ ಆಗಿ ಇವತ್ತು ಬೆಳಿಗ್ಗೆ ಮುಖ್ಯಮಂತ್ರಿಗಳು ಉತ್ತರ ನೀಡಿದ್ದಾರೆ. ಇಲ್ಲಿಯೂ ಸಹ ಉತ್ತರ ನೀಡುವುದಕ್ಕೆ 2–3 ಗಂಟೆಗಳ ಕಾಲಾವಕಾಶ ಬೇಕಾಗುತ್ತದೆ. ಈಗಾಗಲೇ 6 ಗಂಟೆ ಆಗಿರುವುದರಿಂದ ನಾಳೆ ಬೆಳಿಗ್ಗೆ ಸರ್ಕಾರ ಉತ್ತರ ನೀಡಿದಲ್ಲಿ ಎಲ್ಲರೂ ಸಾವಧಾನದಿಂದ ಸರ್ಕಾರದ ಉತ್ತರವನ್ನು ಕೇಳಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸಚಿವ ಸಂಪುಟಕ್ಕೆ ಪ್ರಾಮುಖ್ಯತೆ ಹೆಚ್ಚೋ ಅಥವಾ ಸದನಕ್ಕೆ ಪ್ರಾಮುಖ್ಯತೆ ಹೆಚ್ಚೋ ಎನ್ನುವ ನನ್ನ ಪ್ರಶ್ನೆಗೆ ನೀವು ಉತ್ತರವನ್ನು ನೀಡಲಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:–** ಈ ಎರಡಕ್ಕೂ ಸಹ ತನ್ನದೇ ಆದ ಪ್ರಾಮುಖ್ಯತೆ ಇದೆ,

**ಶ್ರೀ ಕೆ.ಎಸ್.ಈಶ್ವರಪ್ಪ:–** ಸದನದ ಪ್ರಾವಿತ್ರ್ಯತೆಯನ್ನು ಹಾಳು ಮಾಡುತ್ತಿದ್ದೀರಿ. ದಯಮಾಡಿ ಹಾಗೆ ಮಾಡಬೇಡಿ. ನ್ಯಾಯವಾಗಿ ಇಲ್ಲಿ ಮುಖ್ಯಮಂತ್ರಿಗಳು ಉತ್ತರ ನೀಡಬೇಕು. ಗೃಹಸಚಿವರು ಕೊಡುವ ಉತ್ತರವನ್ನು ಕೂಡ ಮುಂದಕ್ಕೆ ಹಾಕುವುದು ಬೇಡ.

**ಡಾ||ಜಿ.ಪರಮೇಶ್ವರ್(ಗೃಹ ಸಚಿವರು):–** ಮಾನ್ಯ ಸಭಾಪತಿಗಳೇ, ನಮಗೂ ಸಹ ಈ ಸದನದ ಬಗ್ಗೆ ಬಹಳ ಗೌರವವಿದೆ. ಅತ್ಯಂತ ಹೆಚ್ಚಿನ ಗೌರವವನ್ನು ನಾವು ಈ ಸದನಕ್ಕೆ ನೀಡುತ್ತಿದ್ದೇವೆ. ಇಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಲಾಗಿದೆ. ಅದಕ್ಕೆ ನಾವು ಮಾಹಿತಿಗಳನ್ನು ಒದಗಿಸಬೇಕಾಗುತ್ತದೆ. ಆದರೆ ಸಚಿವಸಂಪುಟದ ಸಭೆಯನ್ನು ಕೂಡ ನಾವು ಲಘುವಾಗಿ ಭಾವಿಸುವುದಕ್ಕೆ ಸಾಧ್ಯವಿಲ್ಲ. ತಾವು ಸಹ ಸಂಪುಟದ ಸಚಿವರಾಗಿ ಕೆಲಸ ಮಾಡಿದ್ದೀರಿ. ತಮಗೂ ಸಹ ಸಂಪುಟ ಸಭೆಯ ಗಾಂಭೀರ್ಯತೆ ಮತ್ತು ಪಾವಿತ್ರತೆಯ ಬಗ್ಗೆ ಕೂಡ ತಿಳಿದಿದೆ. ಅದಕ್ಕೆ ನಾಳೆ ಬೆಳಿಗ್ಗೆ 11 ಗಂಟೆಗೆ ಉತ್ತರ ಕೊಡುವುದಾಗಿ ತಮ್ಮೆಲ್ಲರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಒಂದೆರಡು ಗಂಟೆ ಸಚಿವಸಂಪುಟದ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಏನು ಕಷ್ಟ? ಒಂದೆರಡು ಗಂಟೆ ಹೆಚ್ಚಿಗೆ ಕೆಲಸ ಮಾಡಿದರೆ ಎನು ಕಳೆದುಕೊಳ್ಳುತ್ತೀರಿ?

**ಡಾ॥ಜಿ.ಪರಮೇಶ್ವರ್:–** ಇಲ್ಲಿ ಕಷ್ಟ ಸುಲಭದ ವಿಚಾರ ಅಲ್ಲ, ನಾಳೆ ಬೆಳಿಗ್ಗೆ 11 ಕ್ಕೆ ನಾನು ಉತ್ತರ ನೀಡಿದರೆ ನಿಮಗೆ ಏನು ಕಷ್ಟ ಆಗುತ್ತದೆ ಎನ್ನುವುದನ್ನು ಹೇಳಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸದನವನ್ನೇ ಮುಂದೂಡಿ ಸಚಿವಸಂಪುಟದ ಸಭೆಗೆ ಹೋಗುತ್ತೇವೆ ಎನ್ನುವುದು ಯಾವ ನ್ಯಾಯ ಹೇಳಿ.

**ಡಾ॥ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಗಳೇ, ಪ್ರಶ್ನೋತ್ತರ ಅವಧಿಯನ್ನು ಮುಂದಕ್ಕೆ ಹಾಕಬೇಕೆಂದಾಗ ಅದಕ್ಕೆ ನಾವು ಒಪ್ಪಿಕೊಂಡೆವು. ನಿಯಮ 68ರ ಮೇರೆಗೆ ಚರ್ಚೆ ಮಾಡಬೇಕೆಂದಾಗಲೂ ಸಹ ನಾವು ಒಪ್ಪಿಕೊಂಡೆವು. ಎಲ್ಲದಕ್ಕೂ ಈ ರೀತಿ ಹಠ ಹಿಡಿಯುವುದಾದರೆ ತಾವು ಯಾವ ರೀತಿ ಸದನ ನಡೆಸುತ್ತೀರಿ? ಸರ್ಕಾರ ಈ ಸದನ ನಡೆಸುವುದಕ್ಕೆ ಎಲ್ಲಾ ರೀತಿಯಲ್ಲಿಯೂ ಸಹ ಸಹಕಾರವನ್ನು ಕೊಡುತ್ತಿದ್ದೇವೆ. ಒಂದು ಸಲವೂ ನಮ್ಮ ಮನವಿಯನ್ನು ವಿಪಕ್ಷಗಳು ಒಪ್ಪುವುದಿಲ್ಲವೆಂದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಸದನ ನಡೆಸುವುದಕ್ಕೆ ನಾವು ಸಹ ಸಹಕಾರವನ್ನು ಕೊಡುತ್ತೇವೆ. ಆದರೆ ಸಚಿವಸಂಪುಟದ ಸಭೆಯ ನೆಪ ಮಾಡಿಕೊಂಡು ಸದನಕ್ಕೆ ಉತ್ತರ ನೀಡುವುದನ್ನು ಮುಂದಕ್ಕೆ ಹಾಕುವುದು ಯಾವ ನ್ಯಾಯ?

**ಡಾ॥ಜಿ.ಪರಮೇಶ್ವರ್:–** ಈಗ ನ್ಯಾಯ–ಅನ್ಯಾಯದ ವಿಚಾರವನ್ನು ಇಲ್ಲಿ ಪ್ರಶ್ನೆ ಮಾಡುವುದು ಬೇಡ. ಇಲ್ಲಿ ನಿಯಮಾವಳಿಗಳ ಪ್ರಕಾರ ಸದನ ನಡೆಯಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ:– ನಿಯಮದಲ್ಲಿ ಸಚಿವಸಂಪುಟದ ಸಭೆಯ ನೆಪ ಮಾಡಿಕೊಂಡು ಸದನಕ್ಕೆ ಉತ್ತರ ನೀಡುವುದನ್ನು ಮುಂದಕ್ಕೆ ಹಾಕಬೇಕೆಂದಿದೆಯೇ?

**ಡಾ॥ಜಿ.ಪರಮೇಶ್ವರ್:–** ಇಲ್ಲಿ ನಿಯಮದ ಪ್ರಕಾರ ಆಗಬೇಕೆಂದಿದ್ದರೆ ಪ್ರಶ್ನೋತ್ತರವನ್ನು ಏಕೆ ಮುಂದಕ್ಕೆ ಹಾಕಬೇಕಾಗಿತ್ತು? ನಾಲ್ಕು ದಿವಸಗಳಿಂದ ಪ್ರಶ್ನೋತ್ತರಗಳನ್ನು ಮುಂದಕ್ಕೆ ಹಾಕಿಕೊಂಡು ಬರುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇದು burning issue.

**ಡಾ॥.ಜಿ.ಪರಮೇಶ್ವರ್:–** ಇಲ್ಲಿ ಎಲ್ಲವೂ ಸಹ burning issue. ಈ ಸದನದಲ್ಲಿ ಪ್ರತಿಯೊಂದು ವಿಚಾರಕ್ಕೂ ಸಹ ಪ್ರಾಮುಖ್ಯತೆ ಇದೆ. ಪ್ರಾಮುಖ್ಯತೆ ಇಲ್ಲದೆ ಇರುವ ವಿಚಾರಗಳನ್ನು ನೀವು ಇಲ್ಲಿ ಚರ್ಚೆ ಮಾಡುತ್ತೀರಾ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಈಗ ಉತ್ತರ ಕೊಡುತ್ತೀರೋ, ಇಲ್ಲವೋ ಹೇಳಿ.

**ಡಾ॥ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಗಳೇ, ನಾಳೆ ಬೆಳಿಗ್ಗೆ 11 ಗಂಟೆಗೆ ಉತ್ತರ ನೀಡಲು ಅನುಮತಿ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಈ ಸಭೆಯನ್ನು ನಡೆಸುವುದಕ್ಕೆ ಕೆಲವು ಕಾನೂನುಗಳಿವೆ. ಮಾತೆತ್ತಿದ್ದರೆ ಈಶ್ವರಪ್ಪನವರು ನಿಯಮಾವಳಿಗಳೇ ಇಲ್ಲವೆಂದು ಹೇಳುತ್ತಾರೆ. ನಿಯಮಾವಳಿ 12 ಪ್ರಕಾರ:

> ***"Sitting of the Council:-*** *The Council shall sit on such date as the Chairman may from time to time direct having regard to the business of the House. The sitting of the Council shall ordinarily be held between 11:00 a.m. and 6:00 p.m. subject to the directions of the Chairman. The Chairman shall have the*

*power to adjourn the sitting of the Council sine die or to a day or hour or part of the day."*

ನಿಯಮ 68ರಲ್ಲಿ 1 ಗಂಟೆಗಳ ಕಾಲ ಚರ್ಚೆ ಮಾಡಬೇಕೆಂದಿದ್ದರೆ ಇವರು 2 ದಿವಸಗಳ ಚರ್ಚೆಯನ್ನು ಮಾಡಿದ್ದಾರೆ. ಎಲ್ಲಾದರಲ್ಲಿಯೂ ನಿಯಮಗಳನ್ನು ಬ್ರೇಕ್ ಮಾಡುವುದಾದರೆ ಎನು ಬೇಕಾದರೂ ಮಾಡಿ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರ್ಜ್ ಅವರು ಮಾಡಿರುವ ತಪ್ಪಿಗೆ ರಾಜಿನಾಮೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತಿರುವ ಸಂದರ್ಭದಲ್ಲಿ ನಡೆದು ಚರ್ಚೆಗೆ ಉತ್ತರ ಕೊಡುವುದಕ್ಕೂ ಸಹ ತಪ್ಪಿಸಿಕೊಂಡು ಹೋಗುತ್ತಿರುವ ಈ ಸರ್ಕಾರದ ಕುತಂತ್ರವನ್ನು ಪ್ರತಿಭಟಿಸಿ, ಮಾನ್ಯ ಜಾರ್ಜ್ ಅವರು ರಾಜಿನಾಮೆಯನ್ನು ಕೊಡಬೇಕು, ಇದರ ಬಗ್ಗೆ ಸಿಬಿಐ ತನಿಖೆ ಆಗಬೇಕು ಜೊತೆಗೆ ತಪ್ಪಿತಸ್ಥರ ವಿರುದ್ಧ ದೂರನ್ನು ಕೂಡ ದಾಖಲಿಸಲು ತಾಕತ್ತು ಇಲ್ಲದ ಸರ್ಕಾರದ ವಿರುದ್ಧ ತನಕ ಹಗಲು ರಾತ್ರಿ ಧರಣಿಯನ್ನು ಮಾಡುತ್ತೇವೆ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಧರಣಿ ನಡೆಸಲು ಬಾವಿಗೆ ಬಂದರು.)**

**(ಗೊಂದಲ)**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಸಭಾನಾಯಕರು 6 ಗಂಟೆಗೆ ಕ್ಯಾಬಿನೆಟ್ ಇದೆ, ಸರ್ಕಾರ 6 ಗಂಟೆ ತನಕ ಮಾತ್ರ ಸದನ ನಡೆಯುತ್ತದೆ ಎನ್ನುವ ಕಾರಣದಿಂದ ಈ ಸಚಿವಸಂಪುಟದ ಸಭೆಯನ್ನು ನಿಗಧಿ ಮಾಡಿರುವುದಾಗಿ ಹೇಳುತ್ತಿದ್ದಾರೆ. ಸದನವನ್ನು ನಾವು ಕಡೆಗಣಿಸುವುದಿಲ್ಲ, ಅತ್ಯಂತ ಗೌರವಯುತವಾಗಿ ಸದನವನ್ನು ನಡೆಸಿಕೊಳ್ಳುತ್ತೇವೆ, ಆದರೆ ಕ್ಯಾಬಿನೆಟ್ ಸಭೆ ನಡೆಸಲೇ ಬೇಕಾಗಿರುವ ಹಿನ್ನಲೆಯಲ್ಲಿ ಸದನವನ್ನು ಮುಂದಕ್ಕೆ ಹಾಕಬೇಕೆಂದು ಹೇಳುತ್ತಿದ್ದಾರೆ.

**ಗೊಂದಲ)**

**ಶ್ರೀ ಪುಟ್ಟಣ್ಣ(ಮುಂದು)**:– ದಯಮಾಡಿ ಸದನವನ್ನು ಒಂದು ಗಂಟೆ ಮುಂದಕ್ಕೆ ಹಾಕಿ, ಕ್ಯಾಬಿನೆಟ್ ಮುಗಿಸಿಕೊಂಡು 7 ಗಂಟೆಗೆ ಬನ್ನಿ, 7–15ಕ್ಕೆ ಉತ್ತರವನ್ನು ಪ್ರಾರಂಭ ಮಾಡಿ. ಅತ್ಯಂತ ಮಹತ್ವದ ವಿಚಾರ ಇದು.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಗಳೆ, Point of Order ಗೆ ರೂಲಿಂಗ್ ಕೊಡಿ.

**(ಗೊಂದಲ)**

**ಸಭಾಪತಿಯವರು:–** ಸಭಾನಾಯಕರು ಮಾತನಾಡುತ್ತಾರೆ ಒಂದು ನಿಮಿಷ ಎಲ್ಲರೂ ಸುಮ್ಮನಿರಿ. ದಯಮಾಡಿ ಸಭಾನಾಯಕರು ಹೊಸ proposal ಗೆ ಏನು ಹೇಳುತ್ತಾರೆ ಕೇಳಿ.

**(ಗೊಂದಲ)**

**Sri IVAN D'SOUZA:-** Sir, House shall ordinarily be held between morning 11.00 am to 6.00 pm in the evening.

(ಗೊಂದಲ)

**ಶ್ರೀ ಎಚ್.ಎಂ.ರೇವಣ್ಣ:–** ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಡಿ.

**ಶ್ರೀ ಐವಾನ ಡಿ'ಸೋಜಾ:–** ಅವರು ಹೇಳಿದ ಹಾಗೆ ಕೇಳುವುದಕ್ಕೆ ಸರ್ಕಾರ ಇಲ್ಲ. That is not binding to us. ಸದನ ಬೆಳಗ್ಗೆ 11–00 ಗಂಟೆಯಿಂದ ಸಂಜೆ 6–00ಗಂಟೆವರೆಗೆ ನಡೆಯಬೇಕು ಎಂದು ಇದೆ. ಅವರು ಮಾತಿಗೆ ತಪ್ಪಿದ್ದಾರೆ. They are not allowing us to give the answer. ಇವರು ಉತ್ತರವನ್ನು ಕೊಡಲು ಅವಕಾಶ ಮಾಡಿಕೊಟ್ಟರೆ?

**(ಗೊಂದಲ)**

**ಸಭಾಪತಿಯವರು:–** ಸಭಾನಾಯಕರು ಏನು ಹೇಳುತ್ತಾರೆ ಕೇಳೋಣ.

**(ಗೊಂದಲ)**

**ಡಾ:ಜಿ.ಪರಮೇಶ್ವರ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ನಾನು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ, ನಾಳೆ 11–00ಗಂಟೆಗೆ ಉತ್ತರವನ್ನು ಕೊಡಲು ತಾವು ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಕ್ಯಾಬಿನೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಬೇರೆ ಸಚಿವರು ಕಾಯುತ್ತಿದ್ದಾರೆ. ಈಗಾಗಲೆ ತಡವಾಗಿದೆ. ನಾಳೆ 11—00 ಗಂಟೆಗೆ ಉತ್ತರ ಕೊಡಲು ತಾವು ನನಗೆ ಅನುಮತಿ ಕೊಡಬೇಕೆಂದು ಮತ್ತೊಮ್ಮೆ ವಿನಂತಿಯಿಂದ ಕೇಳಿಕೊಳ್ಳುತೇನೆ. ಅವರ ಅನ್ನಿಸಿಕೆ ಅವರು ಹೇಳಿದ್ದಾರೆ. ಸರ್ಕಾರ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತದೆ. ಇದರ ಮೇಲೆ ತಾವು ತೀರ್ಪು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಉತ್ತರ ಕೊಡಲು ಶಕ್ತಿ ಇಲ್ಲ, ಬೆನ್ನು ತೋರಿಸಿ ಹೇಡಿಗಳ ರೀತಿ ಹೋಗುತ್ತಿದ್ದಾರೆ. ಸರ್ಕಾರ ನೀತಿ ಇದು. ಸದನಕ್ಕೆ ಅಗೌರವ ತೋರಿಸುತ್ತಿದ್ದಾರೆ.

**(ಗೊಂದಲ)**

**ಡಾ:ಜಿ.ಪರಮೇಶ್ವರ:–** ಏನು ಇವರು ಈ ರೀತಿ ಮಾತನಾಡುವುದು? ಇದು ವಿರೋಧ ಪಕ್ಷಕ್ಕೆ ಗೌರವ ತರುವಂತದಲ್ಲ. ಹೇಡಿಗಳು ನೀವು, ನಮಗೆ ಏಕೆ ಹೇಳುತ್ತೀರಿ?

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸದನಕ್ಕಿಂತ ದೊಡ್ಡದು ಇವರ ಸಚಿವ ಸಂಪುಟ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್, ಇಟಗಿ:–** ಮಾನ್ಯ ಸಭಾಪತಿಗಳೆ, Point of Order ಮೇಲೆ ರೂಲಿಂಗ್ ಕೊಡಿ. ನಂತರ ಅವರಿಗೆ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಡಾ:ಜಿ.ಪರಮೇಶ್ವರ:–** ಸಭಾಪತಿಗಳೆ ತಾವು ರೂಲಿಂಗ್ ಕೊಡಿ.

**ಸಭಾಪತಿಯವರು:–** ಖಂಡಿತವಾಗಿ ರೂಲಿಂಗ್ ಕೊಡುತ್ತೇನೆ. ಪುಟ್ಟಣ್ಣ ಏನು ಹೇಳುತ್ತಾರೆ ಕೇಳಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೆ, ಕಳೆದ 14 ವರ್ಷಗಳಿಂದ ಈ ಸದನದ ಸದಸ್ಯನಾಗಿದ್ದೇನೆ. ಮಧ್ಯೆ ರಾತ್ರಿ 3–00ಗಂಟೆವರೆಗೆ ಸದನ ನಡೆದಿರುವ ನಿರ್ದಶನ ಇದೆ. ಇವರು ಕ್ಯಾಬಿನೆಟ್‌ಗೆ ಹೋಗಿ ಆರಾಮಾಗಿ ಮುಗಿಸಿಕೊಂಡು 7–30ಕ್ಕೆ ಬಂದು ಉತ್ತರ ಕೊಡಲಿ.

**(ಗೊಂದಲ)**

ಶ್ರೀ ಕೆ.ಎಸ್.ಈಶ್ವರಪ್ಪ:– ರಾತ್ರಿ 10–00ಗಂಟೆಗೆ ಬಂದು ಉತ್ತರ ಕೊಡಲಿ, ನಾವು ಕಾಯುತ್ತೇವೆ. ಎರಡು–ಮೂರು ಗಂಟೆ ಸದನವನ್ನು ಮುಂದೂಡಿ. ಸದನವನ್ನು ತಾತ್ಸಾರ ಮಾಡುವುದು ಸೂಕ್ತವಲ್ಲ. ಸದನಕ್ಕೆ ಅಪಮಾನ ಮಾಡಬೇಡಿ. ಇವರು ಸಚಿವ ಸಂಪುಟ ಸಭೆಯನ್ನು ಮುಗಿಸಿಕೊಂಡು 10–00 ಗಂಟೆಗೆ ಬರಲಿ ಅಥವಾ ಮಧ್ಯೆರಾತ್ರಿ 12–00ಗಂಟೆಗೆ ಬರಲಿ ನಾವು ಕೇಳಲು ತಯಾರಿದ್ದೆವೆ.

**ಶ್ರೀ ಬಸವರಾಜ ಪಾಟೀಲ್,ಇಟಗಿ:–** ಸಭಾಪತಿಗಳೆ ತಾವು ಬಾಯಿ ಬಿಟ್ಟು ಏನಾದರೂ ಮಾತನಾಡಿ, ರೂಲಿಂಗ್ ಕೊಡಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಇಂತಹ ಗಂಭೀರ ಚರ್ಚೆಗೆ ಬೆಲೆ ಇಲ್ಲದ ಹಾಗೆ ಆಗುತ್ತದೆ. ದಯಮಾಡಿ ಇವತ್ತೆ ಉತ್ತರ ಕೊಡಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್,ಇಟಗಿ:–** ಸಭಾಪತಿಗಳೆ ತಾವು ಬಾಯಿ ಬಿಡಿ, ಹೀಗೆ ಸುಮ್ಮನೆ ಇದ್ದರೆ ಹೇಗೆ?

**(ಗೊಂದಲ)**

**ಶ್ರೀ ಐವಾನ್ ಡಿ'ಸೋಜಾ:–** ಸದನವನ್ನು ಹೇಗೆ ನಡೆಸಬೇಕು ಎನ್ನುವುದಕ್ಕೆ ರೂಲ್ಸ್‌ಗಳು ಇವೆ. 6ಗಂಟೆಗೆ ಸದನ ಮುಕ್ತಾಯವಾಗಬೇಕು. ಇನ್ನು ಮುಂದುವರಿಸಿ ಎಂದರೆ ಏನು ಅರ್ಥ ಇದೆ ಇದಕ್ಕೆ. ಅವರು ಹೇಳಿದ ಹಾಗೆ ಸದನ ನಡೆಸಬೇಕಾ?

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್,ಇಟಗಿ:–** ಸಭಾಪತಿಗಳೆ ತಾವು ಬಾಯಿ ಬಿಡಿ, ಹೀಗೆ ಸುಮ್ಮನೆ ಇದ್ದರೆ ಅವರು ಬೆಳಗ್ಗಿನ ಜಾವದವರೆಗೆ ಮಾತನಾಡುತ್ತಾರೆ. ನೀವು ಏಕೆ ಸುಮ್ಮನೆ ಕುಳಿತ್ತಿದ್ದಿರಿ? ಏನಾದರೂ ಹೇಳಿ.

**(ಗೊಂದಲ)**

**ಸಭಾಪತಿಯವರು:–** ಈಗ ಉತ್ತರ ಕೊಡುವ ಸಮಯ ಬಂದಿದೆ. ಉತ್ತರ ಕೊಡಲು ಈಗ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ, ಈಗಲೇ ಉತ್ತರ ಕೊಡಬೇಕೆಂದು ನೀವು ಕೇಳುತ್ತಿದ್ದಿರಿ. ಉತ್ತರವನ್ನು ಈಗಲೇ ಕೊಡಬೇಕು, ಸ್ವಲ್ಪ ಸಮಯದ ನಂತರ ಕೊಡಬೇಕೊ ಅಥವಾ ಬೆಳಗ್ಗೆ ಕೊಡಬೇಕೊ ಎನ್ನುವ ಚರ್ಚೆ ಸ್ವಲ್ಪ ಅಪ್ರಸುತವಾಗುತ್ತದೆ. ಚರ್ಚೆ ಮುಗಿದ ತಕ್ಷಣ ಉತ್ತರ ಕೊಡಬೇಕೆಂದು ನಾವು ಎಲ್ಲರೂ ಮಾತನಾಡಿದ್ದೆವೆ. ಈಗ ಅವರು ಒಂದು ಹೊಸ ಸಮಸ್ಯೆಯನ್ನು ಮುಂದೆ ಇಟ್ಟಿದ್ದಾರೆ. ಈ ಹಿನ್ನಲೆಯಲ್ಲಿ ಸ್ವಲ್ಪ ಸಮಯ ಸದನವನ್ನು ಮುಂದೂಡುತ್ತೇವೆ, ನನ್ನ ಕೊಠಡಿಯಲ್ಲಿ ಕುಳಿತು ತೀರ್ಮಾನ ಮಾಡಬಹುದು.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್,ಇಟಗಿ:–** ನಾಳೆ ಬೆಳಗ್ಗೆ ಮತ್ತೆ ಉತ್ತರ ಕೊಡಬೇಕಾಗುತ್ತದೆ. ಈಗಾಗಲೆ 30ಗಂಟೆ ಅದರ ಮೇಲೆ ಮಾತನಾಡಿದ್ದಾರೆ.

**(ಗೊಂದಲ)**

**ಡಾ:ಜಿ.ಪರಮೇಶ್ವರ:–** ಮಾನ್ಯ ಸಭಾಪತಿಗಳೆ, ನಾವು ಕ್ಯಾಬಿನೆಟ್ ಸಭೆಗೆ ಹೋಗಬೇಕು. ಬೇಕು ಎಂದು ನಾವೇನು ಈ ರೀತಿ ಮಾಡುತ್ತಿಲ್ಲ. ಉತ್ತರ ಕೊಡಲು ನನಗೇನು ತೊಂದರೆ ಇಲ್ಲ. ಮೂರು ದಿನ ಚರ್ಚೆ ಮಾಡಿದ್ದಾರೆ. ನಾಳೆ ಬೆಳಗ್ಗೆ 11–00 ಗಂಟೆಗೆ ಸರ್ಕಾರ ಉತ್ತರ ಕೊಡುತ್ತದೆ ಎಂದರೆ ಅವರು ಒಪ್ಪದೆ ಇರುವುದು ಸರಿಯಲ್ಲ. ಬೆಳಗ್ಗೆ ಉತ್ತರ ಕೊಡುವುದರಿಂದ ಪ್ರಪಂಚವೇನು ಮುಳುಗಿ ಹೋಗುವುದಿಲ್ಲ. ಬೆಳಗ್ಗೆ ಉತ್ತರ ಕೊಡಲು ತಾವು ಅವಕಾಶ ಮಾಡಿಕೊಡಬೇಕು.

**(ಗೊಂದಲ)**

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಗಳೆ, ತಾವು ಒಳ್ಳೆಯ ರೂಲಿಂಗ್ ಕೊಟ್ಟಿದ್ದಿರಿ.

**ಸಭಾಪತಿಯವರು:–** ನಾನು ರೂಲಿಂಗ್ ಕೊಟ್ಟಿರುವುದಿಲ್ಲ. ಆ ರೀತಿ ಮಾಡಬಹುದು ಎಂದು ಹೇಳಿದ್ದೆನೆ.

**ಶ್ರೀ ವಿ.ಸೋಮಣ್ಣ:–** ಸದನವನ್ನು 10 ನಿಮಿಷ ಮುಂದಕ್ಕೆ ಹಾಕಿ ಇಲ್ಲದಿದ್ದರೆ ಒಂದು ಗಂಟೆ ಮುಂದಕ್ಕೆ ಹಾಕಿ, ನಿಮ್ಮ ಕೊಠಡಿಯಲ್ಲಿ ಚರ್ಚೆ ಮಾಡಬಹುದು.

(ಗೊಂದಲ)

**ಶ್ರೀ ಬಸವರಾಜ ಪಾಟೀಲ್,ಇಟಗಿ:–** ಅವರು ಹೇಳಿದ ಹಾಗೆ ಮಾಡಲು ಆಗುವುದಿಲ್ಲ. ನಾಳೆ ಉತ್ತರವನ್ನು ಕೊಡುತ್ತಾರೆ. ಈಗಲೇ ಕೊಡಬೇಕು ಎಂದು ಎಲ್ಲಿ ಇದೆ.

(ಗೊಂದಲ)

**ಶ್ರೀ ಐವಾನ್ ಡಿ'ಸೋಜಾ:–** ನಾಳೆ ಬೆಳಗ್ಗೆ 11–00 ಗಂಟೆಗೆ ಉತ್ತರ ಕೊಡುತ್ತೇವೆ ಎಂದ ಮೇಲೆ ಸುಮ್ಮನೆ ಏಕೆ ಒತ್ತಡ ಹಾಕುತ್ತೀರಿ?

(ಗೊಂದಲ)

**ಶ್ರೀ ಎಚ್.ಎಂ.ರೇವಣ್ಣ:–** ನನ್ನ Point of Order ಮೇಲೆ ರೂಲಿಂಗ್ ಕೊಡಿ.

**ಸಭಾಪತಿಯವರು:–** ಮಾನ್ಯ ರೇವಣ್ಣನವರು ಮತ್ತು ಕೆಲವು ಸ್ನೇಹಿತರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪುಸ್ತಕದಲ್ಲಿರುವುದನ್ನು ದಯಮಾಡಿ ಪೂರ್ತಿ ಓದಬೇಕು ಮತ್ತು ಸದನ ನಡೆದು ಬಂದ ದಾರಿಯನ್ನು ನೋಡಬೇಕು. ನಾನು ಸಚಿವನಾಗಿದ್ದಾಗ ಒಂದು ಸಾರಿ ಬಜೆಟ್ ಪಾಸ್ ಆದಾಗ ಬೆಳಗಿನ ಜಾವ 3–00 ಆಗಿತ್ತು. ನಾನೇ ಬೆಳಗಿನವರೆಗೆ ಕುಳಿತು ಬಜೆಟ್ ಪಾಸ್ ಮಾಡಿಕೊಂಡಿದ್ದೇನೆ. ಹೀಗಾಗಿ ಸಂಜೆ 6–00 ನಂತರ ಸದನ ನಡೆದಿರುವ ಉದಾಹರಣೆಗಳು ಸಾಕಷ್ಟು ಇವೆ.

**ಶ್ರೀ ಬಸವರಾಜ ಪಾಟೀಲ್,ಇಟಗಿ:–** ದೀರ್ಘವಾಗಿ ಉತ್ತರ ಕೊಡಲು ಎರಡು–ಮೂರು ಗಂಟೆಗಳ ಸಮಯ ಬೇಕಾಗುತ್ತದೆ.

**ಶ್ರೀ ಎಚ್.ಎಂ.ರೇವಣ್ಣ:–** ರೂಲ್ 12 ಇದೆಯಾ ಇಲ್ಲವೆ?

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಗಳೆ, Budget is different and Financial Bill is different.

**(ಗೊಂದಲ)**

**ಸಭಾಪತಿಯವರು:–** ನಾನು ಇನ್ನು ಹೇಳುವುದನ್ನು ಮುಗಿಸಿರುವುದಿಲ್ಲ. ನಾನು ಹೇಳುವುದನ್ನು ಪೂರ್ತಿ ಕೇಳಿ. ರೂಲ್ಸ್ ಪುಸ್ತಕವನ್ನು ನಾನು ಓದಿದ್ದೇನೆ, ತಾವು ಓದಿದ್ದೀರಾ, ರೂಲ್ಸ್ ಪುಸ್ತಕದಲ್ಲಿರುವದೆಲ್ಲವು ಸರಿ ಇದೆ. ಅದರಲ್ಲಿ ಒಂದು ವಿಷಯವಿದೆ, ಮಾನ್ಯ ಎಸ್.ಆರ್.ಪಾಟೀಲ್ ರವರು ಇಲ್ಲೆ ಇದ್ದಾರೆ, ಅವರು ಪ್ರತಿ ಬಾರಿ ಹೇಳುತ್ತಿರುತ್ತಾರೆ. Chairman has got some extra powers to do and conduct the House.

**(ಗೊಂದಲ)**

**ಶ್ರೀ ಎಚ್.ಎಂ.ರೇವಣ್ಣ:–** ಅದು ಎರಡು ಕಡೆಗಳವರು ಒಪ್ಪಿದಾಗ ಮಾತ್ರ. ತಾವು ಆ ರೀತಿ ಮಾಡಿದರೆ...

**ಸಭಾಪತಿಯವರು:–** ಕಡ್ಡಾಯವಾಗಿ 6 ಗಂಟೆಗೆ ಸದನ ಮುಕ್ತಾಯವಾಗಿರುವುದಿಲ್ಲ.

**(ಗೊಂದಲ)**

**ಶ್ರೀ ಎಸ್. ನಾಗರಾಜ್:–** ಮಾನ್ಯ ಗೃಹ ಸಚಿವರು ಮಾನ್ಯ ಜಾರ್ಜ್‌ರವರಿಂದ ರಾಜೀನಾಮೆ ಕೊಡಿಸುತ್ತೇವೆ ಎಂದು ಒಂದೇ ಒಂದು ಮಾತನ್ನು ಹೇಳಿಬಿಟ್ಟರೆ ಎಲ್ಲವು ಮುಗಿದು ಹೋಗುತ್ತದೆ. ರಾಜೀನಾಮೆ ಕೊಡಿಸಿದರೆ ಅವರೊಬ್ಬರಿಂದ ಸರ್ಕಾರ ಉದ್ಧಾರವಾಗುತ್ತದೆ, ನಿಮಗೂ ಒಳ್ಳೆಯದಾಗುತ್ತದೆ. ನಿಮಗೆ ಒಳ್ಳೆಯದಾಗಲಿ ಎಂದು ಹೇಳುತ್ತಿದ್ದೇನೆ. **ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೆ, ನೀವು ಒಂದು ತೀರ್ಮಾನ ತೆಗೆದುಕೊಳ್ಳಿ.

**ಸಭಾಪತಿಯವರು:–** ನಾನು ತೀರ್ಮಾನ ಕೊಟ್ಟಿದ್ದು ಆಗಿದೆ. ಈಗ ಅದನ್ನು ಬದಲಾವಣೆ ಮಾಡಿ ಎಂದು ಕೇಳುತ್ತಿದ್ದಾರೆ. ನನ್ನ ತೀರ್ಮಾನ ಕೊಟ್ಟಿದ್ದು ಆಗಿದೆ. ಚರ್ಚೆ ಮುಗಿದ ಮೇಲೆ ಉತ್ತರ ಎಂದು ಹೇಳಿ ತೀರ್ಮಾನ ಕೊಟ್ಟಿದ್ದು ಆಗಿದೆ. ಅವರು ಬದಲಾವಣೆಗೆ ಕೇಳಿದ್ದು, ಅದರ ಮೇಲೆ ಚರ್ಚೆ ನಡೆಯುತ್ತಿದೆ. ನನ್ನ ತೀರ್ಮಾನವನ್ನು ನಾನು ಬಾಕಿ ಇಟ್ಟಿಲ್ಲ. ಬದಲಾವಣೆಗೆ ಬಗ್ಗೆ ಚರ್ಚೆ ನಡೆಯುತ್ತಿದೆ.

**(ಗೊಂದಲ)**

**ಡಾ||ಜಿ.ಪರಮೇಶ್ವರ್(ಗೃಹ ಸಚಿವರು ಹಾಗೂ ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ನನಗೆ ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ಹಾಗೂ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳ ಬಗ್ಗೆ ಬಹಳ ಗೌರವವಿದೆ. ನನ್ನ ಬಗ್ಗೆ ಕೂಡ ಬಹಳ ಅತ್ಯಂತ ಉತ್ತೇಜನಕಾರಿಯಾದ ಮಾತುಗಳನ್ನು ಕೂಡ ಅವರು ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಆದರೆ, ಒಂದು ಸರ್ಕಾರ ಉತ್ತರ ಕೊಡಬೇಕಾದರೆ, ಇಷ್ಟೆಲ್ಲಾ ಚರ್ಚೆಯಾಗಬೇಕಾದರೆ, ಎರಡು ದಿನ ಸತತವಾಗಿ ನಾವು ಪ್ರಶ್ನೋತ್ತರಗಳನ್ನೂ ಕೂಡ ಮುಂದಕ್ಕೆ ಹಾಕಿ ಚರ್ಚೆ ಮಾಡಿದ್ದೇವೆ. ಇದು ಬಹಳ ಗಂಭೀರವಾದಂತಹ ವಿಚಾರ. ಅವರೂ ಹೇಳಿದ್ದಾರೆ. ನಾವೂ ಹೇಳಿದ್ದೇವೆ. ಇಡೀ ರಾಜ್ಯ ನಮ್ಮನ್ನು ನೋಡುತ್ತಿದೆ. ಸರ್ಕಾರ ಏನು ಕ್ರಮ ತೆಗೆದುಕೊಳ್ಳಬಹುದು ಎನ್ನುವುದನ್ನು ಕೂಡ ನೋಡುತ್ತಿದೆ. ಇಡೀ ದೇಶ ನೋಡುತ್ತಿದೆ. This has become a national issue. This is no more a State issue. ಇವರಿಗಷ್ಟೆ ಸಮಾಧಾನ ಆಗುವುದಲ್ಲ, ಯಾರ್ಯಾರು ಆತ್ಮಹತೆಯನ್ನು ಮಾಡಿಕೊಂಡಿದ್ದಾರೆ, ಅವರು ಎಂ.ಕೆ.ಗಣಪತಿ ಹಾಗೂ ಕಲ್ಲಪ್ಪ ಹಂಡಿಬಾಗ್ ರವರುಗಳ ವಿಷಯಗಳ ಬಗ್ಗೆ ಪ್ರಶ್ನೆ ಮಾಡಿದ್ದಾರೆ, ಅವರೆಲ್ಲರಿಗೂ ಒಂದು ಸಮಂಜಸವಾದ ಉತ್ತರವನ್ನು ಕೊಡುವುದು ಬೇಡವಾ? ಅದು ಇಡೀ ದೇಶದ, ರಾಜ್ಯದ ಜನರಿಗೆ ತಲುಪುವುದು ಬೇಡವೇ? ಅದು ನಿಜ, ನಾನು ತಯಾರಾಗಿ ಬಂದಿದ್ದೇನೆ. ನನಗೇನೂ ಉತ್ತರ ಕೊಡುವುದಕ್ಕೆ ತೊಂದರೆ ಇಲ್ಲ. ಆದರೆ, ಅನೇಕ ಗಹನವಾದ ವಿಚಾರಗಳನ್ನೂ ಕೂಡ ಅವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಉತ್ತರ ಕೊಡಬೇಕಾದರೆ ಅವರು ಪ್ರಸ್ತಾಪಿಸಿರುವ ಕೆಲವು ಹೊಸ ವಿಚಾರಗಳ ಬಗ್ಗೆ ಕೂಡ ಮಾಹಿತಿಗಳನ್ನು ನಾನು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಸಮಯ ಕೊಡಿ ಎಂದು ನಾನು ಕೇಳಿದರೆ ಅಷ್ಟು ಸಹಕಾರವನ್ನು ವಿರೋಧ ಪಕ್ಷದವರು ಕೊಡದೆ ಇದ್ದರೆ ಹೇಗೆ? ನಾವು ಸರ್ಕಾರದವರು ಹೇಗೆ ಉತ್ತರ ಕೊಡಬೇಕು? ನಾವು ಸರ್ಕಾರವನ್ನು ಹೇಗೆ ನಡೆಸಬೇಕು? ಇದರ ಬಗ್ಗೆ ನೀವೇ ಹೇಳಿ? ಶ್ರೀ ಈಶ್ವರಪ್ಪನವರೇ, ಇದು ಇಲ್ಲಿಗೇ ಮುಗಿದು ಹೋಯಿತಾ? ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಚರ್ಚೆಗಳು ಬರುವುದೇ ಇಲ್ಲವೇ? ಇಂತಹ ವಿಚಾರಗಳು ಬರುವುದೇ ಇಲ್ಲವೇ? ಸರ್ಕಾರದ ಸಹಕಾರ ತಮಗೆ ಬೇಕಾಗಿಲ್ಲವೇ? ಅಥವಾ ನಿಮ್ಮ ಸಹಕಾರ ನಮಗೇ ಬೇಕಾಗಿಲ್ಲವೇ? ಇದನ್ನೆಲ್ಲಾ ರಾಜ್ಯದ ಜನ ನೋಡುತ್ತಿದ್ದಾರೆಂದು ಸಹ ತಾವು ಗಮನಿಸಬೇಕು. ಹೌದು, ಕೆಳಮನೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಮೂರು ದಿನಗಳ ಚರ್ಚೆಯ ನಂತರ ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ 11.00 ಗಂಟೆಗೆ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಇದಕ್ಕಾಗಿ ಅಲ್ಲಿ ಸಭಾಧ್ಯಕ್ಷರು ಅನುಮತಿ ಕೊಟ್ಟರು. ಆದಕಾರಣ ಮುಖ್ಯಮಂತ್ರಿಗಳು ಬಂದ ತಕ್ಷಣ ಬೆಳಗ್ಗೆ 11.00 ಗಂಟೆಗೆ ಕೆಳಮನೆಯಲ್ಲಿ ಸುಧೀರ್ಘವಾದ ಉತ್ತರಗಳನ್ನು ಕೊಟ್ಟಿದ್ದಾರೆ. ಗೃಹ ಸಚಿವನಾಗಿ, ಸಭಾನಾಯಕನಾಗಿ ಆ ಕೆಲವನ್ನು ನಾನು ಇಲ್ಲಿ ಮಾಡಬಾರದೇ? ನನಗೆ ಇರುವಂತಹ ಜವಾಬ್ದಾರಿಗಳನ್ನು ನಾನು ನಿಭಾಯಿಸಬಾರದೇ? ಹೌದು, ವಿರೋಧ ಪಕ್ಷದವರಿಗೆ ಉತ್ತರ ಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ತಾವೆಲ್ಲಾ ಇವತ್ತು ಪ್ರತಿಭಟನೆ ಮಾಡಬೇಕು, ಇಲ್ಲೇ ಮಲಗಬೇಕು. ಅದು ನಿಮ್ಮ ನಿರ್ಧಾರ, ಸಂತೋಷ ನಿಮಗೆ ಅದರ ಹಕ್ಕು ಇದೆ. ಏನೇ ತೀರ್ಮಾನ ತೆಗೆದುಕೊಳ್ಳುವುದಕ್ಕೂ ನಿಮಗೆ ಹಕ್ಕು ಇದೆ.

ಆದರೆ ನನಗೂ ಹಕ್ಕು ಇದೆಯಲ್ಲ? ಸರ್ಕಾರಕ್ಕೂ ಹಕ್ಕು ಇದೆಯಲ್ಲ. ದಯಮಾಡಿ ಇದೆಲ್ಲವನ್ನು ನೀವು ಅರ್ಥ ಮಾಡಿಕೊಳ್ಳಿ. ನಾನು ಯಾವುದೇ ಕಾರಣಕ್ಕೂ ಇವತ್ತು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ನಾಳೆ ಬೆಳಿಗ್ಗೆ ಕೊಡುತ್ತೇನೆ. ಮಾನ್ಯ ಸಭಾಪತಿಯವರೆ ತಾವು ದಯಮಾಡಿ ಇದಕ್ಕೆ ಅನುಮತಿ ಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ನಿಮ್ಮ ಕೊಠಡಿಯಲ್ಲಿ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಸಭಾನಾಯಕರು ಕೂಡ ಇದ್ದರು. ಮಾನ್ಯ ಬಸವರಾಜು ಹೊರಟ್ಟಿಯವರೂ ಸಹ ಇದ್ದರು. ಎಲ್ಲಾ ಚರ್ಚೆಗಳು ಮುಗಿದ ನಂತರ ಸಭಾನಾಯಕರು ಸರ್ಕಾರದ ವತಿಯಿಂದ ಉತ್ತರ ಕೊಡಬೇಕೆಂದು ತಾವು ಹೇಳಿದ್ದೀರಿ. ನಾವೂ ಕೂಡ ಹೇಳಿದ್ದೇವೆ. ಅದಕ್ಕೆ ಅವರೂ ಸಹ ಒಪ್ಪಿಗೆ ಕೊಟ್ಟಿದ್ದರು. ಒಪ್ಪಿಗೆ ಕೊಟ್ಟ ನಂತರ ಎಲ್ಲಾ ಚರ್ಚೆ ಮುಗಿದ ನಂತರ ಅವರೂ ಏನು ಮಾತು ಕೊಟ್ಟಿದ್ದರೋ ಆ ಕೊಟ್ಟ ಮಾತಿನ ಪ್ರಕಾರ ಉತ್ತರ ಕೊಡಬೇಕಾದ ಕರ್ತವ್ಯ ಅವರಿಗೆ ಇದೆ. ಇದನ್ನು ನಾನು ನೆನಪು ಮಾಡುತ್ತಿದ್ದೇನೆ. ಬೇರೆ ಏನೂ ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿರುವುದು ಏನೆಂದರೆ, ಸಭಾನಾಯಕರು ಏನು ನಿಮ್ಮ ಕೊಠಡಿಯಲ್ಲಿ ಒಪ್ಪಿಗೆ ಕೊಟ್ಟಿದ್ದರೋ ಎಲ್ಲಾ ಚರ್ಚೆ ಮುಗಿದ ನಂತರ ಸರ್ಕಾರ ಉತ್ತರ ಕೊಡುತ್ತದೆ ಎಂದು ಹೇಳಿದಾಗ ಎಲ್ಲಾ ಸದಸ್ಯರು ಇಷ್ಟೆಲ್ಲಾ ಮಾತನಾಡುತ್ತಾರೆ, ಅವರುಗಳು ಮಾತನಾಡಿದ ನಂತರ ಸಭಾನಾಯಕರಿಗೆ ಮೂರು ನಾಲ್ಕು ಗಂಟೆ ಸಮಯ ಬೇಕಾಗುತ್ತದೆ ಎಂದು ಅವರಿಗೆ ಗೊತ್ತಿರಲಿಲ್ಲವೇ? ಆಗ ಸಚಿವ ಸಂಪುಟಕ್ಕೆ ಹೋಗಬೇಕೆಂದು ಹೇಳಿದರು. ಈಗ ಮೂರು–ನಾಲ್ಕು ಗಂಟೆಯ ಸಮಯಾವಕಾಶ ಬೇಕೆಂದು ಈಗ ಹೇಳುತ್ತಿದ್ದಾರೆ. ಒಂದು ಕಡೆ ತಯಾರಾಗಿ ಬಂದಿದ್ದೇನೆಂದು ಹೇಳುತ್ತಾರೆ ಇನ್ನೊಂದು ಕಡೆ ದಾಖಲೆಗಳನ್ನು ತಂದು ಉತ್ತರಗಳನ್ನು ತಯಾರು ಮಾಡಿಕೊಂಡು ಉತ್ತರ ಕೊಡಬೇಕೆಂದು ಹೇಳುತ್ತಿದ್ದಾರೆ. ಹಾಗಾದರೆ ಇದರಲ್ಲಿ ಯಾವುದು ಸರಿ? ಸಚಿವ ಸಂಪುಟಕ್ಕೆ ಹೋಗುವುದಕ್ಕೆ ಸಮಯಾವಕಾಶ ಬೇಕೋ ಅಥವಾ ಉತ್ತರ ಕೊಡುವುದಕ್ಕೆ ತಯಾರಾಗುವುದಕ್ಕೆ ಕಾಲಾವಕಾಶ ಬೇಕೋ?

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಎರಡಕ್ಕೂ ಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅದಕ್ಕೋಸ್ಕರ ನಾನು ಇವತ್ತು ತುಂಬಾ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಸರ್ಕಾರ ಯಾವ ಕಾರಣಕ್ಕಾಗಿ ಹಿಂದೇಟು ಹಾಕುತ್ತಿದೆ ನನಗೆ ಗೊತ್ತಿಲ್ಲ. ನಾನು ನಿಮಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ ನಿಮ್ಮ ಕೊಠಡಿಯಲ್ಲಿ ಅವರು ಏನು ಮಾತು ಕೊಟ್ಟಿದ್ದ ರೀತಿಯಲ್ಲಿ ಸದಸ್ಯರುಗಳೆಲ್ಲಾ ಮಾತನಾಡಿದ ನಂತರ, ಚರ್ಚೆಯಾದ ನಂತರ, ಉತ್ತರ ಕೊಡುತ್ತೇವೆಂದು ಅವರೇನು ಹೇಳಿದ್ದರು ಅದಕ್ಕಾಗಿ ಇನ್ನೂ ಸಮಯ ಬೇಕಾ? ಬೇಕಾದರೆ, ಇನ್ನು ಎರಡು–ಮೂರು ಗಂಟೆ ತೆಗೆದುಕೊಳ್ಳಿ. ಉತ್ತರವನ್ನು ತಯಾರು ಮಾಡಿಕೊಂಡು ಬರಲಿ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, 11 ಗಂಟೆಯಾಗಲೀ, 12 ಗಂಟೆಯಾಗಲೀ ಅವರು ಏನು ಮಾತನಾಡಿದ್ದರೋ ಆ ಮಾತಿನ ಪ್ರಕಾರ ಅವರು ನಡೆದುಕೊಳ್ಳಬೇಕೆಂದು ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರು, ಒಂದು ನಿಮಿಷ ನಾನು interfere ಆಗುತ್ತೇನೆ. ನಾವು ಚರ್ಚೆ ಮಾಡಿದ್ದು ನಿಜ.

**(ಗೊಂದಲ)**

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರಗಳನ್ನು ನಿನ್ನೆಗೆ ಮಾತ್ರ ಮುಂದಕ್ಕೆ ಹಾಕಬೇಕೆಂದು ಎಂದು ಅಂದುಕೊಂಡಿದ್ದೇವು. ಇವತ್ತಿನ ಪ್ರಶ್ನೋತ್ತರಗಳನ್ನು ಮುಂದಕ್ಕೆ ಹಾಕಬೇಕೆಂದು ಹೇಳಿಲ್ಲ. ನಿನ್ನೆಗೆ ಮಾತ್ರ ಪ್ರಶ್ನೋತ್ತರಗಳನ್ನು ಮುಂದಕ್ಕೆ ಹಾಕಬೇಕು, ನಿನ್ನೆಯೇ ಸದರಿ ಘಟನೆಯ ಬಗ್ಗೆ

ಚರ್ಚೆ ಮಾಡಿ ಉತ್ತರ ಕೊಡಬೇಕು ಎಂದು ಹೇಳಿದ್ದೆವು. ಯಾಕೆ ಹಾಗೆ ಆಗಲಿಲ್ಲ? ಈ ಸಮಸ್ಯೆ ಗಂಭೀರವಾಗಿದೆ. ರಾಜ್ಯದ ಜನತೆಗೆ ಉತ್ತರ ಸಿಗಬೇಕು. ಅವರಿಗೂ ಉತ್ತರ ಸಿಗಬೇಕು ಎಂದು ಹೇಳಿ ಬದಲಾವಣೆ ಮಾಡಿಕೊಂಡೆವಲ್ಲ. ಎಲ್ಲರೂ ಮಾತನಾಡಬೇಕು. ನಾನು ಇಲ್ಲಿಗೆ ನಾಲ್ಕು ಗಂಟೆಗೆ ಬಂದ ಮೇಲೆ ಎಷ್ಟು ಜನ ಮಾತನಾಡಿದರು? ನನ್ನನ್ನು ಕೇಳಿದರು. ಹೌದಪ್ಪ ಮಾತನಾಡಲಿ ಎಂದು ಹೇಳಿದ್ದೇನೆ. ನಾನು ತಮಗೆ ಮನವಿ ಮಾಡಿಕೊಂಡೆ. ಹೌದು ನಾಲ್ಕು ಜನ ಮಾತನಾಡಲಿ ಎಂದು ಹೇಳಿದ್ದೇನೆ. ನಂತರ ಆರು ಗಂಟೆಗೆ ಸಚಿವ ಸಂಪುಟ ಇದೆ, ನಮಗೆ ಅನುಮತಿ ಕೊಡಿ, ಜೊತೆಗೆ ಬೇರೆ ಬೇರೆ ವಿಚಾರಗಳನ್ನು ಚರ್ಚೆ ಮಾಡಿದ್ದಾರೆ ಅದಕ್ಕೆ ಮಾಹಿತಿ ಕೊಡಬೇಕು. ಇದು ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದು ಸರಿ ಎಂದು ಹೇಳಿದರೆ, ನಾವು ಏನು ಉತ್ತರ ಕೊಡಲಿಕ್ಕೆ ಆಗುತ್ತದೆ? ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಸಹಕಾರ ಕೊಡುವುದಕ್ಕೆ ವಿರೋಧ ಪಕ್ಷದವರಿಗೆ ಆಗಲಿಲ್ಲ ಎಂದು ಹೇಳಿದರೆ ಹೇಗೆ ಹೇಳಬೇಕು? ಮಾನ್ಯ ಸಭಾಪತಿಯವರೆ, ಈ ಸದನವನ್ನು ತಾವು ನಡೆಸಬೇಕು, ತಾವು ಯಾವ ರೀತಿ ನಡೆಸುತ್ತೀರಿ? ಹಾಗಾದರೆ, ನಮ್ಮ ಮಾತಿನ ಮೇಲೆ ನಂಬಿಕೆ ಮೇಲೆ ನಡೆಸುತ್ತಿರೋ? ಹೇಗೆ ನಡೆಸುತ್ತೀರಿ? ಯಾವ ಉದ್ದೇಶ ಇಟ್ಟುಕೊಂಡು ನೀವು ನಿನ್ನೆಯ ದಿನ ಪ್ರಶ್ನೋತ್ತರಗಳ ಅವಧಿಯನ್ನು ಮುಂದಕ್ಕೆ ಹಾಕಿದ್ದೀರಿ? ಇವತ್ತೂ ಸಹ ಯಾವ ಕಾರಣಕ್ಕಾಗಿ ಪ್ರಶ್ನೋತ್ತರಗಳ ಅವಧಿಯನ್ನು ಮುಂದಕ್ಕೆ ಹಾಕಿದ್ದೀರಿ? ರಾಜ್ಯದಲ್ಲಿ ಇದೊಂದು ಗಂಭೀರವಾದ ಸಮಸ್ಯೆ ಬಂದಿದೆ. ಅದು ಬರಬಾರದಾಗಿತ್ತು. ಅದಕ್ಕಾಗಿ ನಿಮಗೆ ಉತ್ತರ ಸಿಗಲಿ ಎಂದು ಹೇಳಿದರೆ, ನೀವು ಒಬ್ಬ ಸಚಿವನಿಗೆ ರಾಜಿನಾಮೆ ಕೇಳುತ್ತೀರಿ. ಅದಕ್ಕೆ ಸರ್ಕಾರ ಉತ್ತರ ಕೊಡಬಾರದೇ? We are not helpless ವಿರೋಧ ಪಕ್ಷದ ನಾಯಕರೇ, we are competent enough to give answer to you. ದಯಮಾಡಿ ಆ ರೀತಿಯ ತಪ್ಪು ಕಲ್ಪನೆಗೆ ನೀವು ಬರುವುದು ಬೇಡ. ಯಾವತ್ತೂ ಕೂಡ ನೀವು ಆ ರೀತಿಯ ಕಲ್ಪನೆಗೆ ಬರುವುದು ಬೇಡ. ಸರ್ಕಾರ ಅಸಹಾಯಕತೆಯಿಂದ ಇಲ್ಲ. ನಾನು ಗೃಹ ಸಚಿವನಾಗಿ ಸಭಾನಾಯಕನಾಗಿ ಸರ್ಕಾರದ ಅಸಹಾಯಕತೆಯಿಂದ ನಾನು ಕೇಳುತ್ತಿಲ್ಲ. ಆದರೆ ನನಗೆ ಸಮಯ ಕೊಡಿ. ಸಚಿವ ಸಂಪುಟ ಇದೆ. ಮುಖ್ಯಮಂತ್ರಿಗಳು ಕಾಯುತ್ತಿದ್ದಾರೆ. ಸಚಿವರುಗಳು ಕಾಯುತ್ತಿದ್ದರೆ. ರಾಜ್ಯದ ಅನೇಕ ಜ್ವಲಂತ ಸಮಸ್ಯೆಗಳಿವೆ. ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನನಗೆ ಈಗ ಅನೇಕ ಜನ ಮಾತನಾಡಿದರು. ಹೊಸ ಹೊಸ ವಿಚಾರಗಳನ್ನು ಮಾಡನಾಡಿದರು. ಯಾವ್ಯಾವುದೋ ಪ್ರಶ್ನೆಗಳನ್ನು ಕೇಳಿದ್ದಾರೆ. ಅದಕ್ಕೆ ನಾನು ಉತ್ತರ ಕೊಡಬಾರದೇ? ಆ ಕಾರಣಕ್ಕೋಸ್ಕರ ಕೇಳುತ್ತಿದ್ದೇನೆಯೇ ವಿನ: ಬೇರೆ ಏನೂ ಇಲ್ಲ. ದಯಾಮಾಡಿ ತಾವು ಅನುಮತಿ ಕೊಡಬೇಕೆಂದು ಹೇಳಿ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸಭಾನಾಯಕರು ಹೇಳುತ್ತಿರುವ ಅಂಶಗಳಲ್ಲಿ ನಾವು ಪ್ರಶ್ನೋತ್ತರಗಳನ್ನು ಏಕೆ ಮುಂದೆ ಹಾಕಿದ್ದೇವೆಂದು ಇದೆ. ನಾವು ಈ ಸದನದಲ್ಲಿ ಸ್ವಾಭಾವಿಕವಾಗಿ ನಿಳುವಳಿ ಸೂಚನೆಯನ್ನು ಯಾವಾಗಲೂ ಕೂಡ ಒಟ್ಟಿಗೆ ಪ್ರಶ್ನೋತ್ತರ ವೇಳೆಯ ನಂತರವೇ ತಾವು convert ಮಾಡಿ ಕೊಟ್ಟಂತಹ ಪದ್ಧತಿ ಇದೆ. ಆದರೆ ಇದೊಂದು ವಿಶೇಷ ಘಟನೆ. ಇಡೀ ಕರ್ನಾಟಕ ರಾಜ್ಯದಲ್ಲಿರುವ ಜ್ವಲಂತ ಸಮಸ್ಯೆ. ಒಬ್ಬ ಪ್ರಾಮಾಣಿಕ ಡಿವೈ.ಎಸ್.ಪಿ.ಯ ಆತ್ಮಹತ್ಯೆ ಆಗಿರುವುದಕ್ಕೋಸ್ಕರ ಪ್ರಶ್ನೋತ್ತರಗಳನ್ನು ಮುಂದಕ್ಕೆ ಹಾಕಬೇಕೆಂದು ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡಿ ತಿರ್ಮಾನ ತೆಗೆದುಕೊಂಡಿದ್ದೇವೆ. ನಿನ್ನೆ, ಇವತ್ತು ನಾಳೆ ಎನ್ನುವ ಪ್ರಶ್ನೆ ಇಲ್ಲ. ಎಲ್ಲಾ ಚರ್ಚೆ ಮುಗಿಯುವವರೆಗೆ ಕೂಡ ಇದನ್ನೇ ಪಾಲಿಸಿಕೊಂಡು ನಂತರ ಅವರು ಉತ್ತರ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ತೀರ್ಮಾನ ತೆಗೆದುಕೊಂಡ ನಂತರ ಈಗ ಅವರು ಎರಡು ಅಂಶಗಳನ್ನು ಹೇಳುತ್ತಿದ್ದಾರೆ. ಮೊದಲನೆಯದು ಸಚಿವ ಸಂಪುಟ ಆರು ಗಂಟೆಗೆ ಇತ್ತು ಅದಕ್ಕೋಸ್ಕರ ಆರು ಗಂಟೆಗೆ ಅಲ್ಲಿಗೆ ಹೋಗಬೇಕಾಗಿತ್ತು. ಎರಡನೇಯದು, ಇಷ್ಟೊಂದು ಜನ ಮಾತನಾಡಿದ್ದಾರೆ. ಸಭಾನಾಯಕರು ಎಲ್ಲರಿಗೂ ಉತ್ತರ ಕೊಡಬೇಕು. ಹಾಗಾದರೆ, ಇದರಲ್ಲಿ ಯಾವುದು ಸರಿ? ಹಾಗಾಗಿ ನಾನು ಹೇಳುತ್ತಿದ್ದೇನೆ. ಇವರಿಗೆ ಇವತ್ತು ಉತ್ತರ ಕೊಡುವುದಕ್ಕೆ ಆಸಕ್ತಿ ಇಲ್ಲ. ಈಗ ಆರು ಮುಕ್ಕಾಲು ಗಂಟೆಯಾಗಿದ್ದು, ಇಷ್ಟು ಹೊತ್ತಿಗೆ ಉತ್ತರವೂ ಸಹ ಅರ್ಧ ಮುಗಿದು ಹೋಗುತ್ತಿತ್ತು. ಅದಕ್ಕೋಸ್ಕರ ಸಭಾನಾಯಕರಿಗೆ ಉತ್ತರ ಕೊಡುವುದಕ್ಕೆ ಆಸಕ್ತಿ ಇಲ್ಲದೆ

ಯಾವುದೋ ಒಂದು ಕಾರಣಕ್ಕೆ ಮುಂದಕ್ಕೆ ಹಾಕಬೇಕು ಎನ್ನುವಂತಹ ಪ್ರಯತ್ನ ನಡೆಸುತ್ತಿದ್ದಾರೆ. ಅದಕ್ಕೋಸ್ಕರ ನಾನು ನಿಮಗೆ ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ, ಈ ಒಂದು ಸದನದ ಘನತೆ ಗಾಂಭೀರ್ಯ ಕಾಪಾಡುವುದು, ಈ ಸದನಕ್ಕೆ ಜಾಸ್ತಿ ಗೌರವ ಕೊಡತಕ್ಕದ್ದು ಸರ್ಕಾರದ ಕರ್ತವ್ಯ.

**(ಗೊಂದಲ)**

**ಡಾ॥ ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ಇಷ್ಟು ಹಟ ಇವರು ಹಿಡಿಯೋದ್ದಾದರೆ, . . .

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇದು ಹಟ ಅಲ್ಲ.

**ಡಾ॥ಜಿ.ಪರಮೇಶ್ವರ್:–** ಮಾನ್ಯ ಸಭಾಪತಿಯವರೆ, ನಾವು ಯಾವತ್ತಿಗೂ ಸರ್ಕಾರ ಉತ್ತರ ಕೊಡುವುದಿಲ್ಲ ಎಂದು ಹೇಳಿಲ್ಲ. ನಾಳೆ ಉತ್ತರ ಕೊಡುತ್ತೇವೆಂದಷ್ಟೇ ಹೇಳಿದ್ದೇವೆ. ಇಷ್ಟು ಕಟುವಾಗಿ ವಿರೋಧ ಪಕ್ಷದ ಸದಸ್ಯರುಗಳು ತೀರ್ಮಾನ ತೆಗೆದುಕೊಳ್ಳುವುದಾರೆ ನಾವುಗಳು ಕೂಡ ಅದೇ stand ತೆಗೆದುಕೊಳ್ಳಬೇಕಾಗುತ್ತದೆ. ನಾವೂ ಕೂಡ ಅಷ್ಟೆ ಕಟುವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತುದೆ. ನಮ್ಮ ಸರ್ಕಾರ ಸಭಾಪತಿಯವರಲ್ಲಿ ಮನವಿ ಮಾಡಿಕೊಳ್ಳುತ್ತದೆ ವಿರೋಧ ಪಕ್ಷದವರು ಇಷ್ಟು ಸಹಕರಿಸುವುದಿಲ್ಲ ಎಂದು ಹೇಳಿದರೆ, ನಾವೂ ಕೂಡ ಇಷ್ಟೇ ಕಟುವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

**(ಗೊಂದಲ)**

**ಡಾ: ಜಿ. ಪರಮೇಶ್ವರ್:–** ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ವಿರೋಧ ಪಕ್ಷದ ನಾಯಕರಿಗೆ ಇದು ಸರಿಯಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ.

**ಡಾ: ಜಿ. ಪರಮೇಶ್ವರ್:–** ಅವರು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ. ಒಂದು ಸರ್ಕಾರಕ್ಕೆ ಉತ್ತರ ಕೊಡಲು ಸಹಕಾರ ಕೊಡುತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರಿಗೆ ಈಗ ಉತ್ತರ ಕೊಡಲು ಆಗುತ್ತಿಲ್ಲ, ಇದು ನ್ಯಾಯ ಅಲ್ಲ. ನಮ್ಮ ಹಕ್ಕನ್ನು ನಾನು ಕೇಳುತ್ತಿದ್ದೇವೆ. ಸರ್ಕಾರ ಒಪ್ಪಿಕೊಂಡ ಪ್ರಕಾರ ನಡೆದುಕೊಳ್ಳಬೇಕಾಗಿತ್ತು. ನಮ್ಮ ಸಹಾಯಕ್ಕೆ ಬರಬೇಕು.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಅವರು ಹೇಳಿದಂತೆ ನಾವು ಕೇಳಬೇಕೆ?

**ಸಭಾಪತಿಯವರು:–** ಯಾರು ಹೇಳಿದಂತೆ ಯಾರೂ ಕೇಳುವುದು ಬೇಡ.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಇಪ್ಪತ್ತು ಮಂದಿಯ ಇಪ್ಪತ್ತು ಸಮಸ್ಯೆಗಳಿದ್ದು, ಅವುಗಳಿಗೆ ಸರ್ಕಾರ ಉತ್ತರ ಕೊಡಬೇಕು.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಕ್ಯಾಬಿನೆಟ್ ಮೀಟಿಂಗ್ ಬಗ್ಗೆ ಹೇಳುತ್ತಿದ್ದಾರೆ. ಆರ್‌ಎಸ್‌ಎಸ್ ಬೈಠಕ್........

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಹಿಂದೆ ಯಾವತ್ತಾದರೂ ಈ ರೀತಿ ಆಗಿತ್ತೇ? ಮಂತ್ರಿಗಳು 5 ಗಂಟೆಗೆ ಉತ್ತರ ಕೊಡುತ್ತೇನೆ ಎಂದು ಹೇಳಿ, ಅರ್ಧ ಗಂಟೆ ಲೇಟ್ ಆಗಿದೆ ಮತ್ತು ಕ್ಯಾಬಿನೆಟ್ ಮೀಟಿಂಗ್ ಇದೆ ಎಂದು ನಾಳೆ ಉತ್ತರ ಕೊಡುತ್ತೇನೆ ಎಂದು ಯಾವ ಧರ್ಮ? ಇದು ಕಾನೂನಿನಲ್ಲಿ ಇದೆಯೇ?

(ಗೊಂದಲ)

**ಸಭಾಪತಿಯವರು:–** ಎಲ್ಲರೂ ಸ್ವಲ್ಪ ಕೇಳಿ, ವಿರೋಧ ಪಕ್ಷದ ಎಲ್ಲಾ ಸದಸ್ಯರು ಧರಣಿ ಮಾಡುತ್ತೇವೆ ಎಂದು ಧರಣಿ ಮಾಡುತ್ತಿದ್ದಾರೆ. ಧರಣಿ ಮಾಡುವುದು ಸರಿಯಲ್ಲ. ರಾತ್ರಿ ಇಲ್ಲಿ ಇರುವುದು ಸರಿಯಲ್ಲ. ನಾನು ಅವರವರ ಸ್ಥಾನಗಳಿಗೆ ತೆರಳಬೇಕೆಂದು ವಿನಂತಿ ಮಾಡುತ್ತೇನೆ. ಸದನವನ್ನು ಯಾವರೀತಿ ನಡೆಸಬೇಕು ಎಂಬ ನಂತರ ಚರ್ಚೆ ಮಾಡೋಣ ಎಂಬ ಭಾವನೆ ನನ್ನ ಮನಸ್ಸಿನಲ್ಲಿ ಇದೆ. ಧರಣಿ ಮಾಡುತ್ತೇವೆ ಎಂದು ಎಲ್ಲರೂ ಬಂದಿರುವುದರಿಂದ ನನಗೇನೂ ಬೇರೆ ದಾರಿ ಕಾಣುತ್ತಿಲ್ಲ. ಹಾಗಾಗಿ......

**ಶ್ರೀ ಕೆ.ಎಸ್. ಈಶ್ವರಪ್ಪ:–** ಹಾಗಾದರೆ ನಾವು ಧರಣಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ, ಬನ್ನಿ ಎಲ್ಲರೂ ಸ್ಥಾನಗಳಿಗೆ ಹೋಗೋಣ. ಅವರು ಈಗ ಉತ್ತರವನ್ನು ಕೊಡಲಿ.

**( ಈ ಹಂತದಲ್ಲಿ ಬಿಜೆಪಿ ಪಕ್ಷದ ಎಲ್ಲಾ ಸದಸ್ಯರು ತಮ್ಮ ಸ್ವಸ್ಥಾನಗಳಿಗೆ ತೆರಳಿದರು)**

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಇದು ತೊಘಲಕ್ ದರ್ಬಾರ್ ಆಗಿದೆ.

**ಶ್ರೀ ಎಚ್. ಆಂಜನೇಯ:–** ಉತ್ತರ ನಾಳೆ ಕೊಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರು ಅಂತಿಮವಾಗಿ ಒಂದು ಮಾತನ್ನು ಹೇಳಿ.

**ಡಾ: ಜಿ. ಪರಮೇಶ್ವರ್:–** ನಾನು ಮತ್ತೊಮ್ಮೆ ಎಲ್ಲರಿಗೂ ಮನವಿ ಮಾಡುತ್ತೇನೆ. ನಾನು ಈಗಾಗಲೇ ಹೇಳಿದಂತೆ ನಾಳೆ 11 ಗಂಟೆ ಉತ್ತರ ಕೊಡಲು ಅವಕಾಶ ಕೊಡಬೇಕು ಎಂದು ಮನವಿ ಮಾಡಿದ್ದೇನೆ. ದಯಮಾಡಿ ಅದಕ್ಕೆ ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಪ್ರಾರ್ಥನೆ ಮಾಡುವುದೇನೆಂದರೆ, ವಿಧಾನ ಸಭೆ ಅಥವಾ ವಿಧಾನ ಪರಿಷತ್ತು ಅಥವಾ ರಾಜ್ಯಸಭೆ, ಲೋಕ ಸಭೆ ಇರಬಹುದು, ಸಭೆಗಳು ರಾತ್ರಿಯೆಲ್ಲಾ ನಡೆದಂತಹ ಉದಾಹರಣೆಗಳು ಇವೆ. ನಾವು ಮಾತನಾಡಿದ ಪ್ರಕಾರ ......

**(ಗೊಂದಲ)**

**Dr.G.PARAMESHWAR**:- Mr.Chairman Sir, we are not prepared .....

**(ಗೊಂದಲ)**

**Mr.CHAIRMAN**:- I cannot force them. ಇನ್ನು ನಿಮಿಷ್ಟ. ಅವರು ಇಲ್ಲ ಎಂದು ಹೇಳುತ್ತಾರೆ. ನನ್ನ ಸಲಹೆ ಕೊಟ್ಟಿದ್ದೇನೆ. ಅವರು ಈಗ ಆಗುವುದಿಲ್ಲ, ಬೆಳಿಗ್ಗೆ ಉತ್ತರ ಕೊಡುತ್ತೇನೆ ಎಂದು ಹೇಳಿದ್ದಾರೆ. ನಾನು ಪದೇ ಪದೇ ಹೇಳುವುದಕ್ಕೆ ಆಗುವುದಿಲ್ಲ.

**ಡಾ: ಜಿ. ಪರಮೇಶ್ವರ್:–** ಇಂತಹ ಹಠ ಹಿಡಿಯುವುದು ಬೇಡ. ತಾವು ತೀರ್ಮಾನ ಕೊಡಬೇಕು.

**(ಗೊಂದಲ)**

**ಶ್ರೀ ಎಂ.ಬಿ. ಪಾಟೀಲ್:–** ತಾವು ತೀರ್ಮಾನ ಕೊಡಿ.

**Mr.CHAIRMAN**:- Don't put me into an embarrassing situation.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಉತ್ತರ ಹೀಗೆ ಕೊಡಿ ಎಂದು ಹೇಳುವುದು ಸರಿಯಲ್ಲ.

**ಶ್ರೀ ಪುಟ್ಟಣ್ಣ:–** ಈಗ ಸಭೆಯನ್ನು 5 ನಿಮಿಷ ಮುಂದಕ್ಕೆ ಹಾಕಿ.

(ಗೊಂದಲ)

**ಸಭಾಪತಿಯವರು:–** ಅವರು ಒಪ್ಪಿಗೆ ಇಲ್ಲ ಎಂದು ಹೇಳುತ್ತಿದ್ದಾರೆ. ಅವರು ಬರುವುದಿಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

**ಡಾ: ಜಿ. ಪರಮೇಶ್ವರ್:–** ಏಕೆ ಮುಂದಕ್ಕೆ ಹಾಕುತ್ತೀರಿ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಸರ್ಕಾರವು ಪ್ರಜಾಪ್ರಭುತ್ವದ ಕಗ್ಗೋಲೆ ಮಾಡುತ್ತಿದೆ, ಅಪಮಾನ ಮಾಡುತ್ತಿದೆ.

**ಡಾ: ಜಿ. ಪರಮೇಶ್ವರ್:–** ಅವರು ಹಠ ಹಿಡಿಯುವುದಾದರೆ ನಾವೂ ಹಠ ಹಿಡಿಯುತ್ತೇವೆ.

**(ಗೊಂದಲ)**

(ಈ ಹಂತದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಧರಣಿನಿರತರಾಗಲು ಪುನ: ಬಾವಿಗೆ ಇಳಿದರು)

**ಡಾ: ಜಿ. ಪರಮೇಶ್ವರ್:–** ನಾವು ಹೊರಗಡೆ ಹೋಗುತ್ತೇವೆ.

**ಶ್ರೀ ವಿ. ಸೋಮಣ್ಣ:–** ಆ ಗಾಂಭೀರ್ಯ ಕಳೆದುಕೊಳ್ಳಬಾರದು, ಒಂದೊಂದು ನಿಮಿಷಕ್ಕೆ ಒಂದೊಂದು ರೀತಿ ಮಾತನಾಡುವುದು ಅರ್ಥ ಇಲ್ಲ.

**ಶ್ರೀ ಹೆಚ್.ಎಂ. ರೇವಣ್ಣ:–** ನಾಟಕ ಸಾಕು. ನಾಟಕ ಸಾಕು.

**ಸಭಾಪತಿಯವರು:–** ಏನು ಮಾಡುತ್ತಾರೆ ನೋಡೋಣ. ಕೊನೆಯ ಅವಕಾಶ ಕೊಡುತ್ತೇನೆ.

**(ಗೊಂದಲ)**

(ಕಾಂಗ್ರಸ್ ಪಕ್ಷದ ಸದಸ್ಯರೆಲ್ಲರೂ ನಾಟಕ ಸಾಕು ಎಂದು ಘೋಷಣೆಗಳನ್ನು ಕೂಗುತ್ತಿದ್ದರು)

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡುತ್ತೇನೆ.

**(ಸದನವು ಸಂಜೆ 06 ಗಂಟೆ 46 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 14 ನೇ ಜುಲೈ ಮಾಹೆ 2016ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**